ಬುಧವಾರ, ಸೆಪ್ಟೆಂಬರ್ 18, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಚಂದಿರ

ಚೀನಾದ ಹೆಲಾಂಜಿಯಾಂಗ್ ಪ್ರಾಂತ್ಯದಲ್ಲಿ ಮಂಗಳವಾರ ಪೂರ್ಣ ಚಂದ್ರ ಕಂಡಿದ್ದು ಹೀಗೆ....



ಬುಧವಾರ, ಸೆಪ್ಟೆಂಬರ್ 18, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 260 | ಪುಟ 16

● www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಚಾಟ್‌ಬಾಟ್
ಕೇಳಿದ್ದೆಲ್ಲವನ್ನೂ
ನೀಡುತ್ತವೆಯೇ?



ಆಳ–ಅಗಲ
ತುತ್ತು ಅನ್ನ, ಹನಿ ನೀರಿಗೆ ಹಾಹಾಕಾರ

ದರ್ಶನ್ ನ್ಯಾಯಾಂಗ ಬಂಧನದ ಅವಧಿ ವಿಸ್ತರಣೆ 8

ಲೆಬನಾನ್: ಪೇಜರ್‌ಗಳ ಸ್ಫೋಟಕ್ಕೆ 9 ಸಾವು 3B

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
83,079 ▲	25,418 ▲	₹75,600 (ಬೆಂಗಳೂರು) ▼	₹90,300 (ಬೆಂಗಳೂರು) ▼	83.75 ▲

₹11,770 ಕೋಟಿ ಮೊತ್ತದ ಯೋಜನೆಗೆ ಒಪ್ಪಿಗೆ ● 17,439 ಹುದ್ದೆಗಳ ಭರ್ತಿಗೆ ಸಮ್ಮತಿ

‘ಕಲ್ಯಾಣ’ಕ್ಕೆ ಸರ್ಕಾರ ಕಂಕಣ

ಪ್ರಜಾವಾಣಿ ವಾರ್ತೆ

ಕಲಬುರಗಿ: ‘ಕಲ್ಯಾಣ’ ಕರ್ನಾಟಕವೆಂಬ ಶಿರೋನಾಮೆ ಇಟ್ಟುಕೊಂಡರೂ ಹಿಂದುಳಿದ ಪ್ರದೇಶವೆಂಬ ಹಣೆಪಟ್ಟಿಯನ್ನು ಕಳಚಿಕೊಳ್ಳದ ಈ ಭಾಗದ ಸರ್ವಾಂಗೀಣ ಅಭಿವೃದ್ಧಿಗೆ ಸರ್ಕಾರ ಕಂಕಣ ಬದ್ಧ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.

ಹೈದರಾಬಾದ್ ಕರ್ನಾಟಕ ವಿಮೋಚನಾ ದಿನದ ಸ್ಮರಣೆಗಾಗಿ ‘ಕಲ್ಯಾಣ ಕರ್ನಾಟಕ ಉತ್ಸವ’ ಆಚರಣೆಯ ದಿನವಾದ ಮಂಗಳವಾರ (ಸೆ.17) ರಾಜ್ಯ ಸರ್ಕಾರವೇ ಇಲ್ಲಿಗೆ ಸ್ಥಳಾಂತರಗೊಂಡಿತ್ತು. ಕಡೆಗಣನೆಗೆ ಗುರಿಯಾಗಿದೆ ಎನ್ನಲಾಗುವ ಈ ಪ್ರದೇಶಕ್ಕೆ ಇನ್ನಾದರೂ ‘ಪ್ರಗತಿ ವರ್ಷಧಾರೆ ಹರಿಯಬೇಕು’ ಎಂಬ ಬೇಡಿಕೆಯನ್ನು ಈಡೇರಿಸುವತ್ತ ಸರ್ಕಾರ ಮಹತ್ವದ ದಾಖಲೆಗಳನ್ನೂ ಬರೆಯಿತು.

ಬೆಳಿಗ್ಗೆ ನಡೆದ ಕಲ್ಯಾಣ ಕರ್ನಾಟಕ ಉತ್ಸವದಲ್ಲಿ ಪಾಲ್ಗೊಂಡು, ಭರವಸೆಗಳ ಹೊಂಬೆಳಕು ಚೆಲ್ಲಿದ್ದ ಸರ್ಕಾರದ ನೇತಾರರು, ಸಂಜೆಯ ಹೊತ್ತಿಗೆ ಸಚಿವ ಸಂಪುಟ ಸಭೆ ನಡೆಸಿ ಮಹತ್ವದ ಯೋಜನೆಗಳಿಗೆ ಅನುದಾನ ಒದಗಿಸುವ ಕಡತಗಳಿಗೆ ಒಪ್ಪಿಗೆಯನ್ನೂ ನೀಡಿದರು. ದಶಕಗಳ ಬಳಿಕ ಇಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಉದ್ಯೋಗ ಸೃಷ್ಟಿ ಹಾಗೂ ವಿವಿಧ ಯೋಜನೆಗಳಿಗೆ ಭರಪೂರ ಅನುದಾನ ನೀಡುವ ತೀರ್ಮಾನವನ್ನು ಕೈಗೊಳ್ಳಲಾಯಿತು.



ಮಿನಿವಿಧಾನಸೌಧ ಆವರಣಕ್ಕೆ ಬಸ್‌ನಲ್ಲಿ ಮಂಗಳವಾರ ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಧ್ಯಮಗಳತ್ತ ಕೈಬೀಸಿದರು. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಪ್ರಿಯಾಂಕ್ ಖರ್ಗೆ, ಎಚ್‌.ಕೆ. ಪಾಟೀಲ, ಜಿ.ಪರಮೇಶ್ವರ ಜೊತೆಗಿದ್ದರು ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಮಿನಿ ವಿಧಾನಸೌಧ ಇನ್ನು ‘ಪ್ರಜಾಸೌಧ’

‘ಬೀದರ್ ಜಿಲ್ಲಾ ಕಚೇರಿಗಳ ಸಂಕೀರ್ಣ ನಿರ್ಮಿಸಲು ₹59.80 ಕೋಟಿ ಪರಿಷ್ಕೃತ ಕಾಮಗಾರಿಗೆ ಒಪ್ಪಿಗೆ ನೀಡಲಾಗಿದೆ. ಇದಕ್ಕೆ ‘ಪ್ರಜಾಸೌಧ’ ಎಂದು ನಾಮಕರಣ ಮಾಡಲಾಗುವುದು. ಇನ್ನು ಮುಂದೆ ತಾಲ್ಲೂಕುಗಳಲ್ಲಿ ನಿರ್ಮಿಸುವ ಮಿನಿ ವಿಧಾನಸೌಧಗಳಿಗೂ ಪ್ರಜಾಸೌಧ ಎಂದೇ ನಾಮಕರಣ ಮಾಡಲು ಸಭೆಯಲ್ಲಿ ನಿರ್ಣಯ ಕೈಗೊಂಡಿದ್ದೇವೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸಂಪುಟ ಸಭೆ ಬಳಿಕ ಸಚಿವರ ದಂಡಿನೊಂದಿಗೆ ತಾವೇ ಸುದ್ದಿಗೋಷ್ಠಿ ನಡೆಸಿದ ಸಿದ್ದರಾಮಯ್ಯ, ಸರ್ಕಾರದ ನಿರ್ಣಯಗಳನ್ನು ಪ್ರಕಟಿಸಿದರು.

‘ಸಂಪುಟದ ಮುಂದೆ ಬಂದಿದ್ದ ಒಟ್ಟು ₹12,692 ಕೋಟಿ ಮೊತ್ತದ 56 ವಿಷಯಗಳಿಗೆ ಅನುಮೋದನೆ ನೀಡಿದ್ದೇವೆ. ಇವುಗಳ ಪೈಕಿ ₹11,770 ಕೋಟಿ ಮೊತ್ತದ 46 ವಿಷಯಗಳು ಕಲ್ಯಾಣ ಕರ್ನಾಟಕ ಭಾಗಕ್ಕೇ ಸೇರಿದ್ದು, ಇವುಗಳಿಗೆ ಅನುಮೋದನೆ ನೀಡಲಾಗಿದೆ.

9ನೇ ಪುಟ ನೋಡಿ

‘ಕೇಂದ್ರವೂ ₹5,000 ಕೋಟಿ ನೀಡಲಿ’

‘ರಾಜ್ಯಕ್ಕೆ ನ್ಯಾಯಯುತ ಪಾಲುಕೊಡುವಲ್ಲಿ ಕೇಂದ್ರ ಸರ್ಕಾರ ತಾರತಮ್ಯ ಧೋರಣೆ ಅನುಸರಿಸುತ್ತಿದೆ’ ಎಂದು ಏರಿದ ಧ್ವನಿಯಲ್ಲಿ ಪ್ರತಿಪಾದಿಸುತ್ತಿರುವ ರಾಜ್ಯ ಸರ್ಕಾರ, ಇಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿಯೂ ಕೇಂದ್ರದ ಮುಂದೆ ಹಕ್ಕೊತ್ತಾಯ ಮಂಡಿಸುವ ನಿರ್ಣಯವನ್ನು ಕೈಗೊಂಡಿತು.

‘ಕಲ್ಯಾಣ ಕರ್ನಾಟಕದ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ ಪ್ರತಿ ವರ್ಷ ₹5,000 ಕೋಟಿ ಅನುದಾನ ನೀಡುತ್ತಿದೆ. ‘371 ಜೆ’ ಜಾರಿಗೊಳಿಸಿ 10 ವರ್ಷಗಳಾದರೂ ಕೇಂದ್ರ ಸರ್ಕಾರ ಒಂದು ರೂಪಾಯಿಯನ್ನೂ ನೀಡಿಲ್ಲ. ಹೀಗಾಗಿ ಕೇಂದ್ರ ಸರ್ಕಾರವೂ ಈ ಭಾಗದ ಅಭಿವೃದ್ಧಿಗೆ ಪ್ರತಿ ವರ್ಷ ₹5,000 ಕೋಟಿ ಅನುದಾನ ನೀಡಬೇಕು ಎಂಬ ನಿರ್ಣಯವನ್ನು ಸಭೆಯಲ್ಲಿ ಅಂಗೀಕರಿಸಲಾಗಿದ್ದು, ಕೇಂದ್ರಕ್ಕೆ ಪ್ರಸ್ತಾವ ಕಳುಹಿಸಿಕೊಡುತ್ತೇವೆ’ ಎಂದು ಸಿದ್ದರಾಮಯ್ಯ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಕಲ್ಯಾಣಕ್ಕೆ ಪ್ರತ್ಯೇಕ ಸಚಿವಾಲಯ

ಕಲ್ಯಾಣ ಕರ್ನಾಟಕಕ್ಕೆ ಪ್ರತ್ಯೇಕ ಸಚಿವಾಲಯ ನಿರ್ಮಿಸಬೇಕು ಎಂಬ ಈ ಭಾಗದ ಕೂಗಿಗೆ ರಾಜ್ಯ ಸರ್ಕಾರ ಕೊನೆಗೂ ಸ್ಪಂದಿಸಿದೆ.

‘ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಡಿ ಈ ಭಾಗದಲ್ಲಿ ಕೈಗೊಳ್ಳುವ ಅಭಿವೃದ್ಧಿ ಕಾಮಗಾರಿಗಳ ನಿರ್ವಹಣೆಗಾಗಿ ಪ್ರತ್ಯೇಕ ಸಚಿವಾಲಯ ನಿರ್ಮಿಸಲು ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ. ಇದಕ್ಕೆ ಒಬ್ಬ ಹೆಚ್ಚುವರಿ ಕಾರ್ಯದರ್ಶಿ ಹಾಗೂ ಒಬ್ಬ ಮುಖ್ಯ ಎಂಜಿನಿಯರ್ ನೇಮಕ ಮಾಡಲಾಗುವುದು. ಎಲ್ಲ ಏಳು ಜಿಲ್ಲೆಗಳ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಹೆಚ್ಚುವರಿ ಸಿಬ್ಬಂದಿಯನ್ನು ನೇಮಿಸಲಾಗುವುದು’ ಎಂದು ಮುಖ್ಯಮಂತ್ರಿ ತಿಳಿಸಿದರು.

ಬೀದರ್, ರಾಯಚೂರಿಗೆ ಪಾಲಿಕೆ

ಬೀದರ್ ಹಾಗೂ ರಾಯಚೂರು ನಗರಸಭೆಗಳನ್ನು ಮಹಾನಗರ ಪಾಲಿಕೆಯನ್ನಾಗಿ ಮೇಲ್ದರ್ಜೆಗೇರಿಸಬೇಕು ಎಂಬ ಬಹುದಿನಗಳ ಬೇಡಿಕೆಗೆ ರಾಜ್ಯ ಸರ್ಕಾರ ಮನ್ನಣೆ ನೀಡಿದೆ. ಬೀದರ್ ಹಾಗೂ ರಾಯಚೂರಿಗೆ ಮಹಾನಗರ ಪಾಲಿಕೆ ರಚಿಸಲು ಸಚಿವ ಸಂಪುಟವು ಒಪ್ಪಿಗೆ ನೀಡಿತು.



ಗಣಪನ ವಿಸರ್ಜನೆ

ಶಿವಮೊಗ್ಗದ ಕೋಟೆ ಪ್ರದೇಶದ ಭೀಮೇಶ್ವರ ಗುಡಿಯಲ್ಲಿ ಹಿಂದೂ ಸಂಘಟನೆಗಳ ಮಹಾಮಂಡಳವು 80ನೇ ವರ್ಷದ ಗಣೇಶೋತ್ಸವ ನಡೆಸಿತು. ಮಂಗಳವಾರ ಗಣಪತಿಯ ವಿಸರ್ಜನಾ ಪೂರ್ವದ ರಾಜಬೀದಿ ಉತ್ಸವ ಭೀಮೇಶ್ವರ ಗುಡಿಯಿಂದ ಸಾಗಿದಾಗ ಕಂಡ ಜನಸಮೂಹ ಪ್ರಜಾವಾಣಿ ಚಿತ್ರ/ ಶಿವಮೊಗ್ಗ ನಾಗರಾಜ್

ದೆಹಲಿಗೆ ಆತಿಶಿ ಸಾರಥಿ

ಪ್ರಜಾವಾಣಿ ವಾರ್ತೆ



ಅರವಿಂದ ಕೇಜ್ರಿವಾಲ್

ನವದೆಹಲಿ: ಅರವಿಂದ ಕೇಜ್ರಿವಾಲ್ ಉತ್ತರಾಧಿಕಾರಿಯಾಗಿ ದೆಹಲಿ ಮುಖ್ಯಮಂತ್ರಿ ಪಟ್ಟಕ್ಕೇರಲು ಆತಿಶಿ ಸಜ್ಜಾಗಿದ್ದಾರೆ.

ಶಾಸಕಾಂಗ ಪಕ್ಷದ ಸಭೆ ಕೇಜ್ರಿವಾಲ್ ನಿವಾಸದಲ್ಲಿ ಮಂಗಳವಾರ ಮಧ್ಯಾಹ್ನ ನಡೆಯಿತು. ಶಾಸಕಾಂಗ ಪಕ್ಷದ ನಾಯಕಿಯಾಗಿ ಆತಿಶಿ ಹೆಸರನ್ನು ಕೇಜ್ರಿವಾಲ್ ಪ್ರಸ್ತಾಪಿಸಿದರು. ‘ವಿಧಾನಸಭಾ ಚುನಾವಣೆ ವರೆಗೆ’ ಆತಿಶಿ ಮುಖ್ಯಮಂತ್ರಿಯಾಗುವ ಪ್ರಸ್ತಾಪಕ್ಕೆ ಸಭೆ ಸರ್ವಾನುಮತದಿಂದ ಒಪ್ಪಿಗೆ ನೀಡಿತು.

ಕೇಜ್ರಿವಾಲ್ ಅವರು ಲೆಫ್ಟಿನೆಂಟ್ ಗವರ್ನರ್ ವಿ.ಕೆ ಸಕ್ಸೇನಾ ಅವರನ್ನು ಸಂಜೆ ಭೇಟಿ ಮಾಡಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ಬಳಿಕ, ಆತಿಶಿ ಅವರು ಸರ್ಕಾರ ರಚಿಸಲು ಹಕ್ಕು ಮಂಡಿಸಿದರು. ದೆಹಲಿ ವಿಧಾನಸಭೆಯ ಅಧಿವೇಶನವನ್ನು ಸೆಪ್ಟೆಂಬರ್ 26-27ರಂದು ಕರೆಯಲಾಗುವುದು ಎಂದು ಎಎಪಿ ಮೂಲಗಳು ತಿಳಿಸಿವೆ.

11ನೇ ಪುಟ ನೋಡಿ

ಸಿ.ಎಂ ಮುಂದಿನ ಸವಾಲುಗಳು



ಆತಿಶಿ

- ಐದು ತಿಂಗಳುಗಳಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆ. ಪಕ್ಷದ ಮತ ಬುಟ್ಟಿಯನ್ನು ಭದ್ರಗೊಳಿಸಬೇಕಿದೆ; ಪ್ರಮುಖ ಯೋಜನೆಗಳ ಸಮರ್ಪಕ ಅನುಷ್ಠಾನ ಹಾಗೂ ಹೊಸ ಯೋಜನೆಗಳ ಜಾರಿಗೊಳಿಸಬೇಕಿದೆ
- ನಗರದ ಮಹಿಳೆಯರಿಗೆ ಮಾಸಿಕ ₹1 ಸಾವಿರ ಆರ್ಥಿಕ ನೆರವು ನೀಡುವುದಾಗಿ ಎಎಪಿ ಸರ್ಕಾರ ಮಾರ್ಚ್‌ನಲ್ಲಿ ಪ್ರಕಟಿಸಿತ್ತು. ಕೇಜ್ರಿವಾಲ್ ಬಂಧನದ ಬಳಿಕ ಇದು ನನೆಗುದಿಗೆ ಬಿದ್ದಿತ್ತು. ಮುಖ್ಯಮಂತ್ರಿಯ ಬಂಧನದಿಂದ ಸಚಿವ ಸಂಪುಟದ ಸಭೆ ನಡೆದಿರಲಿಲ್ಲ. ಸಂಪುಟದ ಒಪ್ಪಿಗೆ ಪಡೆದು ಈ ಕಲ್ಯಾಣ ಕಾರ್ಯಕ್ರಮದ ಜಾರಿ ಮಾಡಬೇಕಿದೆ
- ದೆಹಲಿ ಸರ್ಕಾರದ ಎಲೆಕ್ಟ್ರಿಕ್ ವಾಹನ (ಇ.ವಿ.) ನೀತಿಯ ಅವಧಿ ಜೂನ್‌ಗೆ ಮುಗಿದಿದೆ. ಹೊಸ ನೀತಿಗೆ ಸಂಪುಟದ ಅನುಮೋದನೆ ಪಡೆಯಬೇಕಿದೆ
- ಮನೆ ಬಾಗಿಲಿಗೆ ಸೇವೆಗಳನ್ನು ಒದಗಿಸುವ ಯೋಜನೆ ಸಹ ಸ್ಥಗಿತಗೊಂಡಿದೆ. ಅದನ್ನು ಮರು ಜಾರಿ ಮಾಡಬೇಕಾಗಿದೆ



ಏಷ್ಯನ್ ಹಾಕಿ: ಭಾರತಕ್ಕೆ ಐದನೇ ಬಾರಿಗೆ ಪ್ರಶಸ್ತಿ

ಹುಲುನ್‌ಬುಯಿರ್ (ಚೀನಾ), (ಪಿಟಿಐ): ಭಾರತ ತಂಡವು ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಐದನೇ ಬಾರಿ ಪ್ರಶಸ್ತಿ ಜಯಿಸಿತು.

ಮಂಗಳವಾರ ನಡೆದ ಫೈನಲ್‌ನಲ್ಲಿ ಹರ್ಮನ್‌ಪ್ರೀತ್ ಸಿಂಗ್ ನಾಯಕತ್ವದ ಭಾರತ ತಂಡವು 1–0ಯಿಂದ ಆತಿಥೇಯ ಚೀನಾ ವಿರುದ್ಧ ಜಯಿಸಿತು.

ಡಿಫೆಂಡರ್ ಜುಗರಾಜ್ ಸಿಂಗ್ ಈ ಪಂದ್ಯದಲ್ಲಿ ಫೀಲ್ಡ್ ಗೋಲು ಗಳಿಸಿದರು. ನಾಲ್ಕನೇ ಕ್ವಾರ್ಟರ್‌ನಲ್ಲಿ (51ನೇ ನಿಮಿಷ) ಗಳಿಸಿದ ಈ ಗೋಲು ಅಂತಿಮವಾಗಿ ನಿರ್ಣಾಯಕವಾಯಿತು.

ವಿವರ ಪುಟ 12

ಆಸ್ತಿ ಗಳಿಕೆ: ಡಿಕೆಶಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಆದಾಯ ಮೀರಿದ ಆಸ್ತಿ ಗಳಿಕೆ ಪ್ರಕರಣ ಸಂಬಂಧ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್, ಕರ್ನಾಟಕ ಸರ್ಕಾರ ಹಾಗೂ ಲೋಕಾಯುಕ್ತರಿಗೆ ಸುಪ್ರೀಂ ಕೋರ್ಟ್ ಮಂಗಳವಾರ ನೋಟಿಸ್ ಜಾರಿ ಮಾಡಿದೆ.

ಈ ಆರೋಪಕ್ಕೆ ಸಂಬಂಧಿಸಿದಂತೆ ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ ನೀಡಿದ್ದ ಅನುಮತಿಯನ್ನು ಹಿಂಪಡೆದಿದ್ದ ರಾಜ್ಯ ಸರ್ಕಾರದ ಕ್ರಮ ಪ್ರಶ್ನಿಸಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಸಲ್ಲಿಸಿರುವ ವಿಶೇಷ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಹಾಗೂ ಉಜ್ವಲ್ ಭುಯಾನ್ ಅವರನ್ನೊಳಗೊಂಡ ಪೀಠವು ಪ್ರತಿವಾದಿಗಳಿಗೆ ನೋಟಿಸ್ ಜಾರಿ ಮಾಡಿತು. ವಿಚಾರಣೆಯನ್ನು ನಾಲ್ಕು ವಾರ ಮುಂದೂಡಿತು. ಆರಂಭದಲ್ಲಿ ಪೀಠವು, ‘ಇದು ರಾಜ್ಯ, ಸಿಬಿಐ ನಡುವಿನ ವಿಷಯವಾಗಿರುವುದರಿಂದ ಸಂವಿಧಾನದ 131ನೇ ವಿಧಿಯಡಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಹೇಗೆ ಅವಕಾಶ ಇದೆ’ ಎಂದು ಪ್ರಶ್ನಿಸಿತು.

9ನೇ ಪುಟ ನೋಡಿ

ಪರಪ್ಪನ ಅಗ್ರಹಾರ ಜೈಲಿಗೆ ಮುನಿರತ್ನ

ಪ್ರಜಾವಾಣಿ ವಾರ್ತೆ



ಎನ್‌.ಮುನಿರತ್ನ

ಬೆಂಗಳೂರು: ಜಾತಿ ನಿಂದನೆ ಹಾಗೂ ಗುತ್ತಿಗೆದಾರರಿಗೆ ಕೊಲೆ ಬೆದರಿಕೆ ಹಾಕಿದ್ದ ಆರೋಪದಡಿ ಬಂಧಿತರಾಗಿ ಎರಡು ದಿನಗಳಿಂದ ಪೊಲೀಸ್ ಕಸ್ಟಡಿಯಲ್ಲಿದ್ದ ಬಿಜೆಪಿ ಶಾಸಕ ಮುನಿರತ್ನ ಅವರನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಇದೇ 30ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಈ ಬೆನ್ನಲ್ಲೇ, ವೈಯಾಲಿಕಾವಲ್ ಠಾಣೆ ಪೊಲೀಸರು ಬಿಗಿ ಭದ್ರತೆ ನಡುವೆ ಮುನಿರತ್ನ ಅವರನ್ನು ಕರೆದೊಯ್ದು, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಅಧಿಕಾರಿಗಳ ವಶಕ್ಕೆ ಒಪ್ಪಿಸಿದರು.

ಇದಕ್ಕೂ ಮೊದಲು, ಮುನಿರತ್ನ ಅವರನ್ನು ವೈದ್ಯಕೀಯ ಪರೀಕ್ಷೆಗೆ ಮಂಗಳವಾರ ಬೆಳಿಗ್ಗೆ ಒಳಪಡಿಸಲಾಗಿತ್ತು.

9ನೇ ಪುಟ ನೋಡಿ

ಅ. 1ರವರೆಗೆ ನೆಲಸಮ ಬೇಡ ● ಅಧಿಕಾರಿ ನ್ಯಾಯಮೂರ್ತಿ ಅಲ್ಲ : ಕೋರ್ಟ್

ಬುಲ್ಡೋಜರ್‌ಗೆ ‘ಸುಪ್ರೀಂ’ ತಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾನೂನುಬಾಹಿರವಾಗಿ ಒಂದೇ ಒಂದು ಕಟ್ಟಡ ನೆಲಸಮ ಕಾರ್ಯಾಚರಣೆ ನಡೆದರೂ ಅದು ಸಂವಿಧಾನದ ತತ್ವಗಳಿಗೆ ವಿರುದ್ಧವಾದುದು. ತನ್ನ ಅನುಮತಿ ಇಲ್ಲದೆ ದೇಶದ ಯಾವುದೇ ಭಾಗದಲ್ಲಿ ಒಂದೇ ಒಂದು ನೆಲಸಮ ಕಾರ್ಯಾಚರಣೆ ನಡೆಸಬಾರದು ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

‘ಬುಲ್ಡೋಜರ್ ನ್ಯಾಯ’ಕ್ಕೆ ಅ.1ರವರೆಗೆ ತಡೆಯಾಜ್ಞೆ ನೀಡಿದೆ.

‘ಆದರೆ, ಈ ನಿರ್ದೇಶನವು ರೈಲು ಹಳಿ, ರಸ್ತೆ, ಪಾದಚಾರಿ ಮಾರ್ಗಗಳು ಸೇರಿದಂತೆ ಸಾರ್ವಜನಿಕ ಆಸ್ತಿಗಳ ಅತಿಕ್ರಮಣ ಪ್ರಕರಣಗಳಿಗೆ ಅನ್ವಯಿಸುವುದಿಲ್ಲ’ ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಕೆ.ವಿ.ವಿಶ್ವನಾಥನ್ ಅವರಿದ್ದ ಪೀಠವು ಸ್ಪಷ್ಟಪಡಿಸಿತು.

ಅಪರಾಧ ಕೃತ್ಯಗಳ ಆರೋಪಿಗಳಿಗೆ ಸೇರಿದ ಆಸ್ತಿಗಳನ್ನು ವಿವಿಧ ರಾಜ್ಯಗಳಲ್ಲಿ ನಿಯಮಬಾಹಿರವಾಗಿ ನೆಲಸಮಗೊಳಿಸಲಾಗುತ್ತಿದೆ ಎಂಬ ಆರೋಪಕ್ಕೆ ಸಂಬಂಧಿಸಿದ ಅರ್ಜಿಗಳ ವಿಚಾರಣೆ ವೇಳೆ ಪೀಠವು ಈ ನಿರ್ದೇಶನ ನೀಡಿತು.

‘ಅರ್ಜಿಗಳ ವಿಚಾರಣೆಯನ್ನು ಅ. 1ಕ್ಕೆ ಮುಂದೂಡಲಾಗಿದೆ. ಅಲ್ಲಿಯವರೆಗೂ ಕೋರ್ಟ್‌ನ ಅನುಮತಿಯಿಲ್ಲದೇ ಯಾವುದೇ ರೀತಿಯ ನೆಲಸಮಗೊಳಿಸುವ ಕಾರ್ಯಾಚರಣೆ ನಡೆಸಬಾರದು. ‘ಅಧಿಕಾರಿ ನ್ಯಾಯಮೂರ್ತಿ ಅಲ್ಲ. ವಿಚಾರಣೆಯ ಬಳಿಕ ನೀಡುವ ಆದೇಶವೇ ದೇಶವ್ಯಾಪಿ ಅನ್ವಯವಾಗಲಿದೆ. ಅಲ್ಲದೆ, ಯಾರಾದರೂ ನ್ಯಾಯಾಂಗ ನಿಂದನೆ ಎದುರಿಸಲು ಬಯಸಿದರೆ, ಎದುರಿಸಲಿ’ ಎಂದು ಪೀಠ ಹೇಳಿತು.

ಬುಲ್ಡೋಜರ್ ಕಾರ್ಯಾಚರಣೆ ಕುರಿತಂತೆ ಸೆಪ್ಟೆಂಬರ್ 2ರ ವಿಚಾರಣೆ ಬಳಿಕ ವ್ಯಕ್ತವಾಗಿರುವ ಹೇಳಿಕೆಗಳನ್ನು ಉಲ್ಲೇಖಿಸಿದ ಸುಪ್ರೀಂ ಕೋರ್ಟ್, ನೆಲಸಮ ಕಾರ್ಯಾಚರಣೆ ಕುರಿತು ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಲು ಬಯಸುವುದಾಗಿ ಹೇಳಿತು.

11ನೇ ಪುಟ ನೋಡಿ

> **ದೇಶ ಸಂವಿಧಾನಕ್ಕೆ ಅನುಗುಣವಾಗಿ ಮಾತ್ರವೇ ನಡೆಯಲಿದೆ. ‘ಬುಲ್ಡೋಜರ್ ನ್ಯಾಯ’ ಒಪ್ಪಲಾಗದು ಎಂದು ಸುಪ್ರೀಂ ಕೋರ್ಟ್ ಈ ಮೂಲಕ ಸ್ಪಷ್ಟಪಡಿಸಿದೆ**
> **ಪ್ರಿಯಾಂಕಾ ಗಾಂಧಿ**, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

> **ಸುಪ್ರೀಂ ಕೋರ್ಟ್ ಆದೇಶವು ಬುಲ್ಡೋಜರ್ ಕಾರ್ಯಾಚರಣೆಯನ್ನು ಬೆಂಬಲಿಸುವ, ದ್ವೇಷವನ್ನೇ ತುಂಬಿಕೊಂಡಿರುವ ಮುಖ್ಯಮಂತ್ರಿಗಳು, ಮುಖಂಡರಿಗೆ ಮಾಡಿರುವ ಕಪಾಳಮೋಕ್ಷವಾಗಿದೆ**
> **ಸುಪ್ರಿಯಾ ಶ್ರೀನೇತ್,** ಕಾಂಗ್ರೆಸ್ ವಕ್ತಾರೆ

> **ಆದೇಶವು ಬುಲ್ಡೋಜರ್ ಅನ್ನು ಅಷ್ಟೇ ಅಲ್ಲ; ಬುಲ್ಡೋಜರ್ ಅನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದ ಕೆಲವರ ವಿನಾಶಕಾರಿ ರಾಜಕಾರಣವನ್ನೂ ಬದಿಗೆ ಸರಿಸಿದೆ**
> **ಅಖಿಲೇಶ್ ಯಾದವ್**, ಸಮಾಜವಾದಿ ಪಕ್ಷದ ಮುಖ್ಯಸ್ಥ

ನ್ಯಾಯಪೀಠ ಹೇಳಿದ್ದು..



- ನಿಯಮಬಾಹಿರ ನೆಲಸಮ ಸಂವಿಧಾನದ ಆಶಯಗಳಿಗೆ ವಿರುದ್ಧವಾದುದು
- ವಿಚಾರಣೆ ಬಳಿಕ ಕೋರ್ಟ್ ನೀಡುವ ಆದೇಶವೇ ದೇಶವ್ಯಾಪಿ ಅನ್ವಯ
- ಹೊರಗಿನ ಅಬ್ಬರ ಪೀಠದ ಮೇಲೆ ಪರಿಣಾಮ ಬೀರುವುದಿಲ್ಲ

‘ಈ ಅವಧಿಯಲ್ಲೇ ಒಂದು ರಾಷ್ಟ್ರ, ಒಂದು ಚುನಾವಣೆ’ 11

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಕೋಲ್ಕತ್ತ: ವೈದ್ಯ ವಿದ್ಯಾರ್ಥಿನಿ ಅತ್ಯಾಚಾರ–ಕೊಲೆ ಪ್ರಕರಣ

ಸಂಧಾನಕ್ಕೆ ಬದ್ಧ: ಅಧಿಕಾರಿಗಳ ವರ್ಗ

ಕೋಲ್ಕತ್ತ (ಪಿಟಿಐ): ಪ್ರತಿಭಟನೆನಿರತ ಕಿರಿಯ ವೈದ್ಯರ ಜೊತೆಗೆ ಸೋಮವಾರ ನಡೆದ ಸಂಧಾನಕ್ಕೆ ಅನುಗುಣವಾಗಿ ಆಡಳಿತ ವ್ಯವಸ್ಥೆಯಲ್ಲಿ ಪಶ್ಚಿಮ ಬಂಗಾಳ ಸರ್ಕಾರ ಹಲವು ಬದಲಾವಣೆಗಳನ್ನು ಮಂಗಳವಾರ ಮಾಡಿದೆ. ಪೊಲೀಸ್, ವೈದ್ಯಕೀಯ ಶಿಕ್ಷಣ ಮತ್ತು ಆರೋಗ್ಯ ಇಲಾಖೆಗಳಲ್ಲಿನ ಹಿರಿಯ ಅಧಿಕಾರಿಗಳನ್ನು ವರ್ಗಾವಣೆ ಮಾಡಿದೆ.

ಹಿರಿಯ ಪೊಲೀಸ್ ಅಧಿಕಾರಿ ಮನೋಜ್ ಕುಮಾರ್ ವರ್ಮಾ ಅವರನ್ನು ಕೋಲ್ಕತ್ತದ ನೂತನ ಪೊಲೀಸ್ ಕಮಿಷನರ್ ಆಗಿ ನೇಮಕ ಮಾಡಲಾಗಿದೆ. 1998ರ ಬ್ಯಾಚ್‌ನ ಅಧಿಕಾರಿ ವರ್ಮಾ, ಕಾನೂನು ಮತ್ತು ಸುವ್ಯವಸ್ಥೆ ಎಡಿಜಿ ಮತ್ತು ಐಜಿಪಿ ಆಗಿದ್ದರು.

ಈ ಕುರಿತು ಅಧಿಸೂಚನೆ ಹೊರಡಿಸಿರುವ ಪಶ್ಚಿಮ ಬಂಗಾಳ ಸರ್ಕಾರ, ಐಪಿಎಸ್ ಅಧಿಕಾರಿ ವಿನೀತ್ ಗೋಯಲ್ ಅವರನ್ನು ಆ ಹುದ್ದೆಯಿಂದ ತೆಗೆದುಹಾಕಿದೆ.

ವೈದ್ಯಕೀಯ ಶಿಕ್ಷಣ ನಿರ್ದೇಶಕರಾಗಿದ್ದ ಡಾ.ಕೌಸ್ತವ ನಾಯಕ್ ಹಾಗೂ ಆರೋಗ್ಯ ಸೇವೆಗಳ ನಿರ್ದೇಶಕ ಡಾ.ದೇಬಶಿಶ್ ಹಲ್ದರ್ ಅವರನ್ನು ವರ್ಗಾವಣೆ ಮಾಡಲಾಗಿದೆ. ಡಾ.ಸ್ವಪನ್ ಸೊರೇನ್ ಅವರನ್ನು ಆರೋಗ್ಯ ಸೇವೆಗಳ ಪ್ರಭಾರಿ ನಿರ್ದೇಶಕರನ್ನಾಗಿ, ಡಾ.ಸುಪರ್ಣ ದತ್ತಾ ಅವರನ್ನು ವೈದ್ಯಕೀಯ ಶಿಕ್ಷಣದ ವಿಶೇಷ ಕರ್ತವ್ಯ ಅಧಿಕಾರಿಯಾಗಿ ನೇಮಕ ಮಾಡಿ ಆದೇಶ ಹೊರಡಿಸಲಾಗಿದೆ.

11ನೇ ಪುಟ ನೋಡಿ

ವೈದ್ಯೆಯರಿಗೆ ರಾತ್ರಿ ಪಾಳಿ ರದ್ದು: ಆಕ್ಷೇಪ

ನವದೆಹಲಿ (ಪಿಟಿಐ): ಮಹಿಳಾ ವೈದ್ಯರಿಗೆ ರಾತ್ರಿ ಪಾಳಿ ಕರ್ತವ್ಯ ರದ್ದು ಮಾಡುವ ಮತ್ತು ಅವರ ಕೆಲಸದ ಅವಧಿ ದಿನಕ್ಕೆ 12 ತಾಸು ಮೀರುವಂತಿಲ್ಲ ಎಂಬ ನಿಯಮಗಳನ್ನು ರೂಪಿಸಿರುವ ಪಶ್ಚಿಮ ಬಂಗಾಳ ಸರ್ಕಾರದ ಕ್ರಮಕ್ಕೆ ಸುಪ್ರೀಂ ಕೋರ್ಟ್ ಆಕ್ಷೇಪ ವ್ಯಕ್ತಪಡಿಸಿದೆ.

ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ವಿಚಾರಣೆ ವೇಳೆ ಈ ವಿಚಾರ ಪ್ರಸ್ತಾಪಗೊಂಡಿತು. ಆಗ, ಈ ಕುರಿತ ಅಧಿಸೂಚನೆಯನ್ನು ಸರಿಪಡಿಸಬೇಕು ಎಂದು ಪಶ್ಚಿಮ ಬಂಗಾಳ ಸರ್ಕಾರಕ್ಕೆ ನ್ಯಾಯಪೀಠ ಸೂಚಿಸಿತು.

‘ಮಹಿಳಾ ವೈದ್ಯರು ರಾತ್ರಿ ಪಾಳಿಯಲ್ಲಿ ಕರ್ತವ್ಯ ನಿರ್ವಹಿಸುವಂತಿಲ್ಲ ಎಂದು ನೀವು ಹೇಳುವಂತಿಲ್ಲ. ಅವರಿಗೆ ಭದ್ರತೆ ಒದಗಿಸುವುದು ನಿಮ್ಮ ಕರ್ತವ್ಯ. ಪೈಲಟ್‌ಗಳು, ಸೇನೆ ಸಿಬ್ಬಂದಿ ರಾತ್ರಿ ಪಾಳಿಯಲ್ಲಿ ಕೆಲಸ ಮಾಡುತ್ತಾರೆ. ಕೆಲಸದ ಅವಧಿ ಎಲ್ಲ ವೈದ್ಯರಿಗೂ ನ್ಯಾಯಯುತವಾಗಿರಬೇಕು’ ಎಂದೂ ನ್ಯಾಯಪೀಠ ಹೇಳಿತು.

ನ್ಯಾಯಪೀಠದ ಸೂಚನೆಯ ನಂತರ, ಮಹಿಳಾ ವೈದ್ಯರಿಗೆ ಸಂಬಂಧಿಸಿದ ಈ ಅಧಿಸೂಚನೆಯನ್ನು ಹಿಂದಕ್ಕೆ ಪಡೆಯುವುದಾಗಿ ಪಶ್ಚಿಮ ಬಂಗಾಳ ಸರ್ಕಾರವು ಪೀಠಕ್ಕೆ ತಿಳಿಸಿತು.

11ನೇ ಪುಟ ನೋಡಿ

ಸೆ.21ಕ್ಕೆ ಅಕ್ಕಿನೇನಿ ನಾಗೇಶ್ವರರಾವ್ ಶತಮಾನೋತ್ಸವ ಕಾರ್ಯಕ್ರಮ

ಬೆಂಗಳೂರು: ತೆಲುಗು ವಿಜ್ಞಾನ ಸಮಿತಿಯಿಂದ ನಟ ದಿವಂಗತ ಅಕ್ಕಿನೇನಿ ನಾಗೇಶ್ವರರಾವ್ ಅವರ ಶತಮಾನೋತ್ಸವ ಕಾರ್ಯಕ್ರಮವನ್ನು ಸೆಪ್ಟೆಂಬರ್ 21ರ ಸಂಜೆ 5.30ಕ್ಕೆ ವೈಯಾಲಿಕಾವಲ್‌ನಲ್ಲಿರುವ ಶ್ರೀ ಕೃಷ್ಣದೇವರಾಯ ಕಲಾಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ಸಮಿತಿ ಅಧ್ಯಕ್ಷ ಎ.ರಾಧಾಕೃಷ್ಣರಾಜು ತಿಳಿಸಿದರು.

ದಕ್ಷಿಣ ಭಾರತದ ಚಿತ್ರನಟರಾದ ಸುಮನ್ ತಲ್ವಾರ್ ಹಾಗೂ ಜಯಸುಧಾ ಅವರಿಗೆ ಶತಮಾನೋತ್ಸವ ಪುರಸ್ಕಾರ ನೀಡಿ ಗೌರವಿಸಲಾಗುವುದು. ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಸಮಾರಂಭ ಉದ್ಘಾಟಿಸಲಿದ್ದು, ಆಂಧ್ರಪ್ರದೇಶದ ಆರೋಗ್ಯ ಸಚಿವ ಸತ್ಯ ಕುಮಾರ್ ಭಾಗವಹಿಸುವರು ಎಂದು ಹೇಳಿದರು.

ಇದೇ ವೇಳೆ ಅಕ್ಕಿನೇನಿ ನಾಗೇಶ್ವರರಾವ್ ಅವರ ಚಲನಚಿತ್ರ ಗೀತೆಗಳನ್ನು ನವೀನ್ ಮತ್ತು ಧನಲಕ್ಷ್ಮೀ ಅವರು ಹಾಡಲಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತೆಲುಗು ಹಾಗೂ ಕನ್ನಡ ಮಹಾಕವಿಗಳ ವರ್ಣಚಿತ್ರಗಳ ಉದ್ಘಾಟನೆ ನೆರವೇರಿಸುವರು ಎಂದು ಪ್ರಧಾನ ಕಾರ್ಯದರ್ಶಿ ಐ.ಲಕ್ಷ್ಮೀ ರೆಡ್ಡಿ ತಿಳಿಸಿದರು.

‘ಆರ್‌ಎಸ್‌ಎಸ್ ಪ್ರಮುಖರಲ್ಲಿ ದಲಿತರಿದ್ದಾರೆಯೇ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮನುವಾದಿ ಆರ್‌ಎಸ್‌ಎಸ್, ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳೇ ಸಂವಿಧಾನದ ವಿರೋಧಿಗಳು. ಇವರೇ ನಿಜವಾಗಿಯೂ ಮೀಸಲಾತಿಯ ವಿರೋಧಿಗಳು. ಆರ್‌ಎಸ್‌ಎಸ್‌ನ ಪ್ರಮುಖ ಹುದ್ದೆಗಳಲ್ಲಿ ದಲಿತರು ಇದ್ದಾರಾ’ ಎಂದು ಎಐಸಿಸಿ ಕಾರ್ಯದರ್ಶಿ ಬಿ.ಎಂ.ಸಂದೀಪ್ ಪ್ರಶ್ನಿಸಿದರು.

‘ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ನಾಲಿಗೆ ಕತ್ತರಿಸಿದರೆ ₹11 ಲಕ್ಷ ಬಹುಮಾನ ನೀಡುತ್ತೇನೆ’ ಎಂದಿದ್ದ ಮಹಾರಾಷ್ಟ್ರದ ಶಿವಸೇನಾ (ಶಿಂದೆ ಬಣ) ನಾಯಕ ಸಂಜಯ್ ಗಾಯಕ್‌ವಾಡ್ ಹೇಳಿಕೆಯನ್ನು ಖಂಡಿಸಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಮಂಗಳವಾರ ನಡೆಸಿದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.



ಶಿವಸೇನಾ ನಾಯಕನ ಹೇಳಿಕೆ ಖಂಡಿಸಿ, ಕೆಪಿಸಿಸಿ ಸದಸ್ಯರು ನಗರದ ಕಾಂಗ್ರೆಸ್ ಕಚೇರಿ ಎದುರು ಮಂಗಳವಾರ ಪ್ರತಿಭಟನೆ ನಡೆಸಿದರು

‘ಮೀಸಲಾತಿ ಜಾರಿಗೆ ತಂದಿದ್ದೇ ಕಾಂಗ್ರೆಸ್. ಪಂಚಾಯತ್ ರಾಜ್ ವ್ಯವಸ್ಥೆ ತಂದು ದಲಿತರು, ಹಿಂದುಳಿದವರಿಗೆ ಮೀಸಲಾತಿ ಕೊಟ್ಟಿದ್ದೂ ಕಾಂಗ್ರೆಸ್. ಆಗ ಅದರ ವಿರುದ್ಧ ನ್ಯಾಯಾಲಯಕ್ಕೆ ಹೋಗಿದ್ದ ಬಿಜೆಪಿ, ಇದೀಗ ಕಾಂಗ್ರೆಸ್ ಮೀಸಲಾತಿ ವಿರೋಧಿ ಎಂದು ಆರೋಪಿಸುತ್ತಿದೆ’ ಎಂದರು.

‘ರಾಹುಲ್ ಗಾಂಧಿ ಅವರ ಪೂರ್ಣ ಹೇಳಿಕೆಯನ್ನು ನೋಡದೆ, ತುಂಡರಿಸಿದ ತುಣುಕನ್ನಷ್ಟೇ ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ನಾಯಕರು ಹಂಚಿಕೊಳ್ಳುತ್ತಿದ್ದಾರೆ. ಈ ಮೂಲಕ ಪರಿಶಿಷ್ಟರು ಮತ್ತು ಶೋಷಿತರನ್ನು ರಾಹುಲ್ ವಿರುದ್ಧ ಎತ್ತಿಕಟ್ಟಲಾಗುತ್ತಿದೆ. ಇದನ್ನು ನಾವು ಖಂಡಿಸುತ್ತೇವೆ’ ಎಂದು ಕೆಪಿಸಿಸಿ ತನ್ನ ಪ್ರಕಟಣೆಯಲ್ಲಿ ಹೇಳಿದೆ.

ನಾಟಕ ಅಕಾಡೆಮಿ: ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿಯು ಮೂರು ವರ್ಷಗಳ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಇದೇ 19ರಂದು ಸಂಜೆ 4 ಗಂಟೆಗೆ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಂಗ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡುತ್ತಾರೆ. ಪ್ರಶಸ್ತಿ ಸಂಚಿಕೆಯನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಅನಾವರಣ ಮಾಡುತ್ತಾರೆ. ಮುಖ್ಯ ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ, ಸಂಸದ ಪಿ.ಸಿ. ಮೋಹನ್ ಭಾಗವಹಿಸಲಿದ್ದು, ಕೇರಳದ ರಂಗಕರ್ಮಿ ಚಂದ್ರದಾಸನ್ ಮತ್ತು ಮರಾಠಿ ಚಲನಚಿತ್ರ ಹಾಗೂ ರಂಗಭೂಮಿ ನಟ ಗಣೇಶ್ ಯಾದವ್ ಪಾಲ್ಗೊಳ್ಳುತ್ತಾರೆ. ಚಿಕ್ಕಪೇಟೆ ಶಾಸಕ ಉದಯ್ ಬಿ. ಗರುಡಾಚಾರ್ ಸಮಾರಂಭದ ಅಧ್ಯಕ್ಷತೆ ವಹಿಸುತ್ತಾರೆ ಎಂದು ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ತಿಳಿಸಿದ್ದಾರೆ.

ನಟಿ ಉಮಾಶ್ರೀ, ನಾಟಕಕಾರರಾದ ಎಚ್.ಎಸ್. ಶಿವಪ್ರಕಾಶ್ ಹಾಗೂ ರಂಗಕರ್ಮಿ ಕೋಟಿಗಾನಹಳ್ಳಿ ರಾಮಯ್ಯ ಅವರಿಗೆ ‘ಜೀವಮಾನ ಸಾಧನೆ ಪ್ರಶಸ್ತಿ’ (ಗೌರವ ಪ್ರಶಸ್ತಿ) ಸೇರಿ 92 ಮಂದಿಗೆ ಅಕಾಡೆಮಿ ಪ್ರಶಸ್ತಿ ವಿತರಿಸಲಾಗುತ್ತದೆ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

‘ರಸ್ತೆ ಗುಂಡಿ ಗಮನ’ ಆ್ಯಪ್‌ನಲ್ಲಿ ನಾಗರಿಕರಿಂದ ದೂರು: ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್

ಗುಂಡಿ: ಪ್ರತಿ ದಿನವೂ ಸಾವಿರ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಪ್ರತಿ ದಿನ ಒಂದು ಸಾವಿರಕ್ಕೂ ಹೆಚ್ಚು ರಸ್ತೆ ಗುಂಡಿಗಳ ದೂರುಗಳು ‘ರಸ್ತೆ ಗುಂಡಿ ಗಮನ’ ಆ್ಯಪ್‌ನಲ್ಲಿ ದಾಖಲಾಗುತ್ತಿವೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

‘ರಸ್ತೆ ಗುಂಡಿ ಗಮನ’ ಆ್ಯಪ್‌ನಲ್ಲಿ ಪ್ರತಿ ದಿನ 1,300ರಿಂದ 1,400 ದೂರು ಬರುತ್ತಿವೆ. ಇದರಲ್ಲಿ ಸುಮಾರು 400 ದೂರು ರಸ್ತೆ ಗುಂಡಿಗೆ ಸಂಬಂಧಿಸಿದ್ದಲ್ಲ ಎಂದು ಅವರು ಸುದ್ದಿಗಾರರಿಗೆ ಮಂಗಳವಾರ ತಿಳಿಸಿದರು.

ನಗರದಲ್ಲಿ ಪ್ರತಿನಿತ್ಯ 800 ರಸ್ತೆ ಗುಂಡಿಗಳನ್ನು ಮುಚ್ಚಲಾಗುತ್ತಿದೆ. ಆ್ಯಪ್‌ನಿಂದ ಒಂದು ಸಾವಿರ ಗುಂಡಿಗಳ ಸಂಖ್ಯೆ ನಿತ್ಯವೂ ಸೇರ್ಪಡೆಯಾಗುತ್ತಿದೆ. ಆದರೂ ಇನ್ನೆರಡು ದಿನಗಳಲ್ಲಿ ಎಲ್ಲ ರಸ್ತೆಗಳ ಗುಂಡಿಗಳನ್ನು ಮುಚ್ಚಲಾಗುವುದು ಎಂದರು.

‘ಉಪ ಮುಖ್ಯಮಂತ್ರಿಯವರು ರಸ್ತೆ ಗುಂಡಿಗಳನ್ನು ಮುಚ್ಚಲು ಸೆಪ್ಟೆಂಬರ್ 21ರವರೆಗೆ ಗಡುವು ನೀಡಿದ್ದರು. ಅವರು ಗಡುವು ನೀಡಿದ್ದಾಗ 2,500 ರಸ್ತೆ ಗುಂಡಿಗಳಿದ್ದವು. ಆದರೆ ನಾವು ಈಗಾಗಲೇ 6,000 ಗುಂಡಿಗಳನ್ನು ಮುಚ್ಚಿದ್ದೇವೆ. ಉಪ ಮುಖ್ಯಮಂತ್ರಿಯವರು ಗಡುವು ನೀಡಿದ್ದಾಗ ಇದ್ದ ರಸ್ತೆ ಗುಂಡಿಗಳಿಂತ ಎರಡು ಪಟ್ಟು ಹೆಚ್ಚು ಗುಂಡಿಗಳನ್ನು ಮುಚ್ಚಲಾಗಿದೆ. ಹೊಸ ದೂರುಗಳೂ ಸೇರಿದಂತೆ ಮಂಗಳವಾರದವರೆಗೆ ಸುಮಾರು ಒಂದು ಸಾವಿರ ಗುಂಡಿಗಳು ಬಾಕಿ ಇದ್ದು, ಇನ್ನೆರಡು ದಿನದಲ್ಲಿ ಮುಚ್ಚಲಾಗುತ್ತದೆ’ ಎಂದು ಮಾಹಿತಿ ನೀಡಿದರು.

ಮುಖ್ಯಾಂಶಗಳು

- ಆರು ಸಾವಿರ ರಸ್ತೆ ಗುಂಡಿಗಳನ್ನು ಮುಚ್ಚಲಾಗಿದೆ
- 32 ಸಾವಿರ ಚದರ ಮೀಟರ್ ರಸ್ತೆ ಮೇಲ್ಮೈಗೆ ಡಾಂಬರು
- ₹240 ಕೋಟಿ ವೆಚ್ಚದಲ್ಲಿ ಹೈಡೆನ್ಸಿಟಿ ಕಾರಿಡಾರ್ ಯೋಜನೆ


ತುಷಾರ್ ಗಿರಿನಾಥ್

‘ಮುಖ್ಯಮಂತ್ರಿಯವರು ರಸ್ತೆ ಗುಂಡಿ ಮುಚ್ಚಲು ಸೆ.23ರವರೆಗೆ ಗಡುವು ನೀಡಿದ್ದರು. ಬಿಬಿಎಂಪಿ ಸೆ.17 ಅನ್ನು ತನ್ನದೇ ಗಡುವಾಗಿಸಿಕೊಂಡಿತ್ತು. ಎಂಜಿನಿಯರ್‌ಗಳು ಪತ್ತೆ ಹಚ್ಚಿರುವುದು ಹಾಗೂ ನಾಗರಿಕರ ದೂರುಗಳಿಂದ ರಸ್ತೆ ಗುಂಡಿಗಳ ಸಂಖ್ಯೆ ಹೆಚ್ಚುತ್ತಿದೆ’ ಎಂದರು.

ಕಳಪೆ ಮೇಲ್ಮೈ ದುರಸ್ತಿ: ರಸ್ತೆ ಗುಂಡಿಗಳನ್ನಷ್ಟೇ ಅಲ್ಲ, 32,200 ಚದರ ಮೀಟರ್ ಕಳಪೆ ರಸ್ತೆ ಮೇಲ್ಮೈಯನ್ನು (ಬ್ಯಾಡ್ ರೀಚಸ್) ದುರಸ್ತಿ ಮಾಡಲಾಗಿದೆ. ಸುಮಾರು 8,000 ಸ್ಥಳಗಳಲ್ಲಿ ನಾಲ್ಕು ಚದರ ಕಿ.ಮೀ ಕಳಪೆ ಮೇಲ್ಮೈಗೆ ಹಾಟ್‌ಮಿಕ್ಸ್ ಹಾಕಲಾಗಿದೆ ಎಂದು ತುಷಾರ್ ಗಿರಿನಾಥ್ ಮಾಹಿತಿ ನೀಡಿದರು.

‘ಬಿಎಂಆರ್‌ಸಿಎಲ್ ಕಾಮಗಾರಿ ನಡೆಸುತ್ತಿರುವ ರಸ್ತೆಗಳ ಪಕ್ಕದ ಸರ್ವಿಸ್ ರಸ್ತೆಗಳನ್ನೂ ಅವರೇ ಅಭಿವೃದ್ಧಿ ಮಾಡಬೇಕೆಂಬ ಷರತ್ತು ಇತ್ತು. ಆದರೆ, ನಾಲ್ಕು ವರ್ಷದಿಂದ ಸರ್ವಿಸ್ ರಸ್ತೆಗಳನ್ನು ಬಿಬಿಎಂಪಿ ನಿರ್ವಹಿಸಬೇಕು ಎಂದು ಹೇಳಲಾಗಿದೆ. ₹240 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ಹೈಡೆನ್ಸಿಟಿ ಕಾರಿಡಾರ್ ಯೋಜನೆಯಲ್ಲಿ ಸರ್ವಿಸ್ ರಸ್ತೆ ನಿರ್ಮಿಸಬೇಕಿದೆ. ಇದಕ್ಕೆ ಸರ್ಕಾರದಿಂದ ಸ್ಪಷ್ಟತೆ ಬೇಕಿದೆ’ ಎಂದು ಹೇಳಿದರು.

ಸುರಂಗ ರಸ್ತೆ ಕಾಮಗಾರಿಯನ್ನು ಆದಷ್ಟು ಶೀಘ್ರ ಪ್ರಾರಂಭಿಸಬೇಕೆಂಬ ಉದ್ದೇಶವಿದೆ. ಇದರ ಪ್ರಕ್ರಿಯೆ ವೇಗದಲ್ಲಿ ನಡೆಯುತ್ತಿದೆ ಎಂದು ತಿಳಿಸಿದರು.

‘ತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ ಯಾವ ದೂರೂ ಬಂದಿಲ್ಲ. ಎಲ್ಲವನ್ನೂ ವಲಯ ಆಯುಕ್ತರು ನಿಯಂತ್ರಿಸುತ್ತಿದ್ದು, ದೂರುಗಳಿದ್ದರೆ ಅವರು ಕ್ರಮ ಕೈಗೊಳ್ಳುತ್ತಾರೆ’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

‘ಮೇಲ್ಸೇತುವೆ, ಕೆಳಸೇತುವೆಗಳ ನಿರ್ವಹಣೆ ಕೈಗೊಳ್ಳಿ’

ಮೇಲ್ಸೇತುವೆ ಹಾಗೂ ಕೆಳಸೇತುವೆಗಳ ನಿರ್ವಹಣೆ ಮಾಡಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ವಲಯ ಅಧಿಕಾರಿಗಳೊಂದಿಗೆ ಮಂಗಳವಾರ ನಡೆದ ವಿಡಿಯೊ ಸಂವಾದದಲ್ಲಿ ಮಾತನಾಡಿದ ಅವರು, ‘ನಗರದಲ್ಲಿರುವ ಸ್ಕೈವಾಕ್‌ಗಳಲ್ಲಿವ ಲಿಫ್ಟ್‌ಗಳು ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳಬೇಕು, ಸ್ವಚ್ಛತೆ ಕಾಪಾಡಬೇಕು. ಪಾದಚಾರಿಗಳ ಓಡಾಟಕ್ಕೆ ಯಾವುದೇ ರೀತಿಯ ಸಮಸ್ಯೆಯಾಗದಂತೆ ನಿರ್ವಹಣೆ ಮಾಡಬೇಕು’ ಎಂದರು.

ನ.30ರವರೆಗೆ ಒಟಿಎಸ್: ನವೆಂಬರ್ 30ರವರೆಗೆ ಒಂದು ಬಾರಿ ಪರಿಹಾರ (ಒಟಿಎಸ್) ಯೋಜನೆಯನ್ನು ವಿಸ್ತರಿಸಲಾಗಿದೆ. ಸುಸ್ತಿದಾರರಿಂದ ಆಸ್ತಿ ತೆರಿಗೆ ಪಾವತಿಸಿಕೊಳ್ಳಲು ಕ್ರಮ ಕೈಗೊಳ್ಳಬೇಕು ಎಂದು ವಿಶೇಷ ಆಯುಕ್ತರಿಗೆ ಸೂಚಿಸಿದರು.

ರಸ್ತೆ ಬದಿ, ಪಾದಚಾರಿ ಮಾರ್ಗ, ಖಾಲಿ ಸ್ಥಳಗಳಲ್ಲಿ ಕಸ ಸುರಿಯುವ ಸ್ಥಳಗಳನ್ನು (ಬ್ಲಾಕ್ ಸ್ಪಾಟ್) ಪಟ್ಟಿ ಮಾಡಿ, ಸ್ವಚ್ಛತಾ ಕಾರ್ಯ ಕೈಗೊಳ್ಳಬೇಕು. ರಸ್ತೆ ಬದಿ ಕಸ ಸುರಿಯುವುದರಿಂದ ನಗರದ ಸೌಂದರ್ಯ ಹಾಳಾಗಲಿದ್ದು, ಈ ಬಗ್ಗೆ ಆಯಾ ವಲಯದ ವ್ಯಾಪ್ತಿಯಲ್ಲಿ ಸರಿಯಾದ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅವರು ಹೇಳಿದರು.

ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಡಾ. ಕೆ. ಹರೀಶ್ ಕುಮಾರ್, ಎಲ್ಲಾ ವಲಯ ಆಯುಕ್ತರು, ವಲಯ ಜಂಟಿ ಆಯುಕ್ತರು ಭಾಗವಹಿಸಿದ್ದರು.

ಬೀದಿ ದೀಪಗಳ ನಿರ್ವಹಣೆಗೆ ಸೂಚನೆ

ಬೆಂಗಳೂರು: ನಗರದಲ್ಲಿ ಬೀದಿ ದೀಪಗಳನ್ನು ಸರಿಯಾಗಿ ನಿರ್ವಹಣೆ ಮಾಡುವಂತೆ ವಿದ್ಯುತ್ ವಿಭಾಗದ ಎಂಜಿನಿಯರ್‌ಗಳು ಹಾಗೂ ಗುತ್ತಿಗೆದಾರರಿಗೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

ವಿದ್ಯುತ್ ವಿಭಾಗದ ಅಧಿಕಾರಿಗಳು ಹಾಗೂ ಗುತ್ತಿಗೆದಾರರೊಂದಿಗೆ ಮಂಗಳವಾರ ಸಭೆ ನಡೆಸಿದ ಅವರು, ‘ವಲಯ ವ್ಯಾಪ್ತಿಯಲ್ಲಿ ಬೀದಿ ದೀಪಗಳು ಉರಿಯದ ಸ್ಥಳಗಳು ಮತ್ತು ವಿದ್ಯುತ್ ಕಂಬಗಳು ಹಾಳಾಗಿರುವುದನ್ನು ಪರಿಶೀಲಿಸಿ, ಜಿಯೋ ಲೊಕೇಶನ್ ಮೂಲಕ ಪಟ್ಟಿ ಸಿದ್ದಪಡಿಸಬೇಕು. ಆನಂತರ ತ್ವರಿತವಾಗಿ ದುರಸ್ತಿ ಕಾರ್ಯವನ್ನು ಕೈಗೊಳ್ಳಬೇಕು’ ಎಂದರು.

ಹೊರ ವರ್ತುಲ ರಸ್ತೆ, ಪ್ರಮುಖ ರಸ್ತೆಗಳು ಹಾಗೂ ಮೇಲ್ಸೇತುವೆಗಳಲ್ಲಿ ಬೀದಿ ದೀಪಗಳ ನಿರ್ವಹಣೆಯನ್ನು ಸರಿಯಾಗಿ ಮಾಡಬೇಕು. ಅಧಿಕಾರಿಗಳು ಖುದ್ದು ಸ್ಥಳ ಪರಿಶೀಲನೆ ನಡೆಸಿ ಸಮಸ್ಯೆ ಪರಿಹರಿಸಬೇಕು ಎಂದು ಸೂಚಿಸಿದರು.

ನಗರದಲ್ಲಿ ಬೀದಿ ದೀಪಗಳನ್ನು ಶೀಘ್ರ ಅಳವಡಿಸಿ ಸರಿಯಾಗಿ ನಿರ್ವಹಣೆ ಮಾಡಲಾಗುವುದು ಎಂದು ಸಭೆಯಲ್ಲಿ ಹಾಜರಿದ್ದ ಗುತ್ತಿಗೆದಾರರು ಭರವಸೆ ನೀಡಿದರು.


ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಶಾಸಕ ಮುನಿರತ್ನ ವಿರುದ್ಧ ದಲಿತ ಸಂಘರ್ಷ ಸಮಿತಿ ಸದಸ್ಯರು ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

‘ಮುನಿರತ್ನ ಶಾಸಕ ಸ್ಥಾನ ರದ್ದುಗೊಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಹಾಗೂ ಒಕ್ಕಲಿಗ ಸಮುದಾಯದ ಮಹಿಳೆಯರನ್ನು ನಿಂದಿಸಿರುವ ಮುನಿರತ್ನ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಬೇಕು ಎಂದು ಆಗ್ರಹಿಸಿ ದಲಿತ ಸಂಘರ್ಷ ಸಮಿತಿ ಸದಸ್ಯರು ಮಂಗಳವಾರ ಪ್ರತಿಭಟನೆ ನಡೆಸಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಬಳಿಕ, ವಿಧಾನಸಭಾ ಅಧ್ಯಕ್ಷ ಯು.ಟಿ.ಖಾದರ್ ಅವರ ಕಚೇರಿಗೆ ತೆರಳಿದ ಪ್ರತಿಭಟನಕಾರರು, ಸಭಾಧ್ಯಕ್ಷರ ಕಚೇರಿ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

‘ಪರಿಶಿಷ್ಟ ಜಾತಿಯ ಜನರು ಹಾಗೂ ಮಹಿಳೆಯರ ಬಗ್ಗೆ ಕೀಳಾಗಿ ಮಾತನಾಡಿದ್ದಾರೆ. ಗುತ್ತಿಗೆದಾರರಿಂದ ಲಂಚಕ್ಕೆ ಬೇಡಿಕೆ ಇಟ್ಟಿರುವುದು ಸಂವಿಧಾನ ವಿರೋಧಿ. ಜನರ ಸಮಸ್ಯೆಗಳಿಗೆ ಸ್ಪಂದಿಸುವ ಬದಲು, ಜೀವ ಬೆದರಿಕೆ ಹಾಕಿರುವ ಆರೋಪಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು’ ಎಂದು ಪ್ರತಿಭಟನಕಾರರು ಆಗ್ರಹಿಸಿದರು.

‘ಮುನಿರತ್ನ ಅವರ ವರ್ತನೆ ಸಂವಿಧಾನ ವಿರೋಧಿಯಾಗಿದ್ದು, ಮುಂದಿನ ಯಾವುದೇ ಚುನಾವಣೆಯಲ್ಲಿ ಅವರು ಸ್ಪರ್ಧಿಸದಂತೆ ರಾಜ್ಯಪಾಲರು ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದರು.

ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಗುರುಪ್ರಸಾದ್ ಕೆರಗೋಡು, ಮುಖಂಡರಾದ ಇಂದೂಧರ ಹೊನ್ನಾಪುರ, ಎಂ.ವೆಂಕಟೇಶ್, ಆಲಗೋಡು ಶಿವಕುಮಾರ್, ಜಯಂತಿ, ಕೃಷ್ಣಮೂರ್ತಿ, ರಾಮಣ್ಣ ಭಾಗವಹಿಸಿದ್ದರು.

ಆಳ್ವಾಸ್‌ನಲ್ಲಿ ಯುಪಿಎಸ್‌ಸಿ ಕೆಪಿಎಸ್‌ಸಿ ಪರೀಕ್ಷೆಗೆ ತರಬೇತಿ

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ (ದಕ್ಷಿಣ ಕನ್ನಡ): ಯಾವುದೇ ವಿಷಯದಲ್ಲಿ ಪದವಿ ಪೂರ್ಣಗೊಳಿಸಿದ ಅಭ್ಯರ್ಥಿಗಳಿಗೆ ಯುಪಿಎಸ್‌ಸಿ ಹಾಗೂ ಕೆಪಿಎಸ್‌ಸಿಯ ಪೂರ್ವಭಾವಿ (ಪ್ರಿಲಿಮ್ಸ್) ಹಾಗೂ ಮುಖ್ಯ ಪರೀಕ್ಷೆಗಳಿಗೆ (ಮೈನ್ಸ್) 9 ತಿಂಗಳ ತರಬೇತಿಯನ್ನು ನೀಡಲು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಮುಂದಾಗಿದೆ. ಈ ಸಂಬಂಧ ಬೆಂಗಳೂರಿನ ಸಾಧನಾ ಕೋಚಿಂಗ್ ಸೆಂಟರ್ ಜತೆಗೆ ಒಡಂಬಡಿಕೆ ಮಾಡಿಕೊಂಡಿದ್ದು, ಎಲ್ಲರಿಗೂ ಕೈಗೆಟಕುವ ಗುಣಮಟ್ಟದ ತರಬೇತಿ ನೀಡಲಾಗುವುದು ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸರ್ಕಾರಿ ಹಾಗೂ ಅರೆ ಸರ್ಕಾರಿ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಸಿದ್ಧಗೊಳಿಸಲು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಥಮ ಬಾರಿಗೆ ಈ ಪ್ರಯತ್ನಕ್ಕೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಹಾಗೂ ಸಾಧನಾ ತರಬೇತಿ ಅಕಾಡೆಮಿ ಮುಂದಾಗಿದೆ ಎಂದರು.


ಡಾ.ಎಂ. ಮೋಹನ ಆಳ್ವ

ಆಳ್ವಾಸ್ ಶಿಕ್ಷಣ ಸಂಸ್ಥೆಯಲ್ಲಿ ಈಗಾಗಲೇ ಪದವಿಪೂರ್ವ ಹಾಗೂ ಪದವಿ ವಿದ್ಯಾಭ್ಯಾಸದ ಜತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಲಾಗುತ್ತಿದೆ. ಪ್ರಸ್ತುತ ವರ್ಷದಿಂದ ಪದವಿ ಪೂರ್ಣಗೊಳಿಸಿರುವವರಿಗೆ 9 ತಿಂಗಳ ನಿರಂತರ ತರಬೇತಿ ಹಾಗೂ ದೈನಂದಿನ ಅಭ್ಯಾಸ ಚಟುವಟಿಕೆಗಳನ್ನು ಆರಂಭಿಸಲಾಗುತ್ತಿದೆ ಎಂದು ಹೇಳಿದರು.

ನೋಂದಣಿ ಪ್ರಕ್ರಿಯೆ ಆರಂಭಗೊಂಡಿದ್ದು ಹೆಚ್ಚಿನ ಮಾಹಿತಿಗಾಗಿ ದೂ: 94801 05446, 72590 06116 ಸಂಪರ್ಕಿಸಬಹುದು ಎಂದರು.

ಸಾಧನಾ ಐಎಎಸ್ ತರಬೇತಿ ಕೇಂದ್ರದ ನಿರ್ದೇಶಕಿ ಜ್ಯೋತಿ, ಆಳ್ವಾಸ್ ಕಾಲೇಜಿನ ಪ್ರಾಂಶುಪಾಲ ಕುರಿಯನ್ ಸುದ್ದಿಗೋಷ್ಠಿಯಲ್ಲಿ ಭಾಗವಹಿಸಿದ್ದರು.

‘ಎಂಪಾಕ್ಸ್’ ಲಕ್ಷಣ ಪತ್ತೆ

ಮಲಪ್ಪುರ (ಪಿಟಿಐ): ದುಬೈನಿಂದ ಮರಳಿದ್ದ ಮಲಪ್ಪುರ ಜಿಲ್ಲೆಯ ವ್ಯಕ್ತಿಯೊಬ್ಬರಲ್ಲಿ ‘ಎಂಪಾಕ್ಸ್’ ಸೋಂಕಿನ ಲಕ್ಷಣಗಳು ಗೋಚರಿಸಿವೆ.

ಆರೋಗ್ಯ ಸಚಿವೆ ವೀಣಾ ಜಾರ್ಜ್ ಈ ಕುರಿತ ಮಾಹಿತಿ ನೀಡಿದ್ದು, ‘ವ್ಯಕ್ತಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಪ್ರತ್ಯೇಕವಾಸದಲ್ಲಿ ಇರಿಸಲಾಗಿದೆ. ಅವರ ರಕ್ತದ ಮಾದರಿಗಳನ್ನು ಪರೀಕ್ಷೆಗಾಗಿ ಕಳುಹಿಸಲಾಗಿದೆ’ ಎಂದರು.

‘ಕೆಲವು ದಿನಗಳ ಹಿಂದೆ ವ್ಯಕ್ತಿಯು ದುಬೈನಿಂದ ಬಂದಿದ್ದರು. ಆರೋಗ್ಯದಲ್ಲಿ ಏರುಪೇರಾಗಿದ್ದರಿಂದ ಖಾಸಗಿ ಆಸ್ಪತ್ರೆಯೊಂದಕ್ಕೆ ದಾಖಲಾಗಿದ್ದರು. ಅವರನ್ನು ಪರೀಕ್ಷಿಸಿದ ಬಳಿಕ, ಎಂಪಾಕ್ಸ್ ಲಕ್ಷಣಗಳಿರಬಹುದು ಎಂದು ವ್ಯಕ್ತಿಯನ್ನು ಅಲ್ಲಿಂದ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಲಾಯಿತು’ ಎಂದು ಮಲಪ್ಪುರ ಜಿಲ್ಲಾ ಆರೋಗ್ಯ ಅಧಿಕಾರಿ ವಿವರಿಸಿದರು.

ಕೋರ್ಟ್ ಸುದ್ದಿ

ಶೌಚಾಲಯ ಉದ್ಘಾಟನೆಗೆ ತಡೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಂಪಿ) ನಗರದ ಬಾಳೇಕುಂದ್ರಿ ವೃತ್ತದಲ್ಲಿರುವ ಪಾರ್ಸಿ ಅಗ್ನಿ ಪ್ರಾರ್ಥನಾಲಯದ ಬಳಿ ಸಾರ್ವಜನಿಕ ಶೌಚಾಲಯ ನಿರ್ಮಾಣ ಮಾಡುತ್ತಿರುವುದನ್ನು ಆಕ್ಷೇಪಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಬಿಬಿಎಂಪಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ‘ಬೆಂಗಳೂರು ಪಾರ್ಸಿ ಜೊರಾಸ್ಟ್ರಿಯನ್ ಅಂಜುಮನ್’ (ಬಿಪಿಝಡ್‌ಎ) ಗೌರವ ಕಾರ್ಯದರ್ಶಿ ದಿನ್‌ಶಾ ಕೊವಾಸ್‌ಜಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಅಶೋಕ ಎಸ್.ಕಿಣಗಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಕೀಲರ ವಾದ ಆಲಿಸಿದ ನ್ಯಾಯಪೀಠ ಪ್ರತಿವಾದಿಯಾದ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ಅಂತೆಯೇ, ಶೌಚಾಲಯ ಉದ್ಘಾಟಿಸದಂತೆ ಮಧ್ಯಂತರ ತಡೆ ನೀಡಿ ವಿಚಾರಣೆಯನ್ನು ಅಕ್ಟೋಬರ್ 30ಕ್ಕೆ ಮುಂದೂಡಿತು.

ಅರ್ಜಿಯಲ್ಲೇನಿದೆ?: ‘ನಗರದ ಬಾಳೇಕುಂದ್ರಿ ವೃತ್ತದಲ್ಲಿರುವ ‘ಪಾರ್ಸಿ’ ಅಗ್ನಿ ದೇವಾಲಯದ ಎದುರುಗಡೆ ಬಿಬಿಎಂಪಿ ಸಾರ್ವಜನಿಕ ಶೌಚಾಲಯ ನಿರ್ಮಿಸುತ್ತಿದೆ. ಇದರಿಂದ ಪ್ರಾರ್ಥನಾ ಮಂದಿರಕ್ಕೆ ಬರುವ ಭಕ್ತರಿಗೆ ಮತ್ತು ಸನ್ನಿಧಾನದ ಪಾವಿತ್ರ್ಯಕ್ಕೆ ಧಕ್ಕೆ ಉಂಟಾಗಲಿದೆ. ಆದ್ದರಿಂದ, ಶೌಚಾಲಯ ತೆರವುಗೊಳಿಸಲು ಬಿಬಿಎಂಪಿಗೆ ನಿರ್ದೇಶಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ಅಪರಾಧ ತನಿಖಾ ಪ್ರಕ್ರಿಯೆ ಮುಕ್ತಾಯ

ನವದೆಹಲಿ (ಪಿಟಿಐ): ನಾಗಾಲ್ಯಾಂಡ್‌ನ ಮೊನ್ ಜಿಲ್ಲೆಯಲ್ಲಿ 13 ನಾಗರಿಕರನ್ನು ಹತ್ಯೆಗೈದ ಆರೋಪದಲ್ಲಿ ಸೇನೆಯ 30 ಸಿಬ್ಬಂದಿ ವಿರುದ್ಧ ನಾಗಾಲ್ಯಾಂಡ್ ಸರ್ಕಾರ ಆರಂಭಿಸಿದ್ದ ಅಪರಾಧ ತನಿಖಾ ಪ್ರಕ್ರಿಯೆಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ಮುಕ್ತಾಯಗೊಳಿಸಿದೆ.

ಪ್ರಕರಣದಲ್ಲಿ ಆರೋಪಿಯಾಗಿದ್ದ ಅಧಿಕಾರಿಯೊಬ್ಬರ ಪತ್ನಿ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಪಿ.ಬಿ.ವರಾಳೆ ಅವರಿದ್ದ ಪೀಠ ಪುರಸ್ಕರಿಸಿತು.

1958ರ ಸಶಸ್ತ್ರ ಪಡೆಗಳ (ವಿಶೇಷ ಅಧಿಕಾರ) ಕಾಯ್ದೆಯ (ಎಎಫ್‌ಎಸ್‌ಪಿಎ) ಸೆಕ್ಷನ್ 6ರ ಅಡಿಯಲ್ಲಿ ಸಿಬ್ಬಂದಿಯ ವಿಚಾರಣೆಗೆ ಅನುಮತಿ ನೀಡಲು ಕೇಂದ್ರ ಸರ್ಕಾರ ಕಳೆದ ವರ್ಷ ಫೆಬ್ರುವರಿ 28ರಂದು ನಿರಾಕರಿಸಿದೆ ಎಂದು ಪೀಠವು ಹೇಳಿತು.

ಆದರೆ ಸೇನಾ ಸಿಬ್ಬಂದಿ ವಿರುದ್ಧ ಕಾನೂನು ಕ್ರಮ ಜರುಗಿಸಲು ಮುಂದೊಂದು ದಿನ ಕೇಂದ್ರ ಸರ್ಕಾರ ಅನುಮತಿ ನೀಡಿದರೆ, ಈಗ ದಾಖಲಾಗಿರುವ ಎಫ್‌ಐಆರ್‌ಗಳಿಗೆ ಅನುಗುಣವಾಗಿ ಅಪರಾಧ ತನಿಖಾ ಪ್ರಕ್ರಿಯೆ ಮುಂದುವರಿಸಬೇಕಾಗುತ್ತದೆ ಎಂದು ಸ್ಪಷ್ಟಪಡಿಸಿತು.

2021ರ ಡಿಸೆಂಬರ್‌ನಲ್ಲಿ ಪೂರ್ವ ನಾಗಾಲ್ಯಾಂಡ್‌ನ ಒಟಿಂಗ್ ಗ್ರಾಮದಲ್ಲಿ ಗಣಿ ಕಾರ್ಮಿಕರಿದ್ದ ಪಿಕ್‌ಅಪ್ ಟ್ರಕ್ ಗುರಿಯಾಗಿಸಿ ಸೇನಾ ಸಿಬ್ಬಂದಿ ಗುಂಡು ಹಾರಿಸಿದ್ದರು. ಉಗ್ರರು ಎಂದು ಭಾವಿಸಿ ಸೇನೆ ನಡೆಸಿದ್ದ ಕಾರ್ಯಾಚರಣೆಯಲ್ಲಿ ಆರು ನಾಗರಿಕರು ಮೃತಪಟ್ಟಿದ್ದರು. ಈ ಘಟನೆ ಖಂಡಿಸಿ ನಡೆದ ಪ್ರತಿಭಟನೆಯನ್ನು ಹತ್ತಿಕ್ಕಲು ಸೇನೆಯು ಗುಂಡು ಹಾರಿಸಿದಾಗ ಮತ್ತೆ ಏಳು ಮಂದಿ ಮೃತಪಟ್ಟಿದ್ದರು.

‘ಮುಂಜಾಗ್ರತೆಯಿಂದ ಡೆಂಗಿ ನಿಯಂತ್ರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಹಲವು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು ಡೆಂಗಿ ಪ್ರಕರಣಗಳನ್ನು ನಿಯಂತ್ರಣಕ್ಕೆ ತರಲಾಗಿದೆ ಎಂದು ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ತಿಳಿಸಿದರು.

ಡೆಂಗಿ ಪ್ರಕರಣಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ನಾಗರಿಕರು ಹಾಗೂ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ‘ಡೆಂಗಿ ವಾರಿಯರ್’ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಮಂಗಳವಾರ ಬಹುಮಾನ ವಿತರಿಸಿದ ಅವರು ಮಾತನಾಡಿದರು.

ನಗರದಲ್ಲಿ ಜುಲೈನಿಂದ ಹೆಚ್ಚು ಡೆಂಗಿ ಪ್ರಕರಣಗಳು ಕಂಡು ಬಂದವು. ಪಾಲಿಕೆ ವತಿಯಿಂದ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು, ಆರೋಗ್ಯ ವಿಭಾಗದ ಎಲ್ಲಾ ಅಧಿಕಾರಿಗಳು ಶ್ರಮಿಸಿದ ಪರಿಣಾಮ ಡೆಂಗಿ ನಿಯಂತ್ರಿಸಲು ಸಾಧ್ಯವಾಯಿತು ಎಂದರು.

ಸಾಂಕ್ರಾಮಿಕ ರೋಗಗಳ ಸಂದರ್ಭದಲ್ಲಿ ಸಮುದಾಯವು ಆಡಳಿತದೊಂದಿಗೆ ಕೈಜೋಡಿಸಿದರೆ ತ್ವರಿತ, ಪರಿಣಾಮಕಾರಿಯಾಗಿ ತಡೆಗಟ್ಟಬಹುದಾಗಿದೆ. ಸಾಮಾಜಿಕ ಜಾಲತಾಣ ಬಳಸಿಕೊಂಡು ಜಾಗೃತಿ ಮೂಡಿಸಿದರೆ ಹೆಚ್ಚು ಮಂದಿಗೆ ವಿಷಯ ತಲುಪಲಿದೆ ಎಂದು ಹೇಳಿದರು.

ಡೆಂಗಿ ನಿಯಂತ್ರಣಕ್ಕೆ ನಾಗರಿಕರು, ವಿದ್ಯಾರ್ಥಿಗಳು ತಮ್ಮ ಮನೆಗಳಲ್ಲಿ ಏನೆಲ್ಲಾ ಕ್ರಮಗಳನ್ನು ಕೈಗೊಂಡಿದ್ದಾರೆ, ಯಾವ ರೀತಿ ಇತರರಿಗೆ ಅರಿವು ಮೂಡಿಸಿದ್ದಾರೆ ಎಂಬ ಬಗ್ಗೆ ಕಿರುಚಿತ್ರಗಳನ್ನು (ರೀಲ್ಸ್) ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೊ ಅಪ್‌ಲೋಡ್ ಮಾಡಲು ತಿಳಿಸಲಾಗಿತ್ತು. ಈ ಸ್ಪರ್ಧೆಯಲ್ಲಿ 250ಕ್ಕೂ ಹೆಚ್ಚು ವಾರಿಯರ್‌ಗಳು ಭಾಗವಹಿಸಿದ್ದರು ಎಂದು ವಿಕಾಸ್ ಮಾಹಿತಿ ನೀಡಿದರು.

ಡೆಂಗಿ ವಾರಿಯರ್ಸ್ ಸಿದ್ಧಪಡಿಸಿದ ವಿಡಿಯೊಗಳಿಗೆ 58 ಲಕ್ಷಕ್ಕೂ ಹೆಚ್ಚು ವೀಕ್ಷಣೆಗಳು ಮತ್ತು ನಾಲ್ಕು ಲಕ್ಷಕ್ಕೂ ಹೆಚ್ಚು ‘ಲೈಕ್ಸ್’ ಬಂದಿವೆ. ಬೆಸ್ಟ್ ಕ್ಲಸ್ಟರ್, ಎನ್‌ಸಿಬಿಎಸ್, ಫೋರಂ ಸೌತ್ ಮಾಲ್, ಮಂತ್ರಿ ಸ್ಕ್ವೇರ್, ನೆಕ್ಸಸ್ ಮಾಲ್ ಹಾಗೂ ಮಾಲ್ ಆಫ್ ಏಷ್ಯಾಗಳ ಸಹಯೋಗದಲ್ಲಿ ವಿಜೇತರಿಗೆ ‘ಗಿಫ್ಟ್ ವೋಚರ್’ ನೀಡಲಾಗಿದೆ ಎಂದರು.



ಬಿಬಿಎಂಪಿ ಆಯೋಜಿಸಿದ್ದ ‘ಡೆಂಗಿ ವಾರಿಯರ್’ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಮಂಗಳವಾರ ಬಹುಮಾನ ವಿತರಿಸಲಾಯಿತು

ಬಹುಮಾನ ವಿಜೇತರು

ಡೆಂಗಿ ಕುರಿತ ಜಾಗೃತಿ ವಿಡಿಯೊ ಮಾಡಿ ಅತಿ ಹೆಚ್ಚು ವೀಕ್ಷಣೆ ಹಾಗೂ ಲೈಕ್ಸ್ ಪಡೆದ 10 ಮಂದಿಗೆ ಬಹುಮಾನ ವಿತರಿಸಲಾಯಿತು. ಪ್ರಥಮ ಹಾಗೂ ದ್ವಿತೀಯ ಬಹುಮಾನವನ್ನು ತಲಾ ಐದು ಮಂದಿಗೆ ನೀಡಲಾಯಿತು. ಉಡುಪಿಯ ಜೈಸಸ್ ಶಾಲೆಯ ವಂದನಾ ರೈ, ಮಲ್ಲತ್ತಹಳ್ಳಿಯ ಗೋಲ್ಡ್ ಫಿಂಚ್ ನರ್ಸಿಂಗ್ ಕಾಲೇಜಿನ ಆರ್. ಕೊಹಿಲಾ, ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎ.ವಿ. ದೇವರಾಜ, ತಿಪ್ಪೇನಹಳ್ಳಿ ಆಸ್ಪತ್ರೆಯ ಆರೋಗ್ಯ ನಿರೀಕ್ಷಕ ಎಸ್.ಎಸ್. ಪ್ರವೀಣ ಅವರಿಗೆ ಪ್ರಥಮ ಪ್ರಶಸ್ತಿ ತಲಾ ₹25 ಸಾವಿರ ನಗದು ಬಹುಮಾನ ನೀಡಲಾಯಿತು.

ಮಲ್ಲತ್ತಹಳ್ಳಿ ಪ್ರುಡೆನ್ಸ್ ಕಾಲೇಜಿನ ಅಜಯ್, ಅಜಯ್‌ಕುಮಾರ್, ಮಲ್ಲತ್ತಹಳ್ಳಿಯ ಗೋಲ್ಡ್ ಫಿಂಚ್ ನರ್ಸಿಂಗ್ ಕಾಲೇಜಿನ ವಿ. ಐಶ್ವರ್ಯ, ಶಾನಿಕಾ ಶಾನ್, ಎ.ಎಂ. ಮಿದ್ಲಜ್, ದೇವೇಶ್ ಅವರು ದ್ವಿತೀಯ ಪ್ರಶಸ್ತಿಯ ತಲಾ ₹10 ಸಾವಿರ ಬಹುಮಾನ ಪಡೆದರು.

ವಿಡಿಯೊ ಮಾಡಲು ಹೆಚ್ಚು ಮಕ್ಕಳನ್ನು ಪ್ರೇರೇಪಿಸಿದ ಬೊಮ್ಮನಹಳ್ಳಿ ಹೊಂಗಸಂದ್ರದ ಆಕ್ಸ್‌ಫರ್ಡ್ ಶಾಲೆಯ ಶಿಕ್ಷಕಿ ಚೈತ್ರಾ ಅವರಿಗೆ ₹35 ಸಾವಿರ ಹಾಗೂ ಶಿಕ್ಷಣ ಸಂಸ್ಥೆ ವಿಭಾಗದಲ್ಲೂ ಆಕ್ಸ್‌ಫರ್ಡ್ ಶಾಲೆಗೆ ₹1 ಲಕ್ಷ ಬಹುಮಾನ ನೀಡಲಾಯಿತು.

ರಾಹುಲ್ ವಿರುದ್ಧ ಹೇಳಿಕೆ: ಪ್ರಧಾನಿಗೆ ಖರ್ಗೆ ಪತ್ರ

ನವದೆಹಲಿ (ಪಿಟಿಐ): ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರ ಬಗ್ಗೆ ಬಿಜೆಪಿ ಹಾಗೂ ಮಿತ್ರ ಪಕ್ಷಗಳ ಕೆಲ ನಾಯಕರು ಆಕ್ಷೇಪಾರ್ಹ ಮತ್ತು ಹಿಂಸೆಗೆ ಪ್ರಚೋದನೆ ನೀಡುವ ಹೇಳಿಕೆ ನೀಡುತ್ತಿರುವುದಕ್ಕೆ ಕಳವಳ ವ್ಯಕ್ತಪಡಿಸಿ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮಂಗಳವಾರ ಪತ್ರ ಬರೆದಿದ್ದಾರೆ.


ಮಲ್ಲಿಕಾರ್ಜುನ ಖರ್ಗೆ

‘ಆಕ್ಷೇಪಾರ್ಹ ಹೇಳಿಕೆ ನೀಡುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಹೀಗಾದಾಗ ಮಾತ್ರ ಭಾರತದ ರಾಜಕಾರಣವು ನೀತಿಗೆಡದಂತೆ ಮತ್ತು ಅಹಿತಕರ ಘಟನೆಗಳು ನಡೆಯದಂತೆ ತಡೆಯಲು ಸಾಧ್ಯ’ ಎಂದು ಪತ್ರದಲ್ಲಿ ಮನವಿ ಮಾಡಿದ್ದಾರೆ.

‘ಪ್ರಜಾಪ್ರಭುತ್ವ ಮತ್ತು ಸಂವಿಧಾನಕ್ಕೆ ನೇರವಾಗಿ ಸಂಬಂಧಿಸಿದ ವಿಷಯದ ಬಗ್ಗೆ ನಿಮ್ಮ ಗಮನ ಸೆಳೆಯಲು ಬಯಸುತ್ತೇನೆ. ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ವಿರುದ್ಧ ನೀಡಿರುವ ಆಕ್ಷೇಪಾರ್ಹ, ಹಿಂಸಾತ್ಮಕ, ಅಸಭ್ಯ ಹೇಳಿಕೆಗಳ ಬಗ್ಗೆ ನಿಮಗೂ ತಿಳಿದಿರಬಹುದು. ಬಿಜೆಪಿ ಮತ್ತು ಮಿತ್ರಪಕ್ಷಗಳ ನಾಯಕರ, ಹಿಂಸೆಯನ್ನು ಪ್ರಚೋದಿಸುವ ಭಾಷೆಯು ಭವಿಷ್ಯಕ್ಕೆ ಹಾನಿಕರ ಎಂದು ವಿಷಾದದಿಂದ ಹೇಳಬೇಕಾಗಿದೆ. ಕೇಂದ್ರ ರೈಲ್ವೆ ಸಚಿವಾಲಯದ ರಾಜ್ಯ ಖಾತೆ ಸಚಿವ ಮತ್ತು ಬಿಜೆಪಿ ಆಡಳಿತವಿರುವ ಉತ್ತರ ಪ್ರದೇಶದ ಸಚಿವರೊಬ್ಬರು ರಾಹುಲ್ ಗಾಂಧಿ ಅವರನ್ನು ‘ನಂಬರ್ ಒನ್ ಭಯೋತ್ಪಾದಕ’ ಎಂದು ಕರೆದಿರುವುದು ಆಘಾತ ಉಂಟುಮಾಡಿದೆ’ ಎಂದು ಹೇಳಿದ್ದಾರೆ.

‘ಮಹಾರಾಷ್ಟ್ರದಲ್ಲಿ ನಿಮ್ಮ ಸರ್ಕಾರದೊಂದಿಗೆ ಮೈತ್ರಿ ಮಾಡಿಕೊಂಡಿರುವ ಪಕ್ಷದ ಶಾಸಕರೊಬ್ಬರು ರಾಹುಲ್ ಗಾಂಧಿ ಅವರ ನಾಲಿಗೆಯನ್ನು ಕತ್ತರಿಸಿ ತಂದವರಿಗೆ ₹11 ಲಕ್ಷ ಬಹುಮಾನ ನೀಡುವುದಾಗಿ ಘೋಷಿಸಿದ್ದಾರೆ. ದೆಹಲಿಯ ಬಿಜೆಪಿ ನಾಯಕರೊಬ್ಬರು ಇಂದಿರಾ ಗಾಂಧಿ ರೀತಿಯೇ ಹತ್ಯೆ ಮಾಡುವ ಬೆದರಿಕೆ ಹಾಕಿದ್ದಾರೆ’ ಎಂದು ತಿಳಿಸಿದ್ದಾರೆ.

‘ಅಹಿಂಸೆ, ಸಾಮರಸ್ಯ ಮತ್ತು ಪ್ರೀತಿಯೇ ಭಾರತದ ಸಂಸ್ಕೃತಿ ಎಂದು ಹೆಸರುವಾಸಿಯಾಗಿದೆ. ನಮ್ಮ ಹೀರೊಗಳು ಇವುಗಳನ್ನೇ ರಾಜಕಾರಣದ ಮೌಲ್ಯವನ್ನಾಗಿಸಿದ್ದಾರೆ. ಸ್ವಾತಂತ್ರ್ಯಾನಂತರದಲ್ಲಿ ಸಂಸತ್ತಿನಲ್ಲಿ ಆಡಳಿತ ಮತ್ತು ವಿಪಕ್ಷಗಳು ತಮ್ಮ ನಡುವಿನ ಭಿನ್ನಾಭಿಪ್ರಾಯಗಳನ್ನು ಗೌರವಯುತವಾಗಿ ಸ್ವೀಕರಿಸಿದ ಸುದೀರ್ಘ ಇತಿಹಾಸವೇ ಇದೆ. ಇದು ನಮ್ಮ ಪ್ರಜಾಪ್ರಭುತ್ವದ ಘನತೆಯನ್ನು ಹೆಚ್ಚಿಸಿತ್ತು’ ಎಂದು ಪತ್ರದಲ್ಲಿ ಹೇಳಿದ್ದಾರೆ.

ನಿಫಾ: 13 ಮಂದಿಗೆ ಸೋಂಕಿಲ್ಲ

ತಿರುವನಂತಪುರ (ಪಿಟಿಐ): ನಿಫಾ ವೈರಸ್ ಸೋಂಕಿಗೆ ತುತ್ತಾಗಿ ಕಳೆದ ವಾರ ಮೃತಪಟ್ಟ 24 ವರ್ಷದ ಯುವಕನ ಸಂಪರ್ಕಕ್ಕೆ ಬಂದಿದ್ದ 13 ಮಂದಿಯ ವೈದ್ಯಕೀಯ ಪರೀಕ್ಷಾ ವರದಿ ಬಂದಿದ್ದು, ಅವರಲ್ಲಿ ನಿಫಾ ಸೋಂಕು ಪತ್ತೆಯಾಗಿಲ್ಲ ಎಂದು ಆರೋಗ್ಯ ಸಚಿವೆ ವೀಣಾ ಜಾರ್ಜ್ ಮಂಗಳವಾರ ತಿಳಿಸಿದ್ದಾರೆ.

ಸೋಂಕಿತ ಯುವಕನ ಸಂಪರ್ಕಕ್ಕೆ ಬಂದಿದ್ದ ಒಟ್ಟು 175 ಜನರಲ್ಲಿ ಈ 13 ಮಂದಿಯು ಹೆಚ್ಚು ಅಪಾಯಕ್ಕೆ ಒಳಗಾಗುವ ಸಾಧ್ಯತೆ ಇದ್ದವರಾಗಿದ್ದರು ಎಂದು ಸಚಿವೆ ಹೇಳಿದ್ದಾರೆ.

ಆ ಯುವಕ ಕರ್ನಾಟಕದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ. ಅವನ ಸಂಪರ್ಕಕ್ಕೆ ಬಂದಿದ್ದ ಆತನ ಸಹಪಾಠಿಗಳು ಹಾಗೂ ಸ್ನೇಹಿತರನ್ನು ಪತ್ತೆಹಚ್ಚಿ ಸೋಂಕು ನಿರೋಧಕ ಔಷಧ ನೀಡಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.



ಕಸದ ವಾಹನಗಳ ತಂಗುದಾಣ...

ಜಯನಗರ ಒಂದನೇ ಬ್ಲಾಕ್‌ನಲ್ಲಿರುವ ರಾಣಿ ಸರಳಾದೇವಿ ಬಸ್ ತಂಗುದಾಣದಲ್ಲಿ ಬಿಬಿಎಂಪಿಯ ಕಸದ ಗಾಡಿಗಳು ನಿಂತಿರುವುದರಿಂದ ಬಸ್‌ಗಾಗಿ ಕಾಯುವ ಪ್ರಯಾಣಿಕರು ಅವುಗಳ ಮಧ್ಯೆಯೇ ನಿಲ್ಲಬೇಕಾದ ಪಡಿಪಾಟಲು ಎದುರಾಗಿದೆ
ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಕಾರಿನಲ್ಲಿ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ

ಸಹರ್ಸ, ಬಿಹಾರ (ಪಿಟಿಐ): ಚಲಿಸುತ್ತಿದ್ದ ಕಾರಿನಲ್ಲಿ ಬಾಲಕಿ ಮೇಲೆ ಮೂವರು ಪುರುಷರು ಲೈಂಗಿಕ ದೌರ್ಜನ್ಯ ನಡೆಸಿರುವ ಪ್ರಕರಣ ನಡೆದಿದೆ. ಸದಾರ್ ಪ್ರದೇಶದಲ್ಲಿ ಒಬ್ಬ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

'ಸೆಪ್ಟೆಂಬರ್ 14ರಂದು ಕಾರಿನಲ್ಲಿ ಬಂದೂಕು ತೋರಿಸಿ ಬೆದರಿಸಿ ನನ್ನ ಮೇಲೆ ಲೈಂಗಿಕ ದೌರ್ಜನ್ಯ ನಡೆಸಲಾಗಿದೆ' ಎಂದು ಸಂತ್ರಸ್ತೆಯು ಸೋಮವಾರ ದೂರು ನೀಡಿದ್ದಳು. ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಯಿತು ಮತ್ತು ತನಿಖೆ ನಡೆಸಲು ವಿಶೇಷ ತನಿಖಾ ತಂಡ ರಚಿಸಲಾಯಿತು ಎಂದು ಸಹರ್ಸದ ಎಸ್‌ಪಿ ಹಿಮಾಂಶು ತಿಳಿಸಿದ್ದಾರೆ.

ಸಂತ್ರಸ್ತೆಯನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಲಾಗಿದೆ. ವರದಿ ಇನ್ನಷ್ಟೇ ಬರಬೇಕಿದೆ. ಪ್ರಕರಣದ ತನಿಖೆಯನ್ನು ಎಲ್ಲಾ ಆಯಾಮಗಳಲ್ಲೂ ನಡೆಸಲಾಗುತ್ತಿದೆ. ಇನ್ನಿಬ್ಬರು ಆರೋಪಿಗಳು ತಲೆಮರೆಸಿಕೊಂಡಿದ್ದು, ಅವರಿಗಾಗಿ ಶೋಧ ಕೈಗೊಳ್ಳಲಾಗಿದೆ. ಕಾರು ವಶಕ್ಕೆ ತೆಗೆದುಕೊಳ್ಳಲಾಗಿದೆ ಅವರು ತಿಳಿಸಿದರು.

ಪೊಲೀಸರ ಮೇಲೆ ಮಾರಕಾಸ್ತ್ರದಿಂದ ಹಲ್ಲೆ ನಡೆಸಿ ಪರಾರಿಯಾಗಲು ಯತ್ನ

ರೌಡಿಶೀಟರ್ ಕಾಲಿಗೆ ಗುಂಡಿಕ್ಕಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಂಧನ ಕಾರ್ಯಾಚರಣೆಗೆ ತೆರಳಿದ್ದ ಪೊಲೀಸರ ಮೇಲೆಯೇ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ, ಪರಾರಿಯಾಗಲು ಯತ್ನಿಸಿದ ರೌಡಿಶೀಟರ್ ಕಾಲಿಗೆ ಗುಂಡು ಹಾರಿಸಿ ಬ್ರಹ್ಮದೇವರ ಗುಡ್ಡದ ಬಳಿ ಮಂಗಳವಾರ ಮುಂಜಾನೆ ಬಂಧಿಸಲಾಗಿದೆ.

ಶ್ರೀನಿವಾಸನಗರದ ಒಂದನೇ ಮುಖ್ಯರಸ್ತೆಯ ಐದನೇ ಕ್ರಾಸ್ ನಿವಾಸಿ, ರಾಜಗೋಪಾಲ ನಗರ ಪೊಲೀಸ್ ಠಾಣೆಯ ರೌಡಿಶೀಟರ್ ಪವನ್ ಅಲಿಯಾಸ್ ಕಡುಬು ಬಂಧಿತ ಆರೋಪಿ.

ಕಾರ್ಯಾಚರಣೆ ವೇಳೆ ಪೊಲೀಸರು ಆತ್ಮರಕ್ಷಣೆಗಾಗಿ ಪವನ್ ಕಾಲಿಗೆ ಗುಂಡು ಹಾರಿಸಿದ್ದಾರೆ. ಆರೋಪಿಯು ಹೆಡ್ ಕಾನ್‌ಸ್ಟೆಬಲ್ ವೆಂಕಟೇಶ್ ಅವರ ಮೇಲೂ ಹಲ್ಲೆ ನಡೆಸಿದ್ದಾನೆ. ಇಬ್ಬರನ್ನೂ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

'ರಘು ಹಾಗೂ ಪವನ್ ಮಧ್ಯೆ ಗಲಾಟೆ ನಡೆದಿತ್ತು. ಹಳೇ ದ್ವೇಷದ ಕಾರಣಕ್ಕೆ ಸೆಪ್ಟೆಂಬರ್ 15ರಂದು ರಘುನನ್ನು ಹುಡುಕಿಕೊಂಡು ಆರೋಪಿಯು ಸುಂಕದಕಟ್ಟೆಗೆ ಬಂದಿದ್ದ. ಅಲ್ಲಿ ರಘು ಅವರ ಸ್ನೇಹಿತ ವಿಶ್ವಾಸ್ ಸಿಕ್ಕಿದ್ದ. ರಘು ಬಗ್ಗೆ ವಿಚಾರಿಸಿ, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದ ಆರೋಪಿ, ತನ್ನ ಬಳಿಯಿದ್ದ ಮಚ್ಚಿನಿಂದ ವಿಶ್ವಾಸ್ ಮೇಲೆ ನಡೆಸಿದ್ದ. ರಘುನನ್ನು ಮುಗಿಸುವುದಾಗಿ ಬೆದರಿಕೆಯೊಡ್ಡಿದ್ದ. ವಿಚಾರವನ್ನು ಪೊಲೀಸರಿಗೆ ತಿಳಿಸಿದರೆ ವಿಶ್ವಾಸ್‌ನನ್ನೂ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದ' ಎಂದು



ರೌಡಿಶೀಟರ್ ಪವನ್



ಗಾಯಾಳು ಹೆಡ್ ಕಾನ್‌ಸ್ಟೆಬಲ್ ವೆಂಕಟೇಶ್

ಪೊಲೀಸರು ಹೇಳಿದರು.

'ಇದಕ್ಕೂ ಮೊದಲು ಕಾಮಾಕ್ಷಿಪಾಳ್ಯ ಠಾಣಾ ವ್ಯಾಪ್ತಿಯ ವಿದ್ಯಾನಿಕೇತನ ಶಾಲೆಯ ಬಳಿ ಕ್ರಿಕೆಟ್ ಆಡುತ್ತಿದ್ದ ಸ್ಥಳಕ್ಕೆ ತೆರಳಿದ್ದ ರೌಡಿಶೀಟರ್, ವ್ಯಕ್ತಿಯೊಬ್ಬರ ಜೊತೆಗೆ ಗಲಾಟೆ ನಡೆಸಿದ್ದ. ಗಲಾಟೆ ನಡೆಸಿ ಬೆದರಿಕೆ ಹಾಕಿದ್ದ ಬಗ್ಗೆ ಆ ವ್ಯಕ್ತಿ ಪೊಲೀಸರಿಗೆ ಮಾಹಿತಿ ನೀಡಿದ್ದರು. ಪೊಲೀಸರಿಗೆ ಮಾಹಿತಿ ನೀಡಿದ್ದಕ್ಕೆ ಸಿಟ್ಟಿಗೆದಿದ್ದ ಆರೋಪಿ, ದೂರು ನೀಡಿದ ಯುವಕನ ಮೇಲೆ ಹಲ್ಲೆ ನಡೆಸಿ ವಿವಸ್ತ್ರಗೊಳಿಸಿದ್ದ. ಅದನ್ನು ವಿಡಿಯೊ ಮಾಡಿ ಸಾಮಾಜಿಕ ಮಾಧ್ಯಮದಲ್ಲಿ ಹಾಕಿದ್ದ' ಎಂದು ಪೊಲೀಸರು ಹೇಳಿದರು.

ಆರೋಪಿ ವಿರುದ್ಧ ಕಾಮಾಕ್ಷಿಪಾಳ್ಯ ಠಾಣೆಯಲ್ಲಿ ಎರಡು ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದವು. ಪ್ರಕರಣ ಸಂಬಂಧ ಆರೋಪಿಯನ್ನು ಪತ್ತೆಹಚ್ಚಿ ಬಂಧಿಸಲು ಮೂರು ವಿಶೇಷ ತಂಡಗಳನ್ನು ರಚಿಸಲಾಗಿತ್ತು.

ಜ್ಞಾನಭಾರತಿ ಪೊಲೀಸ್ ಠಾಣೆ ವ್ಯಾಪ್ತಿಯ ಉಲ್ಲಾಳ ಉಪನಗರದ ಬಳಿಯಿರುವ ಬ್ರಹ್ಮದೇವರ ಗುಡ್ಡೆಯ ನಿರ್ಜನ ಪ್ರದೇಶದಲ್ಲಿ ಪವನ್ ಇರುವುದರ ಬಗ್ಗೆ ಮಾಹಿತಿ ಪಡೆದಿದ್ದ ಇನ್‌ಸ್ಪೆಕ್ಟರ್ ಕೆ.ಸುಬ್ರಮಣಿ ನೇತೃತ್ವದ ಪೊಲೀಸರ ತಂಡವು ಮಂಗಳವಾರ ಮುಂಜಾನೆಯೇ ಸ್ಥಳಕ್ಕೆ ತೆರಳಿತ್ತು. ಆರೋಪಿಯನ್ನು ಹಿಡಿಯಲು ಮುಂದಾದ ವೇಳೆ ಹೆಡ್ ಕಾನ್‌ಸ್ಟೆಬಲ್ ವೆಂಕಟೇಶ್ ಮೇಲೆ ಹಲ್ಲೆ ನಡೆಸಿ ತಪ್ಪಿಸಿಕೊಳ್ಳಲು ಮುಂದಾದ. ಆಗ ಗಾಳಿಯಲ್ಲಿ ಗುಂಡು ಹಾರಿಸಿ ಶರಣಾಗುವಂತೆ ಸೂಚಿಸಲಾಯಿತು. ಆಗ ಆರೋಪಿಯು ಹೆಡ್ ಕಾನ್‌ಸ್ಟೆಬಲ್ ಮೇಲೆ ಮಾರಕಾಸ್ತ್ರದಿಂದ ಮತ್ತೆ ಹಲ್ಲೆ ನಡೆಸಿ ಪರಾರಿಯಾಗಲು ಯತ್ನಿಸಿದ್ದ. ತಕ್ಷಣ ಇನ್‌ಸ್ಪೆಕ್ಟರ್ ಆರೋಪಿಯ ಕಾಲಿಗೆ ಗುಂಡು ಹಾರಿಸಿ ಆತನನ್ನು ವಶಕ್ಕೆ ಪಡೆದುಕೊಂಡರು ಎಂದು ಮೂಲಗಳು ತಿಳಿಸಿವೆ.

ಆರೋಪಿ ವಿರುದ್ಧ ಡಕಾಯಿತಿ, ಗಾಂಜಾ ಮತ್ತಿನಲ್ಲಿ ಹಲ್ಲೆ ಸೇರಿದಂತೆ ಸುಮಾರು 11ಕ್ಕೂ ಅಧಿಕ ಪ್ರಕರಣಗಳಿವೆ ಎಂದು ಬೆಂಗಳೂರು ಪಶ್ಚಿಮ ವಿಭಾಗದ ಡಿಸಿಪಿ ಎಸ್.ಗಿರೀಶ್ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಕೈದಿಗಳ ಬಳಿ ಮೊಬೈಲ್, ಚಾಕು ತನಿಖೆ ಶುರು

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಕೈದಿಗಳ ಬಳಿ ಮೊಬೈಲ್, ಇಯರ್ ಫೋನ್ ಮತ್ತಿತರ ಎಲೆಕ್ಟ್ರಾನಿಕ್ ಉಪಕರಣಗಳು ಹಾಗೂ ಚಾಕು ಪತ್ತೆಯಾದ ಕುರಿತು ತನಿಖೆ ನಡೆಯುತ್ತಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

ಪೊಲೀಸರು ಕಾರಾಗೃಹದ ಮೇಲೆ ದಾಳಿಮಾಡಿ ಶೋಧ ನಡೆಸಿದಾಗ ನಿಷೇಧಿತ ವಸ್ತುಗಳು ಪತ್ತೆಯಾಗಿವೆ. ಜೈಲಾಧಿಕಾರಿಗಳು, ಭದ್ರತಾ ಸಿಬ್ಬಂದಿ, ಸಂಬಂಧಪಟ್ಟ ಬ್ಯಾರಕ್‌ನಲ್ಲಿರುವ ಕೈದಿಗಳ ವಿರುದ್ಧ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ವರದಿ ಬಂದ ಬಳಿಕ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.



ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ ನಟ ದರ್ಶನ್ ಹಾಗೂ ಸಹಚರರಿಗೆ ವಿಶೇಷ ಆತಿಥ್ಯ ನೀಡಿದ್ದ ಫೋಟೊ ಬಹಿರಂಗವಾದ ಕಾರಣ ಕಾರಾಗೃಹದ ಮೇಲೆ ಪೊಲೀಸರು ನಿಗಾ ವಹಿಸಿದ್ದರು. ಶನಿವಾರ ಆಗ್ನೇಯ ವಿಭಾಗದ ಪೊಲೀಸ್ ತಂಡ ಕೇಂದ್ರ ಕಾರಾಗೃಹದ ಮೇಲೆ ದಾಳಿ ನಡೆಸಿದಾಗ ರೌಡಿಶೀಟರ್ ವಿಲ್ಸನ್ ಗಾರ್ಡನ್ ನಾಗ ಹಾಗೂ ಆತನ ಸಹಚರರ ಮೊಬೈಲ್ ಫೋನ್ ಜೊತೆಗೆ ಹಲವು ವಸ್ತುಗಳನ್ನು ವಶಕ್ಕೆ ಪಡೆಯಲಾಗಿತ್ತು.

ವಿಲ್ಸನ್ ಗಾರ್ಡನ್ ನಾಗ ಕಲಬುರಗಿ ಜೈಲಿಗೆ ಸ್ಥಳಾಂತರ?

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ರೌಡಿಶೀಟರ್ ವಿಲ್ಸನ್ ಗಾರ್ಡನ್ ನಾಗ ಅಲಿಯಾಸ್ ನಾಗರಾಜ್‌ನನ್ನು ಕಲಬುರಗಿ ಅಥವಾ ಉತ್ತರ ಕರ್ನಾಟಕ ಭಾಗದ ಯಾವುದಾದರೂ ಜಿಲ್ಲೆಯ ಕಾರಾಗೃಹಕ್ಕೆ ಸ್ಥಳಾಂತರಿಸುವ ಪ್ರಕ್ರಿಯೆ ಆರಂಭವಾಗಿದೆ.

ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲು ಸೇರಿದ್ದ ನಟ ದರ್ಶನ್ ಹಾಗೂ ಸಿದ್ದಾಪುರ ಮಹೇಶ್ ಕೊಲೆ ಪ್ರಕರಣದಲ್ಲಿ ವಿಲ್ಸನ್ ನಾಗನನ್ನು ಬಂಧಿಸಲಾಗಿತ್ತು. ಜೈಲಿನಲ್ಲಿ ಇಬ್ಬರೂ ವಿಶೇಷ ಆತಿಥ್ಯ ಪಡೆದುಕೊಂಡಿದ್ದರು. ದರ್ಶನ್ ಅವರನ್ನು ಬಳ್ಳಾರಿ ಜೈಲಿಗೆ ಸ್ಥಳಾಂತರ ಮಾಡಲಾಗಿತ್ತು. ಪ್ರಕರಣ ಸಂಬಂಧ ಮೂರು ಎಫ್‌ಐಆರ್‌ಗಳು ದಾಖಲಾಗಿದ್ದು, ಸಿಸಿಬಿ ಜಂಟಿ ಪೊಲೀಸ್ ಕಮಿಷನರ್ ಚಂದ್ರಗುಪ್ತ ನೇತೃತ್ವದಲ್ಲಿ ತನಿಖೆ ನಡೆಯುತ್ತಿದೆ. ಪರಪ್ಪನ ಅಗ್ರಹಾರದಲ್ಲಿ ವಿಶೇಷ ಆತಿಥ್ಯ ನೀಡಿದ ಫೋಟೊ ಸಹ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿತ್ತು.

'ಪರಪ್ಪನ ಅಗ್ರಹಾರ ಜೈಲಿನಲ್ಲಿ ಆರೋಪಿ ನಟ ದರ್ಶನ್‌ಗೆ ವಿಶೇಷ ಆತಿಥ್ಯದ ಜವಾಬ್ದಾರಿಯನ್ನು ನಾಗ ವಹಿಸಿಕೊಂಡಿದ್ದ. ವಿಚಾರಣೆ ವೇಳೆ ಈ ವಿಷಯ ಗೊತ್ತಾಗಿತ್ತು. ನಾಗನನ್ನು ಬೇರೆ ಜೈಲಿಗೆ ಕಳುಹಿಸಲು ಜೈಲು ಅಧಿಕಾರಿಗಳು ಹಾಗೂ ಬೆಂಗಳೂರು ಪೊಲೀಸರು ನ್ಯಾಯಾಲಯದ ಮೊರೆ ಹೋಗಿದ್ದರು. ನ್ಯಾಯಾಲಯವು ಅನುಮತಿ ನೀಡಿದ್ದು ಸ್ಥಳಾಂತರ ಪ್ರಕ್ರಿಯೆ ಆರಂಭವಾಗಿದೆ' ಎಂದು ಮೂಲಗಳು ತಿಳಿಸಿವೆ.

ಕಳೆದ ವರ್ಷ ಆಗಸ್ಟ್‌ನಲ್ಲಿ ಸಿದ್ದಾಪುರ ಮಹೇಶ್ ಎಂಬಾತನನ್ನು ನಾಗ ಹಾಗೂ ಸಹಚರರು ಕೊಲೆ ಮಾಡಿದ್ದರು ಎಂಬ ಆರೋಪವಿದೆ. ಈ ಪ್ರಕರಣದಲ್ಲಿ ನಾಗ ಹಾಗೂ ಆತನ 20 ಸಹಚರರನ್ನು ಬಂಧಿಸಲಾಗಿತ್ತು.

ಟೊಮೆಟೊ ಬೆಳೆ ನಷ್ಟ: ಸಾಲ ತೀರಿಸಲು ಕಳ್ಳತನ

ತಮಿಳುನಾಡಿನ ಹೊಸೂರಿನಲ್ಲಿ ಸಿನಿಮಾ ವೀಕ್ಷಿಸುತ್ತಿದ್ದಾಗ ಆರೋಪಿ ಬಂಧಿಸಿದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಟ್‌ಫೀಲ್ಡ್‌ನ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಸಾಫ್ಟ್‌ವೇರ್ ಎಂಜಿನಿಯರ್ ಒಬ್ಬರು 57 ಲ್ಯಾಪ್‌ಟಾಪ್ ಕಳ್ಳತನ ಮಾಡಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ.

ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಹೊಸೂರು ತಾಲ್ಲೂಕಿನ ತೋರಪಲ್ಲಿ ಗ್ರಾಮದ ಮುರುಗೇಶ್ ಎಂಬುವವರನ್ನು ವೈಟ್‌ಫೀಲ್ಡ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಬಂಧಿತನಿಂದ ₹22 ಲಕ್ಷ ಮೌಲ್ಯದ 50 ಲ್ಯಾಪ್‌ಟಾಪ್ ಜಪ್ತಿ ಮಾಡಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ವೈಟ್‌ಫೀಲ್ಡ್‌ನ ಐಟಿಪಿಎಲ್‌ನ ಲ್ಯಾವಿಗೇಟರ್ ಕಟ್ಟಡದಲ್ಲಿರುವ 'ಟೆಲಿಕಲರ್ ಇಂಡಿಯಾ'ದ ವ್ಯವಸ್ಥಾಪಕ ಅತುಲ್ ಹ್ಯಾವೆಲ್ ಅವರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ತಮಿಳುನಾಡಿನಲ್ಲಿ ವಶಕ್ಕೆ ಪಡೆದು ಬಂಧಿಸಲಾಯಿತು ಎಂದು ಹೇಳಿದರು.

'ಟೆಲಿಕಲರ್ ಇಂಡಿಯಾದಲ್ಲಿ ಕಳೆದ ಫೆಬ್ರುವರಿಯಿಂದ ಸಿಸ್ಟಂ ಅಡ್ಮಿನ್ ಹುದ್ದೆಯಲ್ಲಿ ಆರೋಪಿ ಮುರುಗೇಶ್ ಕೆಲಸ ಮಾಡುತ್ತಿದ್ದ. ಕಂಪನಿಗೆ ಸೇರಿದ



ಮುರುಗೇಶ್

ಲ್ಯಾಪ್‌ಟಾಪ್‌ಗಳನ್ನು ಇಡುತ್ತಿದ್ದ ಸ್ಥಳ ಆರೋಪಿಗೆ ತಿಳಿದಿತ್ತು. ನಿತ್ಯ ಕೆಲಸಕ್ಕೆ ಬರುತ್ತಿದ್ದ ಆರೋಪಿ, ಒಂದೊಂದೇ ಲ್ಯಾಪ್‌ಟಾಪ್ ಕಳವು ಮಾಡಿದ್ದ. ಹೀಗೆ 57 ಲ್ಯಾಪ್‌ಟಾಪ್ ಕದ್ದು ಮಾತೃ ಸಂಸ್ಥೆ ತೊರೆದು ತಮಿಳುನಾಡಿನ ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದ' ಎಂದು ಅವರು ಮಾಹಿತಿ ನೀಡಿದರು.

'ದೂರು ದಾಖಲಾದ ಮೇಲೆ ಕಂಪನಿಯ ಸುತ್ತಮುತ್ತ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲಿಸಲಾಯಿತು. ಸಿಸ್ಟಂ ಅಡ್ಮಿನ್ ಆಗಿ ಕೆಲಸ ಮಾಡುತ್ತಿದ್ದ ವ್ಯಕ್ತಿಯೇ ಲ್ಯಾಟ್‌ಟಾಪ್ ಕಳವು ಮಾಡಿದ್ದು ಎಂಬುದು ತನಿಖೆಯಿಂದ ಗೊತ್ತಾಗಿತ್ತು. ತಮಿಳುನಾಡಿನ ಹೊಸೂರಿನ ರಾಘವೇಂದ್ರ ಚಿತ್ರಮಂದಿರದಲ್ಲಿ ಆರೋಪಿ ಸಿನಿಮಾ ವೀಕ್ಷಣೆ ಮಾಡುತ್ತಿದ್ದ. ಅಲ್ಲಿಗೆ ತೆರಳಿದ ವೈಟ್‌ಫೀಲ್ಡ್ ಠಾಣೆ ಪೊಲೀಸರು, ಆರೋಪಿ ಕುಳಿತಿದ್ದ ಆಸನದಿಂದ ಸ್ವಲ್ಪ ದೂರದಲ್ಲಿ ಕುಳಿತಿದ್ದರು. ಸಿನಿಮಾ ಪ್ರದರ್ಶನ ಮುಕ್ತಾಯವಾದ ತಕ್ಷಣವೇ ಆರೋಪಿಯನ್ನು ವಶಕ್ಕೆ ಪಡೆದುಕೊಂಡರು. ಆರೋಪಿಯನ್ನು ವಿಚಾರಣೆಗೆ ಒಳಪಡಿಸಿದಾಗ ಲ್ಯಾಪ್‌ಟಾಪ್ ಕಳವು ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾನೆ' ಎಂದು ಮೂಲಗಳು ತಿಳಿಸಿವೆ.

'ಕೋವಿಡ್ ಸಂದರ್ಭದಲ್ಲಿ ಆರೋಪಿ ಆರು ಎಕರೆಯಲ್ಲಿ ಟೊಮೆಟೊ ಬೆಳೆದಿದ್ದ. ಟೊಮೆಟೊ ಬೆಳೆಯಿಂದ ₹25 ಲಕ್ಷ ನಷ್ಟವಾಗಿತ್ತು. ಸಾಲ ತೀರಿಸಲು ಕಳವು ಮಾಡಿದ್ದಾಗಿ ಹೇಳಿದ್ದಾನೆ' ಎಂದು ಪೊಲೀಸರು ಹೇಳಿದರು.

'ಹೊಸೂರಿನಲ್ಲಿರುವ ಲ್ಯಾಪ್‌ಟಾಪ್ ರಿಪೇರಿ ಹಾಗೂ ಮಾರಾಟ ಮಾಡುವ ಅಂಗಡಿಗೆ 45 ಲ್ಯಾಪ್‌ಟಾಪ್‌ಗಳನ್ನು ಮಾರಾಟ ಮಾಡಿದ್ದ. ಮತ್ತೊಬ್ಬರಿಗೆ ಐದು ಲ್ಯಾಪ್‌ಟಾಪ್ ಮಾರಾಟ ಮಾಡಿದ್ದ' ಎಂದು ತಿಳಿಸಿದರು.

₹4.17 ಲಕ್ಷದ 20 ಮೊಬೈಲ್, ಒಂದು ದ್ವಿಚಕ್ರ ವಾಹನ ಜಪ್ತಿ

ಬೆಂಗಳೂರು: ಆಹಾರ ಪದಾರ್ಥಗಳ ಡೆಲಿವರಿ ಉದ್ಯೋಗಿಗಳು ಹಾಗೂ ಪಾದಚಾರಿಗಳನ್ನು ಅಡ್ಡಗಟ್ಟಿ ಮೊಬೈಲ್ ಹಾಗೂ ನಗದು ಸುಲಿಗೆ ಮಾಡುತ್ತಿದ್ದ ಅಣ್ಣ- ತಮ್ಮನನ್ನು ಪುಟ್ಟೇನಹಳ್ಳಿ ಠಾಣೆ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಜಿಗಣಿ ನಿವಾಸಿಗಳಾದ ಆನಂದ್(25) ಹಾಗೂ ಕಿರಣ್ (24) ಬಂಧಿತರು.ಬಂಧಿತರಿಂದ ₹4.17 ಲಕ್ಷ ಮೌಲ್ಯದ 20 ಮೊಬೈಲ್ ಹಾಗೂ ಒಂದು ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

'ಅಷ್ಟಲಕ್ಷ್ಮಿ ಲೇಔಟ್‌ನಲ್ಲಿ ನೆಲೆಸಿದ್ದ ಸ್ವಿಗ್ಗಿ ಡೆಲಿವರಿ ಹುಡುಗ ನೀಡಿದ ದೂರು ಆಧರಿಸಿ, ಸಹೋದರರನ್ನು ಬಂಧಿಸಲಾಯಿತು. ಗ್ರಾಹಕರಿಗೆ ಆಹಾರ ಡೆಲಿವರಿ ಮಾಡಲು ಲೊಕೇಶನ್ ಹುಡುಕಾಟ ನಡೆಸುತ್ತಿದ್ದ ವೇಳೆ ಆರೋಪಿಗಳು ಮೊಬೈಲ್ ಕಸಿದು ಪರಾರಿ ಆಗಿದ್ದರು. ಈ ಮಧ್ಯೆ ಆರೋಪಿಗಳು ಡಕಾಯಿತಿ ನಡೆಸಿದ್ದರು. ಇಬ್ಬರನ್ನೂ ಬನ್ನೇರುಘಟ್ಟ ಪೊಲೀಸ್ ಠಾಣೆ ಪೊಲೀಸರು ಬಂಧಿಸಿದ್ದರು. ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲನೆ ನಡೆಸಿದಾಗ, ಸಹೋದರರೇ ಮೊಬೈಲ್ ಸುಲಿಗೆ ನಡೆಸಿದ್ದು ಗೊತ್ತಾಗಿತ್ತು. ಡಕಾಯಿತಿ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ಆರೋಪಿಗಳನ್ನು ಬಾಡಿ ವಾರಂಟ್ ಮೇಲೆ ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ಆಗ ಮೊಬೈಲ್ ಫೋನ್ ಸುಲಿಗೆ ನಡೆಸಿದ್ದಾಗಿ ತಪ್ಪೊಪ್ಪಿಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

ಮೊಬೈಲ್ ಸುಲಿಗೆ ಮೂವರ ಬಂಧನ

ಆಟೋದಲ್ಲಿ ಬಂದು ಮೊಬೈಲ್ ಸುಲಿಗೆ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಹನುಮಂತನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ರಾಕೇಶ್ ಅಲಿಯಾಸ್ ಸೆಟ್ಟು(22), ರುದ್ರಪ್ಪ ಗಾರ್ಡನ್ ನಿವಾಸಿ ಸಂತೋಷ್ (24) ಮತ್ತು ಕೆ.ಪಿ.ಅಗ್ರಹಾರ ನಿವಾಸಿ ತೇಜಸ್(23) ಬಂಧಿತರು.

ಆರೋಪಿಗಳಿಂದ ₹ 1.60 ಲಕ್ಷ ಮೌಲ್ಯದ 6 ಮೊಬೈಲ್‌ಗಳು, 1 ಆಟೋ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಗುಡ್ಡ ಕುಸಿದ ಸ್ಥಳ ವೀಗ ಸೆಲ್ಫಿ ತಾಣ

ಪ್ರಜಾವಾಣಿ ವಾರ್ತೆ

ಅಂಕೋಲಾ: ತಾಲ್ಲೂಕಿನ ಶಿರೂರು ಬಳಿ ಗುಡ್ಡ ಕುಸಿತದ ದುರಂತ ಸಂಭವಿಸಿ ಎರಡು ತಿಂಗಳಾಗಿದ್ದು, ಗುಡ್ಡ ಕುಸಿತದ ಸ್ಥಳ ಈಗ ಪ್ರವಾಸಿಗರ ಸೆಲ್ಫಿ ತಾಣವಾಗಿ ಮಾರ್ಪಟ್ಟಿದೆ. ಅದರಲ್ಲೂ ಕೇರಳದ ಪ್ರವಾಸಿಗರು ಹೆಚ್ಚು ಭೇಟಿ ನೀಡುತ್ತಿದ್ದಾರೆ.

ರಾಷ್ಟ್ರೀಯ ಹೆದ್ದಾರಿ–66ರಲ್ಲಿ ಸಾಗುವ ಹಲವು ವಾಹನಗಳು ಪ್ರತಿ ದಿನ ಗುಡ್ಡ ಕುಸಿತದ ಸ್ಥಳದಲ್ಲಿ ನಿಲುಗಡೆ ಆಗುತ್ತವೆ. ಕೇರಳದಿಂದ ಅಂಕೋಲಾ ಮಾರ್ಗವಾಗಿ ಗೋವಾಕ್ಕೆ ಸಾಗುವ ಪ್ರವಾಸಿಗರು ದುರಂತದ ಸ್ಥಳದಲ್ಲಿ ಕೆಲ ನಿಮಿಷ ಕಳೆದು, ಗುಡ್ಡ ಕುಸಿತವಾದ ಪ್ರದೇಶ, ಗಂಗಾವಳಿ ನದಿಯನ್ನು ವೀಕ್ಷಿಸುತ್ತಾರೆ. ಚಿತ್ರಗಳನ್ನು ಕ್ಲಿಕ್ಕಿಸಿಕೊಳ್ಳುತ್ತಾರೆ. ಹಿರಿಯರು, ಕಿರಿಯರು ಎನ್ನದೇ ಎಲ್ಲರೂ ನದಿ ತೀರದ ಕಲ್ಲುಗಳ ಮೇಲೆ ನಿಂತು ಸೆಲ್ಫಿ ತೆಗೆದುಕೊಳ್ಳುತ್ತಾರೆ. ಸ್ವಲ್ಪ ಎಡವಿದರೂ ಕೆಳಗೆ ಬೀಳುವ ಸಾಧ್ಯತೆ ಇದೆ.

'ಗಣೇಶ ಚತುರ್ಥಿ ಬಂದೋಬಸ್ತ್ ಕಾರಣ ಇಲ್ಲಿ ಪೊಲೀಸ್ ಸಿಬ್ಬಂದಿ ಇಲ್ಲ. ಹೀಗಾಗಿ ಪ್ರವಾಸಿಗರ ಮೇಲೆ ಹಿಡಿತ ಇಲ್ಲದಂತೆ ಆಗಿದೆ. ನದಿಯಲ್ಲಿ ಬಿದ್ದ ಮಣ್ಣಿನ ದಿಬ್ಬ ಆದಷ್ಟು ಬೇಗ ತೆರವುಗೊಳಿಸಿದರೆ, ಪ್ರವಾಸಿಗರ ವೀಕ್ಷಣೆ ತಡೆಯಬಹುದು' ಎಂದು ಸ್ಥಳೀಯರಾದ ರಾಜೇಶ ಗೌಡ ತಿಳಿಸಿದರು.



ಅಂಕೋಲಾ ತಾಲ್ಲೂಕಿನ ಶಿರೂರಿನಲ್ಲಿ ಗುಡ್ಡ ಕುಸಿತದಿಂದ ಗಂಗಾವಳಿ ನದಿಯಲ್ಲಿ ಉಂಟಾದ ಮಣ್ಣಿನ ದಿಬ್ಬಗಳನ್ನು ಪ್ರವಾಸಿಗರು ವೀಕ್ಷಿಸಿದರು

ಸಾಲ ತೀರಿಸಲು ಪರದಾಡುತ್ತಿದ್ದ ಯುವಕ

ಮೆಟ್ರೊ ಹಳಿಗೆ ಜಿಗಿದು ಆತ್ಮಹತ್ಯೆಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೇರಳೆ ಮಾರ್ಗದ ಮೆಟ್ರೊ ಹಳಿಗೆ ಜಿಗಿದು ಬಿಹಾರದ ಸಿದ್ಧಾರ್ಥ್ ಜೈನ್ (30) ಎಂಬುವರು ಆತ್ಮಹತ್ಯೆಗೆ ಯತ್ನಿಸಿದ್ದು, ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ನಗರದ ಜ್ಞಾನಭಾರತಿ ಮೆಟ್ರೊ ನಿಲ್ದಾಣದಲ್ಲಿ ಮಂಗಳವಾರ ಮಧ್ಯಾಹ್ನ ನಡೆದಿದೆ.

ವೈಟ್ ಫೀಲ್ಡ್ ಕಡೆಯಿಂದ ಕೆಂಗೇರಿ ಕಡೆಗೆ ಮೆಟ್ರೊ ರೈಲು ತೆರಳುತ್ತಿತ್ತು. ಮಧ್ಯಾಹ್ನ 2.13ರ ವೇಳೆಗೆ ರೈಲು ಬರುತ್ತಿದ್ದಂತೆ ಏಕಾಏಕಿ ಹಳಿಗೆ ಜಿಗಿದಿದ್ದಾರೆ. ತಕ್ಷಣ ಕಾರ್ಯಪ್ರವೃತ್ತರಾದ ಸ್ಟೇಷನ್ ಕಂಟ್ರೋಲರ್ ಮತ್ತು ತಂಡ, ತುರ್ತು ಟ್ರಿಪ್ ಸಿಸ್ಟಮ್ (ಇಟಿಎಸ್) ಅನ್ನು ಬಳಸಿ ರೈಲು ಸಂಚಾರ ಸ್ಥಗಿತಗೊಳಿಸಿತು. ರೈಲಿನ ಕೆಳಗೆ ಸಿಲುಕಿದ ಯುವಕ ಹೊರ ಬರಲಾರದೇ ಪರದಾಟ ನಡೆಸಿದ. ಕೊನೆಗೆ ಸಿಬ್ಬಂದಿ ಆತನನ್ನು ಹಳಿಯಿಂದ ಮೇಲಕ್ಕೆ ಎತ್ತಿದರು.

'ರೈಲು ಹತ್ತು ಮೀಟರ್ ದೂರ ಕ್ರಮಿಸಿತಾದರೂ ಯುವಕ ಹಳಿಗಳ ನಡುವೆ ಸಿಲುಕಿದ ಕಾರಣ ಜೀವಕ್ಕೆ ತೊಂದರೆಯಾಗಿಲ್ಲ. ರೈಲ್ವೆ ಚಾಲಕ ವೇಗವನ್ನು ಗಣನೀಯವಾಗಿ ತಗ್ಗಿಸಿದರು' ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ನೇರಳೆ ಮಾರ್ಗದಲ್ಲಿ ರೈಲು ಸಂಚಾರವನ್ನು 2.31ಕ್ಕೆ ಪುನರಾರಂಭಿಸಲಾಯಿತು 2.13 ರಿಂದ 2.30ರವರೆಗೆ ಚಲ್ಲಘಟ್ಟ ಮೆಟ್ರೊ ನಿಲ್ದಾಣದ ಬದಲು ಮೈಸೂರು ರಸ್ತೆ ಮೆಟ್ರೊ ನಿಲ್ದಾಣದವರೆಗೆ ಎರಡು ರೈಲುಗಳು 'ಶಾರ್ಟ್ ಲೂಪ್'ನಲ್ಲಿ ಸಂಚರಿಸಿದವು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಲ್ದಾಣದಲ್ಲಿ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದ ರಶ್ಮಿ, ಕೂಡಲೇ ಇಟಿಎಸ್ ಸಿಸ್ಟಂಗೆ ಅಳವಡಿಸಿದ್ದ ಗಾಜು ಅನ್ನು ಕೈಯಿಂದ ಒಡೆದು ಪವರ್ ಆಫ್ ಮಾಡಿದ್ದಾರೆ. ಕ್ಷಣಾರ್ಧದಲ್ಲಿ ಮೆಟ್ರೊ ರೈಲಿನ ವಿದ್ಯುತ್ ಸಂಪರ್ಕ ಸ್ಥಗಿತವಾಗಿದೆ. ಯುವಕನನ್ನು ರಕ್ಷಣೆ ಮಾಡುವ ಭರದಲ್ಲಿ ರಶ್ಮಿ ಅವರ ಕೈಗೆ ಗಾಯವಾಗಿದೆ. ರಶ್ಮಿ ಅವರ ಕಾರ್ಯಕ್ಕೆ ಪ್ರಯಾಣಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

₹ 3 ಲಕ್ಷ ಸಾಲ: 'ನಗರದ ಅಪಾರ್ಟ್‌ಮೆಂಟ್ ಒಂದರಲ್ಲಿ ಕುಟುಂಬದ ಸದಸ್ಯರ ಜತೆ ವಾಸವಿರುವ ಸಿದ್ಧಾರ್ಥ್, ಮೆಗಾ ಬೈಟ್ ಎಲೆಕ್ಟ್ರಾನಿಕ್ ಷೋ ರೂಂನಲ್ಲಿ ಮಾರಾಟ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದಾರೆ. ಜೀವನ ನಿರ್ವಹಣೆಗಾಗಿ ₹ 3 ಲಕ್ಷ ಕೈ ಸಾಲ ಮಾಡಿಕೊಂಡಿದ್ದು, ಮರು ಪಾವತಿಸಲು ಆಗದೆ ಪರದಾಡುತ್ತಿದ್ದರು.

'ಮನೆ ಬಾಡಿಗೆ ಕಟ್ಟಲು ಸಹ ಹಣವಿರಲಿಲ್ಲ. ಜೀವನ ನಡೆಸುವುದೇ ಕಷ್ಟವಾಗಿತ್ತು. ಹಾಗಾಗಿ ಆತ್ಮಹತ್ಯೆಗೆ ಯತ್ನಿಸಿದೆ ಎಂದು ವಿಚಾರಣೆ ವೇಳೆ ಸಿದ್ಧಾರ್ಥ್ ತಿಳಿಸಿದ್ದಾರೆ' ಎಂದು ಪೊಲೀಸರು ಹೇಳಿದರು.



ಮೆಟ್ರೊ ರೈಲು ಹಳಿ ಕೆಳಗೆ ಸಿಲುಕಿರುವ ಸಿದ್ಧಾರ್ಥ್ ಜೈನ್ ಅವರನ್ನು ರಕ್ಷಿಸಿ ಹೊರತರಲು ಪ್ರಯತ್ನಿಸಿದ ನಮ್ಮ ಮೆಟ್ರೊ ಸಿಬ್ಬಂದಿ

ವರ್ಷದ ಘಟನೆಗಳು..

- ಜ. 1ರಂದು ಇಂದಿರಾ ನಗರ ಮೆಟ್ರೊ ನಿಲ್ದಾಣದಲ್ಲಿ ಮೊಬೈಲ್ ಬಿದ್ದ ಕಾರಣ ಮಹಿಳೆಯೊಬ್ಬರು ಹಳಿಗೆ ಜಿಗಿದಿದ್ದರು.
- ಜ. 5ರಂದು ಜಾಲಹಳ್ಳಿ ಮೆಟ್ರೊ ನಿಲ್ದಾಣದಲ್ಲಿ ಶ್ಯಾರೋನ್ (23) ಎಂಬಾತ ಮೆಟ್ರೊ ಬರುತ್ತಿದ್ದಂತೆ ಹಳಿಗೆ ಜಿಗಿದಿದ್ದ. ಆದರೆ ಪ್ರಾಣಾಪಾಯದಿಂದ ಪಾರಾಗಿದ್ದ.
- ಮಾರ್ಚ್ 21ರಂದು ಅತ್ತಿಗುಪ್ಪೆ ಮೆಟ್ರೊ ನಿಲ್ದಾಣದಲ್ಲಿ ಧ್ರುವ್ (20) ಎಂಬಾತ ಹಳಿಗೆ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದ.
- ಆ. 8ರಂದು ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣದಲ್ಲಿ ಆಟವಾಡುತ್ತಿದ್ದ ನಾಲ್ಕು ವರ್ಷದ ಮಗು ಹಳಿ ಮೇಲೆ ಬಿದ್ದಿತ್ತು. ಕೂಡಲೇ ಭದ್ರತಾ ಸಿಬ್ಬಂದಿ ಮಗುವನ್ನು ರಕ್ಷಿಸಿದರು.

ದಾರಿ ಬಿಡದ ಶಾಲಾ ವಾಹನ ಅಡ್ಡಗಟ್ಟಿ ಚಾಲಕನ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದೆ ಹೋಗಲು ಜಾಗ ಬಿಡಲಿಲ್ಲವೆಂಬ ಕಾರಣಕ್ಕೆ ಸ್ಕಾರ್ಪಿಯೊ ವಾಹನದ ಚಾಲಕ ಮತ್ತು ಆತನ ಸ್ನೇಹಿತರು ಶಾಲಾ ಬಸ್ ಅಡ್ಡಗಟ್ಟಿ, ಚಾಲಕನ ಮೇಲೆ ಹಲ್ಲೆ ನಡೆಸಿರುವ ಘಟನೆ ಎಲೆಕ್ಟ್ರಾನಿಕ್ ಸಿಟಿಯ ಮಾರಗೊಂಡನಹಳ್ಳಿಯಲ್ಲಿ ಸೋಮವಾರ ನಡೆದಿದೆ.

ಟ್ರೀಮಿಸ್ ಶಾಲೆಯ ಬಸ್ ಚಾಲಕ ಜೇಮ್ಸ್ ಧೋನ್ ಅವರು ಘಟನೆ ಸಂಬಂಧ ಹೆಬ್ಬಗೋಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದು, ಪೊಲೀಸರು ಮೂವರನ್ನು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ. ಸ್ಕಾರ್ಪಿಯೊ ವಾಹನ ವಶಕ್ಕೆ ಪಡೆದುಕೊಳ್ಳಲಾಗಿದೆ.

'ತರಗತಿ ಮುಗಿದ ಬಳಿಕ ಮಕ್ಕಳನ್ನು ಮನೆಗೆ ಬಿಡಲು ಶಾಲಾ ಬಸ್‌ನಲ್ಲಿ ಕರೆದೊಯ್ಯಲಾಗುತ್ತಿತ್ತು. ಆಗ ಹಿಂದಿನಿಂದ ಬಂದ ವಾಹನ ಚಾಲಕ ಮುಂದೆ ಹೋಗಲು ದಾರಿ ಬಿಡುವಂತೆ ಹಾರ್ನ್ ಮಾಡಿದರೂ ಬಸ್ ಚಾಲಕ ಅವಕಾಶ ನೀಡಲಿಲ್ಲ. ಸ್ಕಾರ್ಪಿಯೊ ವಾಹನದಲ್ಲಿ ಬಂದ ಆರು ಜನರು ವಿ.ಆರ್.ಆರ್. ಕನ್ವೆಷನ್ ಹಾಲ್ ಬಳಿ ಶಾಲಾ ಬಸ್ ಅನ್ನು ಅಡ್ಡಗಟ್ಟಿದರು. ಚಾಲಕ ಜೇಮ್ಸ್ ಧೋನ್‌ನನ್ನು ಕೆಳಗಿಳಿಸಿ, ಹಲ್ಲೆ ನಡೆಸಿದ್ದಾರೆ. ಅಲ್ಲದೇ ಬಸ್ ಕಿಟಕಿಯ ಗಾಜು ಒಡೆದು ಹಾಕಿದ್ದಾರೆ. ಈ ವೇಳೆ ಶಾಲಾ ಬಸ್ನಲ್ಲಿದ್ದ ಮಕ್ಕಳು ಹೆದರಿ ಕಿರುಚಾಡಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಗ್ರಾಮೀಣ ವಿಭಾಗದ ಪೊಲೀಸ್ ವರಿಷ್ಠಾಧಿಕಾರಿ ಸಿ.ಕೆ.ಬಾಬಾ, 'ದಾರಿ ಬಿಡುವಂತೆ ಸ್ಕಾರ್ಪಿಯೊ ವಾಹನದ ಚಾಲಕ ನಿರಂತರವಾಗಿ ಹಾರ್ನ್ ಮಾಡುತ್ತಿದ್ದ. ಸಂಚಾರ ದಟ್ಟಣೆ ಹಾಗೂ ರಸ್ತೆ ಕಿರಿದಾದ ಕಾರಣ ಕಾರಿಗೆ ಜಾಗ ಬಿಡಲು ಬಸ್ ಚಾಲಕನಿಗೆ ಸಾಧ್ಯವಾಗಿಲ್ಲ. ಸ್ಕಾರ್ಪಿಯೊ ವಾಹನದ ಮಾಲೀಕರನ್ನು ಪತ್ತೆ ಮಾಡಿ, ಮೂವರನ್ನು ಬಂಧಿಸಲಾಗಿದೆ. ಉಳಿದವರನ್ನು ಶೀಘ್ರ ಬಂಧಿಸಲಾಗುವುದು' ಎಂದು ಹೇಳಿದರು.

112ಕ್ಕೆ ಕರೆ ಮಾಡಲು ಸಲಹೆ

ರಸ್ತೆಯಲ್ಲಿ ಜಗಳ, ಅಪಘಾತ ಸಂಭವಿಸಿದ ಸಂದರ್ಭದಲ್ಲಿ 112ಕ್ಕೆ ಕರೆ ಮಾಡಿದರೆ, 7–8 ನಿಮಿಷದಲ್ಲಿ ಪೊಲೀಸರು ಸ್ಥಳಕ್ಕೆ ಬರುತ್ತಾರೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

'ರಸ್ತೆ ರಂಪಾಟಗಳ ಬಗ್ಗೆ ಜನರು ಎಚ್ಚರವಹಿಸಬೇಕು. ಎಲ್ಲರಿಗೂ ರಸ್ತೆ ಬಳಸುವ ಹಕ್ಕು ಇದೆ. ಆದರೆ ಸಂಚಾರ ನಿಯಮ ಪಾಲಿಸಬೇಕು. ಸಂಚಾರದ ವೇಳೆ ವ್ಯತ್ಯಯ ಉಂಟಾದಾಗ ಸಂಯಮ ಕಳೆದುಕೊಳ್ಳುವುದರ ಬದಲು, ನಿಯಮ ಉಲ್ಲಂಘನೆಯ ಫೋಟೋ ತೆಗೆದು 'ಪಬ್ಲಿಕ್ ಐ' ಆ್ಯಪ್‌ನಲ್ಲಿ ಪ್ರಕಟಿಸಿದರೆ ಪೊಲೀಸರು ಕ್ರಮ ಕೈಗೊಳ್ಳಲು ಅನುಕೂಲವಾಗುತ್ತದೆ. ತೊಂದರೆಯುಂಟು ಮಾಡುವ ವ್ಯಕ್ತಿ ಅಥವಾ ಅವರ ವಾಹನದ ಫೋಟೋ ತೆಗದುಕೊಳ್ಳಿ, ವಾಹನದ ನಂಬರ್ ಬರೆದಿಟ್ಟುಕೊಂಡು, ಪೊಲೀಸರಿಗೆ ಘಟನೆಯ ವಿವರ ನೀಡಬೇಕು' ಎಂದು ಅವರು ಹೇಳಿದರು.

ವಾಹನ ಕಳವು: ಐವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೋಲದೇವನಹಳ್ಳಿ ಹಾಗೂ ಬ್ಯಾಡರಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ರಸ್ತೆ ಹಾಗೂ ಮನೆ ಎದುರು ನಿಲುಗಡೆ ಮಾಡುತ್ತಿದ್ದ ವಿವಿಧ ಮಾದರಿಯ ವಾಹನ ಕಳವು ಮಾಡುತ್ತಿದ್ದ ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಸೋಲದೇವನಹಳ್ಳಿ ಠಾಣೆ ಪೊಲೀಸರು ಕಾರ್ಯಾಚರಣೆ ನಡೆಸಿ, ಹರೀಂದ್ರ(30), ಮುನಿಪ್ರಸಾದ್ ಅಲಿಯಾಸ್ ಮುನಿ(34) ಹಾಗೂ ಸಂಜಯ್ ಅಲಿಯಾಸ್ ಬ್ಲಾಕಿ(29) ಎಂಬುವವರನ್ನು ಬಂಧಿಸಿದ್ದಾರೆ.


ಆರೋಪಿಗಳಿಂದ ₹17 ಲಕ್ಷ ಮೌಲ್ಯದ 12 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ. ಇತ್ತೀಚೆಗೆ ಹೆಸರಘಟ್ಟ ಮುಖ್ಯರಸ್ತೆಯ ಎಜಿಬಿ ಲೇಔಟ್‌ನಲ್ಲಿ ವ್ಯಕ್ತಿಯೊಬ್ಬರ ಮನೆ ಎದುರು ನಿಲುಗಡೆ ಮಾಡಿದ್ದ ದ್ವಿಚಕ್ರ ವಾಹನ ಕಳವು ಮಾಡಲಾಗಿತ್ತು. ಈ ಸಂಬಂಧ ದಾಖಲಾದ ದೂರಿನ ಮೇರೆಗೆ ತನಿಖೆ ನಡೆಸಿ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಸುತ್ತಮುತ್ತಲ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ ಪರಿಶೀಲನೆ ನಡೆಸಿದಾಗ ಸಿಕ್ಕಿದ್ದ ಸುಳಿವು ಹಾಗೂ ಬಾತ್ಮೀದಾರರು ನೀಡಿದ ಮಾಹಿತಿ ಮೇರೆಗೆ ಹೆಸರಘಟ್ಟ ಮುಖ್ಯರಸ್ತೆಯ ಸಪ್ತಗಿರಿ ಜಂಕ್ಷನ್ ಬಳಿ ಎರಡು ದ್ವಿಚಕ್ರ ವಾಹನ ಸಹಿತ ಮೂವರು ಆರೋಪಿಗಳನ್ನು ವಶಕ್ಕೆ ಪಡೆಯಲಾಯಿತು ಎಂದು ಪೊಲೀಸರು ಹೇಳಿದರು.

ಆರೋಪಿಗಳು ದುಶ್ಚಟಗಳ ದಾಸರಾಗಿದ್ದು, ತಮ್ಮ ಮೋಜು- ಮಸ್ತಿಗೆ ಸುಲಭವಾಗಿ ಹಣ ಗಳಿಸುವ ಉದ್ದೇಶದಿಂದ ದ್ವಿಚಕ್ರ ವಾಹನ ಕಳ್ಳತನ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

ಆಟೊ ಹಾಗೂ ದ್ವಿಚಕ್ರ ವಾಹನ ಕಳವು ಮಾಡುತ್ತಿದ್ದ ವಿಶ್ವನಾಥ್ ಹಾಗೂ ಮಹಮ್ಮದ್ ನಯಾಜ್ ಎಂಬುವವರನ್ನು ಬ್ಯಾಡರಹಳ್ಳಿಯ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಮಸೀದಿಯಲ್ಲಿ 44ನೇ ವರ್ಷದ ಗಣೇಶೋತ್ಸವ...



ಪುಣೆ (ಪಿಟಿಐ): 'ಅದು 1961ನೇ ಇಸವಿ. ಭಾರಿ ಮಳೆ ಸುರಿದಿತ್ತು. ಆಗ ಗಣೇಶ ಚತುರ್ಥಿಯ ಸಂದರ್ಭವಾಗಿತ್ತು. ಮಸೀದಿಯೊಳಗೆ ಗಣಪತಿ ಮೂರ್ತಿ ಇರಿಸಲು, ಸುತ್ತಮುತ್ತಲ ಹಿಂದೂ ಸಮುದಾಯದವರಿಗೆ ಮುಸ್ಲಿಮರು ಆಮಂತ್ರಣ ನೀಡಿದರು. ಅಲ್ಲಿಂದ ಪ್ರತಿ ವರ್ಷವೂ ಮಸೀದಿಯಲ್ಲಿ ಗಣೇಶ ಮೂರ್ತಿ ಇರಿಸುವ ಆಚರಣೆ ಆರಂಭವಾಯಿತು...'

ಹೀಗೆಂದವರು ಗಣೇಶ ಮಂಡಲದ ಮಾಜಿ ಅಧ್ಯಕ್ಷ ಅಶೋಲ್ ಪಾಟೀಲ್. ಪಶ್ಚಿಮ ಮಹಾರಾಷ್ಟ್ರದ ಸಾಂಗ್ಲಿ ನಗರದಿಂದ 32 ಕಿ.ಮೀ ದೂರ ಇರುವ ಗೋಟ್‌ಖಿಂಡಿ ಗ್ರಾಮದಲ್ಲಿ ಈ ಸೌಹಾರ್ದದ ಹಬ್ಬ ನಡೆಯುತ್ತಿದೆ.

'ನಡುವೆ ಕೆಲವು ವರ್ಷಗಳ ಕಾಲ ಈ ಆಚರಣೆ ನಿಂತೇ ಹೋಗಿತ್ತು. ಆದರೆ, 1980ರಲ್ಲಿ ಹೊಸ ಗಣೇಶ ಮಂಡಲವನ್ನು ರಚಿಸಿಕೊಳ್ಳಲಾಯಿತು. ಆನಂತರದಲ್ಲಿ ಒಂದು ವರ್ಷವೂ ಈ ಆಚರಣೆ ನಿಂತಿಲ್ಲ. ಕಳೆದ 44 ವರ್ಷಗಳಿಂದ ನಿರಂತರವಾಗಿ ನಡೆದುಕೊಂಡು ಬರುತ್ತಿದೆ' ಎಂದು ಅಶೋಕ್ ವಿವರಿಸಿದರು.

'ಪ್ರತಿ ವರ್ಷವೂ ಹಿಂದೂ ಹಾಗೂ ಮುಸ್ಲಿಮರು ಸೇರಿ ಗಣೇಶ ಹಬ್ಬವನ್ನು ಅತ್ಯುತ್ಸಾಹದಿಂದ ಆಚರಿಸುತ್ತೇವೆ. ಮಸೀದಿಯಲ್ಲಿ ಹೀಗೆ ಗಣೇಶ ಹಬ್ಬ ಆಚರಿಸುವುದು ಎರಡೂ ಧರ್ಮಗಳ ಮಧ್ಯದ ಸೌಹಾರ್ದದ ಸಂಕೇತ' ಎಂದು ಗಣೇಶ ಮಂಡಲದ ಅಧ್ಯಕ್ಷ ಇಲಾಹಿ ಪಠಾಣ್ ಅಭಿಪ್ರಾಯಪಟ್ಟರು.

'ಗೋಟ್‌ಖಿಂಡಿ ಗ್ರಾಮದಲ್ಲಿ ಗಣೇಶ ಹಬ್ಬ ಮಾತ್ರವಲ್ಲ ಮೊಹರಂ, ದೀಪಾವಳಿ, ಈದ್... ಹೀಗೆ ಎಲ್ಲ ಹಬ್ಬಗಳನ್ನು ಒಟ್ಟೊಟ್ಟಿಗೆ ಆಚರಿಸುತ್ತೇವೆ' ಎಂದು ಮಂಡಲದ ಸದಸ್ಯರೊಬ್ಬರು ಹೇಳಿದರು.

ಹಿಜ್ಬುಲ್ಲಾ ಸಂಘಟನೆಯ ಸದಸ್ಯರೂ ಸೇರಿದಂತೆ 2,800ಕ್ಕೂ ಹೆಚ್ಚು ಜನರಿಗೆ ಗಾಯ

ಲೆಬನಾನ್: ಪೇಜರ್‌ಗಳ ಸ್ಫೋಟಕ್ಕೆ 9 ಸಾವು

ಬೈರೂತ್ (ಲೆಬನಾನ್) (ಎಎಫ್‌ಪಿ/ರಾಯಿಟರ್ಸ್): ಲೆಬನಾನ್‌ನಾದ್ಯಂತ ಮತ್ತು ಸಿರಿಯಾದ ಕೆಲವೆಡೆ ಮಂಗಳವಾರ ಸಾವಿರಾರು ಪೇಜರ್‌ಗಳು ಸ್ಫೋಟಗೊಂಡ ಪರಿಣಾಮ ಒಂಬತ್ತು ಮಂದಿ ಮೃತಪಟ್ಟು, 2,800ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ.

ಹಿಜ್ಬುಲ್ಲಾ ಬಂಡುಕೋರ ಸಂಘಟನೆಯ ಮುಖಂಡರಾದ ಅಲಿ ಅಮ್ಮಾರ್ ಮತ್ತು ಹಸನ್ ಫಲ್‌ಲಲ್ಲಾ ಅವರ ಪುತ್ರರೂ ಮೃತರಲ್ಲಿ ಸೇರಿದ್ದಾರೆ ಎಂದು ಮೂಲಗಳು ತಿಳಿಸಿವೆ. ಲೆಬನಾನ್‌ನಲ್ಲಿರುವ ಇರಾನ್‌ನ ರಾಯಭಾರಿ ಮೊಜ್ತಬಾ ಅಮಾನಿ ಅವರಿಗೆ ಸಣ್ಣ ಪ್ರಮಾಣದ ಗಾಯ ಆಗಿದೆ.

'ಮೃತರಲ್ಲಿ ಒಬ್ಬ ಬಾಲಕಿ ಸೇರಿದ್ದಾಳೆ. ಗಾಯಗೊಂಡವರ ಪೈಕಿ 200 ಜನರ ಸ್ಥಿತಿ ಗಂಭೀರವಾಗಿದೆ' ಎಂದು ಲೆಬನಾನ್ ಆರೋಗ್ಯ ಸಚಿವ ಫಿರಾಸ್ ಅಬಿಯದ್ ಹೇಳಿದ್ದಾರೆ.

ಲೆಬನಾನ್‌ನ ಬೆಕಾ ಕಣಿವೆ ಪ್ರದೇಶದಲ್ಲಿ ಹಿಜ್ಬುಲ್ಲಾ ಸಂಘಟನೆಯ ಸದಸ್ಯನ ಪೇಜರ್ ಸ್ಫೋಟಗೊಂಡಾಗ ಆತನ 10 ವರ್ಷದ ಮಗಳು ಮೃತಪಟ್ಟಿದ್ದಾಳೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಸ್ಥಳೀಯ ಕಾಲಮಾನ ಮಂಗಳವಾರ ಮಧ್ಯಾಹ್ನ 3.45ರ ವೇಳೆಗೆ ಆರಂಭಿಕ ಸ್ಫೋಟ ಸಂಭವಿಸಿದೆ. ಆ ಬಳಿಕದ ಒಂದು ಗಂಟೆ ನಿರಂತರ ಸ್ಫೋಟಗಳು ಸಂಭವಿಸಿವೆ. ಸ್ಫೋಟಕ್ಕೆ ಏನು ಕಾರಣ ಎಂಬುದು ತಿಳಿದುಬಂದಿಲ್ಲ.

ಈ ಕೃತ್ಯದ ಹಿಂದೆ ಇಸ್ರೇಲ್ ಕೈವಾಡ ಇದೆ. ಅತ್ಯಾಧುನಿಕ ರಿಮೋಟ್ ತಂತ್ರಜ್ಞಾನ ಬಳಸಿ, ಸ್ಫೋಟ ನಡೆಸಲಾಗಿದೆ ಎಂದು ಲೆಬನಾನ್ ಸರ್ಕಾರದ ಅಧಿಕಾರಿಗಳು ಆರೋಪಿಸಿದ್ದಾರೆ. ಈ ಆರೋಪಗಳ ಕುರಿತು ಪ್ರತಿಕ್ರಿಯಿಸಲು ಇಸ್ರೇಲ್ ಸೇನೆ ನಿರಾಕರಿಸಿದೆ.

ಲೆಬನಾನ್ ಪ್ರಧಾನಿ ನಜೀಬ್ ಮಿಕಾತಿ ಅವರು, 'ಇಸ್ರೇಲ್ ನಡೆಸಿದ ಈ ಕ್ರಿಮಿನಲ್ ಆಕ್ರಮಣವು, ಲೆಬನಾನ್‌ನ ಸಾರ್ವಭೌಮತೆಯ ಉಲ್ಲಂಘನೆ' ಎಂದು ಟೀಕಿಸಿದ್ದಾರೆ.

ಸಿರಿಯಾದಲ್ಲಿ 14 ಮಂದಿಗೆ ಗಾಯ: ಡಮಾಸ್ಕಸ್ ಮತ್ತು ದೇಶದ ಇತರ ಕೆಲವೆಡೆ ಮಂಗಳವಾರ ಪೇಜರ್ ಸ್ಫೋಟದಿಂದ 14 ಮಂದಿ ಗಾಯಗೊಂಡಿದ್ದಾರೆ ಎಂದು ಸಿರಿಯಾದಲ್ಲಿರುವ ಮಾನವ ಹಕ್ಕುಗಳ ವೀಕ್ಷಕರೊಬ್ಬರು ತಿಳಿಸಿದ್ದಾರೆ.

ನಾವು ಭಾಗಿಯಾಗಿಲ್ಲ– ಅಮೆರಿಕ: 'ನನಗೆ ಗೊತ್ತಿರುವ ಮಾಹಿತಿ ಪ್ರಕಾರ, ಸ್ಫೋಟ ಘಟನೆಯಲ್ಲಿ ಅಮೆರಿಕ ಯಾವುದೇ ರೀತಿಯಲ್ಲೂ ಭಾಗಿಯಾಗಿಲ್ಲ' ಎಂದು ಅಮೆರಿಕ ವಾಯುಪಡೆಯ ಮೇಜರ್ ಜನರಲ್ ಪ್ಯಾಟ್ರಿಕ್ ರೈಡರ್ ಹೇಳಿದ್ದಾರೆ.



ಲೆಬನಾನ್‌ನ ಬೈರೂತ್‌ನಲ್ಲಿ ಮಂಗಳವಾರ ಪೇಜರ್‌ಗಳು ಸ್ಫೋಟಗೊಂಡ ಪರಿಣಾಮ ಗಾಯಗೊಂಡವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು —ಎಪಿ/ಪಿಟಿಐ ಚಿತ್ರ

'ಇಸ್ರೇಲ್ ಹೊಣೆ'

ಹಿಜ್ಬುಲ್ಲಾ ಬಂಡುಕೋರ ಸಂಘಟನೆಯು ಪೇಜರ್ ಸ್ಫೋಟಕ್ಕೆ ಇಸ್ರೇಲ್‌ಅನ್ನು ದೂಷಿಸಿದೆ. 'ಈ ಕ್ರಿಮಿನಲ್ ಕೃತ್ಯಕ್ಕೆ ನಮ್ಮ ಶತ್ರು ಇಸ್ರೇಲ್‌ಅನ್ನು ಸಂಪೂರ್ಣ ಹೊಣೆಗಾರರನ್ನಾಗಿ ಮಾಡುತ್ತೇವೆ. ಈ ಪಾಪದ ಕೆಲಸಕ್ಕೆ ಅವರು ತಕ್ಕ ಶಿಕ್ಷೆ ಅನುಭವಿಸಲಿದ್ದಾರೆ' ಎಂದು ಸಂಘಟನೆಯು ಪ್ರಕಟಣೆಯಲ್ಲಿ ತಿಳಿಸಿದೆ. ಸಂಘಟನೆಯ ಮುಖ್ಯಸ್ಥ ಹಸನ್ ನಸ್ರಲ್ಲಾ ಅವರು ಸುರಕ್ಷಿತವಾಗಿದ್ದಾರೆ ಎಂದು ಹೇಳಿದೆ.

'ಈ ಘಟನೆಯು ಇಸ್ರೇಲ್ ನಡೆಸಿದ ಭಯೋತ್ಪಾದನಾ ಕೃತ್ಯ' ಎಂದು ಪ್ಯಾಲೆಸ್ಟೀನ್ ಬಂಡುಕೋರ ಸಂಘಟನೆ ಹಮಾಸ್ ಆರೋಪಿಸಿದೆ.

ಪೇಜರ್ ಬಳಕೆ ಏಕೆ?



ಮೊಬೈಲ್ ಫೋನ್‌ಗಳು ಬರುವ ಮುನ್ನ ಪೇಜರ್‌ಅನ್ನು ಸಂವಹನ ಸಾಧನವಾಗಿ ಬಳಸಲಾಗುತ್ತಿತ್ತು. ಆದರೆ ಹಿಜ್ಬುಲ್ಲಾ ಬಂಡುಕೋರರು ಪರಸ್ಪರ ಸಂವಹನ ನಡೆಸಲು ಈಗಲೂ ಪೇಜರ್‌ಅನ್ನೇ ಬಳಸುತ್ತಿದ್ದಾರೆ. ಪೇಜರ್ ಮೂಲಕ ಕಳುಹಿಸುವ ಸಂದೇಶಗಳು ರಹಸ್ಯವಾಗಿ ಇರುತ್ತದೆ ಎಂಬುದೇ ಇದಕ್ಕೆ ಕಾರಣ.

ಈಗ ಸ್ಫೋಟಗೊಂಡಿರುವ ಪೇಜರ್‌ಗಳು ಹೊಸ ಮಾದರಿಯದ್ದಾಗಿದ್ದು, ಹಿಜ್ಬುಲ್ಲಾ ಸಂಘಟನೆಯು ಈಚೆಗಷ್ಟೇ ತರಿಸಿಕೊಂಡಿತ್ತು ಎಂದು ಮೂಲಗಳು ಹೇಳಿವೆ.

- ಸಂವಹನಕ್ಕೆ ಈಗಲೂ ಪೇಜರ್ ಬಳಸುವ ಹಿಜ್ಬುಲ್ಲಾ ಸದಸ್ಯರು
- ಸಿರಿಯಾದಲ್ಲಿ 14 ಮಂದಿಗೆ ಗಾಯ
- ಇರಾನ್‌ನ ರಾಯಭಾರಿಗೆ ಸಣ್ಣ ಪ್ರಮಾಣದ ಗಾಯ

ಚುಟುಕು ಸುದ್ದಿ


ಕುಂಬಳಗೋಡು ಇಂದು ವಿದ್ಯುತ್ ವ್ಯತ್ಯಯ



ಬೆಂಗಳೂರು: ಕುಂಬಳಗೋಡು ವಿದ್ಯುತ್ ವಿತರಣಾ ಉಪ ಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿ ನಡೆಯುತ್ತಿರುವುದರಿಂದ ಬುಧವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3ರವರೆಗೆ ಕೇಂದ್ರದ ವ್ಯಾಪ್ತಿಯಲ್ಲಿರುವ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಭೀಮನ ಕುಪ್ಪೆ ಗ್ರಾಮ, ವಿನಾಯಕ ನಗರ, ಫಿಶ್ ಫ್ಯಾಕ್ಟರಿ, ಗೇರುಪಾಳ್ಯ, ಒಂದನೇ ಮೈಲಿಕಲ್ಲು, ಅಂಚೆಪಾಳ್ಯ, ಪ್ರಾವಿಡೆಂಟ್, ಹೊಸ ಪಾಳ್ಯ, ಕಣಮಿಣಕಿ, ಕುಂಬಳಗೋಡು ಕೈಗಾರಿಕಾ ಪ್ರದೇಶ, ಕಂಬಿಪುರ, ಕಾರುಬೆಲೆ, ತಗಚಗುಪ್ಪೆ, ಪಿಂಟೋ ಬಾರೆ, ಗಡಿಮಾವು, ದೇವಗೆರೆ, ಗಂಗಸಂದ್ರ, ಆನೆಪಾಳ್ಯ, ದೊಡ್ಡಿಪಾಳ್ಯ, ಗೋಣಿಪುರ, ಗೊಲ್ಲಹಳ್ಳಿ, ತಿಪ್ಪೂರು, ಚಿನ್ನಕುರ್ಚಿ, ಬಾಬುಸಾಬ್ ಪಾಳ್ಯ, ದೊಡ್ಡಬೆಲೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಅಮೃತಾ ದೃಷ್ಟಿ ಕೇಂದ್ರ ಆರಂಭ



ಬೆಂಗಳೂರು: ಬಿಡದಿಯ ಕಣ್ಮಿಣಿಕೆ ಗ್ರಾಮದಲ್ಲಿರುವ ಅಮೃತಾ ಚಾರಿಟಬಲ್ ಆಸ್ಪತ್ರೆಯಲ್ಲಿ ಅತ್ಯಾಧುನಿಕ ಕಣ್ಣಿನ ಆರೈಕೆ ಕೇಂದ್ರವನ್ನು ಆರಂಭಿಸಲಾಗಿದೆ.

ಸ್ಥಳೀಯರಲ್ಲಿನ ದೃಷ್ಟಿ ಸಂಬಂಧಿತ ಸಮಸ್ಯೆಗಳಿಗೆ ಅಗತ್ಯ ಸೇವೆ ಮತ್ತು ಚಿಕಿತ್ಸೆಯನ್ನು ಒದಗಿಸುವ ಉದ್ದೇಶದಿಂದ ಆಸ್ಪತ್ರೆಯ ಕ್ಯಾಂಪಸ್‌ನಲ್ಲೇ 'ಅಮೃತಾ ದೃಷ್ಟಿ ಕೇಂದ್ರ'ವನ್ನು ಆರಂಭಿಸಲಾಗಿದೆ ಎಂದು ಸಂಸ್ಥೆಯು ತಿಳಿಸಿದೆ.

ಕೇಂದ್ರ ಉದ್ಘಾಟನಾ ಕಾರ್ಯಕ್ರಮದ ಭಾಗವಾಗಿ, ಉಚಿತ ಕಣ್ಣಿನ ತಪಾಸಣೆ ಶಿಬಿರವನ್ನು ಆಯೋಜಿಸಲಾಗಿತ್ತು.

ವಿಶ್ವಕರ್ಮ ಜಯಂತಿಯಲ್ಲಿ ಕಾಳಹಸ್ತೇಂದ್ರ ಸ್ವಾಮೀಜಿ ಕಿವಿಮಾತು

'ಸೌಲಭ್ಯಕ್ಕಾಗಿ ಸಂಘಟಿತರಾಗಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರದಲ್ಲಿ ವಿಶ್ವಕರ್ಮ ಸಮುದಾಯಕ್ಕೆ ಅಗತ್ಯವಾಗಿ ನೀಡುವಂಥ ಹಲವು ಸೌಲಭ್ಯಗಳಿವೆ. ಅವೆಲ್ಲವನ್ನೂ ನಾವು ಒಗ್ಗಟ್ಟಿನಿಂದ ಕೇಳಿ ಪಡೆಯಬೇಕು' ಎಂದು ಶಹಾಪುರ ವಿಶ್ವಕರ್ಮ ಏಕದಂಡಗಿ ಮಠದ ಕಾಳಹಸ್ತೇಂದ್ರ ಸ್ವಾಮೀಜಿ ಕರೆ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಂಗಳವಾರ ಆಯೋಜಿಸಿದ್ದ ವಿಶ್ವಕರ್ಮ ಜಯಂತಿ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ವಿಶ್ವಕರ್ಮರು ಎಲ್ಲರನ್ನೂ ಪ್ರೀತಿಸುತ್ತಾರೆ. ಎಲ್ಲರೂ ವಿಶ್ವಕರ್ಮರನ್ನು ಪ್ರೀತಿಸುತ್ತಾರೆ. ಆದರೆ ವಿಶ್ವಕರ್ಮರ ನಡುವೆಯೇ ಪ್ರೀತಿ ಕಾಣುತ್ತಿಲ್ಲ. ನಾವೆಲ್ಲರೂ ನಮ್ಮೆಲ್ಲರನ್ನೂ ಪ್ರೀತಿಸಬೇಕಿದೆ, ಸಂಘಟಿತರಾಗಬೇಕಿದೆ' ಎಂದರು.

'ನಮ್ಮ ಸಮುದಾಯದ ಹಲವು ನಾಯಕರು ಸೌಲಭ್ಯಗಳಿಗಾಗಿ ಬಿಡಿ ಬಿಡಿಯಾಗಿ ಹೋರಾಟ ಮಾಡುತ್ತಿದ್ದಾರೆ. ಎಲ್ಲರೂ ಸಂಘಟಿತರಾಗಿ ಒಗ್ಗಟ್ಟಿನಿಂದ ಹೋರಾಡಿದರೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ಪಡೆಯಲು ಸಾಧ್ಯವಿದೆ' ಎಂದು ಕಿವಿಮಾತು ಹೇಳಿದರು.

ರಾಜ್ಯ ಅಂಗವಿಕಲ ವ್ಯಕ್ತಿಗಳ ಅಧಿನಿಯಮದ ಮಾಜಿ ಆಯುಕ್ತ ಕೆ.ಎಸ್. ರಾಜಣ್ಣ, 'ವಿಶ್ವಕರ್ಮ ಸಮುದಾಯ, ಹೋರಾಟದ ಮೂಲಕ ರಾಜಕೀಯ ಶಕ್ತಿಯನ್ನು ಪಡೆಯಬೇಕಿದೆ. ಗುಂಪುಗಳಾಗಿ ಹೋರಾಡುವ ಬದಲು, ಎಲ್ಲ ಸೇರಿ ಒಕ್ಕೂಟದ ರೀತಿ ಸರ್ಕಾರದ ಸೌಲಭ್ಯಗಳಿಗಾಗಿ ಹೋರಾಡಬೇಕು' ಎಂದು ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ ಪ್ರತಿಪಾದಿಸಿದರು.

ಸಾಹಿತಿ ಚಂದ್ರಶೇಖರ ಕಂಬಾರ ಮಾತನಾಡಿದರು. ನಿವೃತ್ತ ಪ್ರಾಂಶುಪಾಲ ವೃಷಭೇಂದ್ರಾಚಾರ್ ಅರ್ಕಸಾಲಿ ವಿಶ್ವಕರ್ಮರ ಕುರಿತು ಉಪನ್ಯಾಸ ನೀಡಿದರು. ನಿವೃತ್ತ ಐಎಎಸ್ ಅಧಿಕಾರಿ ಕೆ.ಎಸ್.ಪ್ರಭಾಕರ್, 'ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಎಂ.ಎನ್.ಅಜಯ್ ನಾಗಭೂಷಣ್, ನಿರ್ದೇಶಕಿ ಧರಣಿದೇವಿ ಮಾಲಗತ್ತಿ, ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಕಾರ್ಯಕ್ರಮದಲ್ಲಿ ಹಾಜರಿದ್ದರು.

'ಕಾಂಗ್ರೆಸ್ ನೀಡಿರುವ ಅನುದಾನ ಕಡಿಮೆ'



ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ ಮಾತನಾಡಿ, 'ಹಿಂದಿನ ಸರ್ಕಾರಗಳು ವಿಶ್ವಕರ್ಮ ಅಭಿವೃದ್ಧಿ ನಿಗಮಕ್ಕೆ ಅನುದಾನ ನೀಡಿದ್ದವು. ಕಾಂಗ್ರೆಸ್ ನೇತೃತ್ವದ ಈಗಿನ ಸರ್ಕಾರ ನೀಡಿರುವ ಅನುದಾನ ಕಡಿಮೆ. ಯಾವುದೇ ಪಕ್ಷದ ನೇತೃತ್ವದ ಸರ್ಕಾರ ಬರಲಿ, ಆರ್ಥಿಕ, ಸಾಮಾಜಿಕವಾಗಿ ಹಿಂದುಳಿದಿರುವ ವಿಶ್ವಕರ್ಮ ಸಮುದಾಯಕ್ಕೆ ಸಿಗಬೇಕಾದ ಸೌಲಭ್ಯಗಳನ್ನು ಆದ್ಯತೆ ಮೇಲೆ ನೀಡಬೇಕು' ಎಂದರು.

'ಹಿಂದಿನ ಸರ್ಕಾರ ಜ್ಯುವೆಲರಿ ಪಾರ್ಕ್ ಮಾಡುತ್ತೇವೆಂದು ಘೋಷಿಸಿತ್ತು. ಏನೂ ಮಾಡಿರಲಿಲ್ಲ. ಈ ಪಾರ್ಕ್ ನಿರ್ಮಾಣವಾದರೆ, ವಿಶ್ವಕರ್ಮ ಸಮುದಾಯದ 20 ಸಾವಿರ ಮಂದಿಗೆ ಉದ್ಯೋಗ ನೀಡಬಹುದು. ಇದನ್ನು ಸಾಕಾರಗೊಳಿಸಲು ಹೋರಾಟ ಆರಂಭಿಸಿದ್ದೇನೆ' ಎಂದು ತಿಳಿಸಿದರು.

12 ಗಂಟೆ ಮೈದಾನ ಹೊರಗಿದ್ದ ಶಂಕಿತ

ಎಪಿ/ರಾಯಿಟರ್ಸ್/ಎಎಫ್‌ಪಿ

ವಾಷಿಂಗ್ಟನ್/ವೆಸ್ಟ್ ಪಾಮ್ ಬೀಚ್(ಫ್ಲಾರಿಡಾ): ಅಮೆರಿಕದ ಮಾಜಿ ಅಧ್ಯಕ್ಷ, ಅಧ್ಯಕ್ಷೀಯ ಚುನಾವಣೆಯ ರಿಪಬ್ಲಿಕನ್ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಅವರ ಹತ್ಯೆಗೆ ಯತ್ನಿಸಿದ್ದ ಶಂಕಿತ ವ್ಯಕ್ತಿ, ಘಟನೆಗೂ ಮೊದಲು 12 ಗಂಟೆಗಳ ಕಾಲ ಗಾಲ್ಫ್ ಮೈದಾನದ ಹೊರಗೆ ಠಿಕಾಣಿ ಹೂಡಿದ್ದ ಎಂದು ಕೋರ್ಟ್‌ಗೆ ಸೋಮವಾರ ಸಲ್ಲಿಕೆಯಾಗಿರುವ ದಾಖಲೆಗಳು ಹೇಳುತ್ತವೆ.

ಹತ್ಯೆ ಯತ್ನ ಪ್ರಕರಣದಲ್ಲಿ ಬಂಧಿತನಾಗಿರುವ ರ್‍ಯಾನ್ ವೆಸ್ಲಿ ರೂತ್, ಆಹಾರ ಮತ್ತು ರೈಫಲ್‌ನೊಂದಿಗೆ ಮೈದಾನದ ಹೊರಗೆ ಟ್ರಂಪ್ ಅವರಿಗಾಗಿ ಕಾಯುತ್ತಿದ್ದ ಎಂದೂ ಈ ದಾಖಲೆಗಳು ಹೇಳುತ್ತವೆ.

ಈ ಘಟನೆಗೆ ಸಂಬಂಧಿಸಿ, ವೆಸ್ಟ್ ಪಾಮ್ ಬೀಚ್‌ನ ನ್ಯಾಯಾಲಯದಲ್ಲಿ ನಡೆದ ವಿಚಾರಣೆಗೆ ರೂತ್ ಹಾಜರಾಗಿದ್ದರು.

ಒತ್ತಡ: ಟ್ರಂಪ್ ಅವರ ಹತ್ಯೆಗೆ ನಡೆದ ಯತ್ನವು, ಅಮೆರಿಕದ ರಾಜಕೀಯ ಮುಖಂಡರ ರಕ್ಷಣೆಯ ಹೊಣೆ ಹೊತ್ತಿರುವ ಸೀಕ್ರೆಟ್ ಸರ್ವಿಸ್ ಸಂಸ್ಥೆ ಎದುರಿಸುತ್ತಿರುವ ಒತ್ತಡದ ಕುರಿತು ಚರ್ಚೆಯನ್ನು ಹುಟ್ಟು ಹಾಕಿದೆ.

ಸಂಸ್ಥೆಯಲ್ಲಿ ಸದ್ಯ 400 ಸಿಬ್ಬಂದಿ ಇದ್ದಾರೆ. ಮಂಜೂರಾದ ಹುದ್ದೆಗಳಿಗಿಂತ ಕಡಿಮೆ ಸಿಬ್ಬಂದಿಯೊಂದಿಗೆ ಸಂಸ್ಥೆ ಕಾರ್ಯನಿರ್ವಹಿಸುತ್ತಿದೆ ಎಂದು ಮೂಲಗಳು ಹೇಳಿವೆ.

ಟ್ರಂಪ್ ಹತ್ಯೆ: ಇರಾನ್‌ಗೆ ಒತ್ತಾಯಿಸಿದ್ದ ಶಂಕಿತ

ಡೊನಾಲ್ಡ್ ಟ್ರಂಪ್ ಅವರ ಹತ್ಯೆ ಯತ್ನ ಪ್ರಕರಣದಲ್ಲಿ ಬಂಧಿತನಾಗಿರುವ ರ್‍ಯಾನ್ ವೆಸ್ಲಿ ರೂತ್, ಟ್ರಂಪ್ ಅವರನ್ನು ಕೊಲ್ಲುವಂತೆ ಇರಾನ್‌ಗೆ ಒತ್ತಾಯಿಸಿದ್ದರು!

ಅವರು ರಚಿಸಿರುವ 'ಉಕ್ರೇನ್ಸ್ ಅನ್‌ವಿನ್ನೇಬಲ್ ವಾರ್' ಎಂಬ ಕೃತಿಯಲ್ಲಿ ರೂತ್ ಈ ಬಗ್ಗೆ ಬರೆದಿದ್ದಾರೆ. ಕಳೆದ ವರ್ಷ, ಸ್ವತಃ ಅವರೇ ಈ ಪುಸ್ತಕವನ್ನು ಪ್ರಕಟಿಸಿದ್ದಾರೆ.

2021ರ ಜನವರಿ 6ರಂದು ನಡೆದಿದ್ದ ಗಲಭೆ ಹಾಗೂ ಇರಾನ್ ಅಣ್ವಸ್ತ್ರ ಕುರಿತು ಇರಾನ್ ಮೇಲೆ ನಿರ್ಬಂಧ ಹೇರಿದ್ದು ದೊಡ್ಡ ಪ್ರಮಾದ ಎಂದು ತಮ್ಮ ಕೃತಿಯಲ್ಲಿ ಉಲ್ಲೇಖಿಸಿರುವ ರೂತ್, ಈ ವಿಚಾರವಾಗಿ ಡೊನಾಲ್ಡ್ ಟ್ರಂಪ್ ಅವರನ್ನು ಒಬ್ಬ 'ಮೂರ್ಖ' ಹಾಗೂ 'ವಿದೂಷಕ' ಎಂಬುದಾಗಿ ಟೀಕಿಸಿದ್ದಾರೆ.

'ಟ್ರಂಪ್ ಅವರನ್ನು ಕೊಲ್ಲಲು ನೀವು ಸ್ವತಂತ್ರರು' ಎಂದು ಇರಾನ್ ಉದ್ದೇಶಿಸಿ ಹೇಳಿದ್ದಾರೆ.

ರಷ್ಯಾ ವಿರುದ್ಧ ಹೋರಾಡುತ್ತಿರುವ ಉಕ್ರೇನ್‌ಗಾಗಿ ಯೋಧರನ್ನು ನೇಮಕ ಮಾಡಲು ಯತ್ನಿಸಿದ್ದಾಗಿಯೂ ಅವರು ತಮ್ಮ ಕೃತಿಯಲ್ಲಿ ಬರೆದುಕೊಂಡಿದ್ದಾರೆ.



ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯದ 2024–25ನೇ ಸಾಲಿನ ಮೊದಲ ವರ್ಷದ ಬಿ.ಇ. ತರಗತಿಗಳಿಗೆ ವಿದ್ಯಾರ್ಥಿಗಳ ಪರಿಚಯ ಕಾರ್ಯಕ್ರಮದಲ್ಲಿ ರಾಜ್ಯ ಒಕ್ಕಲಿಗರ ಸಂಘದ ಖಜಾಂಚಿ ಎಂ.ಎಸ್ ಉಮಾಪತಿ, ಉಪಾಧ್ಯಕ್ಷ ಆರ್ ಪ್ರಕಾಶ್ ಮತ್ತು ಸಿಬ್ಬಂದಿ ಹಾಜರಿದ್ದರು

'ಉತ್ತಮ ವ್ಯಕ್ತಿತ್ವ ರೂಪಿಸುವ ಶಿಕ್ಷಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿದ್ಯಾರ್ಥಿ ದಿಸೆಯಲ್ಲಿ ಪಡೆಯುವ ಜ್ಞಾನವು ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಮುಖ್ಯವಾಗಿರುತ್ತದೆ. ಹೀಗಾಗಿ ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಶಿಸ್ತು ಹಾಗೂ ಉತ್ತಮ ನಡವಳಿಕೆಗಳನ್ನು ಅಳವಡಿಸಿಕೊಳ್ಳಬೇಕು' ಎಂದು ರಾಜ್ಯ ಒಕ್ಕಲಿಗರ ಸಂಘದ ಖಜಾಂಚಿ ಎಂ.ಎಸ್. ಉಮಾಪತಿ ತಿಳಿಸಿದರು.

ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯದ 2024-25 ಸಾಲಿನ ಮೊದಲ ವರ್ಷದ ಬಿ.ಇ. ತರಗತಿಗಳ ವಿದ್ಯಾರ್ಥಿಗಳ ಪರಿಚಯ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ವಿದ್ಯಾರ್ಥಿಗಳು ತಮ್ಮ ಪೋಷಕರ ಕನಸನ್ನು ನನಸು ಮಾಡಲು ಶ್ರಮ ವಹಿಸಿ ಓದಬೇಕು' ಎಂದು ಸಲಹೆ ನೀಡಿದರು.


ಎಬಿಬಿ ಕಂಪನಿ ಉಪಾಧ್ಯಕ್ಷ ಕರ್ನಲ್ ಎಸ್.ಆರ್.ಕಿರಣ್, 'ಶೈಕ್ಷಣಿಕ ಜೀವನದಲ್ಲಿ ವಿದ್ಯಾರ್ಥಿಗಳು ಹೊಸತನದ ಅನ್ವೇಷಣೆಯಲ್ಲಿ ತೊಡಗಿಸಿಕೊಳ್ಳಬೇಕು' ಎಂದು ಕಿವಿ ಮಾತು ಹೇಳಿದರು. ವಿದ್ಯಾರ್ಥಿಗಳು ಅನುಸರಿಸಬೇಕಾದ ಶಿಸ್ತು, ನಾಯಕತ್ವ, ಜೀವನದ ಮೌಲ್ಯಗಳ ಬಗ್ಗೆ ಮನವರಿಕೆ ಮಾಡಿಕೊಟ್ಟರು.

ಡಿಟಿಐಸಿಐನ ಉಪ ಪ್ರಧಾನ ವ್ಯವಸ್ಥಾಪಕ ಜಯಂತ್ ದೇಶಪಾಂಡೆ, ವಾಹನ ಉದ್ಯಮದಲ್ಲಿ ಆಗುತ್ತಿರುವ ಬೆಳವಣಿಗೆಗಳ ಬಗ್ಗೆ ಉಪಯುಕ್ತ ಮಾಹಿತಿ ನೀಡಿದರು.

ಕಲಾವಿದೆ ಕಲ್ಯಾಣಿ ಮೆನನ್, 'ವಿದ್ಯಾರ್ಥಿಗಳು ಆರೋಗ್ಯದ ಬಗ್ಗೆಯೂ ಗಮನ ಹರಿಸಿ, ವೃತ್ತಿ ಜೀವನದಲ್ಲಿ ಕಲಾತ್ಮಕ ಅಭಿವ್ಯಕ್ತಿಗೂ ಆದ್ಯತೆ ನೀಡಬೇಕು' ಎಂದು ಹೇಳಿದರು.

ಬಿಐಟಿ ಕಾಲೇಜಿನ ಪ್ರಾಚಾರ್ಯ ಎಂ.ಯು ಅಶ್ವತ್ಥ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಪಾಕಿಸ್ತಾನ ನುಸುಳುಕೋರನ ಗುಂಡಿಕ್ಕಿ ಹತ್ಯೆ



ಅಮೃತಸರ (ಪಿಟಿಐ): ಪಂಜಾಬ್‌ನಲ್ಲಿನ ಭಾರತ–ಪಾಕಿಸ್ತಾನ ಅಂತರರಾಷ್ಟ್ರೀಯ ಗಡಿಯಲ್ಲಿ ಭಾರತಕ್ಕೆ ನುಸುಳುತ್ತಿದ್ದ ಪಾಕಿಸ್ತಾನದ ನುಸುಳುಕೋರರನ್ನು ಬಿಎಸ್‌ಎಫ್ ಪಡೆ ಗುಂಡಿಕ್ಕಿ ಹತ್ಯೆಗೈದಿದೆ.

ಅಮೃತಸರ ಜಿಲ್ಲೆಯ ರತನ್ ಖುರ್ದ್ ಬಳಿ ಸೋಮವಾರ ರಾತ್ರಿ ಅಕ್ರಮವಾಗಿ ನುಸುಳುತ್ತಿದ್ದ ವ್ಯಕ್ತಿಯನ್ನು ಯೋಧರು ಗುಂಡಿಕ್ಕಿ ಹತ್ಯೆಗೈದಿದ್ದಾರೆ ಎಂದು ಬಿಎಸ್‌ಎಫ್ ವಕ್ತಾರರು ಮಂಗಳವಾರ ತಿಳಿಸಿದ್ದಾರೆ.

'ಭಾರತದ ಗಡಿಯೊಳಗೆ ಅಕ್ರಮವಾಗಿ ಪ್ರವೇಶಿಸುತ್ತಿದ್ದ ಅನುಮಾನದ ಮೇರೆಗೆ ವ್ಯಕ್ತಿಯೊಬ್ಬನನ್ನು ಬಿಎಸ್‌ಎಫ್ ಯೋಧರು ಪತ್ತೆ ಹಚ್ಚಿದ್ದರು. ಆತನಿಗೆ ಎಚ್ಚರಿಕೆ ಕೂಡ ನೀಡಿದ್ದರು. ಆದಾಗ್ಯೂ ಆತ ನುಸುಳುವುದನ್ನು ಮುಂದುವರೆಸಿದ್ದ. ಆಗ ಬಿಎಸ್‌ಎಫ್ ಯೋಧರು ಆತನ ಮೇಲೆ ಗುಂಡು ಹಾರಿಸಿದ್ದಾರೆ. ಆತನ ಬಳಿ ಪಾಕಿಸ್ತಾನದ 270 ರೂಪಾಯಿ ಹಾಗೂ ಅಲ್ಲಿನ 10 ರೂಪಾಯಿ ಮುಖಬೆಲೆಯ ಹರಿದ ನೋಟಿನ ಭಾಗ ಪತ್ತೆಯಾಗಿದೆ. ಫರಿಂಡಾ ಠಾಣೆಗೆ ಮೃತದೇಹವನ್ನು ಹಸ್ತಾಂತರಿಸಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

ಚಿತ್ರಾವಳಿ



ನಗರದಲ್ಲಿ ಆಲೂರು ನಾಗಪ್ಪ ಪ್ರತಿಷ್ಠಾನ ಭಾನುವಾರ ಆಯೋಜಿಸಿದ್ದ ನುಡಿ–ಗಾನ ನಮನ ಕಾರ್ಯಕ್ರಮದಲ್ಲಿ ಪ್ರತಿಷ್ಠಾನದ ಅಧ್ಯಕ್ಷೆ ಅಲುಮೇಲಮ್ಮ, ಗಾಯಕ ವೇಮಗಲ್ ನಾರಾಯಣಸ್ವಾಮಿ, ಕನ್ನಡವೇ ಸತ್ಯ ರಂಗಣ್ಣ, ಸಾಹಿತಿ ದೊಡ್ಡರಂಗೇಗೌಡ, ಕರ್ನಾಟಕ ರಕ್ಷಣಾ ವೇದಿಕೆಯ ಅಧ್ಯಕ್ಷ ಟಿ.ಎ.ನಾರಾಯಣಗೌಡ, ದಿವ್ಯಾ ಆಲೂರು ಮತ್ತು ಸಾಯಿ ಪ್ರಕಾಶ್ ಆಲೂರು ಅವರು ಆಲೂರು ನಾಗಪ್ಪ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ



ಸಿವಿಜಿ ಪಬ್ಲಿಕೇಷನ್ಸ್, ಹರಿವು ಬುಕ್ಸ್ ಹಾಗೂ ಸುಗಮ ಸಂಗೀತ ಪರಿಷತ್ತು ಜಂಟಿಯಾಗಿ ನಗರದಲ್ಲಿ ಭಾನುವಾರ ಆಯೋಜಿಸಿದ್ದ 'ಬಿಆರ್‌ಎಲ್–78' ಕಾರ್ಯಕ್ರಮದಲ್ಲಿ ಬಿ.ಆರ್. ಲಕ್ಷ್ಮಣರಾವ್ ಅವರ (ಎಡದಿಂದ ಎರಡನೆಯವರು) 'ಬಿಡದ ಭುವಿಯ ಮಾಯೆ' ಹಾಗೂ 'ಮೂರು ನಗೆ ನಾಟಕಗಳು', ಸುಮತಿ ಕೃಷ್ಣಮೂರ್ತಿ ಅವರ (ಬಲದಿಂದ ಮೂರನೆಯವರು) 'ವೈಶಾಖದ ಮಳೆ' ಹಾಗೂ ಕೆ. ಸತ್ಯನಾರಾಯಣ ಅವರ (ಬಲದಿಂದ ಎರಡನೆಯವರು) 'ವರ್ಣಪಟಲ' ಕೃತಿ ಬಿಡುಗಡೆಯಾಯಿತು. (ಎಡದಿಂದ) ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್.ಪುಷ್ಪ, ವಿಮರ್ಶಕ ನರಹಳ್ಳಿ ಬಾಲಸುಬ್ರಹ್ಮಣ್ಯ, ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ ವೈ.ಕೆ. ಮುದ್ದುಕೃಷ್ಣ, ವಿಮರ್ಶಕ ಎಚ್.ಎಸ್. ಸತ್ಯನಾರಾಯಣ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು



ಪದವಿ ಪ್ರದಾನ ಸಮಾರಂಭ: ಮುಖ್ಯ ಅತಿಥಿ: ಎನ್. ಲಕ್ಷ್ಮೀನಾರಾಯಣ, ಅಧ್ಯಕ್ಷತೆ: ಬಿ.ಎಂ. ದೇವರಾಜಪ್ಪ, ಗೌರವ ಅತಿಥಿ: ಎನ್.ಸಿ. ಇಂದಿರಾ, ಸಂತೋಷ್ ಡಿ., ರಾಜೇಶ್ ಇ.ಬಿ., ಆಯೋಜನೆ ಹಾಗೂ ಸ್ಥಳ: ಕಾವೇರಿ ಬಿ.ಎಡ್ ಕಾಲೇಜು, ಶಂಕರ ನಗರ, ಬೆಳಿಗ್ಗೆ 9

ಮಕ್ಕಳ ಹಕ್ಕುಗಳ ಗ್ರಾಮಸಭೆ: ಉದ್ಘಾಟನೆ: ಅರುಂಧತಿ ಚಂದ್ರಶೇಖರ್, ಮುಖ್ಯ ಅತಿಥಿಗಳು: ವೆಂಕಟೇಶ್, ಗುರುಪ್ರಸಾದ್, ಆಯೋಜನೆ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ , ಎಡುಕೋ, ಚೈಲ್ಡ್ ರೈಟ್ಸ್ ಟ್ರಸ್ಟ್, ಸ್ಥಳ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಆಯುಕ್ತಾಲಯ, ಕೆಂಪೇಗೌಡ ರಸ್ತೆ, ಗಾಂಧಿನಗರ, ಬೆಳಿಗ್ಗೆ 10

ಸರ್.ಎಂ. ವಿಶ್ವೇಶ್ವರಯ್ಯ ಜಯಂತಿ ಪ್ರಯುಕ್ತ ಎಂಜಿನಿಯರ್ ದಿನಾಚರಣೆ ಹಾಗೂ ಸರ್.ಎಂ. ವಿಶ್ವೇಶ್ವರಯ್ಯ ಪ್ರಶಸ್ತಿ ಪ್ರದಾನ ಸಮಾರಂಭ:



ಉದ್ಘಾಟನೆ: ತುಷಾರ್ ಗಿರಿನಾಥ್, ಮುಖ್ಯ ಅತಿಥಿಗಳು: ಅವಿನಾಶ್ ಮೆನನ್ ರಾಜೇಂದ್ರನ್, ಹರೀಶ್ ಕುಮಾರ್ ಕೆ., ಮಂಜುನಾಥಸ್ವಾಮಿ, ಬಿ.ಎಸ್. ಪ್ರಹ್ಲಾದ್, ಆಯೋಜನೆ: ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ನೌಕರರ ಭವನದ ಬಸವ ಸಭಾಂಗಣ, ಬಿಬಿಎಂಪಿ ಕೇಂದ್ರ ಕಚೇರಿ, ನರಸಿಂಹರಾಜ ಚೌಕ, ಬೆಳಿಗ್ಗೆ 11.30

'ಜೋಗಿಲ ಜಂಗಮ ಗೀತೆಗಳು': ಜೋಗಿಲ ಸಿದ್ದರಾಜು ಮತ್ತು ತಂಡ, ಮುಖ್ಯ ಅತಿಥಿ: ಡಾ. ಗಿರೀಶ್ ಮೂಡ್, ಉಪಸ್ಥಿತಿ: ಕೆ. ವೆಂಕಟೇಶ್, ಬಿ.ಕೆ. ಶಿವರಾಂ, ಆಯೋಜನೆ: ಕಾಡುಮಲ್ಲೇಶ್ವರ ಗೆಳೆಯರ ಬಳಗ, ಸ್ಥಳ: ಕಾಡು ಮಲ್ಲೇಶ್ವರ ದೇವಾಲಯ ಬಯಲು ರಂಗಮಂದಿರ, ಮಲ್ಲೇಶ್ವರ, ಸಂಜೆ 6.30

ಗಾಯನ ಮತ್ತು ವ್ಯಾಖ್ಯಾನ: ಕೃಷ್ಣಾಚಾರ್ ಕೆಂಪದಾಲಹಳ್ಳಿ ದಂಪತಿ, ಆಯೋಜನೆ:ಶ್ರೀ ರಾಘವೇಂದ್ರ ಸೇವಾ ಸಮಿತಿ, ಸ್ಥಳ:ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in ಮೇಲ್ ಮಾಡಿ

ಬನ್ನೇರುಘಟ್ಟ ಪ್ರಕೃತಿ ಶಿಬಿರ ವೀಕ್ಷಿಸಿದ 100 ವಿದ್ಯಾರ್ಥಿಗಳು

ಸರ್ಕಾರಿ ಶಾಲಾ ಮಕ್ಕಳಿಗೆ 'ವನ ದರ್ಶನ'

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ನೆಲಮಂಗಲದ ಉಪ ವಲಯ ಅರಣ್ಯ ವಿಭಾಗದಿಂದ 'ಚಿಣ್ಣರ ವನದರ್ಶನ' ಕಾರ್ಯಕ್ರಮದ ಅಡಿ ಸೋಂಪುರ ಹೋಬಳಿಯ ಹೊನ್ನೇನಹಳ್ಳಿ, ಅವ್ವೇರಹಳ್ಳಿ ಹಾಗೂ ಬರಗೇನಹಳ್ಳಿ ಸರ್ಕಾರಿ ಶಾಲೆಗಳ 100 ಮಕ್ಕಳನ್ನು ಬನ್ನೇರುಘಟ್ಟ ಪ್ರಕೃತಿ ಶಿಬಿರಕ್ಕೆ ಕರೆದೊಯ್ದು, ವನ, ವನ್ಯಜೀವಿ ಮತ್ತು ಪರಿಸರ ಸಂರಕ್ಷಣೆ ಕುರಿತು ಅರಿವು ಮೂಡಿಸಲಾಯಿತು.

ಸೆಪ್ಟೆಂಬರ್ 11ರಿಂದ 14ರವರೆಗೆ ನಡೆದ ಪ್ರವಾಸ ಕಾರ್ಯಕ್ರಮದಲ್ಲಿ, ಮೊದಲ ಹಂತದಲ್ಲಿ ಹೊನ್ನೇನಹಳ್ಳಿ ಶಾಲೆಯ 50 ಮಕ್ಕಳು, ಎರಡನೇ ಹಂತದಲ್ಲಿ ಅವ್ವೇರಹಳ್ಳಿ ಮತ್ತು ಬರಗೇನಹಳ್ಳಿ ಶಾಲೆಗಳ 50 ಮಕ್ಕಳನ್ನು ಕರೆದುಕೊಂಡು ಹೋಗಲಾಗಿತ್ತು. 4 ರಿಂದ 7ನೇ ತರಗತಿ ಮಕ್ಕಳನ್ನು ಈ ಪ್ರವಾಸಕ್ಕೆ ಆಯ್ಕೆ ಮಾಡಿಕೊಳ್ಳಲಾಗಿತ್ತು.

ಮಕ್ಕಳು ಪ್ರಕೃತಿ ಶಿಬಿರಕ್ಕೆ ಹೋಗುವ ಮಾರ್ಗದಲ್ಲಿ ವಲಯ ಅರಣ್ಯಾಧಿಕಾರಿ ಕಚೇರಿ ಹಾಗೂ ನರ್ಸರಿಗೆ ಭೇಟಿ ನೀಡಿ, ಅಲ್ಲಿನ ಚಟುವಟಿಕೆಗಳ ಬಗ್ಗೆ ತಿಳಿದುಕೊಂಡರು. ಪ್ರಾಣಿ ಸಂಗ್ರಹಾಲಯ, ಚಿಟ್ಟೆ ಪಾರ್ಕ್, ಕ್ಯಾಂಪ್ ವೀಕ್ಷಣೆ ಜೊತೆಗೆ ಸಫಾರಿ, ಕಿರು ಚಾರಣದ ಮೂಲಕ ಅರಣ್ಯ, ಪಕ್ಷಿ, ಪ್ರಾಣಿಗಳ ಬಗ್ಗೆ ಮಾಹಿತಿ ನೀಡಲಾಯಿತು.



ಪ್ರಕೃತಿ ಶಿಬಿರದಲ್ಲಿ ಮಕ್ಕಳಿಗೆ ಮಾಹಿತಿ ನೀಡಿದ ಸಂಪನ್ಮೂಲ ವ್ಯಕ್ತಿಗಳು

> **ಪಠ್ಯಪುಸ್ತಕದಲ್ಲಿನ ಓದಿಗಿಂತ ಪ್ರಕೃತಿ ಶಿಬಿರದಲ್ಲಿ ನೇರವಾಗಿ ತಿಳಿದುಕೊಂಡ ಮಾಹಿತಿ ಮಕ್ಕಳ ಮನಸ್ಸಿಗೆ ನಾಟಿತು**
> **ದೀಪು,** ಶಿಕ್ಷಕರು, ಹೊನ್ನೇನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ

> **ಸಾಕ್ಷ್ಯಚಿತ್ರ, ಅರಣ್ಯ ನಡಿಗೆ, ಪಕ್ಷಿ ವೀಕ್ಷಣೆ, ಸಫಾರಿಯಿಂದ ಸಾಕಷ್ಟು ಮಾಹಿತಿಗಳನ್ನು ತಿಳಿದುಕೊಂಡೆ**
> **ದಿವ್ಯಾ**
> 7ನೇ ತರಗತಿ, ಹೊನ್ನೇನಹಳ್ಳಿ

> **ಹಲವು ಪ್ರಭೇದದ ಪ್ರಾಣಿ, ಪಕ್ಷಿಗಳನ್ನು ನೇರವಾಗಿ ನೋಡುವ ಅವಕಾಶ ಸಿಕ್ಕಿತು. ಇದೊಂದು ಉತ್ತಮ ಅವಕಾಶ**
> **ಹಂಸಿಕಾ ಕುಮಾರಿ**
> 7ನೇ ತರಗತಿ, ಬರಗೇನಹಳ್ಳಿ ಶಾಲೆ

ಪ್ರಕೃತಿ ಸಂಬಂಧಿತ ಆಟಗಳಲ್ಲಿ ಪಾಲ್ಗೊಂಡ ಮಕ್ಕಳಿಗೆ, ರಸಪ್ರಶ್ನೆ, ಅಭಿನಯ ಮತ್ತು ನಾಟಕಗಳ ಮೂಲಕವೂ ಅರಣ್ಯ ಮತ್ತು ಪರಿಸರ ಸಂರಕ್ಷಣೆ ಕುರಿತು ಅರಿವು ಮೂಡಿಸಲಾಯಿತು.

'ಸಂಪನ್ಮೂಲ ವ್ಯಕ್ತಿ ಯಶವಂತ್ ಅವರು ವನ್ಯಜೀವಿ, ಅರಣ್ಯ ಹಾಗೂ ಪರಿಸರದ ಬಗ್ಗೆ ಉಪನ್ಯಾಸ ನೀಡಿದರು. ಮಕ್ಕಳು ಅರಣ್ಯ ಕುರಿತು ಸಾಕ್ಷ ಚಿತ್ರ ವೀಕ್ಷಿಸಿದರು. ಎಲ್ಲರೂ ಖುಷಿಯಿಂದ ಪಾಲ್ಗೊಂಡರು' ಎಂದು ನೆಲಮಂಗಲ ಪ್ರಾದೇಶಿಕ ಉಪ ವಲಯ ಅರಣ್ಯಾಧಿಕಾರಿ ಮಂಜುನಾಥ್ ಮಾಹಿತಿ ನೀಡಿದರು.

ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ ಮಕ್ಕಳು ಸೇರಿ ಐವರ ಸಾವು

ಫಿರೋಜಾಬಾದ್ (ಪಿಟಿಐ): ಇಲ್ಲಿನ ಪಟಾಕಿ ಕಾರ್ಖಾನೆ ಮತ್ತು ಗೋದಾಮಿನಲ್ಲಿ ಸಂಭವಿಸಿದ ಸ್ಫೋಟದಿಂದಾಗಿ ಇಬ್ಬರು ಮಕ್ಕಳು ಮತ್ತು ಮಹಿಳೆ ಸೇರಿ ಐವರು ಮೃತಪಟ್ಟಿದ್ದಾರೆ.


ಸೋಮವಾರ ರಾತ್ರಿ ಶಿಕೋಹಾಬಾದ್ ಪೊಲೀಸ್ ಠಾಣೆ ವ್ಯಾಪ್ತಿಯ ನೌಶೇರಾ ಪ್ರದೇಶದ ಕಾರ್ಖಾನೆಯಲ್ಲಿ ಸಂಭವಿಸಿದ ಸ್ಫೋಟದಲ್ಲಿ 11 ಜನರು ಗಾಯಗೊಂಡಿದ್ದಾರೆ. ಕಾರ್ಖಾನೆ ಸಮೀಪದ ಹತ್ತಾರು ಮನೆಗಳಿಗೂ ಹಾನಿಯಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಂಗಳವಾರ ತಿಳಿಸಿದ್ದಾರೆ.

ಘಟನೆಯಲ್ಲಿ ಮೀರಾದೇವಿ (45), ಅಮನ್ ಕುಶ್ವಾಹ (17), ಗೌತಮ್ ಕುಶ್ವಾಹ (16), ಕುಮಾರಿ ಇಚ್ಛಾ (4) ಹಾಗೂ ಅಭಿನಯೆ (2) ಮೃತಪಟ್ಟಿದ್ದಾರೆ. ಎರಡೂ ಮಕ್ಕಳು ಒಡಹುಟ್ಟಿದವರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮರಣೋತ್ತರ ಪರೀಕ್ಷೆಯ ನಂತರ ಮೃತ ದೇಹಗಳನ್ನು ಅವರ ಸಂಬಂಧಿಕರಿಗೆ ಹಸ್ತಾಂತರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸ್ಥಳೀಯ ನಿವಾಸಿಗಳ ಪ್ರಕಾರ, ಸೋಮವಾರ ರಾತ್ರಿ 10.30ರ ಸುಮಾರಿಗೆ ಪಟಾಕಿ ಗೋದಾಮಿನಲ್ಲಿ ಸ್ಫೋಟ ಸಂಭವಿಸಿದೆ. ಇದರಿಂದಾಗಿ ಕಟ್ಟಡದ ಗೋಡೆಗಳು ಕುಸಿದು ಏಳು ಜನರು ಅವಶೇಷಗಳಡಿಯಲ್ಲಿ ಸಮಾಧಿಯಾಗಿದ್ದಾರೆ.

ತಂತ್ರಜ್ಞಾನ



ಬಾಹ್ಯಾಕಾಶಯಾನದಲ್ಲಿ ಹೊಸ ಶಕೆ



ಬಾಹ್ಯಾಕಾಶ ನಡಿಗೆಗಾಗಿ ಬಾಹ್ಯಾಕಾಶ ಕೋಶದಿಂದ ಜೇರ್ಡ್ ಐಸಾಕ್‌ಮನ್ ಹೊರ ಬಂದ ಸಂದರ್ಭದ ಚಿತ್ರ



ಚಾಟ್‌ಬಾಟ್ ಕೇಳಿದ್ದೆಲ್ಲವನ್ನೂ ನೀಡುತ್ತವೆಯೇ?

ಇ.ಎಸ್. ಸುಧೀಂದ್ರ ಪ್ರಸಾದ್

ರಸಗೊಬ್ಬರ ಬಳಸಿ ಮನೆಯಲ್ಲೇ ಬಾಂಬ್ ತಯಾರಿಸುವುದು ಹೇಗೆ...? ಹೀಗೆಂದು ಚಾಟ್‌ಜಿಪಿಟಿ ಎಂಬ ಕೃತಕ ಬುದ್ಧಿಮತ್ತೆ ಆಧಾರಿತ ಚಾಟ್‌ಬಾಟ್ ಅನ್ನು ಕೇಳಿದವನಿಗೆ ಉತ್ತರ ನೀಡಲು ನಿರಾಕರಿಸಿರುವ ಆ್ಯಪ್, 'ಜೈಲ್‌ಬ್ರೇಕ್' ಎಂಬ ಎಚ್ಚರಿಕೆಯ ಸಂದೇಶವನ್ನೂ ನೀಡಿದೆ.

ಕೃತಕ ಬುದ್ಧಿಮತ್ತೆಯ ಬೆನ್ನು ಹತ್ತಿರುವ ಜಗತ್ತಿನ ತಂತ್ರಜ್ಞರ ಹುಮ್ಮಸ್ಸಿಗೆ ಹಾದಿಯಲ್ಲಿ ಎದುರಾದ ಕೆಲವೊಂದು ಸಮಸ್ಯೆಗಳು ಇಂಥ ಎಚ್ಚರಿಕೆ ನೀಡುವ ಹಾಗೂ ಪ್ರಶ್ನೆ ಕೇಳುವ ಬಳಕೆದಾರರಿಗೆ ತಕ್ಕ ಉತ್ತರ ನೀಡುವ ಅನಿವಾರ್ಯತೆಯನ್ನು ಸೃಷ್ಟಿಸಿವೆ. ಕೆಲ ತಿಂಗಳ ಹಿಂದೆ ಗೂಗಲ್ ಜಾಗತಿಕ ಮಟ್ಟದಲ್ಲಿ ಟೀಕೆಗೆ ಗುರಿಯಾಗಿತ್ತು. ಕಾರಣವಿಷ್ಟೇ... ಗೂಗಲ್‌ನ ಚಾಟ್‌ಬಾಟ್ ಜೆಮಿನಿಯು ಜನರ ಚಿತ್ರವನ್ನು ನೈಜ ಬಣ್ಣದೊಂದಿಗೆ ನೀಡುವ ಬದಲು, ಅವರನ್ನು ಬಿಳಿಯರನ್ನಾಗಿಸಿದ್ದು 'ವರ್ಣಭೇದ' ಟೀಕೆ ಎದುರಿಸಬೇಕಾಯಿತು.

ಇಷ್ಟೇ ಏಕೆ, ಪ್ರಧಾನಿ ನರೇಂದ್ರ ಮೋದಿ ಅವರ ಕುರಿತ ಪ್ರಶ್ನೆಗೆ, ಇದು ನೀಡಿದ ಉತ್ತರವೂ ವಿವಾದಕ್ಕೆ ಕಾರಣವಾಗಿತ್ತು. ಅಡೋಬಿ ಕೂಡಾ ತನ್ನ ಫೈರ್‌ಫ್ಲೈ ಎಂಬ ಚಿತ್ರ ರಚಿಸುವ ಟೂಲ್‌ನಿಂದಲೂ ಇಂಥದ್ದೇ ಟೀಕೆಯನ್ನು ಎದುರಿಸಬೇಕಾಯಿತು. ಇದರ ಪರಿಣಾಮ, ಚಾಟ್‌ಬಾಟ್‌ಗಳು ನೀಡುವ ಮಾಹಿತಿ, ಚಿತ್ರ ಯಾವುದಾದರೂ ಅವುಗಳಿಗೆ ಸ್ಪಷ್ಟ ನೀತಿ ರೂಪಿಸುವ ಅಗತ್ಯವಿದೆ ಎಂದು ಜಾಗತಿಕ ಮಟ್ಟದ ತಜ್ಞರು ಅಭಿಪ್ರಾಯಪಟ್ಟರು.

ಕೃತಕ ಬುದ್ಧಿಮತ್ತೆಯ ರಾಜಕೀಯ ಓಲೈಕೆಗಳು ಮತ್ತು ಪಕ್ಷಪಾತದ ವಿರುದ್ಧವೂ ಹೋರಾಡಬೇಕು ಎಂಬ ಚರ್ಚೆಗಳು ನಡೆದವು. ವಾಕ್ ಸ್ವಾತಂತ್ರ್ಯಕ್ಕೆ ಕೃತಕ ಬುದ್ಧಿಮತ್ತೆ ಅಭಿವೃದ್ಧಿಪಡಿಸುವ ಉದ್ಯಮದ ವಿಧಾನವೇನು ಮತ್ತು ಅದು ಅಂತರರಾಷ್ಟ್ರೀಯ ವಾಕ್ ಸ್ವಾತಂತ್ರ್ಯದ ಮಾನದಂಡಗಳನ್ನು ಅಳವಡಿಸಿಕೊಂಡಿವೆಯೇ? ಎಂಬ ಚರ್ಚೆಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಕವಾಗಿ ನಡೆದವು.

ಜನರೇಟಿವ್ ಎಐ ಎಂಬ ಕೃತಕ ಬುದ್ಧಿಮತ್ತೆಯು ಸಿದ್ಧಪಡಿಸಿ ನೀಡುವ ಯಾವುದೇ ಮಾಹಿತಿ ಅಥವಾ ಚಿತ್ರಗಳು, ಅದು ಹೇಗೆ ತರಬೇತುಗೊಂಡಿದೆ ಎಂಬುದನ್ನು ಆಧರಿಸಿರುತ್ತವೆ. ಕೆಲ ಕಂಪನಿಗಳು ವಿವಾದಾತ್ಮಕ ವಿಷಯಗಳ ಕುರಿತ ಪ್ರಶ್ನೆಗಳು ಎದುರಾದರೆ, ಸೆನ್ಸಾರ್ ಮಾಡುತ್ತವೆ. ಆದರೆ ಸೆನ್ಸಾರ್‌ಗಳಿಗೆ ನಿರ್ದಿಷ್ಟ ಮಾನದಂಡವಿಲ್ಲ. ಚಾಟ್‌ಬಾಟ್‌ಗಳ ಬಳಕೆ ಕುರಿತ ನೀತಿಗಳು ಹೇಗಿರಬೇಕು ಎಂಬ ವಿಶ್ವಸಂಸ್ಥೆಯ ಮಾನದಂಡಗಳನ್ನು ಬಹುತೇಕ ಕೃತಕ ಬುದ್ಧಿಮತ್ತೆ ಉತ್ಪಾದಕ ಕಂಪನಿಗಳು ಪಾಲಿಸಿಲ್ಲ ಎನ್ನುತ್ತದೆ ವಾಂಡರ್‌ಬಿಲ್ಟ್ ವಿಶ್ವವಿದ್ಯಾಲಯದ ಸಂಶೋಧನೆ.

ಚಾಟ್‌ಬಾಟ್‌ಗಳನ್ನು ಹೇಗೆ ಬಳಸಬಹುದು ಎಂಬ ವಿಷಯದಲ್ಲಿ ಗೂಗಲ್‌ನ ಜೆಮಿನಿ, ಚಾಟ್‌ಜಿಪಿಟಿ ಸೇರಿದಂತೆ ಹಲವು ಚಾಟ್‌ಬಾಟ್‌ಗಳು ಇದೀಗ ಕೆಲವೊಂದು ಸ್ಪಷ್ಟ ನೀತಿಗಳನ್ನು ರೂಪಿಸಿಕೊಂಡಿವೆ. ಇವುಗಳಲ್ಲಿ ಅಂತರರಾಷ್ಟ್ರೀಯ ಮಾನವ ಹಕ್ಕುಗಳನ್ನು ಆಧರಿಸಿ ತಪ್ಪು ಮಾಹಿತಿ ಹಾಗೂ ದ್ವೇಷ ಭಾಷಣ ಕುರಿತು ಚಾಟ್‌ಬಾಟ್‌ಗಳು ಎಚ್ಚರಿಕೆಯ ನಡೆ ಇಡುವಂತೆ ಮಾಡಿದೆ. ಅದರಲ್ಲೂ ದ್ವೇಷ ಭಾಷಣ ಕುರಿತು ಗೂಗಲ್ ಬಹು ಜಾಗರೂಕತೆಯಿಂದ ಹೆಜ್ಜೆ ಇಡುತ್ತಿದೆ.

ಪೈ ಎಂಬ ಚಾಟ್‌ಬಾಟ್, ತಪ್ಪು ಮಾಹಿತಿಯನ್ನು ಹರಡುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ ಎಂದು ಹೇಳಿಕೊಂಡಿದೆ. ಚುನಾವಣೆ ಸಂದರ್ಭದಲ್ಲಂತೂ ನೈಜತೆ ಮರೆಮಾಚಿ, ತಪ್ಪು ಮಾಹಿತಿ ಹರಡುವುದು ಭಾರತದಲ್ಲಿ ಮಾತ್ರವಲ್ಲ, ಅಮೆರಿಕದಂತ ಮುಂದುವರಿದ ರಾಷ್ಟ್ರಗಳಿಗೂ ಇದು ತಲೆನೋವಾಗಿದೆ. ನರೇಂದ್ರ ಮೋದಿ ಯಾರು ಎಂಬ ಪ್ರಶ್ನೆಗೆ, ಗೂಗಲ್‌ನ ಚಾಟ್‌ಬಾಟ್ ನೀಡಿದ ಉತ್ತರವು ವಿವಾದ ಸೃಷ್ಟಿಸಿತ್ತು. 'ನರೇಂದ್ರ ಮೋದಿ ಅವರ ನೀತಿಗಳನ್ನು ತಜ್ಞರು ಫ್ಯಾಸಿಸ್ಟ್ ಎಂದು ಪರಿಗಣಿಸುತ್ತಾರೆ' ಎಂದು ಜೆಮಿನಿ ನೀಡಿದ ಉತ್ತರ ಭಾರತದಲ್ಲಿ ವಿವಾದದ ಕಿಡಿಯನ್ನೇ ಹೊತ್ತಿಸಿತ್ತು.

ಈ ಕಾಯ್ದೆ ಕಾನೂನು ಪಾಲನೆ ಮಾಡುತ್ತಿರುವ ಕೃತಕ ಬುದ್ಧಿಮತ್ತೆ ಆಧಾರಿತ ಉದ್ಯಮಗಳು ಒಂದೆಡೆಯಾದರೆ, ಅಪರಾಧ ಕೃತ್ಯಗಳಾದರೂ ಸರಿ, ಅವುಗಳನ್ನು ಮುಚ್ಚಿಟ್ಟು ಕೇಳಿದಷ್ಟು ಮಾಹಿತಿ ನೀಡುವ ತಾಣಗಳೂ ಅಂತರ್ಜಾಲ ಜಗತ್ತಿನಲ್ಲಿ ಬಹಳಷ್ಟಿವೆ. ಕ್ರಿಮಿನಲ್ ಲಾರ್ಜ್ ಲ್ಯಾಂಗ್ವೇಜ್ ಮಾಡ್ಯೂಲ್ (ಎಲ್‌ಎಲ್‌ಎಂ) ಮೂಲಕ ಕೃತಕ ಬುದ್ಧಿಮತ್ತೆಯನ್ನು ಅಪರಾಧ ಕೃತ್ಯಗಳಿಗಾಗಿಯೇ ಸಿದ್ಧಪಡಿಸುವ ಕುಕೃತ್ಯದ ತಂಡಗಳೂ ಇವೆ. ಇವುಗಳು ದುರುದ್ದೇಶಪೂರಿತ ಮಾಹಿತಿಯನ್ನು ನೀಡುವಂತೆ ತರಬೇತಿ ಪಡೆದಿರುತ್ತವೆ. ಹೀಗೆಯೇ 'ಜಿಪಿಟಿ' ಎಂಬ ಹೆಸರಿನ ಹಲವು ಚಾಟ್‌ಬಾಟ್‌ಗಳು ಇಂಥ ಅಪರಾಧ ಕೃತ್ಯಗಳಿಗೆ ಬಳಕೆಯಾಗುತ್ತಿವೆ. ಸೈಬರ್ ಅಪರಾಧ ವಿಭಾಗವೂ ಇವುಗಳ ಮೇಲೆ ನಿಗಾ ಇಟ್ಟಿವೆ ಎಂದೂ ವರದಿಯಾಗಿದೆ. ಇಂಥವುಗಳು ತಪ್ಪು ಮಾಹಿತಿ ನೀಡುವುದು ಮಾತ್ರವಲ್ಲ, ಬಳಕೆದಾರರನ್ನೂ ಅಪರಾಧ ಕೃತ್ಯಗಳಿಗೆ ಪ್ರೇರೇಪಿಸುವ ಅಪಾಯವೂ ಇದೆ.

ಕೃತಕ ಬುದ್ಧಿಮತ್ತೆಯನ್ನು ಸುರಕ್ಷಿತವಾಗಿ ಬಳಸುವುದು ಬಗೆ

ಮೂಲವನ್ನು ಅರಿಯಿರಿ: ನಂಬಲರ್ಹ ಕಂಪನಿಗಳು ಅಭಿವೃದ್ಧಿಪಡಿಸಿದ ಚಾಟ್‌ಬಾಟ್‌ಗಳನ್ನು ಬಳಸುವುದುದು ಉತ್ತಮ. ನೀವು ಕೇಳುವ ಮಾಹಿತಿಯು ಸುರಕ್ಷಿತ ಎಂಬುದುನ್ನು ಖಾತ್ರಿಪಡಿಸಿಕೊಳ್ಳಿ

ಸೂಕ್ಷ್ಮ ಮಾಹಿತಿ ಹಂಚಿಕೊಳ್ಳುವಾಗ ಎಚ್ಚರದಿಂದಿರಿ: ವೈಯಕ್ತಿಕ ಮಾಹಿತಿ, ಬ್ಯಾಂಕ್ ಮಾಹಿತಿ ಅಥವಾ ಸೂಕ್ಷ್ಮ ಮಾಹಿತಿಯನ್ನುಯಾವುದೇಕಾರಣಕ್ಕೂಹಂಚಿಕೊಳ್ಳಬೇಡಿ. ಒಂದೊಮ್ಮೆ ಹಂಚಿಕೊಳ್ಳಲೇಬೇಕಾದಲ್ಲಿ ಆ ತಾಣದ ಭದ್ರತೆಯ ಬಗ್ಗೆ ಖಾತ್ರಿ ಇರಲಿ.

ಭದ್ರತೆಗಾಗಿಯೇ ಇರುವ ತಂತ್ರಾಂಶಗಳನ್ನು ಬಳಸಿ: ಆ್ಯಂಟಿವೈರಸ್, ಫೈರ್‌ವಾಲ್ ಹಾಗೂ ಆ್ಯಂಟಿ ಮಾಲ್‌ವೇರ್‌ಗಳನ್ನು ನೀವು ಬಳಸುವ ಗ್ಯಾಜೆಟ್‌ನ ಭದ್ರತಾ ತಂತ್ರಾಂಶ ಕಾಲ ಕಾಲಕ್ಕೆ ಅಪ್‌ಡೇಟ್ ಆಗಿರುವುದನ್ನು ಖಾತ್ರಿಪಡಿಸಿಕೊಳ್ಳಿ.

ಸತ್ಯಾಸತ್ಯತೆಯನ್ನು ಪರಿಶೀಲಿಸಿ: ಚಾಟ್‌ಬಾಟ್ ಆಗಿರಲಿ ಅಥವಾ ಇನ್ಯಾವುದೇ ಆನ್‌ಲೈನ್ ಸೇವೆಗಳಾಗಿರಲಿ ಸೂಕ್ಷ್ಮ ಮಾಹಿತಿ ಕೇಳಿದಲ್ಲಿ ಅಥವಾ ಅನುಮಾನ ಎನಿಸಿದಲ್ಲಿ ಅದರ ಸಾಚಾತವನ್ನು ಪರಿಶೀಲಿಸಿ. ಕಂಪನಿಯ ಅಂತರ್ಜಾಲತಾಣವನ್ನು ಪರಿಶೀಲಿಸಿ ಮುಂದುವರಿಯಿರಿ.

ಕೊಂಡಿಗಳು ಹಾಗೂ ಅಟ್ಯಾಚ್‌ಮೆಂಟ್‌ಗಳ ಬಗ್ಗೆ ಎಚ್ಚರ ಇರಲಿ: ಅಪರಿಚಿತ ಅಥವಾ ವಿಶ್ವಾಸಾರ್ಹವಲ್ಲದ ಲಿಂಕ್‌ಗಳನ್ನು ಒತ್ತುವ ಮುನ್ನ ಅಥವಾ ಡೌನ್‌ಲೋಡ್ ಮಾಡುವ ಮುನ್ನ ಎಚ್ಚರ ವಹಿಸಿ. ವೈಯಕ್ತಿಕಕ ಮಾಹಿತಿ ಸೋರಿಕೆಯಾಗುವ ಅಪಾಯ ಹೆಚ್ಚು.

ಆನ್‌ಲೈನ್ ಸ್ಕ್ಯಾಮ್ ಬಗ್ಗೆ ಮಾಹಿತಿ ಇರಲಿ: ಆನ್‌ಲೈನ್ ಸ್ಕ್ಯಾಮ್ ಹಾಗೂ ಅಪಾಯಗಳ ಬಗ್ಗೆ ಮಾಹಿತಿ ಇರಲಿ. ಸೈಬರ್ ಅಪರಾಧಗಳ ಕುರಿತ ಸುದ್ದಿಗಳ ಬಗ್ಗೆ ತಿಳಿದಿರುವುದು ಹಾಗೂ ಅವುಗಳ ಕುರಿತು ಪ್ರಾಧಿಕಾರಗಳ ಹೊರಡಿಸುವ ಎಚ್ಚರಿಕೆ ಮತ್ತು ಮಾರ್ಗಸೂಚಿ ಬಗ್ಗೆ ಮಾಹಿತಿ ಹೊಂದಿರುವುದು ಉತ್ತಮ. ಒಂದೊಮ್ಮೆ ಯಾವುದೇ ಚಾಟ್‌ಬಾಟ್‌ಗಳು ಅಕ್ರಮ ಎನಿಸಿದಲ್ಲಿ, ಅದರ ಕುರಿತು ಇಂಥ ಪ್ರಾಧಿಕಾರಗಳಿಗೆ ದೂರು ನೀಡುವುದೂ ಒಂದು ಉತ್ತಮ ಕ್ರಮ. ❖

ಸೂರ್ಯನಾರಾಯಣ ವಿ.

ಬಾಹ್ಯಾಕಾಶ ಅಧ್ಯಯನ ಕ್ಷೇತ್ರದಲ್ಲಿ ಹೊಸ ಇತಿಹಾಸವೊಂದು ಸೃಷ್ಟಿಯಾಗಿದೆ. ಎಲಾನ್ ಮಸ್ಕ್ ಒಡೆತನದ ಸ್ಪೇಸ್‌ಎಕ್ಸ್ ಕಂಪನಿಯ 'ರೆಸಿಲನ್ಸ್' ಎಂಬ ಹೆಸರಿನ ಡ್ರ್ಯಾಗನ್ ಬಾಹ್ಯಾಕಾಶನೌಕೆ (ಅಥವಾ ಬಾಹ್ಯಾಕಾಶಕೋಶ-dragon spacecraft/spacecapsule) ನಾಲ್ಕು ದಿನಗಳ ಹಿಂದೆ ಐದು ದಿನಗಳ ಬಾಹ್ಯಾಕಾಶಯಾನವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಭೂಮಿಗೆ ಮರಳಿದೆ.

'ಪೊಲಾರಿಸ್ ಡಾನ್ ಮಿಷನ್' ಹೆಸರಿನಲ್ಲಿ ನಡೆದ ಅಂತರಿಕ್ಷ ಪ್ರಯಾಣದಲ್ಲಿ ನಾಲ್ವರು ಗಗನಯಾತ್ರಿಗಳು ಭಾಗವಹಿಸಿದ್ದರು. ವಿಶೇಷ ಎಂದರೆ, ಇವರು ಯಾರೂ ವೃತ್ತಿಪರ ಗಗನಯಾನಿಗಳಲ್ಲ! ಅಂದರೆ, ಸರ್ಕಾರಿ ಸ್ವಾಮ್ಯದ ಅಥವಾ ಸರ್ಕಾರದ ಅನುದಾನದಲ್ಲಿ ಅಧ್ಯಯನ ನಡೆಸುವ (ಉದಾಹರಣೆಗೆ ನಾಸಾ) ಬಾಹ್ಯಾಕಾಶ ಸಂಸ್ಥೆಗಳಿಗೆ ಸೇರಿದ – ತರಬೇತಿ ಪಡೆದ ಗಗನಯಾತ್ರಿಗಳಲ್ಲ. ಒಬ್ಬರು ಉದ್ಯಮಿ, ಮತ್ತೊಬ್ಬರು ಅಮೆರಿಕ ವಾಯುಪಡೆಯ ನಿವೃತ್ತ ಪೈಲಟ್. ಇನ್ನಿಬ್ಬರು ಸ್ಪೇಸ್‌ಎಕ್ಸ್ ಕಂಪನಿಯ ಎಂಜಿನಿಯರ್‌ಗಳು.

ಶತಕೋಟ್ಯಧಿಪತಿ ಶಿಫ್ಟ್4 ಪೇಮೆಂಟ್ಸ್ ಸಂಸ್ಥಾಪಕ ಜೇರ್ಡ್ ಐಸಾಕ್‌ಮನ್ ಈ ಯಾನದ ಕಮಾಂಡರ್ ಆಗಿದ್ದರು. ಮತ್ತೊಬ್ಬ ಯಾನಿ ಅಮೆರಿಕ ವಾಯುಪಡೆಯ ನಿವೃತ್ತ ಪೈಲಟ್ ಸ್ಕಾಟ್ ಪೊಟೀಟ್. ಇವರಿಬ್ಬರಿಗೆ ಜೊತೆಯಾದವರು ಸ್ಪೇಸ್‌ಎಕ್ಸ್‌ನ ಇಬ್ಬರು ಮಹಿಳಾ ಎಂಜಿನಿಯರ್‌ಗಳಾದ ಸಾರಾ ಗಿಲಿಸ್ ಮತ್ತು ಅನ್ನಾ ಮೆನನ್. ಬಾಹ್ಯಾಕಾಶ ಕೋಶವು ಅಂತರಿಕ್ಷದ ನಿರ್ದಿಷ್ಟ ಕಕ್ಷೆಯಲ್ಲಿ ಸುತ್ತುತ್ತಿರುವಾಗ ನಾಲ್ವರು ಗಗನಯಾತ್ರಿಗಳ ಪೈಕಿ ಐಸಾಕ್‌ಮನ್ ಮತ್ತು ಸಾರಾ ಗಿಲಿಸ್ ಅವರು ಕೋಶದಿಂದ ಹೊರಬಂದು ಬಾಹ್ಯಾಕಾಶ ನಡಿಗೆಯನ್ನು ಯಶಸ್ವಿಯಾಗಿ ನಡೆಸಿದರು. ಈ ಯಾನವು ಸೃಷ್ಟಿಸಿರುವ ಮೊದಲ ಇತಿಹಾಸ ಇದು. ಬಾಹ್ಯಾಕಾಶ ಸಂಶೋಧನೆ ಕ್ಷೇತ್ರದಲ್ಲಿ ನಾಗರಿಕರ (ಸಿವಿಲಿಯನ್) ಮೊದಲ ಖಾಸಗಿ ಅಂತರಿಕ್ಷ ನಡಿಗೆ ಇದು.

ಪ್ರಯಾಣದ ದೂರದಲ್ಲಿ ದಾಖಲೆ

ಈ ಪ್ರಯಾಣ ಬರೆದ ಇನ್ನೊಂದು ದಾಖಲೆ ಎಂದರೆ, ಐದು ದಶಕಗಳಲ್ಲೇ ಬಾಹ್ಯಾಕಾಶದಲ್ಲಿ ಅತ್ಯಂತ ಎತ್ತರಕ್ಕೆ ಮಾನವರನ್ನು ಕರೆದುಕೊಂಡು ಹೋಗಿದ್ದು. 1972ರಲ್ಲಿ ನಾಸಾದ ಅಪೊಲೊ ಯೋಜನೆಯ ನಂತರ ಬಾಹ್ಯಾಕಾಶದಲ್ಲಿ ಇಷ್ಟೊಂದು ಎತ್ತರಕ್ಕೆ ಪ್ರಯಾಣ ಬೆಳೆಸಿಲ್ಲ. ಸದ್ಯ ಬಾಹ್ಯಾಕಾಶದಲ್ಲಿ ಕಾರ್ಯಾಚರಿಸುತ್ತಿರುವ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ (ಐಎಸ್‌ಎಸ್) ಭೂಮಿಯಿಂದ 408 ಕಿ.ಮೀ ದೂರ ಇದೆ. ಆಕಾಶಕಾಯಗಳ ಮೇಲೆ ನಿಗಾ ಇಡುತ್ತಿರುವ ಹಬಲ್ ದೂರದರ್ಶಕ ಅಂದಾಜು 520 ಕಿ.ಮೀ ದೂರದಲ್ಲಿದೆ. ನಾಲ್ವರು ಗಗನಯಾತ್ರಿಗಳನ್ನು ಹೊತ್ತೊಯ್ದ ಡ್ರ್ಯಾಗನ್ ಬಾಹ್ಯಾಕಾಶ ಕೋಶವು 1,400 ಕಿ.ಮೀ ದೂರದಷ್ಟು ಎತ್ತರಕ್ಕೆ ಹೋಗಿ ಮರಳಿದೆ. 1972ರಲ್ಲಿ ಚಂದ್ರನಲ್ಲಿಗೆ ಮಾನವನನ್ನು ಕಳುಹಿಸಿದ ನಂತರ ನಾಸಾ ಕೂಡ ಇಷ್ಟು ಬಾಹ್ಯಾಕಾಶದಲ್ಲಿ ಇಷ್ಟು ದೂರಕ್ಕೆ ಮಾನವವರನ್ನು ಕಳುಹಿಸಿಲ್ಲ. ಇದಕ್ಕೂ ಮೊದಲು, 1966ರಲ್ಲಿ 'ಜೆಮಿನಿ-XI' ಯೋಜನೆಯ ಅಡಿಯಲ್ಲಿ ಚಾರ್ಲ್ಸ್ ಕಾನ್‌ರಾಡ್ ಮತ್ತು ರಿಚರ್ಡ್ ಗೋರ್ಡನ್ ಎಂಬ ಇಬ್ಬರು ಗಗನಯಾನಿಗಳನ್ನು 1,364 ಕಿ.ಮೀ ಎತ್ತರಕ್ಕೆ ಕಳುಹಿಸಿತ್ತು. ಮೂರು ದಿನಾ ಅಂತರಿಕ್ಷದಲ್ಲಿದ್ದರು.

ಜೇರ್ಡ್ ಐಸಾಕ್‌ಮನ್ ಮತ್ತು ಸಾರಾ ಗಿಲಿಸ್ ಅವರು ಬಾಹ್ಯಾಕಾಶ ನಡಿಗೆ ಕೈಗೊಂಡಿದ್ದು, 740 ಕಿ.ಮೀ ಎತ್ತರದಲ್ಲಿ. ಮೊದಲು ಬಾಹ್ಯಾಕಾಶ ಕೋಶದಿಂದ ಹೊರ ಬಂದ ಐಸಾಕ್‌ಮನ್ ಕೆಲವು ನಿಮಿಷ ಸಂಕೀರ್ಣವಾದಂತಹ ಬಾಹ್ಯಾಕಾಶ ನಡಿಗೆ ಕೈಗೊಂಡರು. ಅವರು ಕೋಶಕ್ಕೆ ಮರಳಿದ ನಂತರ ಸಾರಾ ಗಿಲಿಸ್ ಬಾಹ್ಯಾಕಾಶನಡಿಗೆ ಕೈಗೊಂಡರು. ಸ್ಪೇಸ್ ಎಕ್ಸ್ ಅಭಿವೃದ್ಧಿ ಪಡಿಸಿರುವ ಅತ್ಯಾಧುನಿಕ ತಂತ್ರಜ್ಞಾನದ ಬಾಹ್ಯಾಕಾಶ ದಿರಿಸನ್ನು ಇಬ್ಬರೂ ಪರೀಕ್ಷೆಗೆ ಒಳಪಡಿಸಿದರು. ಬಾಹ್ಯಾಕಾಶ ನಡಿಗೆ ಸ್ಪೇಸ್‌ಎಕ್ಸ್ ನೇರಪ್ರಸಾರ ಮಾಡಿತ್ತು.

ಐದು ದಿನಗಳ ಬಾಹ್ಯಾಕಾಶ ಯಾನದಲ್ಲಿ ನಾಲ್ವರು ಗಗನಯಾತ್ರಿಗಳು ಮಾನವನ ಆರೋಗ್ಯದ ಮೇಲೆ ಬಾಹ್ಯಾಕಾಶ ಯಾನಗಳು ಬೀರುವ ಪರಿಣಾಮಗಳು, ಅತ್ಯಾಧುನಿಕ ಬಾಹ್ಯಾಕಾಶ ದಿರಿಸಿನ ಸಾಮರ್ಥ್ಯ ಸೇರಿದಂತೆ ವಿವಿಧ ರೀತಿಯ 40 ವೈಜ್ಞಾನಿಕ ಪ್ರಯೋಗಗಳನ್ನು ನಡೆಸಿದ್ದಾರೆ ಎಂದು ವರದಿಯಾಗಿದೆ. ಅಲ್ಲದೇ, ಡ್ರ್ಯಾಗನ್ ಬಾಹ್ಯಾಕಾಶ ನೌಕೆ ಮತ್ತು ಸ್ಪೇಸ್ ಎಕ್ಸ್‌ನ ಸ್ಟಾರ್‌ಲಿಂಗ್ ಉಪಗ್ರಹದ ನಡುವೆ ಅಂತರಉಪಗ್ರಹ ಲೇಸರ್ ಸಂವಹನ ವ್ಯವಸ್ಥೆಯನ್ನೂ ಪರಿಶೀಲನೆಗೆ ಒಳಪಡಿಸಿದ್ದಾರೆ. ❖



ಡ್ರ್ಯಾಗನ್ ಬಾಹ್ಯಾಕಾಶಕೋಶದಲ್ಲಿ ಪ್ರಯಾಣ ಬೆಳೆಸಿದ್ದ ನಾಲ್ವರು ಗಗನಯಾತ್ರಿಗಳು –ಸ್ಪೇಸ್‌ಎಕ್ಸ್ ವಿಡಿಯೊ ಚಿತ್ರ

ಯೋಜನೆಯ ಉದ್ದೇಶವೇನು?

ಮಂಗಳಗ್ರಹಕ್ಕೆ ಮಾನವರನ್ನು ಕಳುಹಿಸುವ ಮಹತ್ವಾಕಾಂಕ್ಷೆ ನಾಸಾ ಸೇರಿ ವಿವಿಧ ಬಾಹ್ಯಾಕಾಶ ಸಂಸ್ಥೆಗಳು ಹೊಂದಿವೆ. ಎಲಾನ್ ಮಸ್ಕ್ ಕೂಡ ಇಂತಹ ಕನಸು ಕಾಣುತ್ತಿದ್ದಾರೆ. ಅವರ ಕಂಪನಿ ಬಾಹ್ಯಾಕಾಶ ಕ್ಷೇತ್ರದಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಅಭಿವೃದ್ಧಿಯಲ್ಲಿ ತೊಡಗಿದೆ. ಸ್ಪೇಸ್‌ಎಕ್ಸ್ ಮತ್ತು ಐಸಾಕ್‌ಮ್ಯಾನ್ ಅವರು ಪರಸ್ಪರ ಸಹಭಾಗಿತ್ವದಲ್ಲಿ ಮೂರು ಪೊಲಾರಿಸ್ ಬಾಹ್ಯಾಕಾಶ ಯೋಜನೆಗಳನ್ನು ರೂಪಿಸಿದ್ದು, ಅದರಲ್ಲಿ ಮೊದಲನೆಯದು 'ಪೊಲಾರಿಸ್ ಡಾನ್ ಮಿಷನ್'. ಅದೀಗ ಯಶಸ್ವಿಯಾಗಿ ಕೈಗೂಡಿದೆ. ಸ್ಪೇಸ್‌ಎಕ್ಸ್ ಕಂಪನಿಯು 'ಸ್ಟಾರ್‌ಶಿಪ್' ಎಂಬ ಅತಿ ಭಾರದ,ಸಂಪೂರ್ಣವಾಗಿ ಮರುಬಳಕೆ ಮಾಡಬಹುದಾದ ಆಧುನಿಕ ರಾಕೆಟ್ ಅಭಿವೃದ್ಧಿ ಪಡಿಸುತ್ತಿದ್ದು, ಮಾನವರನ್ನು ಅಂತರಿಕ್ಷಕ್ಕೆ ಕಳುಹಿಸುವ ಯೋಜನೆಯನ್ನು ಹಾಕಿಕೊಂಡಿದೆ.


'ಪೊಲಾರಿಸ್ ಡಾನ್ ಮಿಷನ್' ಬಾಹ್ಯಾಕಾಶ ಉದ್ದಿಮೆ ಕ್ಷೇತ್ರವನ್ನು ಹೊಸ ಅವಕಾಶಗಳಿಗೆ ತೆರೆಯುವಂತೆ ಮಾಡಿದೆ. ಅಂತರಿಕ್ಷ ಪ್ರವಾಸದ ಬೆಳವಣಿಗೆ, ಬಾಹ್ಯಾಕಾಶ ಕ್ಷೇತ್ರದಲ್ಲಿ ಅಧ್ಯಯನ ನಡೆಸಲು ಖಾಸಗಿ ಸಂಸ್ಥೆಗಳಿಗೆ ಅವಕಾಶ ಕಲ್ಪಿಸಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ –ವಿಜ್ಞಾನ

ವಿದ್ಯುಚ್ಛಕ್ತಿ

37) ಚಿತ್ರದಲ್ಲಿ ನೀಡಲಾದ ಮಂಡಲ ರೇಖಾಚಿತ್ರದಲ್ಲಿ, ರೋಧಕಗಳಾದ R_1 , R_2 ಮತ್ತು R_3 ಗಳ ಬೆಲೆಗಳು ಕ್ರಮವಾಗಿ 5Ω, 10Ω, 30Ω ಗಳಾಗಿದ್ದು ಅವುಗಳನ್ನು 12V ವಿಭವಾಂತರವಿರುವ ಒಂದು ಶುಷ್ಕಕೋಶಕ್ಕೆ ಜೋಡಿಸಿದೆ. ಹಾಗಾದರೆ (a) ಪ್ರತಿಯೊಂದು ರೋಧಕದ ಮೂಲಕ ಪ್ರವಹಿಸುತ್ತಿರುವ ವಿದ್ಯುತ್ ಪ್ರವಾಹ (b) ಮಂಡಲದಲ್ಲಿನ ಒಟ್ಟು ವಿದ್ಯುತ್ ಪ್ರವಾಹ ಮತ್ತು (c) ಮಂಡಲದ ಒಟ್ಟು ರೋಧವನ್ನು ಲೆಕ್ಕಮಾಡಿರಿ.



ಉತ್ತರ:– (ಹಿಂದಿನ ಸಂಚಿಕೆಯಿಂದ)

ಮಂಡಲದಲ್ಲಿನ ಒಟ್ಟು ವಿದ್ಯುತ್ ಪ್ರವಾಹ

$$I = I_1 + I_2 + I_3$$
$$= (2.4 + 1.2 + 0.4)\,A$$
$$= 4\,A$$

ಮಂಡಲದ ಒಟ್ಟು ರೋಧ R_p ಸಮೀಕರಣ 12.18 ರಂತೆ

$$\frac{1}{R_p} = \frac{1}{5} + \frac{1}{10} + \frac{1}{30} = \frac{1}{3}$$

ಆದ್ದರಿಂದ $R_p = 3\Omega$

38) ವಿದ್ಯುತ್ ಮಂಡಲಗಳಲ್ಲಿ ಉಪಯೋಗಿಸುವ ಫ್ಯೂಸ್ ಬಗ್ಗೆ ಬರೆಯಿರಿ

ಉತ್ತರ:– ವಿದ್ಯುತ್ ಮಂಡಲಗಳಲ್ಲಿ ಉಪಯೋಗಿಸುವ ಫ್ಯೂಸ್. ಇದು ಹೆಚ್ಚಿನ ವಿದ್ಯುತ್ ಪ್ರವಾಹವು ಮಂಡಲದಲ್ಲಿಯ ಉಪಕರಣಗಳ ಮೂಲಕ ಪ್ರವಹಿಸದ ಹಾಗೆ ಮಾಡಿ ಅವುಗಳನ್ನು ರಕ್ಷಿಸುತ್ತದೆ. ಫ್ಯೂಸ್‌ನ್ನು ವಿದ್ಯುತ್ ಸಾಧನಗಳೊಂದಿಗೆ ಸರಣಿಕ್ರಮದಲ್ಲಿ ಜೋಡಿಸಿರುತ್ತಾರೆ. ಇದು ಸೂಕ್ತ ದ್ರವನ ಬಿಂದು ಹೊಂದಿರುವ ಲೋಹ ಅಥವಾ ಮಿಶ್ರಲೋಹದ ತಂತಿಯನ್ನು ಹೊಂದಿರುತ್ತದೆ. ಉದಾಹರಣೆಗೆ ತಾಮ್ರ, ಕಬ್ಬಿಣ, ಸೀಸ ಇತ್ಯಾದಿ.

ನಿಗದಿತ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದ ವಿದ್ಯುತ್ ಪ್ರವಾಹವು ಮಂಡಲದ ಮೂಲಕ ಪ್ರವಹಿಸಿದಾಗ ಫ್ಯೂಸ್ ತಂತಿಯ ತಾಪವು ಹೆಚ್ಚಾಗುತ್ತದೆ ಇದರಿಂದಾಗಿ ಫ್ಯೂಸ್‌ನ ತಂತಿಯು ಕರಗಿ ಹೋಗುತ್ತದೆ ಮತ್ತು ಮಂಡಲವನ್ನು ಕಡಿತಗೊಳಿಸುತ್ತದೆ. ಫ್ಯೂಸ್‌ನ ತಂತಿಯು ಲೋಹದ ತುದಿಗಳಿರುವ ಪೋರ್ಸಲಿನ್ ಅಥವಾ ಅದೇ ರೀತಿಯ ವಸ್ತುವಿನಂತಹ ಕಾಟ್ರಿಡ್ಜ್‌ನಿಂದ ಸುತ್ತುವರೆಯಲ್ಪಟ್ಟಿದೆ. ಗೃಹಬಳಕೆಯ ಉದ್ದೇಶಗಳಿಗಾಗಿ ಉಪಯೋಗಿಸುವ ಫ್ಯೂಸ್‌ನಲ್ಲಿ ಪ್ರವಹಿಸುವ ವಿದ್ಯುತ್ ಪ್ರವಾಹದ ದರವು 1A, 2A, 3A, 5A, 10A, ಇತ್ಯಾದಿ ಆಗಿರುತ್ತದೆ ಎಂದು ಅವುಗಳ ಮೇಲೆ ನಮೂದಿಸಲಾಗಿರುತ್ತದೆ.

ಒಂದು ಇಸ್ತ್ರಿಪೆಟ್ಟಿಗೆಯು ಮಂಡದಲ್ಲಿ 1 kW ವಿದ್ಯುತ್ ಸಾಮರ್ಥ್ಯವನ್ನು 220V ವಿಭವಾಂತರದಲ್ಲಿ ಬಳಸಿದಾಗ 4.54A [1000/220A] ನಷ್ಟು ವಿದ್ಯುತ್ ಪ್ರವಾಹವು ವಿದ್ಯುತ್ ಮಂಡಲದಲ್ಲಿ ಪ್ರವಹಿಸುತ್ತದೆ. ಈ ಸಂದರ್ಭದಲ್ಲಿ 5A ದರ ಹೊಂದಿರುವ ವಿದ್ಯುತ್ ಫ್ಯೂಸ್‌ನ್ನು ಬಳಸಬೇಕು.

39) ವಿದ್ಯುತ್‌ಪ್ರವಾಹದ ಉಷ್ಣೋತ್ಪಾದನಾ ಪರಿಣಾಮದ ಪ್ರಾಯೋಗಿಕ ಅನ್ವಯಗಳು ಯಾವುವು?

ಉತ್ತರ:–. ಯಾವುದೇ ಒಂದು ವಾಹಕದಲ್ಲಿ ಉತ್ಪತ್ತಿಯಾಗುವ ಉಷ್ಣವು ವಿದ್ಯುತ್ಪ್ರವಾಹದ ಅನಿವಾರ್ಯ ಪರಿಣಾಮವಾಗಿದೆ. ಹಲವಾರು ಸಂದರ್ಭಗಳಲ್ಲಿ ಅನಪೇಕ್ಷಿತವಾಗಿ ಇದು ಉಪಯುಕ್ತ ವಿದ್ಯುತ್ ಶಕ್ತಿಯನ್ನು ಉಷ್ಣವನ್ನಾಗಿ ಪರಿವರ್ತಿಸುತ್ತದೆ. ವಿದ್ಯುನ್ಮಂಡಲದಲ್ಲಿ ನಿಯಂತ್ರಿಸಲಾಗದ ಉಷ್ಣವು ಘಟಕಗಳ ತಾಪವನ್ನು ಹೆಚ್ಚಿಸುತ್ತದೆ ಮತ್ತು ಅವುಗಳ ಗುಣಗಳನ್ನು ಬದಲಾಯಿಸುತ್ತದೆ. ಆದರೂ, ವಿದ್ಯುತ್ತಿನ ಉಷ್ಣೋತ್ಪಾದನ ಪರಿಣಾಮದಿಂದ ಬಹಳ ಉಪಯುಕ್ತವಾದ ಅನ್ವಯಗಳಿವೆ. ವಿದ್ಯುತ್ ಇಸ್ತ್ರಿಪೆಟ್ಟಿಗೆ, ವಿದ್ಯುತ್ ಒಲೆ, ವಿದ್ಯುತ್ ಹೀಟರ್ ಮತ್ತು ವಿದ್ಯುತ್ ಕೆಟಲ್‌ಗಳು ಜೌಲ್‌ನ ಉಷ್ಣೋತ್ಪಾದನಾ ನಿಯಮವನ್ನು ಆಧರಿಸಿದ ಕೆಲವು ಪರಿಚಿತ ಸಾಧನಗಳಾಗಿವೆ

ವಿದ್ಯುತ್‌ನ ಉಷ್ಣೋತ್ಪಾದನ ಪರಿಣಾಮವನ್ನು ವಿದ್ಯುತ್ ಬಲ್ಬ್‌ನಲ್ಲಿ ಬೆಳಕನ್ನು ಉತ್ಪಾದಿಸಲು ಬಳಸಲಾಗುತ್ತದೆ. ಇಲ್ಲಿ ತಂತು (filament)ವು ಸಾಧ್ಯವಾದಷ್ಟೂ ಉಷ್ಣಶಕ್ತಿಯನ್ನು ತನ್ನಲ್ಲಿ ಉಳಿಸಿಕೊಳ್ಳುವುದರ ಮೂಲಕ ಅದು ಹೆಚ್ಚು ಉಷ್ಣತೆಯನ್ನು ಹೊಂದಿ ಬೆಳಕನ್ನು ಉತ್ಸರ್ಜಿಸುವುದು. ಇದು ಅತಿ ಹೆಚ್ಚಿನ ತಾಪಮಾನದಲ್ಲಿ ಕರಗಬಾರದು. ಒಂದು ಪ್ರಬಲವಾದ ಹಾಗೂ ಹೆಚ್ಚಿನ ದ್ರವನ ಬಿಂದು ಹೊಂದಿರುವ ಲೋಹವಾದ ಟಂಗ್‌ಸ್ಟನ್‌ಅನ್ನು [ದ್ರವನ ಬಿಂದು 3380°C] ಬಲ್ಬ್‌ನ ತಂತುಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಉಷ್ಣ ನಿರೋಧಕಗಳ ಸಹಾಯದಿಂದ ತಂತಿಯನ್ನು ಸಾಧ್ಯವಾದಷ್ಟೂ ಉಷ್ಣದಿಂದ ದೂರವಿರಿಸಲಾಗುವುದು. ತಂತಿಯು ದೀರ್ಘಕಾಲ ಬಾಳಿಕೆಗಾಗಿ ಬಲ್ಬ್‌ನೊಳಗೆ ನೈಟ್ರೋಜನ್ ಮತ್ತು ಆರ್ಗಾನ್‌ನಂತಹ ಕಡಿಮೆ ಕ್ರಿಯಾಶೀಲ ಅನಿಲಗಳನ್ನು ತುಂಬಿರುತ್ತಾರೆ. ತಂತಿಯು ಬಳಸಿಕೊಂಡ ಗರಿಷ್ಠ ಶಕ್ತಿಯು ಶಾಖದ ರೂಪದಲ್ಲಿ ಕಂಡುಬರುತ್ತದೆ. ಆದರೆ ಅದರ ಸ್ವಲ್ಪ ಭಾಗವು ಬೆಳಕಿನ ರೂಪದಲ್ಲಿ ಹೊರಹೊಮ್ಮುತ್ತದೆ.

40) ವಿದ್ಯುತ್ ಸಾಮರ್ಥ್ಯದ ಬಗ್ಗೆ ಬರೆಯಿರಿ.

ಉತ್ತರ:– ವಿದ್ಯುನ್ಮಂಡಲದಲ್ಲಿ ಶಕ್ತಿ ಬಳಕೆಯಾಗುವ ಅಥವಾ ಕ್ಷೀಣಿಸುವ ದರವು ದೊರೆಯುತ್ತದೆ ಇದನ್ನು ವಿದ್ಯುತ್ ಸಾಮರ್ಥ್ಯ ಎನ್ನುವರು. ವಿದ್ಯುತ್ ಸಾಮರ್ಥ್ಯ Pಯನ್ನು ಈ ಪ್ರಕಾರ ವ್ಯಕ್ತಪಡಿಸುವರು.

ವಿದ್ಯುತ್ ಸಾಮರ್ಥ್ಯದ SI ಏಕಮಾನ ವ್ಯಾಟ್ (W) 'ವ್ಯಾಟ್' ಏಕಮಾನವು ತುಂಬಾ ಚಿಕ್ಕದು. ಆದ್ದರಿಂದ ವಾಸ್ತವವಾಗಿ ರೂಢಿಯಲ್ಲಿ ನಾವು ಕಿಲೋವ್ಯಾಟ್ ಎಂಬ ದೊಡ್ಡ ಏಕಮಾನ ಬಳಸುತ್ತೇವೆ, ಇದು 1000 ವ್ಯಾಟ್‌ಗಳಿಗೆ ಸಮ.

ವಿದ್ಯುತ್ ಶಕ್ತಿಯ ವ್ಯವಹಾರಿಕ ಏಕಮಾನ ಕಿಲೋವ್ಯಾಟ್‌ಗಂಟೆ (kWh). ಸಾಮಾನ್ಯವಾಗಿ ಇದನ್ನು 'ಯೂನಿಟ್' ಎನ್ನುವರು.

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC BIOLOGY

MOLECULAR BASIS OF INHERITANCE

65. Explain the mechanism of DNA replication in detail.

Ans:- (………Contd)

6) New Strand Formation - It requires enzyme polymerase III in prokaryotes and polymerase δ in eukaryotes alongwith source of energy ATP/GTP/TTP and Mg^{2+}. The enzyme helps in establishing phospho-diester linkages between successive nucleotides. This produces polynucleotide chain. Polymerase III or δ adds nucleotides only at 3' end of the chain so that DNA strand formation occurs in 5'→3' direction. Since 3' ends of the new chains would lie in opposite directions of the separated DNA template strands, chain elongation occurs in opposite directions. The parent DNA strand unzippers further to expose new regions for chain building. However, while DNA synthesis is continuous in one strand, it is formed in small stretches in the other strand because of the opposite arrangement of nucleotides. Where new DNA strand is built in small segments, a new RNA primer is formed everytime in the region of opening of the chain. RNA primers are removed by polymerase I in prokaryotes and polymerase α in eukaryotes. The same enzyme also extends DNA strand in the region exposed by dissolution of RNA primer. Replication is discontinuous over the strand over which only small stretches of DNA are built due to opposite running of DNA template. The small stretches of DNA are called **Okazaki fragments.** Okazaki fragments are joined together by enzyme DNA ligase. New DNA strand built of Okazaki fragments is called lagging strand because it takes longer time to develop. The other replicated strand grows continuously and is called leading strand. Since replication is continuous over one strand and discontinuous over the other, it is called semicontinuous.

7) Proof Reading - Though DNA polymerase is very accurate, a wrong nucleotide gets inserted occasionally. The incidence is 1 in 10,000. DNA polymerase-III is even unable to differentiate uracil from thymine. Mismatched nucleotides are removed and replaced by correct nucleotide with the help of enzyme DNA polymerase II (or) β – polymerase.

66. Explain the various steps in genetic fingerprinting?

Ans:- Various steps in genetic fingerprinting are-

(1) Materials like blood, saliva, semen, skin are collected from the site of the crime and sent to the laboratory.

(2) In the laboratory DNA is isolated and purified from the sample. If the amount of DNA available for fingerprinting is very little, it can be multiplied through a process called polymerase chain reaction (PCR).

(3) DNA is then cut into fragments using specific REN. The resulting fragments are tested for RFLP (restriction fragment length polymorphism) which focuses on the VNTR (variable number of tandem repeats) that contain certain sequences of repeated DNA bases which vary widely from person to person.

(4) The DNA fragments are sorted according to size.

(5) The sorted double stranded DNA fragments are broken up into single strands.

(6) The single stranded DNA strands are then accurately transferred on to a nylon sheet through a process called Southern Blotting.

(7) Single stranded specially designed DNA probes tagged with radioactive isotopes are then applied to the southern bolt. Excess probe material is washed away. The probes identify specific strands and bind to them. These spots remain radioactive.

(8) A sheet of X –ray film is now placed in contact with the southern blot. Only the areas where radioactive isotopes are left behind show up on the film as dark bands after the film is developed. The film thus developed is the DNA fingerprint is similar to a barcode display. This is known as a DNA fingerprint or profile. A scanner of a computer could compare different fingerprints.

67. Differentiate between VNTR and Probe.

Ans:-


VNTR	Probe
It is a natural small sequences of DNA	It is synthetic DNA fragment
It is non-radioactive	It is radioactive.
Helps in identi-fication of a person.	Helps in identi-fication of VNTRs

68. Mention the differences between Leading Strand and Lagging Strand.

Ans:-

Leading Strand	*Lagging Strand*
It grows continuously.	Its growth is discontinuous.
It develops as a single unbroken strand from the very beginning.	It develops in the form of a number of short segments called Okazaki fragments.
DNA ligase is not required.	DNA ligase is needed for joining Okazaki fragments.
A single primer is required.	A number of RNA primers are required, one for each Okazaki fragment.
It grows rapidly	Development is slower.
Direction of growth is 5'→3'	Direction of growth of lagging strand is 3'→5' but in each Okazaki fragment the direction is 5'→ 3'.

‘ಪುಸ್ತಕ ಪ್ರಕಾಶನ ಕ್ಷೇತ್ರದಲ್ಲಿ ಪ್ರಾಮಾಣಿಕತೆ ಕೊರತೆ’


ಎಸ್‌.ಎಲ್‌. ಭೈರಪ್ಪ

ಹುಬ್ಬಳ್ಳಿ: ‘ವಿದೇಶದ ಪುಸ್ತಕ ಪ್ರಕಾಶನ ಕ್ಷೇತ್ರದಲ್ಲಿ ಇರುವಷ್ಟು ಪ್ರಾಮಾಣಿಕತೆ ಭಾರತದಲ್ಲಿ ಕಾಣಸಿಗದು. ಎಷ್ಟು ಮಂದಿ ಪ್ರಾಮಾಣಿಕರು ಇದ್ದಾರೆ ಎಂದು ಹುಡುಕಬೇಕಿದೆ’ ಎಂದು ಕಾದಂಬರಿಕಾರ ಎಸ್‌.ಎಲ್‌. ಭೈರಪ್ಪ ತಿಳಿಸಿದರು.

ಸಾಹಿತ್ಯ ಭಂಡಾರದ ಮ.ಅನಂತ ಮೂರ್ತಿ ಅವರ ಪುಣ್ಯತಿಥಿ ಪ್ರಯುಕ್ತ ಡಾ. ಡಿ.ಎಸ್‌. ಕರ್ಕಿ ಸಾಹಿತ್ಯ ವೇದಿಕೆ ಮತ್ತು ಸಾಹಿತ್ಯ ಪ್ರಕಾಶನ ಮಂಗಳವಾರ ಆಯೋಜಿಸಿದ್ದ ಪ್ರಕಾಶಕರಿಗೆ ಸನ್ಮಾನ, ಪುಸ್ತಕಗಳ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

‘ನನ್ನ ಕೃತಿಗಳನ್ನು ಹಿಂದಿಗೆ ಅನುವಾದ ಮಾಡಿಸಿಕೊಟ್ಟರೂ, ಹಿಂದಿ ಪ್ರಕಾಶಕರು ಕೇವಲ ₹25 ಸಾವಿರ ನೀಡಿದರು. ನೇಪಾಳದ ವಿಶ್ವವಿದ್ಯಾಲಯದಲ್ಲೂ ಹಿಂದಿಯಲ್ಲಿ ಅನುವಾದಗೊಂಡ ನನ್ನ ಕೃತಿಗಳಿವೆ. ಎಷ್ಟೆಲ್ಲ ವ್ಯಾಪಾರವಾಗಿದ್ದರೂ, ಹೆಚ್ಚು ಹಣ ನೀಡುವುದಿಲ್ಲ’ ಎಂದರು.

‘ಹಲವು ಪ್ರಕಾಶಕರು ಮರು ಮುದ್ರಣದ ಮಾಹಿತಿ ನೀಡುವುದಿಲ್ಲ. ದುಪ್ಪಟ್ಟು ದರ ನಿಗದಿಪಡಿಸುತ್ತಾರೆ. ಕಳ್ಳ ಲೆಕ್ಕ ಕೊಡುವವರೂ ಇದ್ದಾರೆ. ಮಾರ್ವಾಡಿಗಳೇ ಹೀಗೆ. ಪ್ರಾಮಾಣಿಕ ಪ್ರಕಾಶಕರನ್ನು ಗೌರವಿಸಿದರೆ, ಇತರರಿಗೂ ಪ್ರೇರಣೆ ಆಗಬಹುದು. ಈ ವಿಷಯದಲ್ಲಿ ಕನ್ನಡದ ಪ್ರಕಾಶನ ಕ್ಷೇತ್ರ ದೇಶಕ್ಕೆ ಮಾದರಿಯಾಗಲಿ’ ಎಂದರು.

ಯುಜಿಸಿ ನಿಯಮಗಳ ಉಲ್ಲಂಘನೆ ಆರೋಪ


ರಾಜ್ಯ ಮುಕ್ತ ವಿ.ವಿ ಬೋಧಕರ ಸಂದರ್ಶನ ದಿಢೀರ್ ಮುಂದಕ್ಕೆ

ಪ್ರಜಾವಾಣಿ ವಾರ್ತೆ

ಮೈಸೂರು: ಬೋಧಕರ ಹುದ್ದೆಗಳಿಗೆ ಸೆಪ್ಟೆಂಬರ್ 18ರಂದು ಸಂದರ್ಶನ ಪ್ರಕ್ರಿಯೆಯನ್ನು ನಿಗದಿ ಮಾಡಿದ್ದ ಇಲ್ಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ಹಿಂದಿನ ದಿನವಾದ ಮಂಗಳವಾರ ದಿಢೀರನೆ ಮುಂದೂಡಿ ಸುತ್ತೋಲೆ ಹೊರಡಿಸಿದೆ.

‘371 (ಜೆ)ಗೆ ಮೀಸಲಿರಿಸಿದ, ಶಿಕ್ಷಣಶಾಸ್ತ್ರ, ಭೌತವಿಜ್ಞಾನ ಮತ್ತು ಗಣಿತ ವಿಷಯಗಳ ಸಹಪ್ರಾಧ್ಯಾಪಕರ ಹುದ್ದೆ ಭರ್ತಿಗಾಗಿ ಮುಕ್ತ ವಿಶ್ವವಿದ್ಯಾಲಯ ಕಾನೂನುಬಾಹಿರವಾಗಿ ಸಂದರ್ಶನ ನಡೆಸುತ್ತಿದ್ದು, ಕೂಡಲೇ ತಡೆಹಿಡಿಯಬೇಕು’ ಎಂದು ವಿಶ್ವವಿದ್ಯಾಲಯದ ಕಾಯಂ ಅಧ್ಯಾಪಕರ ಸಂಘದ ಕಾರ್ಯದರ್ಶಿ ಎಚ್‌.ಕೆ. ಜಗದೀಶ್ ಬಾಬು ಮಂಗಳವಾರ ಬೆಳಿಗ್ಗೆ ಸುದ್ದಿಗೋಷ್ಠಿ ನಡೆಸಿದ್ದರು. ಮಧ್ಯಾಹ್ನ ವಿಶ್ವವಿದ್ಯಾಲಯವು ಸಂದರ್ಶನ ಪ್ರಕ್ರಿಯೆ ಮುಂದೂಡಿದ ಸುತ್ತೋಲೆ ಪ್ರಕಟಿಸಿತು.

‘ಒಟ್ಟಾರೆ 25 ಸಹ ಪ್ರಾಧ್ಯಾಪಕರು ಹಾಗೂ 7 ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿಗಾಗಿ ಆಗಸ್ಟ್ 16, 2023 ರಂದು ಅಧಿಸೂಚನೆ ಹೊರಡಿಸಿದ್ದು, ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 27, 2023 ಕೊನೆ ದಿನವಾಗಿತ್ತು. ಅಧಿಸೂಚನೆಗೆ ಹೈಕೋರ್ಟ್ ತಡೆಯಾಜ್ಞೆ ಇದ್ದರೂ, ಅಭ್ಯರ್ಥಿಗಳಿಗೆ ಆಗಸ್ಟ್ 18, 2021ರ ಅಧಿಸೂಚನೆ ಉಲ್ಲೇಖಿಸಿ ಸಂದರ್ಶನಕ್ಕೆ ಕರೆಯಲಾಗಿದೆ’ ಎಂದು ಜಗದೀಶ್‌ಬಾಬು ಆರೋಪಿಸಿದ್ದರು.



ಅಂಕಗಳನ್ನು ನಮೂದಿಸದೆ ಸಹಿ ಹಾಕಲಾಗಿದೆ


‘ನೇಮಕಾತಿ ಪ್ರಕ್ರಿಯೆಯಲ್ಲಿ, ಅರ್ಜಿ ಸಲ್ಲಿಕೆಯ ಕೊನೆ ದಿನದಿಂದ 6 ತಿಂಗಳೊಳಗೆ ಸಂದರ್ಶನ ಮುಗಿಸಬೇಕೆಂಬ ನಿಯಮವಿರುವುದರಿಂದ ಸಂದರ್ಶನ ಪ್ರಕ್ರಿಯೆಯು ನಿಯಮಬಾಹಿರವಾಗಿದೆ. ಯುಜಿಸಿ ನಿಯಮವನ್ನು ಉಲ್ಲಂಘಿಸಿ ತರಾತುರಿಯಲ್ಲಿ ಕೇವಲ 6 ದಿನಗಳ ಅಲ್ಪ ಅವಧಿ ನೀಡಿ ಸೆ.19ಕ್ಕೆ ಸಂದರ್ಶನ ದಿನಾಂಕ ನಿಗದಿಪಡಿಸಲಾಗಿತ್ತು. ಅಭ್ಯರ್ಥಿಗಳು ತಡೆಯಾಜ್ಞೆ ತರಬಹುದು ಎಂಬ ಕಾರಣಕ್ಕೆ ಸೆ.18ಕ್ಕೆ ಪೂರ್ವ ನಿಗದಿ ಮಾಡಲಾಗಿದೆ. ಭ್ರಷ್ಟಾಚಾರದ ಉದ್ದೇಶದಿಂದಲೇ ಇದು ನಡೆಯುತ್ತಿದ್ದು, ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿ ಹಾಗೂ ಕುಲಪತಿ ಈ ಬಗ್ಗೆ ಉತ್ತರಿಸಬೇಕು’ ಎಂದು ಆಗ್ರಹಿಸಿದ್ದರು.

ಅಂಕವಿಲ್ಲದ ಪಟ್ಟಿಗೆ ಸಹಿ: ‘2023ರ ಜುಲೈ 31ರಂದು ಹೊರಡಿಸಿದ್ದ ಅಧಿಸೂಚನೆ ಆಧರಿಸಿ ನಡೆದಿದ್ದ, ಗುತ್ತಿಗೆ ಆಧಾರಿತ ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಸಂದರ್ಶನದ ಬಳಿಕ, ಅಭ್ಯರ್ಥಿಗಳ ಅಂಕ ಪಟ್ಟಿಯಲ್ಲಿ ಅಂಕಗಳನ್ನೇ ನಮೂದಿಸದೆ ಪರೀಕ್ಷಕರು ಸೇರಿದಂತೆ ಕುಲಪತಿಯೂ ಸಹಿ ಮಾಡಿದ್ದಾರೆ. ಈ ಅಕ್ರಮದಲ್ಲಿ, ಹೊರ ವಿಶ್ವವಿದ್ಯಾಲಯದಿಂದ ಬಂದಿದ್ದ ತಜ್ಞರೂ ಭಾಗಿಯಾಗಿದ್ದರು’ ಎಂದು ಆರೋಪಿಸಿದರು. ‘ಅಧಿಸೂಚನೆಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದರಿಂದ ಸ್ಥಗಿತಗೊಂಡಿತ್ತು’ ಎಂದು ತಿಳಿಸಿದರು.

> **ಅಂಕವಿಲ್ಲದ ಪಟ್ಟಿಗೆ ಅಧಿಕಾರಿಗಳು ಸಹಿ ಮಾಡಿರುವ ಪ್ರಕರಣದ ಮಾಹಿತಿ ಇಲ್ಲ. ನನ್ನ ಅವಧಿಯಲ್ಲಿ ಹಾಗೆ ಮಾಡಲು ಬಿಡುವುದಿಲ್ಲ**
> **ಪ್ರೊ.ಕೆ.ಬಿ.ಪ್ರವೀಣ**
> ಕುಲಸಚಿವ, ಮುಕ್ತ ವಿವಿ

‘ಅರಸು ವಿರುದ್ಧ ಹೇಳಿಕೆ ನೀಡಿದ ಬೆಲ್ಲದಗೆ ರಾಜ್ಯದ ಚರಿತ್ರೆ ಗೊತ್ತಿಲ್ಲ’

ಪ್ರಜಾವಾಣಿ ವಾರ್ತೆ


ಎಚ್‌.ವಿಶ್ವನಾಥ್

ಮೈಸೂರು: ‘ಮೀಸಲಾತಿ ವಿಚಾರದಲ್ಲಿ ಡಿ.ದೇವರಾಜ ಅರಸು ಮೋಸ ಮಾಡಿದರು ಎಂದು ಶಾಸಕ ಅರವಿಂದ ಬೆಲ್ಲದ ಅವರ ಹೇಳಿಕೆ ಖಂಡನೀಯ. ಅವರು ಮೈಸೂರು ಸಂಸ್ಥಾನ ಹಾಗೂ ಕರ್ನಾಟಕ ಸರ್ಕಾರದ ಇತಿಹಾಸ ಅಧ್ಯಯನ ನಡೆಸಿ ಮಾತನಾಡಬೇಕು’ ಎಂದು ವಿಧಾನಪರಿಷತ್ ಸದಸ್ಯ ಎಚ್‌.ವಿಶ್ವನಾಥ್ ಪ್ರತಿಪಾದಿಸಿದರು.

ನಗರದಲ್ಲಿ ಮಂಗಳವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ, ‘ವಿದೇಶದಲ್ಲಿ ಪದವಿ ಪಡೆದ ಬೆಲ್ಲದ ಅವರಿಗೆ ಕರ್ನಾಟಕದ ಇತಿಹಾಸದ ಕುರಿತು ಮಾಹಿತಿಯ ಕೊರತೆ ಇದೆ. ಮೀಸಲಾತಿ ಹಾಗೂ ಸಾಮಾಜಿಕ ನ್ಯಾಯದ ವಿಚಾರದಲ್ಲಿ ಕರ್ನಾಟಕವು ದೇಶಕ್ಕೇ ಮಾದರಿ. ಸಂವಿಧಾನ ಅನುಷ್ಠಾನಕ್ಕೂ ಮೊದಲೇ ಮೈಸೂರು ಸಂಸ್ಥಾನದಲ್ಲಿ ರಾಜಮನೆತನ ಮೀಸಲಾತಿ ಜಾರಿಗೊಳಿಸಿತ್ತು. ಅರಸು ಅವರೂ ಅದನ್ನೇ ಮುಂದುವರೆಸಿ ಸಣ್ಣ ಸಮುದಾಯಗಳ ಧ್ವನಿಯಾದರು. ಅವರ ಮುಂದೆ ಸಮಾಜದ ಸ್ಥಿತಿಗತಿ, ಬಡತನ, ಅವಮಾನ, ಅವಹೇಳನ ಕಿತ್ತೊಗೆಯುವ ಉದ್ದೇಶವಿತ್ತೇ ಹೊರತು ಜಾತಿಯ ಕಂದಕವಿರಲಿಲ್ಲ’ ಎಂದರು.

‘ಭೂ ಸುಧಾರಣೆ, ಜೀತ ಪದ್ಧತಿ ನಿವಾರಣೆ, ಗಂಗಾ ಕಲ್ಯಾಣ ಯೋಜನೆಗಳನ್ನು ಅರಸು ಯಾವುದೇ ಜಾತಿಗೆ ಸೀಮಿತಗೊಳಿಸಲಿಲ್ಲ. ಲಿಂಗಾಯತರೂ ಮೀಸಲಾತಿ ಫಲಾನುಭವಿಗಳಾಗಿದ್ದಾರೆ. ಅವರ ಅಧಿಕಾರಾವಧಿಯಲ್ಲೇ ಅನೇಕ ಲಿಂಗಾಯತ ಸಮುದಾಯದ ನಾಯಕರು ಸಚಿವರಾಗಿದ್ದರು. ಈಚೆಗೆ ಸ್ವಾಮೀಜಿಗಳೇ ರಾಜಕಾರಣಿಗಳಾಗುತ್ತಿದ್ದು, 2 ಎಗೆ ತಮ್ಮನ್ನು ಸೇರಿಸಬೇಕೆಂದು ಜಯ ಮೃತ್ಯುಂಜಯ ಸ್ವಾಮೀಜಿ ಹೋರಾಡುತ್ತಿದ್ದಾರೆ. 2 ಎಗೆ ಸೇರಿಸಿದರೆ ಅದರಲ್ಲಿರುವ ಅನೇಕ ಸಣ್ಣ ಸಮುದಾಯಗಳು ನಿಮ್ಮ ನಡುವೆ ಓಡಲು ಸಾಧ್ಯವೇ’ ಎಂದು ಪ್ರಶ್ನಿಸಿದರು.

‘ಮುಖ್ಯಮಂತ್ರಿ ಸಿದ್ದರಾಮಯ್ಯ ಮೊದಲ ಅವಧಿಯಲ್ಲಿ ಶೋಷಿತರ ಧ್ವನಿಯಾಗಿದ್ದರು, ಈಗ ಭ್ರಷ್ಟರ ಧ್ವನಿಯಾಗಿ, ಭಾಷಣಕ್ಕಷ್ಟೇ ಸೀಮಿತವಾಗಿದ್ದಾರೆ. ಹೀಗಾಗಿಯೇ ಕಾಂತರಾಜು ವರದಿಯನ್ನು ಬಹಿರಂಗಪಡಿಸಿಲ್ಲ’ ಎಂದು ಟೀಕಿಸಿದರು.

ಬಿಜೆಪಿ ವಿರುದ್ಧದ ಪ್ರಕರಣಗಳ ತನಿಖೆಗೆ ಸಮಿತಿ ರಚಿಸಿರುವ ಕುರಿತು ಪ್ರತಿಕ್ರಿಯಿಸಿ, ‘ಜಿಂದಾಲ್‌ಗೆ ಭೂಮಿ ನೀಡಿರುವ ಹಗರಣದಲ್ಲಿ ಸಿದ್ದರಾಮಯ್ಯ ಕೂಡ ಭಾಗಿಯಾಗಿದ್ದಾರೆ. ಅದು ಬಿಜೆಪಿ ಕಾಲದಲ್ಲಿ ನಡೆದ ಪ್ರಕರಣ, ನಮ್ಮ ಆಡಳಿತದಲ್ಲಿ ಒಪ್ಪಿಗೆಯನ್ನಷ್ಟೇ ನೀಡಿದ್ದೇವೆ ಎನ್ನುವುದು ಹಾಸ್ಯಾಸ್ಪದ. ಹಾಗಿದ್ದರೆ, ಅವರು ಬಿಜೆಪಿಯ ನೆರಳೇ’ ಎಂದು ಪ್ರಶ್ನಿಸಿದರು.

ಖಾಸಗಿ ಫೈನಾನ್ಸ್ ಕಿರುಕುಳ ಖಂಡಿಸಿ ಪ್ರತಿಭಟನೆ

ಮಂಡ್ಯ: ‘ಸಾಲ ವಸೂಲಿಗಾಗಿ ಖಾಸಗಿ ಫೈನಾನ್ಸ್ ಬ್ಯಾಂಕ್‌ನವರು ಕಿರುಕುಳ ನೀಡುತ್ತಿದ್ದಾರೆ’ ಎಂದು ಆರೋಪಿಸಿ ಮಹಿಳೆಯರು ತಾಲ್ಲೂಕಿನ ಹೊಳಲು ಗ್ರಾಮ ಪಂಚಾಯಿತಿ ಎದುರು ಮಂಗಳವಾರ ಪ್ರತಿಭಟನೆ ನಡೆಸಿದರು. ಹಗ್ಗ ಮತ್ತು ಸೀರೆಗಳನ್ನು ಪಂಚಾಯಿತಿ ಎದುರಿನ ಶೆಲ್ಟರ್‌ನಲ್ಲಿ ನೇತು ಹಾಕಿ, ‘ಆತ್ಮಹತ್ಯೆ ಮಾಡಿಕೊಳ್ಳಲು ಅವಕಾಶ ಮಾಡಿಕೊಡಿ’ ಎಂದು ಒತ್ತಾಯಿಸಿದರು.

‘ಯಾವ ಅಧಿಕಾರಿಗೆ ಮನವಿ ಕೊಡಬೇಕೆಂದು ಗೊತ್ತಿಲ್ಲದೆ, ಪಂಚಾಯಿತಿಗೆ ಬಂದಿದ್ದೇವೆ’ ಎಂದು ಲತಾ, ದಿವ್ಯಾ, ರೇಣುಕಾ, ಸೌಮ್ಯಾ, ರುಕ್ಮಿಣಿ ಅಳಲು ತೋಡಿಕೊಂಡರು.

‘ಮೈಕ್ರೋ ಫೈನಾನ್ಸ್ ಸೇರಿದಂತೆ ಇಪ್ಪತ್ತಕ್ಕೂ ಹೆಚ್ಚು ಖಾಸಗಿ ಬ್ಯಾಂಕ್‌ನವರು ಕೂಲಿ ಮಾಡುತ್ತಿರುವ ಮಹಿಳೆಯರನ್ನೇ ಗುರಿಯಾಗಿಸಿಕೊಂಡು ಲಕ್ಷಗಟ್ಟಲೆ ಸಾಲ ನೀಡಿದ್ದು, ಮರುಪಾವತಿಸುವಂತೆ ಒತ್ತಡ ಹೇರುತ್ತಿದ್ದಾರೆ. ಮರುಪಾವತಿ ಮಾಡಲು ಕಾಲಾವಕಾಶ ನೀಡಬೇಕು’ ಎಂದು ಕನ್ನಡಸೇನೆ ಸಂಘಟನೆಯ ಜಿಲ್ಲಾ ಸಂಚಾಲಕ ವೇಣುಗೋಪಾಲ್ ಒತ್ತಾಯಿಸಿದರು.

ಸ್ಥಳಕ್ಕೆ ಬಂದ ಪಂಚಾಯಿತಿ ಉಪಾಧ್ಯಕ್ಷ ನಾರಾಯಣಪ್ಪ, ಸದಸ್ಯರಾದ ರಾಜಶೇಖರ್, ಎಚ್‌.ಡಿ.ಪಲ್ಲವಿ ಹಾಗೂ ಪಿಡಿಒ ಸಂತೋಷ್, ‘ಮೇಲಧಿಕಾರಿಗಳ ಗಮನಕ್ಕೆ ತಂದು ಸಮಸ್ಯೆ ಬಗೆಹರಿಸಲು ಪ್ರಯತ್ನಿಸಲಾಗುವುದು’ ಎಂದು ಭರವಸೆ ನೀಡಿದ ಬಳಿಕ ಮಹಿಳೆಯರು ಪ್ರತಿಭಟನೆ ಸ್ಥಗಿತಗೊಳಿಸಿದರು.

ಮರಕ್ಕೆ ಕಾರು ಡಿಕ್ಕಿ: ನಾಲ್ವರ ದುರ್ಮರಣ

ಕುದೂರು (ಮಾಗಡಿ): ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿ–75ರ ಭದ್ರಾಪುರ ಗೇಟ್ ಬಳಿ ಮಂಗಳವಾರ ಮರಕ್ಕೆ ಕಾರು ಡಿಕ್ಕಿ ಹೊಡೆದಿದ್ದರಿಂದ ಒಂದೇ ಕುಟುಂಬದ ಮೂವರು ಸೇರಿದಂತೆ ನಾಲ್ವರು ಮೃತಪಟ್ಟಿದ್ದಾರೆ. ಯುವತಿಯೊಬ್ಬರು ಗಾಯಗೊಂಡಿದ್ದಾರೆ.

ಕುಣಿಗಲ್ ತಾಲ್ಲೂಕಿನ ಹುಲಿವಾನದ ನಂಜುಂಡಪ್ಪ(56), ಪತ್ನಿ ಶಾರದಮ್ಮ (50), ತಾಯಿ ಭದ್ರಮ್ಮ (80) ಹಾಗೂ ನಾಗರಾಜು (54) ಮೃತಪಟ್ಟಿದ್ದಾರೆ.

ಸುಧಾ, ಮಯೂರ ಓದಿರಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಆ ಕಲ್ಲುಗಳಿಂದ ಗೋಡೆ ಕಟ್ಟುತ್ತೀರೊ, ಸೇತುವೆ ನಿರ್ಮಿಸುತ್ತೀರೊ ನಿಮಗೆ ಬಿಟ್ಟಿದ್ದು. ನೆನಪಿರಲಿ, ನಿಮ್ಮ 'ಬದುಕಿನ ಶಿಲ್ಪಿ' ನೀವೇ.

-ಸಿದ್ಧೇಶ್ವರ ಸ್ವಾಮೀಜಿ

ಆತ್ಮಹತ್ಯೆಯ ಆರ್ಥಿಕ ಹೊರೆ ಹೊಸ ಆಯಾಮ ವಿವರಿಸಿದ ವರದಿ

ಆತ್ಮಹತ್ಯೆಗಳಿಂದ ಆಗುವ ಆರ್ಥಿಕ ಹೊರೆಯು ತೀರಾ ಕಳವಳಕಾರಿ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ 5ರಷ್ಟು ಪಾಲನ್ನು ಮಾತ್ರ ಹೊಂದಿರುವ ಕರ್ನಾಟಕವು ದೇಶದಲ್ಲಿ ಆತ್ಮಹತ್ಯೆಗಳಿಂದ ಉಂಟಾಗುವ ಆರ್ಥಿಕ ಹೊರೆಯಲ್ಲಿ ಐದನೆಯ ಒಂದರಷ್ಟು ಪಾಲು ಹೊಂದಿರುವುದು ಕಳವಳವನ್ನು ಇನ್ನಷ್ಟು ಹೆಚ್ಚಿಸುವ ಸಂಗತಿ. ಆತ್ಮಹತ್ಯೆ ಪ್ರಕರಣಗಳು ಸಂಬಂಧಪಟ್ಟ ವ್ಯಕ್ತಿಗಳನ್ನು, ಕುಟುಂಬಗಳನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ಭಾವನಾತ್ಮಕವಾಗಿ ಬಾಧಿಸುವುದಷ್ಟೇ ಅಲ್ಲ; ಅವು ದೇಶದ ಮೇಲೆ ಭಾರಿ ಪ್ರಮಾಣದ ಆರ್ಥಿಕ ಹೊರೆಯನ್ನು ಹೊರಿಸುತ್ತವೆ. ಅತ್ಯಂತ ಹೆಚ್ಚು ಉತ್ಪಾದಕತೆ ಹೊಂದಿರುವ ವಯೋಮಾನದವರು ಎಂದು ಪರಿಗಣಿತವಾಗಿರುವ 20ರಿಂದ 34 ವರ್ಷ ವಯಸ್ಸಿನವರು, ಆತ್ಮಹತ್ಯೆ ಮಾಡಿಕೊಳ್ಳುವವರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಆತ್ಮಹತ್ಯೆಗಳಿಂದ ದೇಶದ ಮೇಲೆ ಆಗುವ ಆರ್ಥಿಕ ಹೊರೆಯಲ್ಲಿ ಈ ವರ್ಗದವರ ಆತ್ಮಹತ್ಯೆಯಿಂದ ಆಗುವ ಹೊರೆಯ ಪ್ರಮಾಣ ಶೇ 53ರಷ್ಟು. ಆತ್ಮಹತ್ಯೆಯಿಂದ ಉಂಟಾಗುವ ಆರ್ಥಿಕ ಹೊರೆಯಲ್ಲಿ ಕರ್ನಾಟಕದ ಪಾಲು ₹2.33 ಲಕ್ಷ ಕೋಟಿ. ಕರ್ನಾಟಕ, ಮಹಾರಾಷ್ಟ್ರ ಮತ್ತು ತಮಿಳುನಾಡು ರಾಜ್ಯಗಳಲ್ಲಿನ ಆತ್ಮಹತ್ಯೆ ಪ್ರಕರಣಗಳು, ದೇಶದ ಒಟ್ಟು ಆತ್ಮಹತ್ಯೆ ಪ್ರಕರಣಗಳಿಂದ ಉಂಟಾಗುವ ಆರ್ಥಿಕ ಹೊರೆಯಲ್ಲಿ ಶೇ 45ರಷ್ಟು ಪಾಲು ಹೊಂದಿವೆ. ಇದು ದೇಶದ ಆರೋಗ್ಯ ಬಜೆಟ್‌ನ ಗಾತ್ರಕ್ಕಿಂತಲೂ ದೊಡ್ಡದು. ದೇಶದಾದ್ಯಂತ ನಡೆದಿರುವ ಆತ್ಮಹತ್ಯೆ ಪ್ರಕರಣಗಳ ಬಗ್ಗೆ ಅಧ್ಯಯನ ನಡೆಸಿ, ದಿ ಲ್ಯಾನ್ಸೆಟ್ ನಿಯತಕಾಲಿಕವು ಪ್ರಕಟಿಸಿರುವ ವರದಿಯಲ್ಲಿ ಈ ವಿವರಗಳು ಇವೆ. ಆತ್ಮಹತ್ಯೆಯಿಂದ ಉಂಟಾಗುವ ಆರ್ಥಿಕ ಹೊರೆಯ ಬಗ್ಗೆ ಹೆಚ್ಚಿನ ಗಮನ ಹರಿದಿಲ್ಲ. ಆ ಕಡೆ ಗಮನ ಸೆಳೆಯುವ ಕೆಲಸವನ್ನು ಈ ವರದಿ ಮಾಡಿದೆ.



ಕರ್ನಾಟಕದಲ್ಲಿ ಆತ್ಮಹತ್ಯೆಗೆ ನಿರ್ದಿಷ್ಟವಾದ ಕಾರಣಗಳು ಏನು ಎಂಬುದನ್ನು ಗುರುತಿಸಲು ವಿಸ್ತೃತವಾದ ಅಧ್ಯಯನ, ತನಿಖೆಯ ಅಗತ್ಯ ಇದೆ

ಬೇರೆ ಹಲವು ರಾಜ್ಯಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಕರ್ನಾಟಕದಲ್ಲಿ ಆತ್ಮಹತ್ಯೆಗಳು ನಡೆಯುತ್ತಿವೆ ಎಂಬುದು ತಿಳಿದಿರುವ ಸಂಗತಿ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ಅಂಕಿ-ಅಂಶಗಳ ಪ್ರಕಾರ, ದೇಶದಲ್ಲಿ ಅತಿಹೆಚ್ಚಿನ ಪ್ರಮಾಣದಲ್ಲಿ ಆತ್ಮಹತ್ಯೆಗಳು ವರದಿಯಾಗುವ ಮೊದಲ ಐದು ರಾಜ್ಯಗಳ ಪೈಕಿ ಕರ್ನಾಟಕವೂ ಒಂದು. 2021ರಲ್ಲಿ ದೇಶದಲ್ಲಿ ವರದಿಯಾದ ಒಟ್ಟು ಆತ್ಮಹತ್ಯೆ ಪ್ರಕರಣಗಳ ಪೈಕಿ ಶೇ 8ರಷ್ಟು ಕರ್ನಾಟಕದಲ್ಲೇ ಆಗಿವೆ. ಕಳೆದ 15 ತಿಂಗಳ ಅವಧಿಯಲ್ಲಿ ರಾಜ್ಯದಲ್ಲಿ ಅಂದಾಜು 1,500 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬೆಳಗಾವಿ, ಹಾವೇರಿ, ಧಾರವಾಡ ಜಿಲ್ಲೆಗಳಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳು ಹೆಚ್ಚಿನ ಪ್ರಮಾಣದಲ್ಲಿ ವರದಿಯಾಗಿವೆ. ಮಾನಸಿಕ ಆರೋಗ್ಯ ಸಮಸ್ಯೆಯ ಕಾರಣದಿಂದಾಗಿ ಆತ್ಮಹತ್ಯೆ ಮಾಡಿಕೊಳ್ಳುವ ಪ್ರಕರಣಗಳು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿವೆ. 2021ರಲ್ಲಿ ಪ್ರತಿದಿನ 36 ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ; ಇದಕ್ಕೆ ಕಾರಣ ಖಿನ್ನತೆ, ವ್ಯಸನ, ಮಾನಸಿಕ ಆರೋಗ್ಯ ಸಮಸ್ಯೆ, ಆರ್ಥಿಕ ಸಮಸ್ಯೆಗಳು ಎಂದು ವರದಿಗಳು ಹೇಳುತ್ತವೆ. ಕರ್ನಾಟಕದಲ್ಲಿ ಆತ್ಮಹತ್ಯೆಗೆ ನಿರ್ದಿಷ್ಟ ಕಾರಣಗಳು ಏನು ಎಂಬುದನ್ನು ಗುರುತಿಸಲು ವಿಸ್ತೃತವಾದ ಅಧ್ಯಯನ, ತನಿಖೆಯ ಅಗತ್ಯ ಇದೆ. ಈ ಸಮಸ್ಯೆಯನ್ನು ಪರಿಹರಿಸಲು ಸೂಕ್ತವಾದ ಕಾರ್ಯಕ್ರಮವೊಂದನ್ನು ರೂಪಿಸುವ ಅಗತ್ಯವೂ ಇದೆ. ಸರ್ಕಾರ, ಸಮುದಾಯ ಮಟ್ಟದಲ್ಲಿ ಕೆಲಸ ಮಾಡುವ ಸಂಘಟನೆಗಳು, ಆರೋಗ್ಯ ಸೇವಾ ವಲಯದ ಸಂಘಟನೆಗಳು, ಶೈಕ್ಷಣಿಕ ಸಂಸ್ಥೆಗಳು ಮತ್ತು ವಿವಿಧ ಕಂಪನಿಗಳು ಆತ್ಮಹತ್ಯೆ ತಡೆಯುವ ಕಾರ್ಯದಲ್ಲಿ ಕೈಜೋಡಿಸಬಹುದು.

ಜಗತ್ತಿನ ಆತ್ಮಹತ್ಯೆ ಪ್ರಕರಣಗಳ ರಾಜಧಾನಿ ಎಂಬ ಕೆಟ್ಟ ಹೆಸರು ಭಾರತಕ್ಕೆ ಇದೆ. ಜಾಗತಿಕವಾಗಿ ಪ್ರತಿ ಒಂದು ಲಕ್ಷ ಮಂದಿಯಲ್ಲಿ 9 ಮಂದಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಆದರೆ ಭಾರತದಲ್ಲಿ ಈ ಪ್ರಮಾಣ 14ರಷ್ಟಿದೆ. ರಾಷ್ಟ್ರೀಯ ಆತ್ಮಹತ್ಯಾ ತಡೆ ಕಾರ್ಯತಂತ್ರವು 2030ರ ಸುಮಾರಿಗೆ ದೇಶದಲ್ಲಿ ಆತ್ಮಹತ್ಯೆಯ ಪ್ರಮಾಣವನ್ನು ಶೇಕಡ 10ರಷ್ಟು ಕಡಿಮೆ ಮಾಡುವ ಉದ್ದೇಶ ಹೊಂದಿದೆ. ಆದರೆ, ಮಾನಸಿಕ ಆರೋಗ್ಯ ಕುರಿತು ಹೆಚ್ಚಿನ ಗಮನ ನೀಡುತ್ತಿಲ್ಲ, ಈ ವಿಚಾರಕ್ಕೆ ಬಜೆಟ್‌ನಲ್ಲಿ ನಿಗದಿ ಮಾಡುವ ಮೊತ್ತ ಕೂಡ ಬಹಳ ಕಡಿಮೆ. ಆರೋಗ್ಯ ಬಜೆಟ್‌ನ ಶೇಕಡ 1ಕ್ಕಿಂತ ಕಡಿಮೆ ಮೊತ್ತವು ಈ ಉದ್ದೇಶಕ್ಕಾಗಿ ಸಿಗುತ್ತಿದೆ. ಆತ್ಮಹತ್ಯೆಗಳಿಂದ ಆಗುವ ಆರ್ಥಿಕ ಪರಿಣಾಮದ ಕುರಿತ ಅಧ್ಯಯನ ವರದಿಯು ಸಮಸ್ಯೆಯ ಹೊಸ ಆಯಾಮಗಳ ಬಗ್ಗೆ ಬೆಳಕು ಚೆಲ್ಲುವ ಕೆಲಸ ಮಾಡಿದೆ. ವರದಿಯಲ್ಲಿ ಇರುವ ಅಂಕಿ-ಅಂಶಗಳು, ವರದಿಯು ಕಂಡುಕೊಂಡಿರುವ ಸಂಗತಿಗಳು ಆತ್ಮಹತ್ಯೆಗಳನ್ನು ತಡೆಯಲು ಹೆಚ್ಚು ಪರಿಣಾಮಕಾರಿಯಾದ ಕ್ರಿಯಾಯೋಜನೆ ರೂಪಿಸಲು ಕಾರಣವಾಗಬೇಕು. ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಕಾರಣಗಳ ಬಗ್ಗೆ ಹೆಚ್ಚು ಪರಿಶೀಲನೆ ನಡೆಯಬೇಕು. ಬಡತನ, ನಿರುದ್ಯೋಗ ಮತ್ತು ಅವುಗಳಿಗೆ ಸಂಬಂಧಿಸಿದ ಇತರ ಸಂಗತಿಗಳನ್ನು ಪರಿಗಣಿಸಿ, ಆತ್ಮಹತ್ಯೆ ತಡೆಯುವ ಕ್ರಿಯಾಯೋಜನೆಗಳನ್ನು ಪರಿಣಾಮಕಾರಿ ಆಗಿಸಬೇಕು. ಆತ್ಮಹತ್ಯೆಗೆ ಕಾರಣವಾಗುವ ಸಂಗತಿಗಳನ್ನು ಇಲ್ಲವಾಗಿಸುವುದು ಆಪ್ತಸಮಾಲೋಚನೆ ಹಾಗೂ ಇತರ ಕ್ರಮಗಳಷ್ಟೇ ಪರಿಣಾಮಕಾರಿ ಆಗುತ್ತದೆ.

ಕನ್ನಡ– ಕನ್ನಡಿಗರ ಬೇಡಿಕೆ ಮತ್ತು 'ಹೋರಾಟದ ಮಾದರಿ'ಯ ಪ್ರಸ್ತುತತೆಯ ಪ್ರಶ್ನೆ ಹುಟ್ಟಿದೆ

ಗೋಕಾಕೋತ್ತರ ಸಂದರ್ಭಕ್ಕೇನು ಉತ್ತರ?



ವಿಶ್ಲೇಷಣೆ

ಚಂದ್ರಕಾಂತ ವಡ್ಡು

ಒಂದು ನಾಡಿನ ವಯಸ್ಸು ಲೆಕ್ಕ ಹಾಕುವಾಗ ಮೂರ್‍ನಾಲ್ಕು ದಶಕಗಳು ಯಾವ ದೊಡ್ಡ ಸಂಖ್ಯೆಯೂ ಅಲ್ಲ. ಆದರೆ ಅದೇ ನಾಡಿನಲ್ಲಿ ಸೀಮಿತಾವಧಿಗೆ ಜೀವನ ಸಾಗಿಸುವ ಅದೆಷ್ಟೋ ಜನರ ಬದುಕುಗಳು ಕೂಡ ಆ ಕಾಲದೊಂದಿಗೆ ಬೆಸೆದುಕೊಂಡಿರುತ್ತವೆ ಎಂಬುದನ್ನು ಮರೆಯಲಾಗದು, ಮರೆಯಬಾರದು. ಇದು ಪ್ರತಿ ಕಾಲಘಟ್ಟಕ್ಕೂ ತನ್ನದೇ ಆದ ಮಹತ್ವ, ವೈಶಿಷ್ಟ್ಯ ಅಥವಾ ವೈರುಧ್ಯಗಳ ಇರುವಿಕೆಯನ್ನು ತೋರ್ಪಡಿಸುತ್ತದೆ. ಆ ದೃಷ್ಟಿಕೋನದಲ್ಲಿ ಯಾವ ಸಮಯವೂ ಯಾವ ಸಂದರ್ಭವೂ ಯಾವ ಬೆಳವಣಿಗೆಯೂ ಗೌಣ ಆಗಲಾರದು.

ಕನ್ನಡ ಭಾಷೆ, ಕನ್ನಡ ಜನ ಮತ್ತು ಕನ್ನಡ ನಾಡಿಗೆ ಸಂಬಂಧಿಸಿದಂತೆ ಹಿಂದಿನ ಮೂರು ದಶಕಗಳಿಂದ ಮೂರು ವರದಿಗಳು ಕಾಲಕಾಲಕ್ಕೆ ಸದ್ದು ಮಾಡುವುದು, ಮತ್ತೆ ನಿದ್ದೆಗೆ ಸರಿಯುವುದನ್ನು ನಾವೆಲ್ಲ ಗಮನಿಸುತ್ತಲೇ ಇದ್ದೇವೆ. ಒಂದು, ಪ್ರಾಥಮಿಕ ಶಾಲೆಗಳಲ್ಲಿ ಕಲಿಕಾ ಮಾಧ್ಯಮಕ್ಕೆ ಸಂಬಂಧಿಸಿದಂತೆ ಮಾತೃಭಾಷೆಯ ಮಹತ್ವ ಎತ್ತಿ ಹಿಡಿಯುವ ವಿ.ಕೃ.ಗೋಕಾಕ್ ವರದಿ. ಎರಡನೆಯದು, ಖಾಸಗಿ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಉದ್ಯೋಗಾವಕಾಶ ಪ್ರತಿಪಾದಿಸುವ ಸರೋಜಿನಿ ಮಹಿಷಿ ವರದಿ. ಮತ್ತೊಂದು, ಪ್ರಾದೇಶಿಕ ಅಸಮಾನತೆ ಕುರಿತು ಅಧ್ಯಯನ ಪೂರ್ಣವಾಗಿ ಮಾತನಾಡುವ ಡಿ.ಎಂ.ನಂಜುಂಡಪ್ಪ ವರದಿ. ಭಾಷಾ ಮಾಧ್ಯಮ, ಸ್ಥಳೀಯರಿಗೆ ಉದ್ಯೋಗ ಹಾಗೂ ಪ್ರಾದೇಶಿಕ ಸಮಾನತೆ ಪ್ರಶ್ನೆಗಳು ಚರ್ಚೆಯ ವೇದಿಕೆ ಏರಿದಾಗೆಲ್ಲಾ ಈ ಮೂರೂ ಜನಪ್ರಿಯ ವರದಿಗಳನ್ನು ಉಲ್ಲೇಖಿಸುವುದು ಸಾಂಪ್ರದಾಯಿಕ ಆಚರಣೆಯ ಭಾಗದಂತೆ ಜಾರಿಯಲ್ಲಿದೆ. ಈ ಮೂರು ವರದಿಗಳಲ್ಲಿ ಇದೀಗ ಗೋಕಾಕ್ ಮತ್ತು ಸರೋಜಿನಿ ಮಹಿಷಿ ವರದಿಗಳು ಹೆಚ್ಚು ಪ್ರಸ್ತಾಪವಾಗುವ ಸಂದರ್ಭ ಏರ್ಪಟ್ಟಿರುವುದನ್ನು ಗಮನಿಸಬಹುದು.

2024– 25ನೇ ಶೈಕ್ಷಣಿಕ ವರ್ಷದ ಆರಂಭದಲ್ಲಿ 1,419 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ಆರಂಭಿಸಲು ಅನುಮತಿ ನೀಡಲಾಗಿತ್ತು. ಈಗ ಮತ್ತೆ ಹೆಚ್ಚುವರಿ ಬೇಡಿಕೆ ಪರಿಗಣಿಸಿ ಕನಿಷ್ಠ 100 ವಿದ್ಯಾರ್ಥಿಗಳಿರುವ 373 ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ (ದ್ವಿಭಾಷಾ) ವಿಭಾಗಗಳನ್ನು ಪ್ರಾರಂಭಿಸಲು ರಾಜ್ಯ ಸರ್ಕಾರ ಅನುಮೋದನೆ ನೀಡಿದೆ. ಈ ಶಾಲೆಗಳು ಬೆಂಗಳೂರು ದಕ್ಷಿಣ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ತುಮಕೂರು, ಬಾಗಲಕೋಟೆ, ಗದಗ, ಹಾವೇರಿ, ಉತ್ತರ ಕನ್ನಡ, ಶಿರಸಿ, ಮೈಸೂರು, ಹಾಸನ, ವಿಜಯಪುರ ಮತ್ತು ಚಿಕ್ಕಮಗಳೂರು ವ್ಯಾಪ್ತಿಗೆ ಸೇರಿವೆ.

ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮದ ಬೋಧನೆಗೆ ಮುಂದಾಗಿರುವ ಸರ್ಕಾರದ ಈ ಕ್ರಮ ಕನ್ನಡ ಸಾಹಿತಿಗಳು, ಹೋರಾಟಗಾರರ ಕೆಂಗಣ್ಣಿಗೆ ಗುರಿಯಾಗುವುದು ಸಹಜ. ಹಾಗಾದರೆ 'ಗೋಕಾಕ್ ಮಾದರಿ' ಚಳವಳಿ ಆರಂಭಿಸಲು ಇದು ಸಕಾಲ ಆಗಿರಬಹುದೇ? ಸುಮಾರು ನಲವತ್ತು ವರ್ಷಗಳ ಹಿಂದಿನ ಆ ಚಳವಳಿ ಇಂದಿಗೂ ಮಾದರಿ ಆದೀತೇ? ಆಗಬೇಕೇ?

ಈ ಅವಧಿಯಲ್ಲಿ ಭಾಷಾ ಮಾಧ್ಯಮದ ಬಿಕ್ಕಟ್ಟು ಎಷ್ಟೊಂದು ದಿಕ್ಕುಗಳಲ್ಲಿ ಟಿಸಿಲೊಡೆದಿದೆ; ವಿದ್ಯಾರ್ಥಿಗಳು, ಪೋಷಕರು, ಸರ್ಕಾರದ ಮನೋಧರ್ಮ, ಅಗತ್ಯ ಮತ್ತು ಆದ್ಯತೆಗಳು ಎಷ್ಟೆಲ್ಲಾ ಏರುಪೇರು ಕಂಡಿವೆ. ಸಾಹಿತಿಗಳು, ಹೋರಾಟಗಾರರು, ಯುವಪೀಳಿಗೆಯ ಕೆಚ್ಚು, ಪ್ರಾಮಾಣಿಕತೆ ಮುಕ್ಕಾಗಿರುವ ಸತ್ಯವನ್ನೂ ಮರೆಮಾಚಲಾಗದು. ಹಾಗಾಗಿ, ಗೋಕಾಕ್ ವರದಿ ಅಥವಾ ಚಳವಳಿಯ ಮಾದರಿ ಪ್ರಸ್ತುತತೆ ಉಳಿಸಿಕೊಂಡಿದೆಯೇ ಎಂಬುದನ್ನು ಮತ್ತೊಮ್ಮೆ ಖಾತರಿಪಡಿಸಿಕೊಳ್ಳಬೇಕಿದೆ.

ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ದೊರೆಯಬೇಕೆಂಬುದು ಜಾಗತಿಕವಾಗಿ, ವೈಜ್ಞಾನಿಕವಾಗಿ ಸ್ವೀಕೃತ ತತ್ವ. ಈಗ ನಮ್ಮ ಮುಂದಿರುವುದು ಅದನ್ನು ಹೇಗೆ ಅನುಷ್ಠಾನಗೊಳಿಸಬೇಕು ಎಂಬ ಪ್ರಶ್ನೆ ಮಾತ್ರ. ಇದು ಬರೀ ಕನ್ನಡದ ಸಮಸ್ಯೆಯಲ್ಲ. ಭಾರತದಲ್ಲಿರುವ 19,545 ಮಾತೃಭಾಷೆಗಳ ಅಸ್ತಿತ್ವ, ಅಸ್ಮಿತೆ ಇದರಲ್ಲಿ ಅಡಗಿದೆ. ಇಂತಹ ವಿಶಾಲ ವ್ಯಾಪ್ತಿಯ, ರಾಷ್ಟ್ರ ಮಟ್ಟದ 'ನೀತಿ' ಬೇಡುವ ವಿಷಯದ ಬಗ್ಗೆ ಸಮಯಕ್ಕೆ ತಕ್ಕಂತೆ, ವೇದಿಕೆಗೆ ತಕ್ಕಷ್ಟು ಕೂಗು ಹಾಕುವುದರಿಂದ ಏನೂ ಪ್ರಯೋಜನವಾಗದು.

ಸರ್ಕಾರಿ ಶಾಲೆಗಳಲ್ಲಿ ಕಲಿಯುವವರು ಬಹುಪಾಲು ಹಳ್ಳಿಗಾಡಿನ ಬಡವರ, ಪರಿಶಿಷ್ಟರ, ಹಿಂದುಳಿದವರ ಮಕ್ಕಳು. ಈ ವಿದ್ಯಾರ್ಥಿಗಳಿಗೆ ಮಾತ್ರ ಮಾತೃಭಾಷಾ ಶಿಕ್ಷಣ ಪದ್ಧತಿ ಅನ್ವಯಿಸಲು ಹೋರಾಡುವುದು, ಇಂಗ್ಲಿಷ್ ಮಾಧ್ಯಮದ ಲಕ್ಷಾಂತರ ಖಾಸಗಿ ಶಾಲೆಗಳ ಕುರಿತು ಮೌನ ವಹಿಸುವುದು ಯಾವ ನ್ಯಾಯ? ಸಹಜವಾಗಿಯೇ ಉದ್ಭವಿಸುವ ಈ ಸರಳ ಸಂದೇಹಕ್ಕೆ ಸ್ಪಷ್ಟ ಉತ್ತರವಿನ್ನೂ ದೊರಕಿಲ್ಲ. ವಸ್ತುಸ್ಥಿತಿ ಹೀಗಿರುವಾಗ, 'ಜಾತಿ, ವರ್ಗ, ಪ್ರದೇಶದ ನಡುವೆ ತಾರತಮ್ಯ ಸೃಷ್ಟಿಯಾಗದಂತೆ ಎಲ್ಲರಿಗೂ ಏಕರೀತಿಯಲ್ಲಿ ಶಿಕ್ಷಣ ಮಾಧ್ಯಮವನ್ನು ಜಾರಿ ಮಾಡಿ' ಎಂಬ ನ್ಯಾಯಯುತ ಬೇಡಿಕೆಗೆ ಹೆಚ್ಚಿನ ಮಹತ್ವವಿದೆ. ಬದಲಾದ ಸನ್ನಿವೇಶದಲ್ಲಿ ಮುನ್ನೆಲೆಗೆ ಬರಬೇಕಿರುವುದು 'ಸಮಾನ ಶಿಕ್ಷಣ ನೀತಿ' ಎಂಬುದನ್ನು ನಿರಾಕರಿಸಲು ಬಹುಶಃ ಯಾವುದೇ ತರ್ಕ-ವಾದ-ಸಬೂಬು ದೊರೆಯಲಿಕ್ಕಿಲ್ಲ.


ಇತ್ತೀಚೆಗೆ ಸಾರ್ವಜನಿಕ ರಂಗದ ಮೇಲೆ ಪರದೆ ಸರಿಸಿ ಕಾಣಿಸಿಕೊಂಡಿರುವ ಮತ್ತೊಂದು ವಿಷಯ ಖಾಸಗಿ ವಲಯದಲ್ಲಿ ಕನ್ನಡಿಗರಿಗೆ ಉದ್ಯೋಗ ಮೀಸಲಾತಿ ಕಲ್ಪಿಸುವುದಕ್ಕೆ ಸಂಬಂಧಿಸಿದ್ದು. ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಅದ್ಯಾವ ಲೆಕ್ಕಾಚಾರದಲ್ಲೋ ಇದ್ದಕ್ಕಿದ್ದಂತೆ ಖಾಸಗಿ ಕಂಪನಿಗಳಲ್ಲಿ ಸ್ಥಳೀಯರಿಗೆ ಉದ್ಯೋಗ ಮೀಸಲಾತಿ ಕಲ್ಪಿಸುವ ಉದ್ದೇಶದಿಂದ ರೂಪಿಸಿದ ಮಸೂದೆಯ ಕರಡುವಿಗೆ ಉದ್ಯಮಪತಿಗಳು ಬಹಿರಂಗವಾಗಿಯೇ ಪ್ರತಿರೋಧ ಒಡ್ಡಿದರು. ಹೂಡಿಕೆದಾರರ ವಲಸೆಯ ಬೆದರಿಕೆಗಳೂ ಕೇಳಿಬಂದವು. ಅಡಕತ್ತರಿಯಲ್ಲಿ ಸಿಲುಕಿದ ಸರ್ಕಾರ ನೆಪವೊಂದನ್ನು ನೀಡುವ ಮೂಲಕ ಕರಡು ಮಸೂದೆಗೆ ಅನುಮೋದನೆ ನೀಡುವ ವಿಚಾರವನ್ನು ಮುಂದಕ್ಕೆ ದೂಡಿ 'ಬದುಕಿದೆಯಾ ಬಡಜೀವವೇ...' ಎಂದು ಉಸಿರೆಳೆದುಕೊಂಡಿತು.

ಆದರೆ ಅಷ್ಟೊತ್ತಿಗಾಗಲೇ ಕನ್ನಡಿಗರ ಉದ್ಯೋಗಾಕಾಂಕ್ಷೆಯ ಸುಪ್ತ ಬಯಕೆ ಗರಿಬಿಚ್ಚಿ ನರ್ತಿಸತೊಡಗಿತ್ತು. ಹೋರಾಟಗಾರರ ಬಾವುಟಗಳು ಹೊರಬಂದವು. ಉದ್ಯೋಗದಲ್ಲಿ ಕನ್ನಡಿಗರಿಗೆ ಮೀಸಲಾತಿ ಅಂದಾಕ್ಷಣ ಸರೋಜಿನಿ ಮಹಿಷಿ ವರದಿ ಕೂಡ ಸಹಜವಾಗಿ ಘೋಷಣೆಗಳ ಭಾಗವಾಯಿತು. ಆದರೆ ಎಂಬತ್ತರ ದಶಕದ ಜಾಗತೀಕರಣಪೂರ್ವ ಸನ್ನಿವೇಶ, ಬೇಡಿಕೆ, ಅಗತ್ಯ, ಅಂಕಿಅಂಶಗಳನ್ನು ಆಧರಿಸಿ ಸಿದ್ಧಪಡಿಸಿದ ಈ ವರದಿಯ ಪ್ರಸ್ತುತತೆಯನ್ನು ಒರೆಗೆ ಹಚ್ಚುವ ವ್ಯವಧಾನ ಅಷ್ಟಾಗಿ ಕಾಣಿಸಲಿಲ್ಲ.

ಎಂದಿನಂತೆ ಇಂತಹ ವಿಷಯಗಳಲ್ಲಿ ಭಾವಾವೇಶದ್ದೇ ಮೇಲುಗೈ. 'ಕನ್ನಡಾಭಿಮಾನ ಎಂಬುದು ಮತಾಂಧತೆ ಸ್ವರೂಪ ತಳೆಯಬಾರದು' ಎಂಬ ಕ್ಯಾಪ್ಟನ್ ಜಿ.ಆರ್.ಗೋಪಿನಾಥ್ ಅವರ ಸಂಯಮದ ನುಡಿ ಉದ್ವೇಗವಶರಾದವರಿಗೆ ರುಚಿಸಲಾರದು. ಅದರಂತೆ 'ವರ್ಗ ಮತ್ತು ಜಾತಿ ವ್ಯವಸ್ಥೆಯಲ್ಲಿ ಮೇಲಿರುವವರೇ ಕನ್ನಡಿಗರ ಕೋಟಾದ ಫಲಾನುಭವಿಗಳಾಗಬಹುದು' ಎಂಬ ಪ್ರಾಧ್ಯಾಪಕ ಸಿ.ಜಿ.ಲಕ್ಷ್ಮೀಪತಿ ಅಂತಹವರ ಆತಂಕ ಎಷ್ಟು ಪ್ರಜ್ಞೆಗಳಿಗೆ ನಿಲುಕೀತು ಎಂದು ಹೇಳುವುದೂ ಕಷ್ಟ. ಹಾಗಾದರೆ ಪ್ರಚಲಿತ ಹೋರಾಟಗಳು ಔಟ್‌ಡೇಟೆಡ್ ಆಗಿವೆ ಎಂಬ ಆಕ್ಷೇಪದಲ್ಲಿ ತಥ್ಯ ಇದೆಯಲ್ಲವೇ? ಅವು ಆಧುನಿಕ ಸಂದರ್ಭ, ಅಗತ್ಯಗಳಿಗೆ ಸರಿಹೊಂದುವಂತೆ ಪರಿಷ್ಕರಣೆ ಆಗುವ ಅನಿವಾರ್ಯವನ್ನು ಒಪ್ಪಬೇಕಲ್ಲವೇ?

ಜಾಗತೀಕರಣದ ದೆಸೆಯಿಂದಾಗಿ ಒಲಿಂಪಿಕ್ ಓಟದ ವೇಗದಲ್ಲಿ ಬದಲಾಗುತ್ತಿರುವ ದೇಶದ ಮತ್ತು ದೇಶವಾಸಿಗಳ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ, ಪಾರಿಸರಿಕ ಸನ್ನಿವೇಶಗಳು ಬೌದ್ಧಿಕ ವಲಯದಿಂದ ಹೊಚ್ಚಹೊಸ ಚಿಂತನೆ ಹಾಗೂ ಆಡಳಿತ ವ್ಯವಸ್ಥೆಯಲ್ಲಿ ಸಮಗ್ರ ಸಂಚಲನೆಯ ನಿರೀಕ್ಷೆಯಲ್ಲಿವೆ. ಆಧುನಿಕ ಅಗತ್ಯಗಳಿಗೆ ಅಷ್ಟೇ ವೇಗದಲ್ಲಿ ಸ್ಪಂದಿಸುವಂತೆ ನಾಡಿನ ಸ್ವಸ್ಥ ಮನಸ್ಸುಗಳು ಹುರಿಗೊಳ್ಳುವುದು ಅನಿವಾರ್ಯ. ಈ ದಿಸೆಯಲ್ಲಿ ವಿಶಾಲ ತಳಹದಿಯ 'ಹೊಸ ಮಾದರಿ' ಚಳವಳಿ ಹುಟ್ಟುಹಾಕುವ, ಹೋರಾಟ ಕಟ್ಟುವ ಹೊಣೆಯನ್ನು ಸಾಹಿತಿಗಳ ಸುಪರ್ದಿಗೆ ವಹಿಸಿ ಸುಮ್ಮನಾಗುವುದು ಕೂಡ ಪ್ರಯೋಜನ ತರಲಿಕ್ಕಿಲ್ಲ.

ಸಮಾಜದ ವಿವಿಧ ಸ್ತರಗಳ ವಿವೇಕಿಗಳೆಲ್ಲಾ ಈ ದಿಕ್ಕಿನಲ್ಲಿ ದನಿ ಎತ್ತಬೇಕಿದೆ. ಅದಕ್ಕೂ ಮೊದಲು ಪ್ರಾಥಮಿಕ ಶಿಕ್ಷಣ ಮಾಧ್ಯಮ ಹಾಗೂ ಕನ್ನಡಿಗರಿಗೆ ಉದ್ಯೋಗ ಮೀಸಲಾತಿ ಕುರಿತು ಜಾಗತೀಕರಣೋತ್ತರ ಸಂದರ್ಭದ ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ ಹಿನ್ನೆಲೆಯಲ್ಲಿ 'ನವ ಮಹಿಷಿ' ಮತ್ತು 'ನವ ಗೋಕಾಕ್' ವರದಿಗಳು ಸಿದ್ಧಗೊಳ್ಳಬೇಕಿವೆ. ಅವುಗಳನ್ನು ಹಿಂಬಾಲಿಸಬೇಕಿರುವುದು ಚಳವಳಿಯ 'ಹೊಸ ಮಾದರಿ'.



ಚುರುಮುರಿ



ಹಸು ಪಾಲನೆ

• ಮಣ್ಣೆ ರಾಜು

ಟೊಮೆಟೊ ಬೆಲೆ ಹೆಚ್ಚಾದಾಗ ಸುಮಿ ಮನೆ ಕಾಂಪೌಂಡ್‌ನಲ್ಲಿ ಟೊಮೆಟೊ ಬೆಳೆದಳು. ಈರುಳ್ಳಿ ದರ ಏರಿಕೆಯಾದಾಗ ಕುಂಡದಲ್ಲಿ ಈರುಳ್ಳಿ ಫಸಲು ತೆಗೆದು ಸಾಂಬಾರ್ ಮಾಡಿ ಸಂಸಾರ ಸಾಗಿಸಿದ್ದಳು. ಈಗ ಹಾಲಿನ ದರ ಹೆಚ್ಚಳದ ಪ್ರಸ್ತಾಪ ಸುಮಿಯನ್ನು ಚಿಂತೆಗೀಡುಮಾಡಿತ್ತು.

'ರೀ, ನಾವೂ ಒಂದು ಹಸು ತಂದು ಸಾಕಿ ಹಾಲಿನ ಸ್ವಾವಲಂಬಿಯಾಗೋಣ...' ಅಂದಳು.

'ಹಸು ಪಾಲನೆ ಸುಲಭವಲ್ಲ. ಬೆಡ್‌ರೂಂ ಸೈಜಿನ ಕೊಟ್ಟಿಗೆ ಇರಬೇಕು. ಹುಲ್ಲು, ಹಿಂಡಿ, ಬೂಸ ತಿನ್ನಿಸಬೇಕು, ಎರಡು ಹೊತ್ತೂ ಹಾಲು ಕರೆಯಬೇಕು, ಸಗಣಿ, ಗಂಜಲ ಬಾಚಬೇಕು...' ಶಂಕ್ರಿ ನಿರಾಸಕ್ತಿ ತೋರಿಸಿದ.

'ಹಸು ಬದಲು ನಾಯಿ ಸಾಕೋಣ. ಮನೆ ಕಾವಲು ಕಾಯುತ್ತದೆ, ಅಪರಿಚಿತರು ಬಂದರೆ ಬೊಗಳುತ್ತದೆ, ಹಸು ಬೊಗಳುವುದಿಲ್ಲ' ಎಂದಳು ಮಗಳು.

'ಹಸು ಹಾಲು ಕೊಡುತ್ತೆ, ನಾಯಿ ಏನು ಕೊಡುತ್ತೆ?' ಎಂದು ರೇಗಿದ ಸುಮಿ, 'ಹಸು ಕೊಡುವ ಹಾಲನ್ನು ನಾವು ಕುಡಿದು ಮಿಕ್ಕಿದ್ದನ್ನು ಡೇರಿಗೆ ಹಾಕಿದರೆ ಅದರ ಹಣ ಮನೆ ಖರ್ಚಿಗಾಗುತ್ತದೆ' ಎಂದಳು.

'ಹೈನುಗಾರಿಕೆ ಲಾಭದಾಯಕ ವ್ಯವಹಾರವೇ, ನಿರ್ವಹಣೆ ಕಷ್ಟ' ಶಂಕ್ರಿ ಹೇಳಿದ.

'ನಾಯಿ ಮೇನ್‌ಟೆನೆನ್ಸ್ ಈಸಿ ಡ್ಯಾಡಿ. ನಾಯಿ ಹುಲ್ಲು ತಿನ್ನೋದಿಲ್ಲ, ನಾವು ತಿನ್ನೋದನ್ನೇ ತಿನ್ಕೊಂಡಿರುತ್ತೆ' ಅಂದ ಮಗ.

'ಹಸು ಸಾಕಾಣಿಕೆಗೆ ಬ್ಯಾಂಕ್‌ಗಳು ಸಾಲ ಕೊಡುತ್ತವೆ, ನಾಯಿ ಸಾಕಲು ಯಾರೂ ಲೋನ್ ಕೊಡೋದಿಲ್ಲ' ಅಂದ ಶಂಕ್ರಿ.

'ಸ್ಕೂಲಿನ ಬ್ಯಾಲೆನ್ಸ್ ಫೀಸ್ ಕಟ್ಟಲು ಟೀಚರ್ ಹೇಳಿದ್ದಾರೆ ಡ್ಯಾಡಿ' ಅಂದ ಮಗ.

'ಹಸು ಸಾಕುವುದಕ್ಕಿಂತ ಮಕ್ಕಳನ್ನು ಸಾಕುವುದು ಕಷ್ಟ ಆಗಿಬಿಟ್ಟಿದೇರೀ' ಸುಮಿಗೆ ಸಂಕಟ.

ನಿಟ್ಟುಸಿರುಬಿಟ್ಟ ಶಂಕ್ರಿ, 'ಪಶುಪಾಲನೆಗೆ ನೀಡುವಂತೆ ಮಕ್ಕಳ ಪಾಲನೆಗೂ ಸರ್ಕಾರ ಸಾಲಸೌಲಭ್ಯ ಯೋಜನೆ ಜಾರಿಗೆ ತಂದು ನೆರವಾಗಬೇಕು...' ಎಂದು ಆಸೆಪಟ್ಟ.

ದಿನದ ಟ್ವೀಟ್

ಬಳಸೋಣ, ಬೆಳೆಸೋಣ



ಕನ್ನಡ ತಿಳಿದಿರುವ ವೈದ್ಯರು ಕನಿಷ್ಠ ನಿಮ್ಮ ಹೆಸರನ್ನಾದರೂ ಕನ್ನಡದಲ್ಲಿ ಬರೆಯುವಂತೆ, ಮುಂದಿನ ಸಲ ಆಸ್ಪತ್ರೆಗೆ ಹೋದಾಗ ವೈದ್ಯರನ್ನು ವಿನಂತಿಸಿರಿ. ಕನ್ನಡವು ಆದೇಶಗಳಿಂದ ಬೆಳೆಯದು, ಬಳಕೆಯಿಂದ ಬೆಳೆಯುತ್ತದೆ.

ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷ, ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಕಿಡಿನುಡಿ



ತಮಿಳು ಅಥವಾ ಕನ್ನಡ ಭಾಷಿಕರ ಪಾಲಿಗೆ ಇಂಗ್ಲಿಷ್ ಮತ್ತು ಹಿಂದಿ ಎರಡೂ ತಮ್ಮ ಮಾತೃಭಾಷೆಗಿಂತ ಸಂಪೂರ್ಣ ಭಿನ್ನ. ಹಿಂದಿಗೆ ಬದಲಾಗಿ ಇಂಗ್ಲಿಷ್ ಆಯ್ಕೆ ಮಾಡಿಕೊಳ್ಳುವುದರ ಹಿಂದೆ ಸಹಜ ವ್ಯಾವಹಾರಿಕ ಜ್ಞಾನ ಇರುತ್ತದೆ. ಪ್ರತಿ ಭಾರತೀಯನೂ ಎರಡು ಭಾಷೆ ಕಲಿತರೆ ಸಾಕು. ಮೂರನೇ ಭಾಷೆಯನ್ನು ಅಗತ್ಯಕ್ಕೆ ತಕ್ಕಂತೆ ಕಲಿಯಬಹುದು. ತಮಿಳು ಭಾಷಿಕ ಕೋಲ್ಕತ್ತದಲ್ಲಿ ನೆಲಸುವಂತಾದರೆ, ಸಹಜವಾಗಿಯೇ ಆತ ಬಂಗಾಳಿ ಕಲಿಯುತ್ತಾನೆ. ಉತ್ತರಪ್ರದೇಶ ಅಥವಾ ಬಿಹಾರದಲ್ಲಿ ಎರಡು ಭಾಷೆಗಳನ್ನಷ್ಟೇ ಕಲಿಯುತ್ತಿರುವಾಗ, ತಮಿಳುನಾಡು ಅಥವಾ ಕರ್ನಾಟಕದವರು ಮೂರು ಭಾಷೆಗಳನ್ನು ಕಲಿಯಬೇಕೇಕೆ?

ಡಿ.ಮುತ್ತುಕೃಷ್ಣನ್, ಹೂಡಿಕೆದಾರ

25 ವರ್ಷಗಳ ಹಿಂದೆ

ಶನಿವಾರ, 18-9-1999

• **'ತಮಿಳುನಾಡೂ ನಮ್ಮ ಸಂಕಷ್ಟ ಹಂಚಿಕೊಳ್ಳಲಿ'**

ಬೆಂಗಳೂರು, ಸೆ. 17– ಕಾವೇರಿ ಕಣಿವೆಯಲ್ಲಿ ಈ ಬಾರಿ ಸಾಕಷ್ಟು ಪ್ರಮಾಣದಲ್ಲಿ ಮಳೆಯಾಗದೆ ಜಲಾಶಯಗಳಲ್ಲಿ ನೀರು ಸಂಗ್ರಹಣೆ ಪ್ರಮಾಣ ಕಡಿಮೆಯಾಗಿರುವ ಹಾಲಿ ಪರಿಸ್ಥಿತಿಯಲ್ಲಿ ತಮಿಳುನಾಡಿಗೆ ಕಾವೇರಿ ನೀರು ಬಿಡಲು ಸಾಧ್ಯವೇ ಇಲ್ಲವೆಂದು ರಾಜ್ಯ ಸರ್ಕಾರ ಕೇಂದ್ರಕ್ಕೆ ಸ್ಪಷ್ಟಪಡಿಸಿದೆ.

ಈ ಬಾರಿ ಸಾಕಷ್ಟು ಮಳೆಯಾಗದೆ ನಿರ್ಮಾಣವಾಗಿರುವ ಸಂಕಷ್ಟವನ್ನು ಎರಡೂ ರಾಜ್ಯಗಳು ಸಮಾನವಾಗಿ ಹಂಚಿಕೊಳ್ಳುವುದು ಅನಿವಾರ್ಯವಾಗಿದೆ ಎಂದೂ ತಿಳಿಸಿದೆ.

• **ತವರಿಗೆ ಮರಳಿದ ಬಂಧಿತ ಸೈನಿಕರು**

ಇಸ್ಲಾಮಾಬಾದ್, ಸೆ. 17 – ಪಾಕಿಸ್ತಾನದ ಸೆರೆಯಿಂದ 17 ದಿನಗಳ ಬಳಿಕ ಮುಕ್ತವಾದ ಭಾರತದ ಇಬ್ಬರು ಸೈನಿಕರನ್ನು ವಾಘಾ ಗಡಿಯಲ್ಲಿ ಭಾರತೀಯ ಸೇನಾಧಿಕಾರಿಗಳಿಗೆ ಪಾಕಿಸ್ತಾನ ಹಸ್ತಾಂತರಿಸಿತು.

ಪಾಕಿಸ್ತಾನದಿಂದ ನಿರ್ಗಮನ ಪ್ರಮಾಣ ಪತ್ರ ಪಡೆದ ಭಾರತದ ಲ್ಯಾನ್ಸ್ ನಾಯಕ್ ರಾಮ್ ಸಿಂಗ್ ಮತ್ತು ಸಿಪಾಯಿ ಬಜಿಂದರ್ ಸಿಂಗ್ ಅವರು ಭಾರತದ ರಾಯಭಾರ ಕಚೇರಿಯ ಅಧಿಕಾರಿಗಳೊಂದಿಗೆ ಬಂದರು.

50 ವರ್ಷಗಳ ಹಿಂದೆ

ಬುಧವಾರ, 18-9-1974

• **ಭತ್ತಕ್ಕೆ ಸಂಗ್ರಹಣೆ ಬೆಲೆ 80ರಿಂದ 85 ರೂ. ನಿಗದಿಯಾಗುವ ನಿರೀಕ್ಷೆ**

ನವದೆಹಲಿ, ಸೆ. 17– ಮುಂಗಾರು ಫಸಲಿಗೆ ಸಂಗ್ರಹಣೆ ಬೆಲೆ ಮತ್ತು ಸಂಗ್ರಹಣೆ ವಿಧಾನಗಳ ಬಗ್ಗೆ ನಿರ್ಧಾರ ಕೈಗೊಳ್ಳುವುದನ್ನು ಕೇಂದ್ರ ಸರ್ಕಾರ ಒಂದು ವಾರ ಮುಂದಕ್ಕೆ ಹಾಕಿದೆ.

ಧಾನ್ಯ ಸಂಗ್ರಹಣೆ ಬೆಲೆ ನಿಗದಿ ಕುರಿತು ಇನ್ನೂ ಯಾವುದೇ ಖಚಿತ ನಿರ್ಧಾರಕ್ಕೆ ಬರುವುದು ಸಾಧ್ಯವಾಗದೇ ಹೋದರೂ ಈಗಿನ ಸೂಚನೆ ಪ್ರಕಾರ, ಭತ್ತದ ಸಂಗ್ರಹಣಾ ಬೆಲೆ ಕ್ವಿಂಟಲ್‌ಗೆ 80ರಿಂದ 85 ರೂಪಾಯಿಗಳ ಅಂತರದಲ್ಲಿರಬಹುದು.

• **ಪೆಟ್ರೋಲ್, ಸೀಮೆಎಣ್ಣೆ ಇಂದಿನಿಂದ ಇನ್ನಷ್ಟು ತುಟ್ಟಿ**

ನವದೆಹಲಿ, ಸೆ. 17– ಪೆಟ್ರೋಲ್ ಮತ್ತು ಹೈಸ್ಪೀಡ್ ಡೀಸೆಲ್ ಚಿಲ್ಲರೆ ಮಾರಾಟ ಬೆಲೆ ನಾಳೆಯಿಂದ ಲೀಟರ್‌ಗೆ ಆರು ಪೈಸೆಯಷ್ಟು ಹೆಚ್ಚಾಗುವುದು.

ಸೀಮೆಎಣ್ಣೆ ಮತ್ತು ಲೈಟ್ ಡೀಸೆಲ್ ಬೆಲೆಗಳೂ ಚಿಲ್ಲರೆ ಮಾರಾಟದಲ್ಲಿ ಲೀಟರಿಗೆ 5 ಪೈಸೆಯಷ್ಟು ಹೆಚ್ಚುವುದು ಎಂದು ಇಂದು ರಾತ್ರಿ ಅಧಿಕೃತವಾಗಿ ಪ್ರಕಟಿಸಲಾಯಿತು.

ಅಡುಗೆ ಅನಿಲದ 15 ಕೆ.ಜಿ. ಸಿಲಿಂಡರಿನ ಬೆಲೆಯನ್ನು 1.04 ಪೈಸೆಯಷ್ಟು ಹೆಚ್ಚಿಸಲಾಗಿದೆ.

• **ರಸಗೊಬ್ಬರದ ಬೆಲೆ ಏರಿಕೆ ಕಾರಣ ರೈತರಿಗೆ ಹೆಚ್ಚು ಸಾಲ**

ನವದೆಹಲಿ, ಸೆ. 17– ಏರುತ್ತಿರುವ ರಸಗೊಬ್ಬರದ ಬೆಲೆಗಳನ್ನು ಅನುಸರಿಸಿ, ರೈತರಿಗೆ ನೀಡುವ ಸಾಲ ಸೌಲಭ್ಯಗಳ ಪ್ರಮಾಣವನ್ನೂ ಅಧಿಕಗೊಳಿಸಬೇಕೆಂದು ಕೇಂದ್ರ ಸರ್ಕಾರವು ಎಲ್ಲ ರಾಜ್ಯ ಸರ್ಕಾರಗಳಿಗೆ ಪತ್ರ ಬರೆದಿದೆ.

ಸಂಗತ

ಮಕ್ಕಳ ಊಟ ಮನೇಲಲ್ವೇ?

ಮನೆಯಾಚೆಯ ಆಹಾರ ಸೇವನೆ ಹೆಚ್ಚಿದಂತೆಲ್ಲಾ ಪೋಷಕಾಂಶಗಳ ಕೊರತೆ ಮತ್ತು ಹಲವಾರು ರೋಗಬಾಧೆಗಳು ಎದುರಾಗುತ್ತವೆ

• ಸತೀಶ್ ಜಿ.ಕೆ. ತೀರ್ಥಹಳ್ಳಿ

ವಿದ್ಯಾರ್ಥಿಗಳ ಶಿಸ್ತು ಮತ್ತು ಕಲಿಕಾ ಪ್ರಗತಿಯ ಕುರಿತು ಇತ್ತೀಚೆಗೆ ಪೋಷಕರ ಸಭೆಯಲ್ಲಿ ವಿದ್ಯಾರ್ಥಿಗಳು, ಉಪನ್ಯಾಸಕರು ಮತ್ತು ಪೋಷಕರು ಪರಸ್ಪರ ಚರ್ಚಿಸುತ್ತಿದ್ದ ಸಂದರ್ಭ. ವಿದ್ಯಾರ್ಥಿಗಳು ಸಮಯಕ್ಕೆ ಸರಿಯಾಗಿ ಕಾಲೇಜಿಗೆ ಹಾಜರಾಗದಿರುವುದು, ಮಧ್ಯಾಹ್ನದ ನಂತರದ ಅವಧಿಯಲ್ಲಿ ಉಪವಾಸ ಇರುವುದು ಅಥವಾ ಕುಂಟುನೆಪ ಹೇಳಿ ತರಗತಿ ತಪ್ಪಿಸಿಕೊಳ್ಳುತ್ತಿರುವ ಬಗೆಗೆ ಚರ್ಚೆ ಸಾಗಿತ್ತು.

ತಮ್ಮ ಮಕ್ಕಳು ಬೆಳಿಗ್ಗೆ ಎದ್ದು ಮನೆಯಲ್ಲಿ ಉಪಾಹಾರವನ್ನೇ ಸೇವಿಸದೆ ಕಾಲೇಜಿಗೆ ಹೊರಟು ಬರುತ್ತಿರುವ ಬಗ್ಗೆ ಕೆಲವು ಪೋಷಕರು ಹೇಳಿಕೊಂಡರು. ಮಕ್ಕಳು ಮಧ್ಯಾಹ್ನದ ಊಟದ ಬುತ್ತಿಯನ್ನು ಕೊಂಡೊಯ್ಯಲು ನಿರಾಕರಿಸಿ ಬೀದಿಬದಿಯ ಅಂಗಡಿ-ಗಾಡಿಗಳ ಮುಂದೆ ಸಾಲುಗಟ್ಟುತ್ತಿರುವುದು ಕೂಡ ಇತ್ತೀಚೆಗೆ ಸಾಮಾನ್ಯವಾಗಿದೆ. ಹಲವು ವಿದ್ಯಾರ್ಥಿಗಳಲ್ಲಿ ದಿನಂಪ್ರತಿ ಒಂದಿಲ್ಲೊಂದು ಅನಾರೋಗ್ಯದ ಸಮಸ್ಯೆ ಗೋಚರಿಸುತ್ತಿದೆ. ಇದು, ಅವರ ಓದಿನ ಮೇಲೂ ಅಡ್ಡಪರಿಣಾಮ ಬೀರುತ್ತಿರುವುದು ಪೋಷಕರ ಕಳವಳಕ್ಕಿದ್ದ ಮತ್ತೊಂದು ಕಾರಣ.

ಹಾಗಾದರೆ ಮಕ್ಕಳಿಗೆ ಮನೆಯ ಊಟ ಸಪ್ಪೆಯಾಗಿ, ಹೊರಗಿನ ತಿಂಡಿತಿನಿಸು ಮಾತ್ರ ರುಚಿಸಲು ಕಾರಣವೇನು? ಬೆಳೆಯುವ ಮಕ್ಕಳ ಆರೋಗ್ಯಕ್ಕೆ ಬೇಕಾದ ಆಹಾರ ಪದ್ಧತಿ ಹೇಗಿರಬೇಕು? 'ಪೌಷ್ಟಿಕಾಂಶ ಸಪ್ತಾಹ'ದ ನೆಪದಲ್ಲಿ (ಸೆಪ್ಟೆಂಬರ್ ಮೊದಲ ವಾರ) ಆಹಾರ ಮತ್ತು ಪೌಷ್ಟಿಕ ತಜ್ಞರನ್ನು ಕರೆಸಿ ಪೌಷ್ಟಿಕಾಂಶಗಳ ಮಹತ್ವದ ಕುರಿತು ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಲಾಯಿತು.

ನಾಲಿಗೆಯ ರುಚಿಗೂ ಶಾರೀರಿಕ ಅಗತ್ಯಕ್ಕೂ ತಾಳೆ ಹೊಂದದಿರುವುದೇ ನಮ್ಮ ದೊಡ್ಡ ಸಮಸ್ಯೆ ಆಗಿರುವುದು ಇಲ್ಲಿ ಗಮನಾರ್ಹ. ದೇಹದ ಬೆಳವಣಿಗೆ, ಶಕ್ತಿ ಉತ್ಪಾದನೆ, ಆರೋಗ್ಯ, ನಿಯಂತ್ರಣಕ್ಕೆ ತಕ್ಕುದಾದ ಆಹಾರ ಪದಾರ್ಥಗಳು ನಾಲಿಗೆಗೆ ಹಿತಕರ ಎನಿಸುವುದಿಲ್ಲ ಎಂಬುದೇ ವಿಪರ್ಯಾಸ! ಹಾಗಾಗಿ, ಕೆಲವೇ ಸೆಕೆಂಡುಗಳ ಕಾಲ ತನ್ನ ಮೇಲೆ ಇರಿಸಿಕೊಳ್ಳುವ ನಾಲಿಗೆಯ ಚಪಲವನ್ನು ತಕ್ಕಮಟ್ಟಿಗೆ ನಿಯಂತ್ರಿಸಿಕೊಂಡು, ದೀರ್ಘಾವಧಿಯಲ್ಲಿ ಸಲ್ಲಬೇಕಾದ ದೈಹಿಕ ಮತ್ತು ಆರೋಗ್ಯದ ಕರೆಗೆ ಓಗೊಡಬೇಕಾದದ್ದು ಅನಿವಾರ್ಯ. ಆದ್ದರಿಂದ ನಾವೀಗ ಪೋಷಕಾಂಶಯುಕ್ತ ಆಹಾರ ದಿನಚರಿಗೆ ಒಗ್ಗಿಕೊಳ್ಳಲೇಬೇಕಾಗಿದೆ.

ಬೆಳವಣಿಗೆ, ಸಂಸ್ಕರಣೆ, ಶೇಖರಣೆಯ ಹಂತಗಳಲ್ಲಿ ವಿಷವುಂಡಿರುವ ಹಣ್ಣು-ತರಕಾರಿ, ದವಸ-ಧಾನ್ಯಗಳು ಅಡುಗೆಮನೆ ಪ್ರವೇಶಿಸುತ್ತಿವೆ. ಮಾರುಕಟ್ಟೆಯ ಸಂರಕ್ಷಿತ ಆಹಾರ ಪದಾರ್ಥಗಳು ಸಾರ್ವಜನಿಕ ಆರೋಗ್ಯಕ್ಕೆ ಸವಾಲೆಸೆದಿವೆ. ಹೋಟೆಲುಗಳ ಸಂಖ್ಯೆ ಹೆಚ್ಚಿದಂತೆಲ್ಲಾ ಆಸ್ಪತ್ರೆಗಳ ಸಂಖ್ಯೆಯೂ ಹೆಚ್ಚುತ್ತಿದೆ. ಜನರ ಆರೋಗ್ಯಮಟ್ಟ ದಿನೇದಿನೇ ಕುಸಿಯುತ್ತಿದೆ.

ಮನೆಯ ಹೊರಗಿನ ಆಹಾರ ಸೇವನೆಯಲ್ಲಿನ ಗಂಭೀರ ಸಮಸ್ಯೆ ಏನೆಂದರೆ, ಗ್ರಾಹಕರನ್ನು ಸೆಳೆಯಲು ಹೋಟೆಲು, ರೆಸ್ಟೊರೆಂಟ್ ಮತ್ತು ಬೀದಿಬದಿ ಅಂಗಡಿಗಳ ತಿಂಡಿತಿನಿಸುಗಳಲ್ಲಿ ಪರಿಮಳ ಹಾಗೂ ಬಾಯಿರುಚಿಗೆ ಒತ್ತು ಕೊಟ್ಟಿರುತ್ತಾರೆ ಎಂಬ ದೂರಿದೆ. ಗೋಬಿ ಮಂಚೂರಿ, ಪಾನಿಪೂರಿ, ನೂಡಲ್ಸ್, ಫ್ರೈಡ್‌ರೈಸ್, ಸೂಪ್‌ನಂತಹ ಹಲವಾರು ಆಹಾರ ಪದಾರ್ಥಗಳಲ್ಲಿ ಅಸುರಕ್ಷಿತ ಮತ್ತು ಹಾನಿಕಾರಕ ರಾಸಾಯನಿಕಗಳ ಬಳಕೆ ಹೆಚ್ಚಿದೆ ಎಂಬ ವರದಿಗಳಿವೆ. ಅಡುಗೆಎಣ್ಣೆಯ ಕಲಬೆರಕೆ ಮತ್ತು ಪುನಃಪುನಃ ಬಳಸಲಾಗುತ್ತಿರುವ ಕರಿದ ಎಣ್ಣೆ, ವಿಶೇಷವಾಗಿ ಮಿತಿಮೀರಿ ಬಳಸಲಾಗುತ್ತಿರುವ 'ಮಾನೊಸೋಡಿಯಂ ಗ್ಲುಟಮೇಟ್' (ಎಂಎಸ್‌ಜಿ) ಎಂಬ ಪರಿಮಳವರ್ಧಕವಾದ ಲವಣವು ನಿಧಾನ ವಿಷವಾಗಿದೆ. ಮಾರುಕಟ್ಟೆಗಳಲ್ಲಿ 'ಅಜಿನೊಮೋಟೊ' ಎಂಬ ಜಪಾನಿ ಹೆಸರಿನಿಂದ ಗುರುತಿಸಲ್ಪಡುವ ಇದು ಅನೇಕ ಸಂಶೋಧನೆಗಳ ಪ್ರಕಾರ ನಿರ್ಜಲೀಕರಣ, ತಲೆನೋವು, ಎದೆನೋವು, ಉಸಿರಾಟ ದೋಷ, ಮೂಳೆ ಸವೆತ, ಮಧುಮೇಹ, ರಕ್ತದೊತ್ತಡ, ಬೊಜ್ಜು ಹೀಗೆ ಅಪರಿಮಿತ ರೋಗಗಳಿಗೆ ಮೂಲವಾಗಬಲ್ಲದು.

ರುಚಿಕರ ವಿಷಕಾರಿ ಅಜಿನೊಮೋಟೊದ ಹೆಚ್ಚಿನ ಸೇವನೆಯು ಕೇಂದ್ರ ನರಮಂಡಲವನ್ನು ಗಾಸಿಗೊಳಿಸುತ್ತದೆ ಮತ್ತು ಮೂತ್ರಪಿಂಡದ ವೈಫಲ್ಯಕ್ಕೂ ಕಾರಣವಾಗುತ್ತದೆ. ಇಲಿಗಳ ಮೇಲಿನ ಅನೇಕ ಪ್ರಯೋಗಗಳು ಇದನ್ನು ದೃಢಪಡಿಸಿರುವ ಬಗ್ಗೆ ವರದಿಗಳಿವೆ. ಎಂಎಸ್‌ಜಿಯನ್ನು ಉಪಯೋಗಿಸಿ ತಯಾರಿಸಿದ ಆಹಾರ ಪದಾರ್ಥಗಳನ್ನು ಹೆಚ್ಚು ತಿನ್ನುವವರನ್ನು ಚೈನೀಸ್ ರೆಸ್ಟೋರೆಂಟ್ ಸಿಂಡ್ರೋಮ್ ಬಾಧಿಸುತ್ತದೆ.



ಎಂಎಸ್‌ಜಿಗೆ ಮೂಲವಾದ ಗ್ಲುಟಮಿಕ್ ಆ್ಯಸಿಡ್ ದೇಹದಲ್ಲಿಯೇ ಉತ್ಪತ್ತಿಯಾಗುವ ಅಮಿನೊ ಆಮ್ಲವಾಗಿದ್ದು, ಇದು ನೈಸರ್ಗಿಕವಾಗಿ ತರಕಾರಿಗಳು, ಟೊಮ್ಯಾಟೊ, ಮೀನು, ಮಾಂಸ, ಮೊಟ್ಟೆ, ಚೀಸ್, ಡೈರಿ ಉತ್ಪನ್ನಗಳಲ್ಲಿ ಕಂಡುಬರುತ್ತದೆ. ಮಿತಬಳಕೆ ಹಾನಿಕರವಲ್ಲ. ಪುರಾತನ ಕಾಲದಿಂದಲೂ ಬಳಸಲಾಗುತ್ತಿರುವ ಪದಾರ್ಥವಿದು. ಆದರೆ ಅತಿಯಾದ ಮತ್ತು ನಿರಂತರ ಸೇವನೆಯು ಹಾನಿಕಾರಕವಾದ್ದರಿಂದ ಮಾರುಕಟ್ಟೆಯಲ್ಲಿ ಕೊಂಡುಕೊಳ್ಳುವ ಆಹಾರ ಪದಾರ್ಥಗಳಲ್ಲಿ ಎಂಎಸ್‌ಜಿ ಇಲ್ಲದಿರುವ ಬಗ್ಗೆ ಖಾತರಿಪಡಿಸಿಕೊಳ್ಳುವುದು ಅವಶ್ಯಕ.

ಚಿಕ್ಕಪ್ರಾಯದಲ್ಲೇ ಹೃದಯಾಘಾತ, ಕ್ಯಾನ್ಸರ್, ಮೂತ್ರಪಿಂಡ ವೈಫಲ್ಯಕ್ಕೆ ಆಹಾರದ ಕಲಬೆರಕೆ ಮುಖ್ಯ ಕಾರಣ. ಮನೆಯಾಚೆಯ ಆಹಾರ ಸೇವನೆ ಹೆಚ್ಚಿದಂತೆಲ್ಲಾ ಪೋಷಕಾಂಶಗಳ ಕೊರತೆ ಮತ್ತು ಹಲವಾರು ರೋಗಬಾಧೆಗಳು ಎದುರಾಗುತ್ತವೆ. ಬೆಳೆಯುವ ಮಕ್ಕಳು ಕೃತಕ ಬಣ್ಣ, ರುಚಿ, ವಾಸನೆಗೆ ಮರುಳಾಗದೆ, ಮನೆಯಲ್ಲಿ ಶುಚಿರುಚಿಯಾಗಿ ತಯಾರಿಸಿದ ತಾಜಾ ಪೌಷ್ಟಿಕ ಆಹಾರ ಪದಾರ್ಥಗಳನ್ನು ಸೇವಿಸುವಂತೆ ಮನವರಿಕೆ ಮಾಡಿಕೊಡುವುದು ಅತ್ಯಂತ ಅಗತ್ಯ.

ವಾಚಕರ ವಾಣಿ

ಸದ್ದು ಮಾಡಿ ಹೊದ್ದು ಮಲಗುವ ಜೈಲು ವ್ಯವಸ್ಥೆ?!

ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮೇಲೆ ಪೊಲೀಸರು ಇತ್ತೀಚೆಗೆ ದಿಢೀರ್ ದಾಳಿ ನಡೆಸಿದಾಗ ಹಲವಾರು ನಿಷೇಧಿತ ವಸ್ತುಗಳು ಪತ್ತೆಯಾಗಿರುವುದು ದುರದೃಷ್ಟಕರ. ಈ ವಸ್ತುಗಳು ಹಾಗೂ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಗಳಿಗೆ ಅಲ್ಲಿ ವಿಶೇಷ ಆತಿಥ್ಯ ನೀಡುತ್ತಿದ್ದುದು ಜೈಲು ನಿರ್ವಹಣಾ ವ್ಯವಸ್ಥೆಯಲ್ಲಿ ಎಲ್ಲವೂ ಸರಿಯಿಲ್ಲ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿವೆ. ಸೆರೆವಾಸ ಅನುಭವಿಸುತ್ತಿರುವ ಹಣವಂತರು, ಕೊಲೆಪಾತಕ ಬಲಾಢ್ಯ ರೌಡಿಗಳಿಗೆ ಕಾರಾಗೃಹ ಈಗ ಶಿಕ್ಷೆ ಅನುಭವಿಸುವ ತಾಣವಾಗಿ ಉಳಿದಿಲ್ಲ. ಬದಲಾಗಿ, ಜೈಲು ಸಿಬ್ಬಂದಿಯ ಕೈ-ಬಾಯಿ ಬಿಸಿ ಮಾಡುವ ಮೂಲಕ ಅದನ್ನು ಭುವಿಯ ಮೇಲಿನ ಸ್ವರ್ಗವನ್ನಾಗಿ ಮಾಡಿಕೊಳ್ಳಬಹುದಾದ ತಾಣವಾಗಿ ಬದಲಾಗಿದೆ. ಸಕಲ ಸೌಲಭ್ಯಗಳು ಜೈಲಿನಲ್ಲೇ ದೊರೆಯುವುದಾದರೆ, ಜೈಲು ಶಿಕ್ಷೆ ಎಂಬುದಕ್ಕೆ ಏನು ಅರ್ಥವಿದೆ?

ಆಮಿಷಕ್ಕೊಳಗಾಗಿ ವಿಲಾಸಿ ಜೀವನ ನಡೆಸಲು ಜೈಲುವಾಸಿಗಳಿಗೆ ನೆರವಾಗುವ ಜೈಲು ಸಿಬ್ಬಂದಿಯನ್ನು ಬಂಧಿಸುವ ಕಠಿಣ ನಿಯಮ ಇಲ್ಲದಿದ್ದರೆ, ಇದು ಹೀಗೇ ಮುಂದುವರಿಯುತ್ತದೆ. ಯಾವಾಗಲಾದರೊಮ್ಮೆ 'ಸದ್ದು ಮಾಡಿ' ಹೊದ್ದು ಮಲಗುತ್ತದೆ.

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

ಲಿಂಕ್ ಒತ್ತುವ ಮುನ್ನ ಇರಲಿ ಎಚ್ಚರ

ಸೈಬರ್ ಅಪರಾಧ ಈಗ ಸಾಂಕ್ರಾಮಿಕ ರೋಗದಂತೆ ಹಬ್ಬುತ್ತಿದೆ. ವಿದ್ಯಾವಂತರನ್ನು ಒಳಗೊಂಡು ಉನ್ನತ ಹುದ್ದೆಯಲ್ಲಿ ಇರುವವರೂ ಈ ಜಾಲಕ್ಕೆ ಬಲಿಪಶುಗಳಾಗುತ್ತಿದ್ದಾರೆ. ಒಂದು ಲಿಂಕ್ ಕಳುಹಿಸಿ 'ನಮ್ಮ ಅಭಿಯಾನಕ್ಕೆ ಕೈ ಜೋಡಿಸಿ' ಎಂದು ಕರೆ ಕೊಡಲಾಗುತ್ತದೆ. ಕೆಲವರು ತಮ್ಮ ನೆಚ್ಚಿನ ಪಕ್ಷಕ್ಕೆ ಒತ್ತಾಸೆಯಾಗಿ 'ಲಿಂಕ್'ಗಳನ್ನು ಒತ್ತುತ್ತಾರೆ. ಇನ್ನು ಕೆಲವು ಲಿಂಕ್‌ಗಳು ವಂಚಕರ ಜಾಲಕ್ಕೆ ಸೇರಿದವಾಗಿದ್ದು, ಅವನ್ನು ಒತ್ತುವ ಮೂಲಕ, ಗೋಪ್ಯವಾಗಿ ಇರಬೇಕಾದ ತಮ್ಮ ಬ್ಯಾಂಕ್ ಮಾಹಿತಿಯನ್ನು ನೀಡಿ ಹಣ ಕಳೆದುಕೊಳ್ಳುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ. ಎಲ್ಲ ವೆಬ್‌ಸೈಟ್‌ಗಳು, ಲಿಂಕ್‌ಗಳು ವಂಚನೆಯ ಉದ್ದೇಶವನ್ನೇ ಹೊಂದಿರುತ್ತವೆ ಎಂದು ಹೇಳಲಾಗದಿದ್ದರೂ ವಂಚಕರು ಹೊಸ ಹೊಸ ಮಾದರಿಯಲ್ಲಿ ಜನರನ್ನು ಮೂರ್ಖರನ್ನಾಗಿಸುತ್ತಿದ್ದಾರೆ. ಇಂತಹ ಅಪರಾಧಗಳ ಬಗ್ಗೆ ಪೊಲೀಸ್ ಇಲಾಖೆ ಮೂಡಿಸುತ್ತಿರುವ ಜಾಗೃತಿ ಇನ್ನಷ್ಟು ಪರಿಣಾಮಕಾರಿ ಆಗಬೇಕಾಗಿದೆ. ಜೊತೆಗೆ ಜನ ಸಹ ಲಿಂಕ್‌ಗಳನ್ನು ಒತ್ತುವ ಮುನ್ನ ಬಹಳ ಎಚ್ಚರಿಕೆ ವಹಿಸಬೇಕಾಗಿದೆ.

ಎಚ್.ವಿ.ಶ್ರೀಧರ್, ಬೆಂಗಳೂರು

ಗಣೇಶೋತ್ಸವ: ಮೂಲ ಅಸ್ಮಿತೆ ಕಣ್ಮರೆ

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯವರ ಒಡೆದು ಆಳುವ ನೀತಿ ಹಾಗೂ ಇತರ ಸಾರ್ವಜನಿಕ ನಿರ್ಬಂಧಗಳ ವಿರುದ್ಧ ಭಾರತೀಯರನ್ನೆಲ್ಲಾ ಒಗ್ಗೂಡಿಸುವ ದಿಸೆಯಲ್ಲಿ ಬಾಲಗಂಗಾಧರ ತಿಲಕರು ಆರಂಭಿಸಿದ ಸಾರ್ವಜನಿಕ ಗಣೇಶೋತ್ಸವ ಇಂದು ತನ್ನ ಮೂಲ ಅಸ್ಮಿತೆಯನ್ನು ಕಳೆದುಕೊಳ್ಳುತ್ತಿರುವಂತೆ ಭಾಸವಾಗುತ್ತಿದೆ. ತಿಲಕರು ಈ ಆಚರಣೆಯಲ್ಲಿ ಹಿಂದೂ, ಮುಸ್ಲಿಂ ಎಲ್ಲರನ್ನೂ ಒಗ್ಗೂಡಿಸಿ ನಾವೆಲ್ಲಾ 'ಭಾರತೀಯರು' ಎಂಬ ಮನೋಭಾವವನ್ನು ಹುಟ್ಟುಹಾಕಿದ್ದರು. ಗಣೇಶ ಹಬ್ಬ ಹಾಗೂ ಮೊಹರಂ ಒಟ್ಟಿಗೆ ಬಂದಾಗ ಎಲ್ಲರೂ ಸೇರಿ ಆಚರಿಸಿದ ನಿದರ್ಶನಗಳಿವೆ. ಆದರೆ ಇದೀಗ ನಾವು ನಾವೇ ಕಿತ್ತಾಡಿಕೊಂಡು ಕಲ್ಲು ಹೊಡೆಯುತ್ತಾ, ಬೀದಿರಂಪ ಮಾಡಿಕೊಂಡು, ಪ್ರಚೋದನಕಾರಿ ಹೇಳಿಕೆ ನೀಡಿ ಕೋಮುಗಲಭೆಗೆ ದಾರಿ ಮಾಡಿಕೊಡುತ್ತಿರುವುದು ದುರದೃಷ್ಟಕರ ಬೆಳವಣಿಗೆಯೇ ಸರಿ.

ಸುರೇಂದ್ರ ಪೈ, ಭಟ್ಕಳ

ಜನಪ್ರತಿನಿಧಿಗೇಕೆ ಪ್ರತ್ಯೇಕ ವಿಚಾರಣೆ?

ಎಲ್ಲರಿಗೂ ತಿಳಿದಿರುವ ಸಾಮಾನ್ಯ ಜ್ಞಾನದ ಪ್ರಕಾರ, ಉನ್ನತ ಸ್ಥಾನದಲ್ಲಿರುವ ಒಬ್ಬ ಅಧಿಕಾರಿ, ಜನನಾಯಕ ಅಥವಾ ಜನಸಾಮಾನ್ಯ ಎಲ್ಲರಿಗೂ ಒಂದೇ ನ್ಯಾಯ. ಹೀಗಿರುವಾಗ, 'ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ' ಸ್ಥಾಪಿಸಿ, ಆರೋಪ ಎದುರಿಸುತ್ತಿರುವ ಜನಪ್ರತಿನಿಧಿಗಳನ್ನು ಅಲ್ಲಿ ಪ್ರತ್ಯೇಕವಾಗಿ ವಿಚಾರಣೆಗೆ ಒಳಪಡಿಸುವ ಅವಶ್ಯಕತೆಯಾದರೂ ಏನು?

ಜನಪ್ರತಿನಿಧಿಗಳ ದರ್ಪ, ಒಣಪ್ರತಿಷ್ಠೆ ಹಾಗೂ ಮೇಲರಿಮೆಯಿಂದ ನಡೆಯುವ ನಾನಾ ರೀತಿಯ ದೌರ್ಜನ್ಯಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ಬೇರೆಯೇ ಆದ ಒಂದು ನ್ಯಾಯಾಲಯದಲ್ಲಿ ಬಗೆಹರಿಸಲು ಮುಂದಾಗುವ ಕ್ರಮವೇ ನ್ಯಾಯದಾನದಲ್ಲಿನ ತಾರತಮ್ಯ ನಡೆಯಂತೆ ಮೇಲ್ನೋಟಕ್ಕೆ ಗೋಚರಿಸುತ್ತದೆ.

ರವಿಕಿರಣ್ ಶೇಖರ್, ಬೆಂಗಳೂರು

ಎನ್‌ಇಪಿ– ಎಸ್‌ಇಪಿ: ಭಿನ್ನ ನಿಲುವು

ಇತ್ತೀಚೆಗೆ ನಡೆದ ಬೆಂಗಳೂರು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಎನ್‌ಇಪಿ ಹಾಗೂ ಎಸ್‌ಇಪಿ ಬಗ್ಗೆ ಎರಡು ಭಿನ್ನ ನಿಲುವುಗಳು ವ್ಯಕ್ತವಾದವು. ರಾಷ್ಟ್ರೀಯ ಶಿಕ್ಷಣ ನೀತಿಯ ಬಗೆಗೆ ಮೆಚ್ಚುಗೆ ವ್ಯಕ್ತವಾದುದಕ್ಕೆ ಪ್ರತಿಕ್ರಿಯೆಯೋ ಎಂಬಂತೆ ರಾಜ್ಯ ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ 'ಎನ್‌ಇಪಿಯು ಖಾಸಗಿ ಶಿಕ್ಷಣ ಸಂಸ್ಥೆ, ವಿಶ್ವವಿದ್ಯಾಲಯಗಳಿಗಷ್ಟೇ ಹೇಳಿ ಮಾಡಿಸಿದಂತಿದ್ದು, ಅಲ್ಲಿ ಎಲ್ಲ ವಿಭಾಗಗಳೂ ಒಂದೇ ಸೂರಿನಡಿ ಇರುತ್ತವೆ. ಸರ್ಕಾರಿ ಶಿಕ್ಷಣ ವ್ಯವಸ್ಥೆಯಲ್ಲಿ ವಿವಿಧ ವಿಷಯಗಳು ವಿವಿಧೆಡೆ ಹಂಚಿಹೋಗಿವೆ. ಜತೆಗೆ ಶಿಕ್ಷಕರ ಕೊರತೆಯೂ ಗಂಭೀರವಾಗಿದೆ' ಎಂದಿದ್ದಾರೆ. ರಾಜ್ಯದ ಎಸ್‌ಇಪಿ ಆಯೋಗವು ಮಧ್ಯಂತರ ವರದಿಯನ್ನಷ್ಟೇ ನೀಡಿದೆ, ಅಂತಿಮ ವರದಿ ಶೀಘ್ರದಲ್ಲೇ ಬರಲಿದೆ ಎಂದ ಸಚಿವರು ನಿರ್ದಿಷ್ಟ ತಿಂಗಳನ್ನಾದರೂ ಸೂಚಿಸಿಲ್ಲ.

ಬಿಜೆಪಿ ನೇತೃತ್ವದ ಸರ್ಕಾರ ಇದ್ದಾಗ ಎನ್‌ಇಪಿಯನ್ನು ಹಾಡಿ ಹೊಗಳಿ 'ನಮ್ಮ ರಾಜ್ಯದಲ್ಲೇ ಮೊದಲು ಜಾರಿಗೆ ತರುತ್ತಿದ್ದೇವೆ' ಎಂದು ಹೇಳಿಕೊಂಡರೂ ಜಾರಿಗೆ ಅಗತ್ಯ ತಯಾರಿ ಮಾಡಿಕೊಳ್ಳಲಿಲ್ಲ. ಕೆಲವು ಪುಸ್ತಕ ಮಳಿಗೆಗಳಲ್ಲಿ ಹಳೆಯ ಪದ್ಧತಿ, ಎನ್‌ಇಪಿ ಎಂಬ ಪ್ರತ್ಯೇಕ ರ್‍ಯಾಕ್‌ಗಳು ಕಾಣಿಸಿದವು. ಇದರಿಂದ ಶಿಕ್ಷಕರು ಹಾಗೂ ವಿದ್ಯಾರ್ಥಿಗಳಲ್ಲಿ ಗೊಂದಲ ಉಂಟಾಯಿತು. ಈಗಲೂ ಪರಿಸ್ಥಿತಿ ಸ್ಫುಟವಾಗಿಲ್ಲ. ಉದಾಹರಣೆಗೆ, ಬ್ಯಾಂಕಿಂಗ್‌ನಂತಹ ವಿಷಯವನ್ನು ಉಪಯುಕ್ತವಾಗಿ ಬೋಧಿಸಲು ಪುಸ್ತಕಗಳು, ಶಿಕ್ಷಕರು ಇಲ್ಲ. ಮಧ್ಯಂತರ ವರದಿಯನ್ನು ಆಧರಿಸಿ ಮಾಡಿಕೊಂಡಿರುವ ಬದಲಾವಣೆಗಳಿಂದಾದ ಪರಿಣಾಮಗಳ ಬಗೆಗೆ ಮಾಹಿತಿ ಪಡೆದುಕೊಂಡು, ಆಯೋಗ ಬೇಗ ಅಂತಿಮ ವರದಿ ಸಲ್ಲಿಸಲು ಮುಖ್ಯಮಂತ್ರಿ ಕ್ರಮ ಕೈಗೊಳ್ಳಬೇಕು.

ಎಚ್.ಎಸ್.ಮಂಜುನಾಥ, ಗೌರಿಬಿದನೂರು


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಆಫ್ರಿಕಾ ಖಂಡದ ದಕ್ಷಿಣ ರಾಷ್ಟ್ರಗಳಲ್ಲಿ ತೀವ್ರ ಬರ: ಆಹಾರಕ್ಕೆ ಆನೆಗಳ ಹತ್ಯೆ

ತುತ್ತು ಅನ್ನ, ಹನಿ ನೀರಿಗೆ ಹಾಹಾಕಾರ

ತೀವ್ರ ಬರದಿಂದಾಗಿ ನಮೀಬಿಯಾ, ಜಿಂಬಾಬ್ವೆಯಲ್ಲಿ ಆಹಾರದ ಕೊರತೆ ತಲೆದೋರಿದೆ. ಜನರ ಆಹಾರಕ್ಕಾಗಿ ನೂರಾರು ಆನೆಗಳನ್ನು ಕೊಲ್ಲಲು ಸರ್ಕಾರಗಳು ಮುಂದಾಗಿವೆ. ಇನ್ನೊಂದೆಡೆ, ಹನಿ ನೀರಿಗೂ ಜನ ಪರದಾಡುತ್ತಿದ್ದಾರೆ. ಕಿ. ಮೀ. ಗಟ್ಟಲೇ ನಡೆದರೂ ಒಂದು ಪಾತ್ರೆಯಷ್ಟು ನೀರು ಸಿಗದಂತಾಗಿದೆ. ಆಫ್ರಿಕಾದ ದಕ್ಷಿಣ ರಾಷ್ಟ್ರಗಳಲ್ಲಿ ಕಾಣಿಸಿಕೊಂಡಿರುವ ಬರ ಒಂದು ಮಾನವೀಯ ಬಿಕ್ಕಟ್ಟಾಗಿದೆ





ಜಾಂಬಿಯಾದಲ್ಲಿನ ಒಣಗಿ ಹೋದ ಅರಣ್ಯ ಪ್ರದೇಶವೊಂದರಲ್ಲಿ ಪ್ರಾಣಿಯೊಂದರ ಮೂಳೆಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿರುವುದು

ಪ್ರಜಾವಾಣಿ ವಾರ್ತೆ

ಆಫ್ರಿಕಾ ಖಂಡದ ದಕ್ಷಿಣ ಭಾಗದ ರಾಷ್ಟ್ರಗಳು ತೀವ್ರ ಬರದಿಂದ ತತ್ತರಿಸಿವೆ. ಜಿಂಬಾಬ್ವೆ, ಜಾಂಬಿಯಾ, ಬೋತ್ಸ್ವಾನಾ, ಅಂಗೋಲಾ, ನಮೀಬಿಯಾ ಮುಂತಾದ ದೇಶಗಳ ಕೋಟ್ಯಂತರ ಮಂದಿ ಆಹಾರದ ಕೊರತೆಯಿಂದ ನಲುಗುತ್ತಿದ್ದಾರೆ. ಜನ ಹನಿ ನೀರಿಗಾಗಿ ಕಿಲೋಮೀಟರುಗಟ್ಟಲೇ ನಡೆದು, ನದಿಯ ಒಡಲನ್ನು ಬಗೆದು ಹೈರಾಣಾಗುತ್ತಿದ್ದಾರೆ. ಜಿಂಬಾಬ್ವೆ ಮತ್ತು ನಮೀಬಿಯಾದ ಜನ ತಮ್ಮ ದೇಶದ ಹೆಮ್ಮೆಯ ಪ್ರತೀಕವಾಗಿದ್ದ ನೂರಾರು ಆನೆಗಳು ಸೇರಿದಂತೆ ಕಾಡು ಪ್ರಾಣಿಗಳನ್ನು ಆಹಾರಕ್ಕಾಗಿ ವಧಿಸುತ್ತಿದ್ದಾರೆ.

ಎಲ್ ನಿನೊದ ಪರಿಣಾಮವಾಗಿ ಆಫ್ರಿಕಾ ಖಂಡದ ದಕ್ಷಿಣ ಭಾಗದಲ್ಲಿ ಬರ ಮತ್ತು ಪ್ರವಾಹ ಕಾಣಿಸಿಕೊಂಡು, ಆಹಾರದ ಅಭದ್ರತೆ ಕಾಡಬಹುದೆಂದು ವಿಶ್ವಸಂಸ್ಥೆಯು ಈ ವರ್ಷದ ಆರಂಭದಲ್ಲೇ ಎಚ್ಚರಿಸಿತ್ತು. ಈ ಭಾಗದ ಶೇ 70ರಷ್ಟು ಜನರ ಮುಖ್ಯ ಕಸುಬು ಬೇಸಾಯ; ಅದೂ ಮಳೆಯಾಶ್ರಿತ ಬೇಸಾಯ. ವಾಸ್ತವವಾಗಿ, ಇಲ್ಲಿ 2023ರ ಅಕ್ಟೋಬರ್‌ನಲ್ಲಿಯೇ ಬರದ ಸೂಚನೆಗಳು ಸಿಕ್ಕಿದ್ದವು. ಜನವರಿಯಲ್ಲಿ ಬಿಸಿಲಿನ ಪ್ರಖರತೆಗೆ ಜನ ಬಳಲಿ ಬೆಂಡಾಗಿದ್ದರು. ಫೆಬ್ರುವರಿ, ಅತಿ ಹೆಚ್ಚು ಮಳೆ ಬೀಳುವ ತಿಂಗಳು. ಆದರೆ, ಈ ಬಾರಿಯ ಫೆಬ್ರುವರಿಯು ಈ ಪ್ರದೇಶವು ದಶಕಗಳಲ್ಲಿ ಕಂಡ ಅತ್ಯಂತ ತೀವ್ರ ತಾಪಮಾನದ ತಿಂಗಳಾಗಿತ್ತು. ವಾಡಿಕೆಯ ಮಳೆಯಲ್ಲಿ ಶೇ 20ರಷ್ಟು ಮಾತ್ರ ಬಿದ್ದಿತ್ತು.

ಜಾಂಬಿಯಾ, ನಮೀಬಿಯಾ, ಜಿಂಬಾಬ್ವೆ ಮತ್ತು ಮಾಲವಿ ಅತಿ ಹೆಚ್ಚು ಬಾಧಿತ ಪ್ರದೇಶಗಳು. ಮುಸುಕಿನ ಜೋಳವೂ ಸೇರಿದಂತೆ ಈ ದೇಶಗಳ ಜನರ ಪ್ರಮುಖ ಬೆಳೆಗಳು ಶೇ 40ರಿಂದ ಶೇ 80ರಷ್ಟು ಹಾನಿಗೊಳಗಾಗಿವೆ. ಇದರಿಂದ ಪ್ರದೇಶದಲ್ಲಿ ತೀವ್ರ ಆಹಾರದ ಬಿಕ್ಕಟ್ಟು ತಲೆದೋರಿದೆ.

ನಮೀಬಿಯಾದಲ್ಲಿ 2013 ಮತ್ತು 2019ರ ನಡುವೆ ಮೂರು ಬಾರಿ ಬರ ತುರ್ತುಸ್ಥಿತಿಯನ್ನು ಘೋಷಿಸಲಾಗಿತ್ತು. ಈ ಬಾರಿಯ ಬರ ಹಿಂದೆಂದಿಗಿಂತಲೂ ತೀವ್ರ ಸ್ವರೂಪದ್ದಾಗಿದ್ದು, 14 ಲಕ್ಷ ಮಂದಿ (ಶೇ 40ರಷ್ಟು) ತೀವ್ರ ಸ್ವರೂಪದ ಆಹಾರದ ಕೊರತೆ ಅನುಭವಿಸುತ್ತಿದ್ದಾರೆ. ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೋ ಗುಟೆರಸ್ ಇದನ್ನು 'ಹಿಂದೆಂದೂ ಕಾಣದ ಮಾನವೀಯ ಬಿಕ್ಕಟ್ಟು' ಎಂದು ವಿವರಿಸಿದ್ದಾರೆ. ಬರದಿಂದಾಗಿ ಐದು ವರ್ಷದ ಕೆಳಗಿನ ಮಕ್ಕಳಲ್ಲಿ ಅಪೌಷ್ಟಿಕತೆ ಕಾಣಿಸಿಕೊಳ್ಳುತ್ತಿದೆ ಎಂದು ವಿಶ್ವಸಂಸ್ಥೆ ಹೇಳಿದೆ. ಜತೆಗೆ ಮಹಿಳೆಯರು ಮತ್ತು ಹೆಣ್ಣುಮಕ್ಕಳ ಮೇಲೆ ಬರವು ಪ್ರತಿಕೂಲ ಪರಿಣಾಮ ಬೀರುತ್ತಿದ್ದು, ನೀರಿನ ಕೊರತೆಯು ಅವರ ಮೇಲೆ ಹಲ್ಲೆ, ದೌರ್ಜನ್ಯಗಳಿಗೆ ಕಾರಣವಾಗುತ್ತಿದೆ ಎಂದು ಹೇಳಿದೆ.

ನಮೀಬಿಯಾದಲ್ಲಿ ಜನ ಊಟಕ್ಕೆ ಪರದಾಡಿದಂತೆ, ಜಿಂಬಾಬ್ವೆಯಲ್ಲಿ ನೀರಿಗಾಗಿ ಹಾಹಾಕಾರವೆದ್ದಿದೆ. ದೇಶದ ಬಹುತೇಕ ಅಣೆಕಟ್ಟುಗಳು ಮತ್ತು ನದಿಗಳು ಬತ್ತಿಹೋಗಿವೆ. ಶೇ 70ರಷ್ಟು ನೀರಿನ ಕೊರತೆ ಕಂಡುಬಂದಿದೆ. ನೀರನ್ನು ಹುಡುಕುತ್ತಾ ಬಕೆಟ್, ಪಾತ್ರೆ ಹಿಡಿದಿರುವ ಮಹಿಳೆಯರು ಮತ್ತು ಮಕ್ಕಳು ಕಿಲೋಮೀಟರ್‌ಗಟ್ಟಲೇ ನಡೆಯುತ್ತಿರುವ ದೃಶ್ಯಗಳು ಇಲ್ಲಿ ಸಹಜ ಎನ್ನುವಂತಾಗಿದೆ. ಬತ್ತಿದ ನದಿಯಲ್ಲಿ ಚಿಲುಮೆ ತೋಡಿ ನೀರಿನ ಪಸೆಗಾಗಿ ಹುಡುಕಲಾಗುತ್ತಿದೆ. ನೀರಿಗಾಗಿ ಜಗಳಗಳು ನಡೆಯುತ್ತಿದ್ದು, ಮಹಿಳೆಯರು ಮತ್ತು ಮಕ್ಕಳ ಮೇಲೆ ಹಲ್ಲೆ, ದೌರ್ಜನ್ಯಗಳು ನಡೆಯುತ್ತಿವೆ.

ಮನುಷ್ಯರ ನೀರಿನ ದಾಹ ಒಂದೆಡೆ ಆದರೆ, ಜನರಿಗೆ ತಮ್ಮ ದನಕರುಗಳಿಗೆ ಕುಡಿಯಲು ನೀರು ಒದಗಿಸುವುದು ಪ್ರಯಾಸದ ಕೆಲಸವಾಗಿದೆ. ಬಹುತೇಕ ಕಡೆ, ನದಿಗಳಲ್ಲಿ ತೋಡಿದ ಚಿಲುಮೆಯಲ್ಲಿ ನೀರು ಸಿಕ್ಕರೆ, ಜನ ತಮ್ಮ ದನಗಳಿಗೆ ಅಲ್ಲಿ ನೀರು ಕುಡಿಸಿ, ತಾವೂ ಅಲ್ಲಿಯೇ ನೀರು ಕುಡಿದು, ಮಕ್ಕಳಿಗೆ ಸ್ನಾನವನ್ನೂ ಮಾಡಿಸಿಕೊಂಡು ಬರುತ್ತಿದ್ದಾರೆ. ತಾವು ಇಂಥ ಬರಗಾಲವನ್ನು ಹಿಂದೆಂದೂ ಕಂಡಿರಲಿಲ್ಲ ಎಂದು ಹೇಳುತ್ತಾರೆ ಈ ಭಾಗದ ಜನ.

ಜಿಂಬಾಬ್ವೆಯ ಸುಮಾರು 80 ಲಕ್ಷ ಮಂದಿ ತೀವ್ರ ಹಸಿವೆಗೆ ಗುರಿಯಾಗಿದ್ದಾರೆ. ಜನರಲ್ಲಿ, ಅದರಲ್ಲೂ ವಿಶೇಷವಾಗಿ ಮಕ್ಕಳಲ್ಲಿ, ಅಪೌಷ್ಟಿಕತೆ ಹೆಚ್ಚಾಗುತ್ತಿದ್ದು, ಆಸ್ಪತ್ರೆಗಳಿಗೆ ಸೇರುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ. ಮಹಿಳೆಯರು ಆಗಾಗ್ಗೆ ಒಂದೆಡೆ ಸೇರಿ ತಮ್ಮಲ್ಲಿ ಉಳಿದಿರುವ ಧಾನ್ಯ, ಆಹಾರವನ್ನು ಚಿಕ್ಕ ಮಕ್ಕಳಿಗೆ ಮೀಸಲಿಡುತ್ತಿದ್ದಾರೆ. ಜನರ ನೆರವಿಗೆ ಧಾವಿಸಿರುವ ವಿಶ್ವಸಂಸ್ಥೆಯು ವಾರಕ್ಕೆ ಮೂರು ಸಲ ಸಮುದಾಯಕ್ಕೆ ಆಹಾರ ಪೂರೈಕೆ ಮಾಡುತ್ತಿದೆ. ಬರದಿಂದಾಗಿ ಹಣದುಬ್ಬರ ಏರಿಕೆ ಕಂಡಿದ್ದು, ಅಗತ್ಯ ವಸ್ತುಗಳ ಬೆಲೆಗಳು ಗಗನಮುಖಿಯಾಗಿವೆ.

ಒಂದು ಕಾಲದಲ್ಲಿ ಜಿಂಬಾಬ್ವೆ, ಆಫ್ರಿಕಾದ ದಕ್ಷಿಣ ದೇಶಗಳ ಆಹಾರದ ಕಣಜ ಎಂದೇ ಹೆಸರಾಗಿತ್ತು. ಆದರೆ, ಈಗ ಅವರೇ ಆಹಾರಕ್ಕಾಗಿ ಹುಡುಕಾಡುತ್ತಿದ್ದಾರೆ. ಈ ಭಾಗದಲ್ಲಿ 1992ರಲ್ಲಿ ಇಂಥದ್ದೇ ಬರಗಾಲ ಕಾಣಿಸಿಕೊಂಡಿತ್ತು. ಆಗ ದೇಶದ ಶೇ 50ಕ್ಕೂ ಹೆಚ್ಚು ದನಕರುಗಳು ಸತ್ತು ನೆಲಕ್ಕೊರಗಿದ್ದವು.

ಜಿಂಬಾಬ್ವೆ, ನಮೀಬಿಯಾ ಸೇರಿದಂತೆ ವಿವಿಧ ದೇಶಗಳು ಬರವನ್ನು ರಾಷ್ಟ್ರೀಯ ವಿಪತ್ತು ಎಂದು ಘೋಷಿಸಿದ್ದು, ಪರಿಹಾರ ಕಾರ್ಯಗಳನ್ನು ಕೈಗೊಂಡಿವೆ. ಧನಸಹಾಯಕ್ಕಾಗಿ ಅಂತರರಾಷ್ಟ್ರೀಯ ಸಮುದಾಯಕ್ಕೆ ಮೊರೆ ಇಟ್ಟಿವೆ. ವಿಶ್ವಸಂಸ್ಥೆಯು ಕೂಡ ಧನಸಂಗ್ರಹ ಕಾರ್ಯದಲ್ಲಿ ತೊಡಗಿದ್ದು, ಉದಾರವಾಗಿ ಸಹಾಯ ಮಾಡುವಂತೆ ಕರೆ ನೀಡಿದೆ. ಆದರೆ, ನಿರೀಕ್ಷಿಸಿದಷ್ಟು ಹಣ ಬಾರದೇ ಪರಿಹಾರ ಕಾರ್ಯಗಳು ಕುಂಟುತ್ತಾ ಸಾಗುತ್ತಿವೆ.

ಆಧಾರ: ರಾಯಿಟರ್ಸ್, ಬಿಬಿಸಿ, ವರ್ಲ್ಡ್ ವೆದರ್ ಅಟ್ರಿಬ್ಯುಷನ್. ಒಆರ್‌ಜಿ, ಎಸ್‌ಎಡಿಸಿ, ಎಎಫ್‌ಪಿ, ವಿಶ್ವಸಂಸ್ಥೆಯ ವೆಬ್‌ಸೈಟ್

ಎಲ್ ನಿನೊ ಕಾರಣ

ತೀವ್ರ ಬರಕ್ಕೆ ಎಲ್ ನಿನೊ ಪರಿಸ್ಥಿತಿ ಕಾರಣ. ಪೆಸಿಫಿಕ್ ಮಹಾಸಾಗರದ ನೀರಿನ ಮೇಲ್ಮೈ ಉಷ್ಣತೆಯು ಏರಿಕೆಯಾಗತೊಡಗಿದಾಗ ಎಲ್ ನಿನೊ ಪರಿಸ್ಥಿತಿ ಸೃಷ್ಟಿಯಾಗುತ್ತದೆ. ಪೆಸಿಫಿಕ್ ಸಾಗರದ ಪೂರ್ವ ಭಾಗದಲ್ಲಿ ನೀರು ಹೆಚ್ಚು ಬಿಸಿಯಾಗತೊಡಗುತ್ತಿದ್ದಂತೆಯೇ ಜಾಗತಿಕ ಹವಾಮಾನದ ಸ್ಥಿತಿಯಲ್ಲಿ ಬದಲಾವಣೆ ಕಂಡು ಬರುತ್ತದೆ.

ಈ ರಾಷ್ಟ್ರಗಳಲ್ಲಿ ಕಳೆದ ವರ್ಷವೂ ಹೆಚ್ಚು ಮಳೆಯಾಗಿಲ್ಲ. ಈ ವರ್ಷದ ಜನವರಿಯಿಂದಲೇ ಅಲ್ಲಿ ಮಳೆ ಕೊರತೆ ಉಂಟಾಗಿದ್ದು ಕೃಷಿ ಚಟುವಟಿಕೆಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ. ಫೆಬ್ರುವರಿಯಿಂದಲೇ ಈ ರಾಷ್ಟ್ರಗಳಲ್ಲಿ ಬರಪರಿಸ್ಥಿತಿ ಇದ್ದು, ಜುಲೈ ನಂತರ ಅದು ಮತ್ತಷ್ಟು ಬಿಗಡಾಯಿಸಿದೆ.

6.8 ಕೋಟಿ ಆಫ್ರಿಕಾ ಖಂಡದ ದಕ್ಷಿಣ ಭಾಗದ ರಾಷ್ಟ್ರಗಳಲ್ಲಿ ಬರದಿಂದ ಬಾಧಿತರಾದವರು

550 ಕೋಟಿ ಡಾಲರ್ (₹46,139 ಕೋಟಿ) ಬರ ಪರಿಹಾರಕ್ಕಾಗಿ ದಕ್ಷಿಣದ ಆಫ್ರಿಕಾ ರಾಷ್ಟ್ರಗಳ ಸಮುದಾಯ ಅಭಿವೃದ್ಧಿ ಸಂಘಟನೆಯು (ಎಸ್‌ಎಡಿಸಿ) ಕೇಳಿರುವ ನೆರವಿನ ಮೊತ್ತ

723 ನಮೀಬಿಯಾ ಸರ್ಕಾರ ಹತ್ಯೆ ಮಾಡಲು ನಿರ್ಧರಿಸಿರುವ ಪ್ರಾಣಿಗಳು (83 ಆನೆ, 300 ಜೀಬ್ರಾ, 30 ನೀರಾನೆ ಸೇರಿ)

200 ಜಿಂಬಾಬ್ವೆ ಸರ್ಕಾರ ಕೊಲ್ಲಲು ನಿಗದಿಪಡಿಸಿರುವ ಆನೆಗಳ ಸಂಖ್ಯೆ

2 ಲಕ್ಷ ಆಫ್ರಿಕಾ ಖಂಡದ ದಕ್ಷಿಣ ಭಾಗದ ಜಿಂಬಾಬ್ವೆ, ಜಾಂಬಿಯಾ, ಬೋಟ್ಸ್‌ವಾನಾ, ಅಂಗೋಲಾ ಮತ್ತು ನಮೀಬಿಯಾದ ಸಂರಕ್ಷಿತ ಪ್ರದೇಶಗಳಲ್ಲಿರುವ ಆನೆಗಳು

1 ಲಕ್ಷ ಜಿಂಬಾಬ್ವೆಯೊಂದರಲ್ಲೇ ಇರುವ ಆನೆಗಳ ಸಂಖ್ಯೆ

ಕಾಡು ಪ್ರಾಣಿಗಳ ಹತ್ಯೆ

ಹೆಚ್ಚು ಸಂರಕ್ಷಿತ ಅರಣ್ಯ ಪ್ರದೇಶಗಳನ್ನು ಹೊಂದಿರುವ ನಮೀಬಿಯಾ, ಜಿಂಬಾಬ್ವೆಗಳಲ್ಲಿ ಬರದಿಂದಾಗಿ ಜನ ಹಾಗೂ ಪ್ರಾಣಿಗಳಿಗೆ ಆಹಾರ ಕೊರತೆ ಉಂಟಾಗಿದೆ. ಜನರು ಹಸಿವಿನಿಂದ ಬಳಲುತ್ತಿದ್ದಾರೆ. ಜಲಮೂಲಗಳು ಒಣಗಿರುವುದರಿಂದ, ಮಳೆಯಾಗದೆ ಕಾಡುಗಳು ಒಣಗಿ ಹೋಗಿರುವುದರಿಂದ ಪ್ರಾಣಿಗಳಿಗೂ ನೀರು ಆಹಾರ ಸಿಗುತ್ತಿಲ್ಲ. ಮಾನವ–ವನ್ಯಜೀವಿ ಸಂಘರ್ಷ ಹೆಚ್ಚಾಗಿದೆ. ಹೀಗಾಗಿ ಜನರ ಹಸಿವು ನೀಗಿಸಲು, ಮಾನವ ವನ್ಯಜೀವಿ ಸಂಘರ್ಷ ತಪ್ಪಿಸಲು ನಮೀಬಿಯಾ ಮತ್ತು ಜಿಂಬಾಬ್ವೆಗಳು ಆನೆ ಸೇರಿದಂತೆ ವಿವಿಧ ಪ್ರಾಣಿಗಳನ್ನು ಕೊಲ್ಲಲು ನಿರ್ಧರಿಸಿವೆ.

ನಮೀಬಿಯಾವು 723 ಪ್ರಾಣಿಗಳನ್ನು ಕೊಲ್ಲುವುದಾಗಿ ಹೇಳಿದ್ದರೆ, ಜಿಂಬಾಬ್ವೆಯು 200 ಆನೆಗಳನ್ನು ವಧಿಸುವುದಾಗಿ ತಿಳಿಸಿದೆ. ಈ ನಿರ್ಧಾರಕ್ಕೆ ಪ್ರಾಣಿ ದಯಾ ಸಂಘಟನೆಗಳು, ಪರಿಸರ ಪ್ರೇಮಿಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

ಆಫ್ರಿಕಾದ ದಕ್ಷಿಣದ ರಾಷ್ಟ್ರಗಳಲ್ಲಿ 2 ಲಕ್ಷಕ್ಕೂ ಹೆಚ್ಚು ಆನೆಗಳಿವೆ. ಜಿಂಬಾಬ್ವೆಯೊಂದರಲ್ಲೇ ಲಕ್ಷದಷ್ಟು ಆನೆಗಳಿವೆ. ಮಾನವ ಪ್ರಾಣಿ ಸಂಘರ್ಷ ಹೆಚ್ಚಿರುವ ಪ್ರದೇಶಗಳಲ್ಲಿನ ಆನೆಗಳನ್ನು ಗುರುತಿಸಿ ಕೊಲ್ಲಲಾಗುವುದು. ಅವುಗಳ ಮಾಂಸವನ್ನು ಬರಪೀಡಿತ ಪ್ರದೇಶಗಳ ಜನರಿಗೆ ಹಂಚಲಾಗುವುದು ಎಂದು ಸರ್ಕಾರ ಹೇಳಿದೆ. ದೇಶದಲ್ಲಿ ಆನೆಗಳ ಸಾಂದ್ರತೆ ಹೆಚ್ಚಾಗಿದೆ ಎಂದು ತನ್ನ ನಿರ್ಧಾರವನ್ನು ಅದು ಸಮರ್ಥಿಸಿಕೊಂಡಿದೆ. ಜಿಂಬಾಬ್ವೆಯಲ್ಲಿ ಈ ಹಿಂದೆ 1988ರಲ್ಲಿ ಈ ರೀತಿ ಆನೆಗಳನ್ನು ಕೊಲ್ಲಲಾಗಿತ್ತು.

ನಮೀಬಿಯಾವು ಈ ತಿಂಗಳ ಆರಂಭದಲ್ಲೇ 723 ಪ್ರಾಣಿಗಳನ್ನು ಕೊಲ್ಲಲು ತೀರ್ಮಾನಿಸಿತ್ತು. ಇವುಗಳಲ್ಲಿ 83 ಆನೆಗಳು, 30 ನೀರಾನೆಗಳು, 60 ಎಮ್ಮೆಗಳು, 50 ಇಂಪಾಲ (ಆಫ್ರಿಕಾ ಖಂಡದ ದಕ್ಷಿಣ ಭಾಗದಲ್ಲಿ ಕಂಡು ಬರುವ ಸಣ್ಣ ಜಿಂಕೆ), 100 ಈಲಂಡ್‌ಗಳು (ದೊಡ್ಡ ಜಿಂಕೆ) 100 ಬ್ಲೂ ವೈಲ್ಡ್‌ಬೀಸ್ಟ್ (ಕಾಡುಕೋಣ ಹೋಲುವ ಪ್ರಾಣಿಗಳು), 300 ಜೀಬ್ರಾಗಳು ಸೇರಿವೆ. ಈಗಾಗಲೇ 150ಕ್ಕೂ ಹೆಚ್ಚು ಪ್ರಾಣಿಗಳನ್ನು ಹತ್ಯೆ ಮಾಡಲಾಗಿದೆ. ಇಷ್ಟು ಪ್ರಾಣಿಗಳಿಂದ 54 ಸಾವಿರ ಕೆ.ಜಿಗೂ ಹೆಚ್ಚು ಮಾಂಸ ಸಿಗಲಿದೆ ಎಂದು ಅಂದಾಜಿಸಲಾಗಿದ್ದು, ಆಹಾರ ಕೊರತೆ ಕಂಡುಬಂದಿರುವ ಪ್ರದೇಶಗಳ ಜನರಿಗೆ ಹಂಚಲು ನಮೀಬಿಯಾ ಸರ್ಕಾರ ತೀರ್ಮಾನಿಸಿದೆ.

ಸಿನಿ ಬಿಟ್ಸ್

'ವಜ್ರಮುನಿ'ಯಲ್ಲ ಕೋಮಲ್!



ಕೋಮಲ್‌ಕುಮಾರ್

ಸೆನ್ಸೇಷನಲ್ ಸ್ಟಾರ್ ಕೋಮಲ್ 'ಯಲಾಕುನ್ನಿ' ಎನ್ನುತ್ತಾ ತೆರೆಗೆ ಬರಲಿದ್ದಾರೆ. ಎನ್.ಆರ್. ಪ್ರದೀಪ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶಿಸಿರುವ ಈ ಸಿನಿಮಾದ ಟೀಸರ್ ಬಿಡುಗಡೆಯಾಗಿದೆ.

'ವಜ್ರಮುನಿ'ಯಾಗಿ ಕೋಮಲ್ ಅವತಾರವೆತ್ತಿದ್ದು, ಅವರಂತೆಯೇ ಕಾಣಿಸಿಕೊಂಡು ಸೆಳೆದಿದ್ದಾರೆ. ಶ್ರೀಕೃಷ್ಣನಾಗಿ, ವಜ್ರಮುನಿಯಾಗಿ ಹೀಗೆ ಭಿನ್ನ ಅವತಾರಗಳನ್ನು ಎತ್ತುತ್ತ ಹಲವು ಶೇಡ್‌ಗಳಲ್ಲಿ ಕೋಮಲ್ ಕಾಣಿಸಿಕೊಂಡಿದ್ದಾರೆ. ಚಿತ್ರಕ್ಕೆ 'ಮೇರಾ ನಾಮ್ ವಜ್ರಮುನಿ' ಎನ್ನುವ ಅಡಿಬರಹವಿದ್ದು, ಸೌಂದರ್ಯ ಸಿನಿ ಕಂಬೈನ್ಸ್ ಹಾಗೂ ನರಸಿಂಹ ಸಿನಿಮಾಸ್ ಲಾಂಛನದಲ್ಲಿ ಅನುಸೂಯ ಕೋಮಲ್‌ಕುಮಾರ್, ಸಹನಾಮೂರ್ತಿ ಸಿನಿಮಾ ನಿರ್ಮಾಣ ಮಾಡಿದ್ದಾರೆ.

ಶೀಘ್ರದಲ್ಲೇ ಸಿನಿಮಾ ತೆರೆಕಾಣಲಿದೆ. ಈ ಚಿತ್ರದಲ್ಲಿ ಕೋಮಲ್ ಮೊದಲ ಬಾರಿಗೆ ದ್ವಿಪಾತ್ರದಲ್ಲಿ ಕಾಣಿಸಿಕೊಂಡಿರುವುದು ವಿಶೇಷ. ದತ್ತಣ್ಣ, ಸಾಧು ಕೋಕಿಲ, ಮಿತ್ರ, ಸುಚೇಂದ್ರ ಪ್ರಸಾದ್, ಶಿವರಾಜ್ ಕೆ.ಆರ್. ಪೇಟೆ, ತಬಲಾ ನಾಣಿ, ರಾಜು ತಾಳಿಕೋಟೆ, ಸುಮನ್ ನಗರ್‌ಕರ್, ಮಾನಸಿ ಸುಧೀರ್, ಯತಿರಾಜ್ ಜಗ್ಗೇಶ್, ಜಯಸಿಂಹ ಮುಸುರಿ, ರಘು ರಾಮನಕೊಪ್ಪ, ಮಹಾಂತೇಶ್, ಜಯರಾಮ್ ಸೇರಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ಚಿತ್ರದ ನಾಯಕಿಯರಾಗಿ ನಿಸರ್ಗ ಅಪ್ಪಣ್ಣ ಮತ್ತು 'ಗಿಚ್ಚಿಗಿಲಿಗಿಲಿ'ಯ ಅಮೃತಾ ಬಣ್ಣ ಹಚ್ಚಿದ್ದಾರೆ. ವಜ್ರಮುನಿ ಅವರ ಮೊಮ್ಮಗ ಆಕರ್ಷ್ ಈ ಚಿತ್ರದ ಮೂಲಕ ಚಂದನವನ ಪ್ರವೇಶಿಸುತ್ತಿದ್ದಾರೆ. ಮಯೂರ್ ಪಟೇಲ್ ಖಳನಾಯಕನಾಗಿ ನಟಿಸಿದ್ದಾರೆ.



ಅದ್ವೆ

'ಸುಬ್ರಹ್ಮಣ್ಯ'ನ ಮೊದಲ ತುಣುಕು ಬಿಡುಗಡೆ


ಬಹುಭಾಷಾ ನಟ ರವಿಶಂಕರ್ ಅವರ ಪುತ್ರ ಅದ್ವೆ ನಟನೆಯ 'ಸುಬ್ರಹ್ಮಣ್ಯ' ಸಿನಿಮಾದ ಗ್ಲಿಂಪ್ಸ್ ಬಿಡುಗಡೆಯಾಗಿದೆ. ರವಿಶಂಕರ್ ಅವರೇ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದು, ಅವರು ಇಪ್ಪತ್ತು ವರ್ಷಗಳ ನಂತರ ಡೈರೆಕ್ಟರ್ ಕ್ಯಾಪ್ ತೊಟ್ಟಿದ್ದಾರೆ. ಇತ್ತೀಚೆಗೆ ದುಬೈನಲ್ಲಿ ನಡೆದ ಸೈಮಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅದ್ವೆಯನ್ನು ಪರಿಚಯಿಸುವ ಈ ತುಣುಕು ಬಿಡುಗಡೆಯಾಗಿದೆ. ವಿಷಪೂರಿತ ಹಾವುಗಳಿಂದ ತುಂಬಿದ ಬಾವಿಗೆ ಅದ್ವೆ ಹಗ್ಗದ ಮೂಲಕ ಪ್ರವೇಶಿಸುವ, ಆ ಬಾವಿಯಲ್ಲಿರುವ ಪುರಾತನ ಪುಸ್ತಕವನ್ನು ಎತ್ತಿಕೊಂಡು ಹೊರ ಬರುವ ದೃಶ್ಯ ಇದರಲ್ಲಿದ್ದು, ಗ್ರಾಫಿಕ್ಸ್‌ಗೆ ಹೆಚ್ಚಿನ ಒತ್ತು ನೀಡಲಾಗಿದೆ. 'ಸುಬ್ರಹ್ಮಣ್ಯ'ನ ಈ ಗ್ಲಿಂಪ್ಸ್ ತಯಾರಿಗೆ ವಿಎಫ್‌ಎಕ್ಸ್ ತಂತ್ರಜ್ಞರು ನಾಲ್ಕು ತಿಂಗಳಿನಿಂದ ದುಡಿದಿದ್ದಾರೆ. ಚಿತ್ರದ ಕ್ರಿಯೇಟಿವ್ ನಿರ್ಮಾಪಕ ಮತ್ತು ವಿಎಫ್‌ಎಕ್ಸ್ ಮೇಲ್ವಿಚಾರಕ ನಿಖಿಲ್ ಕೋಡೂರು ನೇತೃತ್ವದಲ್ಲಿ ಮುಂಬೈ, ಹೈದರಾಬಾದ್, ಬೆಂಗಳೂರು ಮತ್ತು ಚೆನ್ನೈನ ಪ್ರಸಿದ್ಧ ಸ್ಟುಡಿಯೋಗಳಲ್ಲಿ ವಿಎಫ್‌ಎಕ್ಸ್ ಕೆಲಸ ನಡೆದಿದೆ ಎಂದಿದೆ ಚಿತ್ರತಂಡ. 'ಸುಬ್ರಹ್ಮಣ್ಯ' ಸಿನಿಮಾ ಸೋಶಿಯೋ-ಫ್ಯಾಂಟಸಿ ಶೈಲಿಯ ಸಿನಿಮಾವಾಗಿದ್ದು ಜೊತೆ ಅಡ್ವೆಂಚರ್ ಅಂಶಗಳೂ ಈ ಸಿನಿಮಾದಲ್ಲಿದೆ. ಈ ಪ್ಯಾನ್ ಇಂಡಿಯಾ ಸಿನಿಮಾವನ್ನು ಎಸ್. ಜಿ ಮೂವೀ ಮೇಕರ್ಸ್ ಸಂಸ್ಥೆಯ ಮೂಲಕ ತಿರುಮಲ ರೆಡ್ಡಿ ಹಾಗೂ ಅನಿಲ್ ಕಡಿಯಾಲ ಅವರು ನಿರ್ಮಾಣ ಮಾಡುತ್ತಿದ್ದಾರೆ. ರವಿ ಬಸ್ರೂರು ಸಂಗೀತ ನಿರ್ದೇಶನ ಚಿತ್ರಕ್ಕಿದೆ. ವಿಘ್ನೇಶ್ ರಾಜ್ ಛಾಯಾಚಿತ್ರಗ್ರಹಣ, ವಿಜಯ್ ಎಂ. ಕುಮಾರ್ ಸಂಕಲನ ಚಿತ್ರಕ್ಕಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಸಾಮಾಜಿಕ ಜಾಲತಾಣಗಳಲ್ಲಿ ಕೆಲವರು ಬಿಜೆಪಿಯ ಜಮ್ಮು ಕಾಶ್ಮೀರ ಘಟಕದ ಲೆಟರ್ ಹೆಡ್‌ನಲ್ಲಿ ಇರುವಂತೆ ತೋರುವ ಪತ್ರಿಕಾ ಪ್ರಕಟಣೆಯ ಸ್ಕ್ರೀನ್ ಶಾಟ್ ಅನ್ನು ಹಂಚಿಕೊಳ್ಳುತ್ತಿದ್ದಾರೆ. ಸಂಸದ ಅಬ್ದುಲ್ ರಶೀದ್ ಶೇಖ್ (ಎಂಜಿನಿಯರ್ ರಶೀದ್) ಅವರನ್ನು ಸ್ವಾಗತಿಸುವ ರ‍್ಯಾಲಿಗೆ ಬಿಜೆಪಿ ಕಾರ್ಯಕರ್ತರು ಬರುವಂತೆ ಜಮ್ಮು ಕಾಶ್ಮೀರದ ಬಿಜೆಪಿ ಘಟಕವು ಕರೆ ನೀಡಿದೆ ಎಂದು ಪತ್ರಿಕಾ ಪ್ರಕಟಣೆಯನ್ನು ಹಂಚಿಕೊಳ್ಳುವ ಮೂಲಕ ಪ್ರತಿಪಾದಿಸಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.



ಗೂಗಲ್ ಲೆನ್ಸ್ ಮೂಲಕ ಪತ್ರಿಕಾ ಪ್ರಕಟಣೆಯ ಸ್ಕ್ರೀನ್ ಶಾಟ್ ಅನ್ನು ಪರಿಶೀಲನೆಗೊಳಪಡಿಸಿದಾಗ, ಅದನ್ನು ಹಲವರು ಹಂಚಿಕೊಂಡಿರುವುದು ಕಂಡುಬಂತು. ಈ ಬಗ್ಗೆ ಮತ್ತಷ್ಟು ಹುಡುಕಾಟ ನಡೆಸಿದಾಗ, ಇನಾಮ್ ಉನ್ ನಬಿ ಎನ್ನುವವರು, ಇದು ವಿರೋಧ ಪಕ್ಷಗಳ ಕುತಂತ್ರ ಎಂದು ಆರೋಪಿಸಿ ಬರೆದ ಎಕ್ಸ್ ಪೋಸ್ಟ್ ಕಂಡಿತು. ಅದನ್ನು ಆಧಾರವಾಗಿಟ್ಟುಕೊಂಡು ಹುಡುಕಾಟ ನಡೆಸಿದಾಗ, ಪಿಟಿಐ ಸುದ್ದಿಯೊಂದನ್ನು 'ಡೆಕ್ಕನ್ ಹೆರಾಲ್ಡ್' ಪ್ರಕಟಿಸಿರುವುದು ಸಿಕ್ಕಿತ್ತು. ಅದು ಬಿಜೆಪಿಯ ಜಮ್ಮು ಕಾಶ್ಮೀರ ಘಟಕದ ಅಧ್ಯಕ್ಷರು ಕೊಟ್ಟ ಹೇಳಿಕೆಯ ಸುದ್ದಿ. 'ಎಂಜಿನಿಯರ್ ರಶೀದ್ ಅವರ ಸ್ವಾಗತ ರ‍್ಯಾಲಿಗೆ ಬರುವಂತೆ ಪಕ್ಷದ ಕಾರ್ಯಕರ್ತರಿಗೆ ಕರೆ ಕೊಟ್ಟಿರುವ ಪತ್ರಿಕಾ ಪ್ರಕಟಣೆ ನಕಲಿ' ಎಂದು ಅವರು ಸ್ಪಷ್ಟೀಕರಣ ನೀಡಿದ್ದರು. ಜತೆಗೆ, ಆ ಪತ್ರಿಕಾ ಪ್ರಕಟಣೆಯು ನಕಲಿ ಎಂದು ಜಮ್ಮು ಕಾಶ್ಮೀರದ ಬಿಜೆಪಿ ಘಟಕದ ಅಧ್ಯಕ್ಷ ರವೀಂದರ್ ರೈನಾ ಎಕ್ಸ್‌ನಲ್ಲಿಯೂ ಸ್ಪಷ್ಟೀಕರಣ ನೀಡಿದ್ದಾರೆ. ಈ ಬಗ್ಗೆ ಪಿಟಿಐ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಮೊಬೈಲ್ ಮ್ಯಾನ್‌ಗಳಾಗಬೇಡಿ!



ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

25

ವರ್ಗೀಸ್ ಕುರಿಯನ್ ಅಂತ ಒಬ್ಬರಿದ್ದರು. ಸಾಮಾನ್ಯ ಎಂಜಿನಿಯರ್ ಆಗಿದ್ದರು. ಆದರೆ ಅವರಿಗೆ ಒಂದು ಕನಸಿತ್ತು. ವಿಶ್ವದಲ್ಲಿಯೇ ಅತಿ ಹೆಚ್ಚು ಹಾಲು ಉತ್ಪಾದಿಸುವ ಡೆನ್ಮಾರ್ಕ್ ದೇಶಕ್ಕಿಂತ ಭಾರತದಲ್ಲಿ ಹಾಲು ಉತ್ಪಾದನೆ ಹೆಚ್ಚಿಸಬೇಕು ಅಂತ. ಅದಕ್ಕೆ ಅವರು ಗುಜರಾತಿನ ಆನಂದದಲ್ಲಿ ಅಮುಲ್ ಎಂಬ ಕಂಪನಿ ಆರಂಭಿಸಿದರು. ದಿನಕ್ಕೆ ನೂರು ಕೋಟಿ ಲೀಟರ್ ಹಾಲು ಉತ್ಪಾದಿಸುವ ಗುರಿ ಹೊಂದಿದ್ದರು. ಅದನ್ನುಸಾಧಿಸುವ ಮೂಲಕ ಅವರು Milk man of India ಆದರು.

ಜಾದವ್ ಪಾಯೆಂಗ್ ಅಂತ ಒಬ್ಬರು ಅಸ್ಸಾಂ ರಾಜ್ಯದಲ್ಲಿದ್ದಾರೆ. ಬ್ರಹ್ಮಪುತ್ರಾ ನದಿ ದಂಡೆಗೆ ನೆರೆ ಬಂದು ಭೂಮಿಯನ್ನು ಕೊಚ್ಚಿಕೊಂಡು ಹೋಗುತ್ತಿತ್ತು. ಅದನ್ನು ತಡೆಯಲು ಅವರು ನದಿ ದಂಡೆಯಲ್ಲಿ ಗಿಡ ಹಚ್ಚಲು ಆರಂಭಿಸಿದರು. ಒಂದಲ್ಲ, ಎರಡಲ್ಲ, 1,400 ಎಕರೆ ಪ್ರದೇಶದಲ್ಲಿ ಕಾಡು ಬೆಳೆಸಿದರು. ಅದಕ್ಕೇ ಅವರನ್ನು Forest man of India ಎಂದು ಕರೆಯುತ್ತಾರೆ.

ದಶರಥ ಮಾಂಝಿ ಅಂತ ಒಬ್ಬರು ಬಿಹಾರದ ಸಣ್ಣ ಹಳ್ಳಿಯಲ್ಲಿದ್ದರು. ಆ ಹಳ್ಳಿ ಗುಡ್ಡದ ತಪ್ಪಲಿನಲ್ಲಿತ್ತು. ಆ ಗುಡ್ಡ ದಾಟ ಹೆದ್ದಾರಿಗೆ ಕೇವಲ 5 ಕಿ.ಮೀ ದೂರ. ಆದರೆ ರಸ್ತೆ ಇರಲಿಲ್ಲ. ಹೆದ್ದಾರಿಗೆ ಬರಬೇಕು ಅಂದರೆ 80 ಕಿಮೀ ಸುತ್ತಿ ಬರಬೇಕಿತ್ತು. ಅನಾರೋಗ್ಯ ಪೀಡಿತ ತನ್ನ ಪತ್ನಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲು ಸಾಧ್ಯವಾಗದೆ ಆಕೆ ನಿಧನರಾದರು. ಹೆದ್ದಾರಿಗೆ ಸೂಕ್ತ ರಸ್ತೆ ಮಾಡಿಕೊಡಿ ಎಂದು ಗ್ರಾಮದವರು ಎಷ್ಟೇ ಮನವಿ ಸಲ್ಲಿಸಿದರೂ ಪ್ರಯೋಜನವಾಗಲಿಲ್ಲ. ಅದಕ್ಕೆ ಮಾಂಝಿ ಅವರೇ ಗುಡ್ಡ ಕೊರೆದು ರಸ್ತೆ ನಿರ್ಮಿಸಿದರು. ಅದಕ್ಕೆ ಅವರನ್ನು Mountain man of India ಎಂದು ಕರೆಯುತ್ತಾರೆ.

ನಮ್ಮ ರಾಷ್ಟ್ರಪತಿಯಾಗಿದ್ದ ಡಾ.ಅಬ್ದುಲ್ ಕಲಾಂ ಅವರನ್ನು Missile man of India ಎಂದು ಕರೆಯಲಾಗುತ್ತದೆ.

ನಮ್ಮ ಮಕ್ಕಳಿಗೆ ಇವರೆಲ್ಲಾ ಆದರ್ಶವಾಗಬೇಕು. ಆದರೆ ನಮ್ಮ ಮಕ್ಕಳು ಮೊಬೈಲ್ ಮ್ಯಾನ್‌ಗಳಾಗಿದ್ದಾರೆ. ನಾವೂ ಮೊಬೈಲ್ ಮ್ಯಾನ್‌ಗಳಾಗಿದ್ದೇವೆ. Mobile is a good servant but bad master. ಮೊಬೈಲ್ ಎಲ್ಲ ಸಂಬಂಧಗಳನ್ನು ಕಡಿದು ಹಾಕಿಬಿಟ್ಟಿದೆ. ಎಷ್ಟೋ ಮಕ್ಕಳು ಬೆಳಿಗ್ಗೆ ಹಾಲು ಮಾರಿ, ಪೇಪರ್ ಹಾಕಿ ಶಾಲೆಗೆ ಹೋಗುತ್ತಾರೆ. ಮಂದಿ ಪಾದರಕ್ಷೆ ಹೊಲಿದು ತಮಗೆ ಪಾದರಕ್ಷೆ ಇಲ್ಲದೆ ಶಾಲೆಗೆ ಹೋಗುವ ಮಕ್ಕಳೂ ಇದ್ದಾರೆ. ಇಂಥ ಮಕ್ಕಳನ್ನು ಮೇಲೆತ್ತುವ ಮನಸ್ಸು ಇರಬೇಕು. ಮಕ್ಕಳು ಅಮೆರಿಕದಲ್ಲಿ ಇದ್ದರೆ, ಯುರೋಪದಲ್ಲಿ ಇದ್ದರೆ ನಾವು ಶ್ರೀಮಂತರಲ್ಲ. ಯಾವ ಮಗ ದುಡಿದು ಬಂದು ದಿನಾ ರಾತ್ರಿ ತಂದೆ ತಾಯಿ ಜೊತೆ ಇರ್ತಾನಲ್ಲ ಅವರು ಶ್ರೀಮಂತರು.

ರವೀಂದ್ರನಾಥ ಟ್ಯಾಗೋರ್ ಒಂದು ಕಡೆ, 'ದೇವನೇ ನನಗೆ ಶಕ್ತಿ ಕೊಡು, ಸ್ವಾರ್ಥದ ಎದುರು ಮಂಡಿಯೂರಿ ನಾನು ಕುಂದಬಾರದು, ಬಡವರ ಕಣ್ಣೀರು ಒರೆಸುವ ಅವಕಾಶ ಕೊಡು, ಕಣ್ಣೀರಿಗೆ ಕರಗುವ ಹೃದಯ ಕೊಡು' ಎಂದು ಹೇಳುತ್ತಾರೆ. ಆ ರೀತಿ ಮಕ್ಕಳನ್ನು ಬೆಳೆಸಬೇಕು. ದುಡಿಯೋದನ್ನು ಕಲಿಸಬೇಕು. ಎಷ್ಟು ದುಡಿಯಬೇಕು ಅಂದರೆ ಭೂಮಿ ತಾಯಿನೇ 'ಸಾಕಪ್ಪ ಸಾಕು ನಾನೇ ದಣಿದೀನಿ ಸ್ವಲ್ಪ ಸುಮ್ಮನಿರು' ಅಂತ ಹೇಳಬೇಕು ಹಾಗೆ ದುಡಿಯಬೇಕು. ದುಡುದು ಒಂದು ಸುಂದರ ಬದುಕು ಕಟ್ಟಿಕೊಳ್ಳಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಸೆಪ್ಟೆಂಬರ್ 18, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ಪೂರ್ಣಿಮಾ ಗಂ. 08-05 ನಂತರ (ಭಾದ್ರಪದ ಕೃಷ್ಣ) ಪ್ರತಿಪದ್ ಗಂ. 28-20 ನಕ್ಷತ್ರ: ಪೂರ್ವಾಭಾದ್ರ ಗಂ. 11-00 ಯೋಗ: ಗಂಡ ಗಂ. 23-29 ಕರಣ: ಬವ ಗಂ. 08-05, ಕನ್ಯಾ ಮಾಸದ 02 ನೇ ದಿನ, ಮಳೆನಕ್ಷತ್ರ: ಉತ್ತರಫಲ್ಗುಣಿ 2.
ರಾಹುಕಾಲ : ಮಧ್ಯಾಹ್ನ 12-00 – 01-30, ಸೂರ್ಯೋದಯ : 06-23 ಸೂರ್ಯಾಸ್ತ : 06-26, ಮುಸ್ಲಿಂ ದಿನಾಂಕ : 14 ರಬೀಉಲ್ಲಾವಲ್, ದಿನ ವಿಶೇಷ : ಪಿತೃಪಕ್ಷ ತರ್ಪಣ ಪ್ರಾರಂಭ ಅಥವಾ ಮಹಾಲಯ ಪಕ್ಷ ಪ್ರಾರಂಭ (ದ.ಭಾರತ), ಅದೃಷ್ಟ ಸಂಖ್ಯೆ : 6, 1

ಮೇಷ: ಆಫೀಸಿನ ಕೆಲಸಗಳನ್ನು ಮಾಡಿ ಮುಗಿಸುವಲ್ಲಿ ಆತುರ ತೋರುವುದು ಸರಿಯಲ್ಲ. ಮಹಿಳೆಯರಿಗೆ ನಕಾರಾತ್ಮಕ ಆಲೋಚನೆಗಳಿಂದ ಆರೋಗ್ಯ ಹಾಳಾಗಬಹುದು. ಭಾಗ್ಯದ ಬಾಗಿಲು ತೆರೆಯುವುದು.

ವೃಷಭ: ಸ್ವಯಂ ಔಷಧಿಗಳ ಅಧಿಕ ಬಳಕೆ ಅಥವಾ ಅದರ ಅಡ್ಡಪರಿಣಾಮ-ದಿಂದ ಅನಾರೋಗ್ಯಕ್ಕೆ ಗುರಿಯಾಗಬಹುದು. ವಿದೇಶ ಪ್ರವಾಸದ ಯೋಜನೆಗಳು ಲಾಭವನ್ನೇ ನೀಡಲಿರುವುದು.

ಮಿಥುನ: ಲೋಹ ಮಾರಾಟಗಾರರು ಹಳೆಯ ಲೋಹಗಳನ್ನು ಖರೀದಿಸುವಲ್ಲಿ ಅನಿರೀಕ್ಷಿತವಾಗಿ ಲಾಭ ಪಡೆಯುವರು. ಸಾರ್ವಜನಿಕರಲ್ಲಿ ಹೆಚ್ಚಾಗಿ ಬೆರೆಯುವ ಸಂದರ್ಭ ಬರುವುದರಿಂದ ಆರೋಗ್ಯದಲ್ಲಿ ಗಮನ ವಹಿಸಿ.

ಕರ್ಕಾಟಕ: ಮಂದಗತಿಯಲ್ಲಿ ಸಾಗುತ್ತಿದ್ದ ಕೆಲಸಗಳನ್ನು ಶೀಘ್ರ ಪೂರೈಸಲು ಸಿಬ್ಬಂದಿಗೆ ತಾಕೀತು ಮಾಡಬೇಕಾಗುವುದು. ಲೇವಾದೇವಿ ವ್ಯವಹಾರದಲ್ಲಿ ವಿಚಾರ ಮಾಡಿ ತೀರ್ಮಾನ ಕೈಗೊಳ್ಳುವುದು ಉತ್ತಮ.

ಸಿಂಹ: ಸಹಚರರಿಂದ ಅಥವಾ ಅಧಿಕಾರಿಗಳಿಂದ ನಿಮಗೆ ಅಸಹಕಾರದ ಪರಿಸ್ಥಿತಿ ಎದುರಾಗಬಹುದು. ನಿಂತುಹೋದ ಕೆಲಸಗಳನ್ನು ಪುನಃ ಆರಂಭ ಮಾಡುವ ಬಗ್ಗೆ ಗಮನಹರಿಸಿ. ವಿಮಾ ಸಲಹೆಗಾರರು ಬಲವಂತ ಪಡಿಸಬೇಡಿ.

ಕನ್ಯಾ: ಕಟ್ಟಡ ನಿರ್ಮಾಣದ ಕಾರ್ಮಿಕರಿಗೆ ಸಂತೋಷದಿಂದ ಕೆಲಸ ಮಾಡುವ ಮತ್ತು ಹೊಸದಾದ ಜಾಗ ಪ್ರಾಪ್ತಿ. ಕದಡಿದ ಮನಸ್ಸಿಗೆ ಸಂಜೆಯ ವೇಳೆಗೆ ತಣ್ಣನೆಯ ವಾತಾವರಣ ಸಂತೋಷ ತರಲಿದೆ.

ತುಲಾ: ದುಬಾರಿ ವಸ್ತುಗಳನ್ನು ಖರೀದಿಸುವ ಕುರಿತು ಹಾಗೂ ಅದರ ಅವಶ್ಯಕತೆಯ ಕುರಿತು ಚರ್ಚಿಸಿ ನಂತರ ಖರೀದಿಸಿ. ದೇವರ ಕೃಪೆಯಿಂದ ಭಾಗ್ಯದ ಬಾಗಿಲು ತೆರೆಯುವುದು.

ವೃಶ್ಚಿಕ: ಅಭಿರುಚಿಗೆ ಹೊಂದುವಂಥ ಜನರೊಂದಿಗೆ ಒಡನಾಟ ಬೆಳೆಸಿಕೊಳ್ಳುವುದರಿಂದ ನೆಮ್ಮದಿ ಸಿಗುತ್ತದೆ. ನಿಮ್ಮ ಮಾತು ಇನ್ನೊಬ್ಬರ ಮನಸ್ಸಿಗೆ ನೋವಾಗದಂತೆ ಇರಲಿ.

ಧನು: ಮನಸ್ಸಿನ ಉದ್ವೇಗ ಕಡಿಮೆ ಮಾಡಿಕೊಳ್ಳಲು ದೇವರ ಧ್ಯಾನದಲ್ಲಿ ತೊಡಗುವುದು ಸರಿಯಾದ ಮಾರ್ಗ. ಆಕಸ್ಮಿಕ ರೀತಿಯಲ್ಲಿ ಮದುವೆ ನಿಶ್ಚಯ ಕಾರ್ಯ ನಡೆಯಲಿದೆ. ವಿದ್ಯುತ್ ಉಪಕರಣ ಬಳಸುವಾಗ ಜಾಗ್ರತೆ ವಹಿಸಿ.

ಮಕರ: ತಂಗಿಗಾಗಿ ಹಣವನ್ನು ಮತ್ತು ಸಮಯವನ್ನು ಖರ್ಚು ಮಾಡಬೇಕಾದ ಸಂದರ್ಭ ಬರುವುದು. ಐ.ಟಿ. ಕಂಪನಿ ಉದ್ಯೋಗಿಗಳಿಗೆ ಕೆಲಸದ ಒತ್ತಡ ಜಾಸ್ತಿಯಾಗಲಿದೆ. ಅದರ ಪರಿಣಾಮವಾಗಿ ವರಮಾನ ಹೆಚ್ಚಲಿದೆ.

ಕುಂಭ: ಶುಭ ಸಮಾಚಾರಗಳನ್ನು ಕೇಳುವುದಲ್ಲದೆ ಪ್ರಯತ್ನಿಸಿದ ಎಲ್ಲಾ ಕಾರ್ಯಗಳಲ್ಲಿ ಯಶಸ್ಸು ಪಡೆಯುವಿರಿ. ವ್ಯವಹಾರದಲ್ಲಿ ಪಾಲುದಾರರನ್ನಾಗಿ ಸೇರಿಸಿಕೊಳ್ಳಲು ಸೂಕ್ತ ವ್ಯಕ್ತಿಯ ಹುಡುಕಾಟ ನಡೆಸುವಿರಿ.


ಮೀನ: ಸಿಹಿ ವಿಚಾರವನ್ನು, ಅವಕಾಶಗಳನ್ನು ಮತ್ತು ಕಹಿಯ ಸಂಗತಿಯನ್ನು ಮುಕ್ತ ಮನಸ್ಸಿನಿಂದ ಸಮಾನವಾಗಿ ಸ್ವೀಕರಿಸಿ. ಸಂಸಾರದಲ್ಲಿ ಬಿರುಕು ಮೂಡದಂತೆ ನೋಡಿಕೊಳ್ಳಿ.

ಪದಬಂಧ 5806

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಅತಿಶಯವಾದ ಮಾತು (3)
4.ಕ್ಷೌರಿಕನ ಸಲಕರಣೆಯ ಪೆಟ್ಟಿಗೆ (3)
5.ಗಡಿ ಕೊನೆಗಿದ್ದಾಗ ಬಲವಂತವಾಗಿ ಹೊರದೂಡುವಿಕೆ (4)
6.ಹೊಳೆಯ ದಂಡೆಯಿದು (4)
8.ನರಕದಲ್ಲಿರುವ ಮನುಷ್ಯ (2)
10.ಟಪಾಲು ಕೊಟ್ಟವನ ಭಾಗ ಹಿಂದುಮುಂದಾಗಿದೆ (2)
13.ವಾರದೊಳಗೇ ಮಾಡಿದ ಮಾಟ! (4)
14.ಎದುರಾಳಿ ಅಥವಾ ಪ್ರತಿಪಕ್ಷಿ (4)
15.ಯಂತ್ರಗಳಿಂದ ಸಜ್ಜಿತವಾದ ಕಾರ್ಖಾನೆ (3)
16.ಹುಟ್ಟುವಳಿಗೊಂದು ಪರ್ಯಾಯ ಪದ (3)

ಮೇಲಿಂದ ಕೆಳಕ್ಕೆ
1.ಪಂಚಾಯಿತರ ಸಮ್ಮುಖದಲ್ಲಿ ಸಿದ್ಧಪಡಿಸಿದ ವರದಿ (6)
2.ಬ್ರಹ್ಮೋಪದೇಶವನ್ನು ಹೀಗೆನ್ನಿ (5)
3.ಪ್ರತ್ಯೇಕವಾದ ಗುಂಪು (3)
5.ನಡುವೆ ಧ್ವನಿ ಸೇರಿಸಿದಾಗ ಸಾಲ ಸಿಗುತ್ತದೆ! (4)
7.ಒಪ್ಪವಾಗಿ ಬಂದಿರುವ ಪರಿವಿಡಿ (6)
9.ರಸತಂತ್ರಜ್ಞನನ್ನು ಹೀಗೂ ಕರೆವರು (4)
11.ಅತ್ತಿಗೆ ಹಿಡಿದಿರುವ ಚಿಟ್ಟೆ (5)
12.ಚಂದಾಹಣವನ್ನು ಹೀಗೂ ಹೇಳುತ್ತಾರೆ (3)



5805ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಶರಸಂಧಾನ 4.ಕೊತವಾಲ 6.ಅಧಮ 8.ಪುಡಿ 9.ನಾಟಾ 10.ವಿಷಾದ 11.ವೀಗ 12.ತುಸು 13.ಲೆರೋಮಾ 15.ಹಸೆಮಣೆ 18.ಗಗನಮಣಿ

ಮೇಲಿಂದ ಕೆಳಕ್ಕೆ:
1.ಶಕ್ತಿ 2.ಸಂಬಂಧ 3.ಹಠ 4.ಕೊಳಗದಪ್ಪಲೆ 5.ಲಪಟಾಯಿಸು 6.ಅಡಿ 7.ಮನೋವಿಶ್ಲೇಷಣೆ 8.ಪುನರ್ವಿವಾಹ 12.ತುಮಾ 14.ರೋದನ 16.ಮಗ್ಗಿ 17.ಗಣಿ

ಸುಡೊಕು 6191

2		6		7			5	
			5		6	3		2
3							6	
	2					9		4
			2		7			
	7					5		8
		9			8		4	
4		2						1
	6		4		2	7	9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6190 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

ಗಜಮುಖನ ವಿದಾಯ ವೈವಿಧ್ಯ



ಕಾರವಾರದ ಮಾರುತಿ ಗಲ್ಲಿಯಲ್ಲಿ 11 ದಿನ ಅದ್ದೂರಿಯಾಗಿ ಪೂಜಿಸಲಾದ ಗಣೇಶ ಮೂರ್ತಿಯನ್ನು ಮಂಗಳವಾರ ಅರಬ್ಬಿ ಸಮುದ್ರದಲ್ಲಿ ವಿಸರ್ಜಿಸಲಾಯಿತು – ಪ್ರಜಾವಾಣಿ ಚಿತ್ರ:ದಿಲೀಪ್ ರೇವಣಕರ್



ಬೆಳಗಾವಿಯಲ್ಲಿ ಸಾರ್ವಜನಿಕ ಗಣೇಶ ಮೂರ್ತಿಗಳ ವಿಸರ್ಜನಾ ಮೆರವಣಿಗೆ ವೈಭವದಿಂದ ನಡೆಯಿತು – ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ



ಹುಬ್ಬಳ್ಳಿಯ ದಾಜೀಬಾನ್ ಪೇಟೆಯಲ್ಲಿ ಪ್ರತಿಷ್ಠಾಪಿಸಿದ್ದ 25 ಅಡಿ ಎತ್ತರದ 'ಹುಬ್ಬಳ್ಳಿ ಕಾ ರಾಜಾ' ಗಣೇಶಮೂರ್ತಿಯ ವಿಸರ್ಜನಾ ಮೆರವಣಿಗೆ ಅದ್ದೂರಿಯಾಗಿ ನಡೆಯಿತು – ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ಸಿಡಬ್ಲ್ಯುಸಿ, ಜೆಜೆಬಿಯಲ್ಲಿ ಬಿಜೆಪಿ, ಆರ್‌ಎಸ್‌ಎಸ್ ಸದಸ್ಯರಿಗೆ ಸ್ಥಾನ ನೀಡಿರುವ ಆರೋಪ

ಬಾಲ ನ್ಯಾಯಮಂಡಳಿಗೆ ನೇಮಕ: ತಡೆ

• ಎಂ.ಎನ್.ಯೋಗೇಶ್

ಚಿತ್ರದುರ್ಗ: ಬಾಲ ನ್ಯಾಯ ಮಂಡಳಿ (ಜೆಜೆಬಿ) ಸದಸ್ಯರು, ಮಕ್ಕಳ ಕಲ್ಯಾಣ ಸಮಿತಿ (ಸಿಡಬ್ಲ್ಯುಸಿ) ಅಧ್ಯಕ್ಷರು ಹಾಗೂ ಸದಸ್ಯರ ನೇಮಕಾತಿಯಲ್ಲಿ ಗಂಭೀರ ಲೋಪವಾಗಿರುವ ಆರೋಪ ಕೇಳಿಬಂದಿದ್ದು, ಆಯ್ಕೆ ಪಟ್ಟಿ ಪ್ರಕಟಿಸಿದ ಮೂರೇ ದಿನದಲ್ಲಿ ಸರ್ಕಾರ ಈ ಕುರಿತ ಅಧಿಸೂಚನೆಗೆ ತಡೆ ನೀಡಿದೆ.

ಸೆ.9ರಂದು ಸರ್ಕಾರ ಪ್ರಕಟಿಸಿದ್ದ ಆಯ್ಕೆ ಪಟ್ಟಿಯಲ್ಲಿ ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಪತಿ–ಪತ್ನಿ ಸೇರಿ ಕುಟುಂಬ ಸದಸ್ಯರು, ಮಕ್ಕಳ ಹಕ್ಕುಗಳ ಕ್ಷೇತ್ರದಲ್ಲಿ ಕೆಲಸ ಮಾಡದೇ ಇರುವವರನ್ನು, ಅರ್ಜಿಯನ್ನೇ ಹಾಕದವರನ್ನು ನೇಮಕ ಮಾಡಲಾಗಿದೆ. ಕಾಂಗ್ರೆಸ್ ಅಧಿಕಾರದಲ್ಲಿದ್ದರೂ ಸಮಿತಿ ಹಾಗೂ ಮಂಡಳಿಯಲ್ಲಿ ಬಿಜೆಪಿ, ಆರ್‌ಎಸ್‌ಎಸ್ ಸದಸ್ಯರೇ ಹೆಚ್ಚು ಮಂದಿ ಸ್ಥಾನ ಪಡೆದಿದ್ದಾರೆ ಎಂದು ಆರೋಪಿಸಲಾಗಿತ್ತು.

ಈ ಬಗ್ಗೆ ಜಾಲತಾಣದಲ್ಲೂ ಆಕ್ಷೇಪ, ಚರ್ಚೆ ನಡೆದಿದ್ದವು. ಎಚ್ಚೆತ್ತುಕೊಂಡ ಸರ್ಕಾರ, ಸೆ.12ರಂದು 'ಗಂಭೀರ ಸ್ವರೂಪದ ದೂರುಗಳು ಸ್ವೀಕೃತವಾದ ಕಾರಣ ಆಡಳಿತಾತ್ಮಕ ದೃಷ್ಟಿಯಿಂದ ಮುಂದಿನ ಆದೇಶದವರೆಗೂ ನೇಮಕಾತಿಗೆ ತಡೆ ನೀಡಲಾಗಿದೆ' ಎಂದಿದೆ.

ಮಕ್ಕಳ ಪಾಲನೆ, ಪೋಷಣೆ, ರಕ್ಷಣೆಗಾಗಿ ಮಕ್ಕಳ ಕಲ್ಯಾಣ ಸಮಿತಿ ಕಾರ್ಯ ನಿರ್ವಹಿಸುತ್ತದೆ. ಒಬ್ಬರು ಅಧ್ಯಕ್ಷರು, ನಾಲ್ವರು ಸದಸ್ಯರು ಸಮಿತಿಯಲ್ಲಿ ಇರುತ್ತಾರೆ. ಕಾನೂನು ಸಂಘರ್ಷಕ್ಕೆ ಒಳಪಟ್ಟ ಮಕ್ಕಳ ರಕ್ಷಣೆಗಾಗಿ ಬಾಲ ನ್ಯಾಯ ಮಂಡಳಿ ಕರ್ತವ್ಯ ನಿರ್ವಹಿಸಲಿದ್ದು ನ್ಯಾಯಾಧೀಶರು ಅಧ್ಯಕ್ಷರಾಗಿರುತ್ತಾರೆ. ಮಂಡಳಿಗೆ ಇಬ್ಬರು ಸದಸ್ಯರನ್ನು ಆಯ್ಕೆ ಮಾಡಲಾಗುತ್ತದೆ.

ಎರಡೂ ಅರೆ ನ್ಯಾಯಿಕ ಸಂಸ್ಥೆಗಳಾಗಿದ್ದು ಮಕ್ಕಳ ಹಕ್ಕುಗಳ ಸಂರಕ್ಷಣಾ ಕ್ಷೇತ್ರದಲ್ಲಿ ಕೆಲಸ ಮಾಡಿದವರನ್ನೇ ಆಯ್ಕೆ ಮಾಡಲಾಗುತ್ತದೆ. ಸಮಾಜ ಸೇವೆ, ಶಿಕ್ಷಣ, ಆರೋಗ್ಯ ಕ್ಷೇತ್ರದಲ್ಲಿ 7 ವರ್ಷಕ್ಕಿಂತ ಹೆಚ್ಚು ಸೇವೆ ಸಲ್ಲಿಸಿದವರನ್ನು ಆಯ್ಕೆ ಮಾಡಬೇಕು ಎಂಬ ನಿಯಮಗಳಿವೆ. ಆದರೆ ರಾಜಕೀಯ ಪಕ್ಷಗಳಲ್ಲಿ ಗುರುತಿಸಿಕೊಂಡವರನ್ನು ಆಯ್ಕೆ ಮಾಡಿರುವುದು ವಿರೋಧಕ್ಕೆ ಕಾರಣವಾಗಿದೆ.

ದೂರುದಾರರ ಆಕ್ಷೇಪಗಳೇನು?

ಚಿತ್ರದುರ್ಗ ಜಿಲ್ಲೆಯಲ್ಲಿ ಸಿಡಬ್ಲ್ಯುಸಿಗೆ ಆಯ್ಕೆಯಾಗಿರುವ ಐವರೂ ಬಿಜೆಪಿ ಹಾಗೂ ಆರ್‌ಎಸ್‌ಎಸ್‌ನಲ್ಲಿ ಗುರುತಿಸಿಕೊಂಡಿದ್ದಾರೆ. ಅಧ್ಯಕ್ಷೆ ಬಿಜೆಪಿ ಯುವ ಮೋರ್ಚಾ ಜಿಲ್ಲಾ ಘಟಕದ ಅಧ್ಯಕ್ಷೆಯೂ ಆಗಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ಪತಿ ಜೆಜೆಬಿಯಲ್ಲಿ ಸದಸ್ಯರಾಗಿದ್ದರೆ ಪತ್ನಿ ಸಿಡಬ್ಲ್ಯುಸಿ ಸದಸ್ಯೆಯಾಗಿದ್ದಾರೆ.

ವಿಧಾನ ಪರಿಷತ್ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಮುಖಂಡರೊಬ್ಬರು ಬೆಂಗಳೂರು ಹಾಗೂ ರಾಮನಗರ ಎರಡೂ ಜಿಲ್ಲೆಗೆ ಅರ್ಜಿ ಸಲ್ಲಿಸಿ ಅಂತಿಮವಾಗಿ ರಾಮನಗರ ಸಿಡಬ್ಲ್ಯುಸಿ ಸದಸ್ಯ ಸ್ಥಾನ ಗಿಟ್ಟಿಸಿಕೊಂಡಿದ್ದಾರೆ. ಮಂಡ್ಯ, ರಾಮನಗರ ಜಿಲ್ಲೆಗಳಲ್ಲಿ ಬಿಜೆಪಿ ಮುಖಂಡರೇ ಸಿಡಬ್ಲ್ಯುಸಿ ಅಧ್ಯಕ್ಷರಾಗಿದ್ದಾರೆ ಎಂದು ಆರೋಪಿಸಲಾಗಿದೆ. ನೇಮಕಾತಿ ಪಟ್ಟಿ ಪ್ರಕಟವಾಗುವ ಮೊದಲೇ ಕೆಲವರು ತಮ್ಮ ಆಯ್ಕೆ ಕುರಿತ ಮಾಹಿತಿ ಸೋರಿಕೆ ಮಾಡಿದ್ದಾರೆ. ಇದರ ವಿರುದ್ಧ ಹಲವರು ಮಕ್ಕಳ ರಕ್ಷಣಾ ನಿರ್ದೇಶನಾಲಯಕ್ಕೆ ದೂರು ಸಲ್ಲಿಸಿದ್ದಾರೆ.

'ಆಯ್ಕೆ ಸಮಿತಿ ಸದಸ್ಯರಾಗಿರುವ ಮಕ್ಕಳ ರಕ್ಷಣಾ ಆಯೋಗದ ಅಧ್ಯಕ್ಷ ನಾಗಣ್ಣಗೌಡ ಬಿಜೆಪಿಯಲ್ಲಿ ಗುರುತಿಸಿಕೊಂಡಿದ್ದಾರೆ. ಇವರ ಆಯ್ಕೆ ಪ್ರಶ್ನಿಸಿ ಸಲ್ಲಿಸಲಾಗಿರುವ ಪ್ರಕರಣ ಹೈಕೋರ್ಟ್‌ನಲ್ಲಿ ವಿಚಾರಣಾ ಹಂತದಲ್ಲಿದೆ. ಸರ್ಕಾರದ ಗಮನಕ್ಕೆ ತಾರದೆ ಇವರು ತಮಗೆ ಬೇಕಾದವರನ್ನು ಸಮಿತಿ, ಮಂಡಳಿಗೆ ನೇಮಿಸಿದ್ದಾರೆ. ಕೆಲವರಿಂದ ಹಣ ವಸೂಲಿ ಮಾಡಿದ ಮಾಹಿತಿಗಳೂ ಇವೆ' ಎಂದು ಸಿಡಬ್ಲ್ಯುಸಿ ಮಾಜಿ ಅಧ್ಯಕ್ಷ ರವಿಕುಮಾರ್ ಆರೋಪಿಸಿದರು.

ಈ ಕುರಿತು ಪ್ರತಿಕ್ರಿಯೆ ಪಡೆಯಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಆಯುಕ್ತ ಸಿದ್ದೇಶ್ವರ ಅವರಿಗೆ ಕರೆ ಮಾಡಿದಾಗ ಅವರು ಕರೆ ಸ್ವೀಕರಿಸಲಿಲ್ಲ. ಮಕ್ಕಳ ರಕ್ಷಣಾ ನಿರ್ದೇಶನಾಲಯದ ಯೋಜನಾ ನಿರ್ದೇಶಕಿ ಕೆ.ಹಲಿಮಾ ಅವರನ್ನು ಸಂಪರ್ಕಿಸಿದಾಗ 'ವಿಷಯ ನನಗೆ ಗೊತ್ತಿಲ್ಲ' ಎಂದು ಕರೆ ಸ್ಥಗಿತಗೊಳಿಸಿದರು.

6 ವರ್ಷದ ನಂತರ ನೇಮಕಾತಿ

ಬಾಲ ನ್ಯಾಯ ಕಾಯ್ದೆ ಅನುಸಾರ ಜೆಜೆಬಿ, ಸಿಡಬ್ಲ್ಯುಸಿ ಅಧ್ಯಕ್ಷ, ಸದಸ್ಯರ ಅವಧಿ 3 ವರ್ಷ ಇದೆ. ಆದರೆ ಹಿಂದಿನ ಎರಡೂ ಸರ್ಕಾರಗಳು ಒಂದೇ ಆಡಳಿತ ಮಂಡಳಿಯನ್ನು 2 ಬಾರಿ ಮುಂದೂಡಿದ್ದ ಕಾರಣ ಪದಾಧಿಕಾರಿಗಳ ಅಧಿಕಾರಾವಧಿ 6 ವರ್ಷ ಪೂರ್ಣಗೊಂಡು 7ನೇ ವರ್ಷಕ್ಕೆ ಕಾಲಿಟ್ಟಿತ್ತು.

'6 ವರ್ಷಗಳ ನಂತರ ನಡೆದ ನೇಮಕಾತಿಯೂ ನಿಯಮಾನುಸಾರ ನಡೆಯದಿರುವುದು ದುರದೃಷ್ಟಕರ. ಎರಡೂ ಸಂಸ್ಥೆಗಳಿಗೂ ರಾಜಕೀಯ ಕಾರ್ಯಕರ್ತರನ್ನು ನೇಮಿಸಿ ಅಲ್ಲಿಯ ವಾತಾವರಣವನ್ನು ಕಲುಷಿತಗೊಳಿಸಲಾಗಿದೆ' ಎಂದು ಮಕ್ಕಳ ಹಕ್ಕುಗಳ ಹೋರಾಟಗಾರ್ತಿ ಭಾರತಿ ಆರೋಪಿಸಿದರು.

'ಮುನಿರತ್ನ ಮಾತಿಗೆ ಸ್ವಾಮೀಜಿ ಧ್ವನಿ ಎತ್ತಲಿ'

ಪ್ರಜಾವಾಣಿ ವಾರ್ತೆ


ಬೆಂಗಳೂರು: ಒಕ್ಕಲಿಗ ಸಮುದಾಯದ ಕುರಿತು ಬಿಜೆಪಿ ಶಾಸಕ ಮುನಿರತ್ನ ಆಡಿರುವ ಮಾತಿನ ಬಗ್ಗೆ ಸಮುದಾಯದ ಮುಖ್ಯಸ್ಥರು, ಸ್ವಾಮೀಜಿಗಳು, ಹಿರಿಯರು ಧ್ವನಿ ಎತ್ತಬೇಕು. ಬಿಜೆಪಿ ನಾಯಕರೂ ಖಂಡಿಸಬೇಕು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, 'ಬಿಜೆಪಿಯಲ್ಲಿರುವ ಒಕ್ಕಲಿಗ ನಾಯಕರು, ಜನಪ್ರತಿನಿಧಿಗಳು ಪ್ರತಿಕ್ರಿಯಿಸಬೇಕು. ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ರಾಜಕೀಯ ಬಿಟ್ಟು ಇಂತಹ ಘಟನೆಗಳನ್ನು ಖಂಡಿಸಬೇಕು. ಮುನಿರತ್ನ ಮಾತು ತಪ್ಪೋ, ಸರಿಯೋ ಎಂದು ಸಮುದಾಯಕ್ಕೆ ಹೇಳಬೇಕು' ಎಂದರು.

'ಪ್ರಕರಣದ ಹಿಂದೆ ಅಣ್ಣ–ತಮ್ಮ ಇದ್ದಾರೆ' ಎಂಬ ಆರೋಪದ ಕುರಿತು ನನಗೆ ಮಾಹಿತಿ ಇಲ್ಲ. ಬಿಜೆಪಿ–ಜೆಡಿಎಸ್‌ನ ಕೇಂದ್ರ ಸಚಿವರು, ಬಿಜೆಪಿ ಅಧ್ಯಕ್ಷ ವಿಜಯೇಂದ್ರ ಮೊದಲಾದ ದೊಡ್ಡ ನಾಯಕರು ಈ ಕುರಿತು ಪ್ರತಿಕ್ರಿಯೆ ನೀಡಬೇಕು ಎಂದು ಒತ್ತಾಯಿಸಿದರು.

> **ಮುನಿರತ್ನ ಅವರನ್ನು ಸಿ.ಟಿ.ರವಿ ಅಂಥವರು ಸಮರ್ಥಿಸಿಕೊಳ್ಳಬಾರದು. ಎಲ್ಲಾ ವಿಚಾರದಲ್ಲೂ ಪಕ್ಷ ನೋಡಬಾರದು. ತಪ್ಪು ಮಾಡಿದ್ದರೆ ಮುನಿರತ್ನ ಅವರಿಗೆ ಶಿಕ್ಷೆಯಾಗಲಿ**
> **ಎಚ್.ವಿಶ್ವನಾಥ್**
> ವಿಧಾನ ಪರಿಷತ್ ಸದಸ್ಯ

ಸಿಸಿಬಿಐ ಅನುಷ್ಠಾನ ಸಮಿತಿಗೆ ನೇಮಕ



ಜೆರಾಲ್ಡ್ ಲೋಬೊ

ಉಡುಪಿ: ಭಾರತದ ಕಥೋಲಿಕ್ ಬಿಷಪ್‌ಗಳ ಸಮ್ಮೇಳನದ (ಸಿಸಿಬಿಐ) ಪಾಲನಾ ವರದಿ ಅನುಷ್ಠಾನ ಸಮಿತಿಯ ಅಧ್ಯಕ್ಷರಾಗಿ ಉಡುಪಿ ಕಥೋಲಿಕ್ ಧರ್ಮಪ್ರಾಂತ್ಯದ ಧರ್ಮಾಧ್ಯಕ್ಷ ಜೆರಾಲ್ಡ್ ಐಸಾಕ್ ಲೋಬೊ ನೇಮಕಗೊಂಡಿದ್ದಾರೆ.

ಈಚೆಗೆ ನಡೆದ ಸಿಸಿಬಿಐ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ನೇಮಕ ಮಾಡಲಾಗಿದೆ.

ಸಂಕ್ಷಿಪ್ತ ಸುದ್ದಿ

ಗ್ರಾಮಾಡಳಿತ ಅಧಿಕಾರಿ ಹುದ್ದೆ: ಮತ್ತೆ ಅರ್ಜಿ

ಬೆಂಗಳೂರು: ಗ್ರಾಮಾಡಳಿತ ಅಧಿಕಾರಿ ಹಾಗೂ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರಗಳಲ್ಲಿನ (ಜಿಟಿಟಿಸಿ) ಖಾಲಿ ಹುದ್ದೆಗಳಿಗೆ ಸೆ. 19ರಿಂದ ಅರ್ಜಿ ಸಲ್ಲಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮತ್ತೆ ಅವಕಾಶ ನೀಡಿದೆ.

'ಬಿ' ಮತ್ತು 'ಸಿ' ವರ್ಗದ ಹುದ್ದೆಗಳ ನೇಮಕಕ್ಕೆ ಅರ್ಜಿ ಸಲ್ಲಿಸಲು ಸರ್ಕಾರ ಒಂದು ಬಾರಿಗೆ ಮಾತ್ರ ಗರಿಷ್ಠ ಮೂರು ವರ್ಷ ವಯೋಮಿತಿ ಸಡಿಲ ಮಾಡಿದೆ. ಹಾಗಾಗಿ, ಅರ್ಜಿ ಸಲ್ಲಿಸಲು ಮತ್ತೊಮ್ಮೆ ಅವಕಾಶ ದೊರೆತಿದೆ.

ವಯೋಮಿತಿ ಸಡಿಲಿಕೆ ಲಾಭ ಪಡೆಯುವವರೂ ಸೇರಿ ಇತರರೂ ಅರ್ಜಿ ಸಲ್ಲಿಸಬಹುದು. ಸೆ.28 ಅರ್ಜಿ ಸಲ್ಲಿಕೆಗೆ ಕೊನೆಯ ದಿನ. ಸೆ.29ರ ಒಳಗೆ ಶುಲ್ಕ ಪಾವತಿಸಬೇಕು. ಹಿಂದೆ ಅರ್ಜಿ ಸಲ್ಲಿಸಿದವರು ಮತ್ತೆ ಸಲ್ಲಿಸುವ ಅಗತ್ಯವಿಲ್ಲ ಎಂದು ಕೆಇಎ ಹೇಳಿದೆ.

ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳಿಗೆ (ಪಿಎಸ್‌ಐ) ಅ.3ರಂದು ಪರೀಕ್ಷೆ ನಡೆಯಲಿದೆ. ಕೆ-ಸೆಟ್ ಮತ್ತು ರಾಯಚೂರು ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ನ.24ರಂದು ಪ್ರತ್ಯೇಕ ಪರೀಕ್ಷೆಗಳು ನಡೆಯಲಿವೆ.

ಮಗುವಿಗೆ ನರೇಂದ್ರ ಮೋದಿ ಹೆಸರಿಟ್ಟ ಅಭಿಮಾನಿ

ಕುಶಾಲನಗರ (ಕೊಡಗು ಜಿಲ್ಲೆ): ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಜನ್ಮದಿನವಾದ ಮಂಗಳವಾರ ಜನಿಸಿದ ತಮ್ಮ ಮಗುವಿಗೆ, ತಾಲ್ಲೂಕಿನ ಸುಂದರನಗರದ ನಿವಾಸಿ ಮಹೇಂದ್ರ–ಜಯಲಕ್ಷ್ಮಿ ದಂಪತಿ ಮಂಗಳವಾರ ಅವರ ಹೆಸರನ್ನೇ ಇಟ್ಟರು. ಬಿಜೆಪಿ ಕಾರ್ಯಕರ್ತರೂ ಆಗಿರುವ ಮಹೇಂದ್ರ, ಮೋದಿಯವರ ಅಭಿಮಾನಿ. ಹೀಗಾಗಿ ಮಗುವಿಗೆ ಅವರ ಹೆಸರನ್ನಿಟ್ಟರು.

ಆಸ್ಪತ್ರೆಗೆ ಭೇಟಿ ನೀಡಿದ ಮಾಜಿ ಶಾಸಕ ಕೆ.ಜಿ.ಬೋಪಯ್ಯ ಅವರು ಚಿನ್ನದ ಉಂಗುರವನ್ನು ಮಗುವಿಗೆ ಉಡುಗೊರೆಯಾಗಿ ನೀಡಿದರು. ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ರವಿಕಾಳಪ್ಪ, ವಕ್ತಾರ ಮಹೇಶ್ ಜೈನಿ ಭಾಗವಹಿಸಿದ್ದರು.

ಸಿಇಟಿ: ಎರಡನೇ ಸುತ್ತಿಗೆ 48 ಸಾವಿರ ಸೀಟು ಉಳಿಕೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಸಿಇಟಿ ಮೂಲಕ ಮೊದಲ ಸುತ್ತಿನಲ್ಲಿ ಹಂಚಿಕೆ ಮಾಡಿದ್ದ 1.07 ಲಕ್ಷ ಸೀಟುಗಳಲ್ಲಿ 48 ಸಾವಿರ ಸೀಟುಗಳನ್ನು ಎರಡನೇ ಸುತ್ತಿಗೆ ಕಾಯ್ದಿರಿಸಲಾಗಿದೆ.



ವೈದ್ಯಕೀಯ ಸೀಟು ಹಂಚಿಕೆಯ ನಿರೀಕ್ಷೆಯಲ್ಲಿರುವ ಸಿಇಟಿ ಅಗ್ರ ಶ್ರೇಯಾಂಗದ ವಿದ್ಯಾರ್ಥಿಗಳು ಮೊದಲ ಸುತ್ತಿನಲ್ಲಿ ಪ್ರತಿಷ್ಠಿತ ಕಾಲೇಜುಗಳನ್ನು ಆಯ್ಕೆ ಮಾಡಿಕೊಂಡರೂ, ಕಾಲೇಜುಗಳಿಗೆ ಪ್ರವೇಶ ಪಡೆಯದೇ ಸೀಟಗಳನ್ನು ಕಾಯ್ದಿರಿಸಿದ್ದಾರೆ.

ಎಂಜಿನಿಯರಿಂಗ್ ವಿಭಾಗದ 64,490 ಸೀಟುಗಳಲ್ಲಿ 32,866 ಸೀಟುಗಳನ್ನು ಎರಡನೇ ಸುತ್ತಿಗೆ ಆಯ್ಕೆ ಮಾಡಿಕೊಂಡಿದ್ದಾರೆ. ಸುಮಾರು 9 ಸಾವಿರ ವಿದ್ಯಾರ್ಥಿಗಳು ಯಾವುದೇ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಂಡಿಲ್ಲ. 16,038 ವಿದ್ಯಾರ್ಥಿಗಳಷ್ಟೇ ಆಯ್ಕೆ ಮಾಡಿಕೊಂಡ ಕಾಲೇಜುಗಳಿಗೆ ಪ್ರವೇಶ ಪಡೆದಿದ್ದಾರೆ.

ಸ್ಟೇಟಸ್‌ನಲ್ಲಿ ಪಾಕಿಸ್ತಾನ ಧ್ವಜ: ಬಂಧನ

ಕಲಾದಗಿ (ಬಾಗಲಕೋಟೆ): ವಾಟ್ಸ್ ಆ್ಯಪ್ ಸ್ಟೇಟಸ್‌ನಲ್ಲಿ ಪಾಕಿಸ್ತಾನ ಧ್ವಜದ ಚಿತ್ರ ಹಾಕಿಕೊಂಡ ಆರೋಪದ ಮೇಲೆ ತೌಸೀಫ್ ಮೆಹತರ್ ಎಂಬುವನನ್ನು ಕಲಾದಗಿ ಪೊಲೀಸರು ಬಂಧಿಸಿದ್ದಾರೆ.

'ತೌಸೀಫ್‌ನನ್ನು ಠಾಣೆಗೆ ಕರೆತಂದು ಮೊಬೈಲ್ ಪರಿಶೀಲಿಸಿದಾಗ, ಧ್ವಜದ ಚಿತ್ರ ಇರುವುದು ದೃಢಪಟ್ಟಿತು' ಎಂದು ಪಿಎಸ್‌ಐ ಚಂದ್ರಶೇಖರ್ ಹೆರಕಲ್ ತಿಳಿಸಿದರು.

ಪ್ರಚೋದನೆ: 6 ಮಂದಿ ವಿರುದ್ಧ ಪ್ರಕರಣ

ಬಂಟ್ವಾಳದಲ್ಲಿ ವಿಎಚ್‌ಪಿ, ಕಾರಟಗಿಯಲ್ಲಿ ಎಸ್‌ಡಿಪಿಐ ಸದಸ್ಯರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬಂಟ್ವಾಳ (ದಕ್ಷಿಣ ಕನ್ನಡ): ಬಿ.ಸಿ. ರೋಡ್‌ನಲ್ಲಿ ಸೋಮವಾರ 'ಬಿ.ಸಿ.ರೋಡ್ ಚಲೋ' ಪ್ರತಿಭಟನೆ ವೇಳೆ ಪ್ರಚೋದನಕಾರಿ ಭಾಷಣ ಮಾಡಿದ ಆರೋಪದ ಮೇಲೆ ವಿಶ್ವ ಹಿಂದೂ ಪರಿಷತ್ ದಕ್ಷಿಣ ಕರ್ನಾಟಕ ಪ್ರಾಂತ ಸಹಕಾರ್ಯದರ್ಶಿ ಶರಣ್ ಪಂಪ್‌ವೆಲ್ ಹಾಗೂ ಮುಖಂಡ ಭರತ್ ಕುಮ್ಡೇಲು ವಿರುದ್ಧ ಮಂಗಳವಾರ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 196(1) (ಧರ್ಮ, ಜಾತಿ ಆಧಾರದ ಮೇಲೆ ದ್ವೇಷ ಸೃಷ್ಟಿಸುವುದು), ಸೆಕ್ಷನ್ 352, 3 (ಪ್ರಚೋದನೆ, ಶಾಂತಿ ಭಂಗ) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

'ಬಿ.ಸಿ.ರೋಡ್‌ನಲ್ಲಿ ಪ್ರತಿಭಟನೆ ನಡೆಸಿದ ವೇಳೆ ಶರಣ್ ಹಾಗೂ ಭರತ್, ಮುಸ್ಲಿಂ ಧರ್ಮದ ಘನತೆ ಹಾಗೂ ಸಮುದಾಯದ ಭಾವನೆಗೆ ಧಕ್ಕೆಯಾಗುವ ರೀತಿಯಲ್ಲಿ ಪ್ರಚೋದನಕಾರಿ ಭಾಷಣ ಮಾಡಿದ್ದಾರೆ' ಎಂದು ಆರೋಪಿಸಿ, ಮಹಮ್ಮದ್ ರಫೀಕ್ ಕೆಳಗಿನಪೇಟೆ ಎನ್ನುವವರು ದೂರು ನೀಡಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.



ನಾಗಮಂಗಲದಲ್ಲಿ ಗಣೇಶ ವಿಸರ್ಜನಾ ಮೆರವಣಿಗೆ ವೇಳೆ ನಡೆದ ಗಲಭೆ ಖಂಡಿಸಿ ಮಂಗಳೂರಿನಲ್ಲಿ ಈಚೆಗೆ ನಡೆದ ಪ್ರತಿಭಟನೆ ವೇಳೆ ಶರಣ್ ಪಂಪ್‌ವೆಲ್, 'ಹಿಂದೂಗಳು ಮನಸ್ಸು ಮಾಡಿದರೆ ಮುಸ್ಲಿಮರು ಈದ್ ಮೆರವಣಿಗೆ ನಡೆಸುವುದು ಅಸಾಧ್ಯ' ಎಂದಿದ್ದರು. ಇದಕ್ಕೆ ಪ್ರತಿಯಾಗಿ, ಬಂಟ್ವಾಳ ಪುರಸಭೆಯ ಮಾಜಿ ಅಧ್ಯಕ್ಷ ಮಹಮ್ಮದ್ ಶರೀಫ್ ಮತ್ತು ಪುರಸಭೆ ಸದಸ್ಯ ಹಸೈನಾರ್, 'ತಾಕತ್ತಿದ್ದರೆ ಬಿ.ಸಿ. ರೋಡ್‌ಗೆ ಬನ್ನಿ' ಎಂದು ಸವಾಲು ಹಾಕಿದ್ದ ಧ್ವನಿ ಮುದ್ರಿಕೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಇದರ ಬೆನ್ನಲ್ಲೇ ಸೋಮವಾರ ಬಿ.ಸಿ.ರೋಡ್‌ನಲ್ಲಿ ವಿವಿಧ ಹಿಂದುತ್ವವಾದಿ ಸಂಘಟನೆಗಳ ಕಾರ್ಯಕರ್ತರು ಸೇರಿ ಪ್ರತಿಭಟನೆ ನಡೆಸಿದ್ದರು.

ಮತ್ತೊಂದು ಪ್ರಕರಣ: ಬಿಜೆಪಿ ಬಾಳ್ತಿಲ ಮಹಾಶಕ್ತಿ ಕೇಂದ್ರದ ಮಾಜಿ ಅಧ್ಯಕ್ಷ ಯಶೋಧರ್ ಕರ್ಬೆಟ್ಟು ಎಂಬುವವರು ಮುಸ್ಲಿಮರನ್ನು ಅವಹೇಳನ ಮಾಡುವ ರೀತಿಯಲ್ಲಿ ಮಾಡಿದ್ದಾರೆ ಎನ್ನಲಾದ ಧ್ವನಿ ಮುದ್ರಿಕೆ, ಸದ್ದು ಮಾಡಿತ್ತು. ಮಹಮ್ಮದ್ ಶರೀಫ್ ಧ್ವನಿ ಮುದ್ರಿಕೆಗೆ ಪ್ರತಿಯಾಗಿ ಯಶೋಧರ್ ಈ ಧ್ವನಿ ಮುದ್ರಣ ಹರಿಯಬಿಟ್ಟಿದ್ದರು ಎನ್ನಲಾಗಿದೆ. ಬಂಟ್ವಾಳದ ಮೊಹಮ್ಮದ್ ಸರ್ಫರಾಜ್ ನವಾಜ್ ಎನ್ನುವವರು ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ಯಶೋಧರ್ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 192 (ಸುಳ್ಳು ಸಾಕ್ಷ್ಯ ಸೃಷ್ಟಿ), 352ರ (ಪ್ರಚೋದನೆ, ಶಾಂತಿ ಭಂಗ) ಅಡಿಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮುಂಜಾಗ್ರತಾ ಕ್ರಮವಾಗಿ ಬಂಟ್ವಾಳ ಪುರಸಭೆ ವ್ಯಾಪ್ತಿಯಲ್ಲಿ ಮದ್ಯ ಮಾರಾಟ ನಿಷೇಧ ಮಾಡಿದ್ದು, ಆಯಕಟ್ಟಿನ ಪ್ರದೇಶಗಳಲ್ಲಿ ಹೆಚ್ಚುವರಿ ಪೊಲೀಸರನ್ನು ನಿಯೋಜಿಸಲಾಗಿದೆ.

ಬಂಧನಕ್ಕೆ ಆಗ್ರಹ: ಪ್ರಚೋದನಕಾರಿ ಹೇಳಿಕೆ ನೀಡಿರುವ ಬಂಟ್ವಾಳ ಪುರಸಭೆ ಮಾಜಿ ಅಧ್ಯಕ್ಷ ಮಹಮ್ಮದ್ ಶರೀಫ್ ಮತ್ತು ಸದಸ್ಯ ಹಸೈನಾರ್ ಅವರನ್ನು ಪೊಲೀಸರು ತಕ್ಷಣ ಬಂಧಿಸಿ, ಕಾನೂನುಕ್ರಮ ಕೈಗೊಳ್ಳಬೇಕು ಎಂದು ದಕ್ಷಿಣ ಕನ್ನಡ ಸಂಸದ ಕ್ಯಾ.ಬ್ರಿಜೇಶ್ ಚೌಟ ಆಗ್ರಹಿಸಿದ್ದಾರೆ.

ಹಿಂದೂ ಸಮಾಜದ ವಿರುದ್ಧ ಹೇಳಿಕೆ : ದೂರು

ಕಾರಟಗಿ (ಕೊಪ್ಪಳ ಜಿಲ್ಲೆ): ವಕ್ಫ್ (ತಿದ್ದುಪಡಿ) ಮಸೂದೆ ವಿರೋಧಿಸಿ ಎಸ್‌ಡಿಪಿಐ ಕಾರ್ಯಕರ್ತರು ಇತ್ತೀಚೆಗೆ ಪಟ್ಟಣದಲ್ಲಿ ನಡೆಸಿದ ಪ್ರತಿಭಟನೆ ವೇಳೆ ಹಿಂದೂ ಸಮಾಜದ ಬಗ್ಗೆ ಪ್ರಚೋದನಕಾರಿ ಹೇಳಿಕೆ ನೀಡಿದ್ದಾರೆ ಎನ್ನುವ ಕಾರಣಕ್ಕೆ ಸಂಘಟನೆಯ ಮೂವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಸಂಘಟನೆಯ ಕಾರ್ಯದರ್ಶಿ ಇಮ್ರಾನ್, ಕನಕಗಿರಿ ವಿಧಾನಸಭಾ ಕ್ಷೇತ್ರ ಘಟಕದ ಅಧ್ಯಕ್ಷ ಅಜ್ಮೀರ್ ಸಿಂಗನಾಳ ಮತ್ತು ಉಪಾಧ್ಯಕ್ಷ ದಾವೂದ್ ವಿರುದ್ಧ ಕಾರಟಗಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಹೇಳಿಕೆಯೇನು?: ಸೆಪ್ಟೆಂಬರ್ 13ರಂದು ಎಸ್‌ಡಿಪಿಐ ಪ್ರತಿಭಟನೆ ನಡೆಸುವಾಗ ಇಮ್ರಾನ್ ಅವರು, '1992ರಲ್ಲಿ ಬಾಬರಿ ಮಸೀದಿ ಘಟನೆ ಮತ್ತು 2002ರಲ್ಲಿ ಗುಜರಾತ್‌ನಲ್ಲಿ ನಡೆದ ಘಟನೆಯ ಪ್ರತೀಕಾರವಾಗಿ ವೀರ ಸಾವರ್ಕರ್ ಅವರ ಸಂತತಿ ಮುಗಿಸುತ್ತೇವೆ. ನಾಗ್ಪುರದಲ್ಲಿರುವ ವೀರ ಸಾವರ್ಕರ್ ಸಂತತಿ ಬಂದರೂ ಮುಸಲ್ಮಾನರ ವಕ್ಫ್ ಆಸ್ತಿ ಮುಟ್ಟಲು ಸಾಧ್ಯವಾಗುವುದಿಲ್ಲ' ಎಂದು ಹೇಳಿದ್ದರು.

'ಮುಸಲ್ಮಾನರು ಕಾರಟಗಿಯಲ್ಲಿ ಸಣ್ಣ ಮಟ್ಟದಲ್ಲಿ ಪ್ರತಿಭಟನೆ ಮಾಡುತ್ತಿರಬಹುದು. ನೆನಪಿರಲಿ ಇದೇ ದೇಶದಲ್ಲಿ ಎನ್‌ಆರ್‌ಸಿ ಕಾಯ್ದೆ ಬಂದಿತ್ತು. ಅದನ್ನು ನಮ್ಮ ಹೆಣ್ಣುಮಕ್ಕಳು ಒದ್ದು ತಿರಸ್ಕಾರ ಮಾಡಿದ್ದಾರೆ' ಎಂದು ಹೇಳಿಕೆ ನೀಡಿದ್ದರು. ಇದನ್ನು ಆಕ್ಷೇಪಿಸಿ ಬಿಜೆಪಿ ಕಾರಟಗಿ ಮಂಡಲದ ಅಧ್ಯಕ್ಷ ಮಂಜುನಾಥ ಮಸ್ಕಿ ದೂರು ನೀಡಿದ್ದರು.

ಘಟನೆ ಕುರಿತು ಕೊಪ್ಪಳದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ, 'ಸಮಾಜದ ಶಾಂತಿ ಕದಡಿದರೆ ಯಾವ ಸಂಘಟನೆಯಾದರೂ ಮುಲಾಜಿಲ್ಲದೇ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಅವರು ಹೇಳಿದರು.




ಬೆಂಗಳೂರಿನಲ್ಲಿ ಮಂಗಳವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ 'ಶ್ರೀ ವಿಶ್ವಕರ್ಮ ಜಯಂತಿ' ಕಾರ್ಯಕ್ರಮದಲ್ಲಿ (ಎಡದಿಂದ) ವಿಧಾನ ಪರಿಷತ್ ಸದಸ್ಯ ಟಿ.ಎ.ಶರವಣ, ಇಲಾಖೆಯ ಕಾರ್ಯದರ್ಶಿ ಎಂ.ಎನ್.ಅಜಯ್ ನಾಗಭೂಷಣ್, ಸಾಹಿತಿ ಚಂದ್ರಶೇಖರ ಕಂಬಾರ, ನಿವೃತ್ತ ಪ್ರಾಚಾರ್ಯ ವೃಷಭೇಂದ್ರಾಚಾರ್ ಅರ್ಕಸಾಲಿ, ಶಿಲ್ಪಿ ಅರುಣ್ ಯೋಗಿರಾಜ್ ಮತ್ತು ಶಹಾಪುರದ ಸರಸ್ವತಿ ಪೀಠದ ವಿಶ್ವಕರ್ಮ ಏಕದಂಡಗಿ ಮಠದ ಕಾಳಹಸ್ತೇಂದ್ರ ಸ್ವಾಮೀಜಿ ಅವರು ವಿಶ್ವಕರ್ಮ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು – ಪ್ರಜಾವಾಣಿ ಚಿತ್ರ

ಸಾಧಕರಿಗೆ 'ಉತ್ತರೋತ್ತರ ಪ್ರಶಸ್ತಿ'

ಕೋಲಾರ: ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಸಂಸ್ಥಾಪನೆ ದಿನಾಚರಣೆ ಅಂಗವಾಗಿ ಸ್ಥಾಪಿಸಿರುವ 'ಉತ್ತರೋತ್ತರ ಪ್ರಶಸ್ತಿ'ಗೆ ಸಾಹಿತಿ, ರಂಗಕರ್ಮಿ ಕೋಟಿಗಾನಹಳ್ಳಿ ರಾಮಯ್ಯ (ಕೋಲಾರ), ಸಿರಿಧಾನ್ಯ ಸಂರಕ್ಷಣಾ ಮಹಿಳೆ ರತ್ನಮ್ಮ (ಶ್ರೀನಿವಾಸಪುರ) ಹಾಗೂ ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ (ಬೆಂಗಳೂರು) ಅವರನ್ನು ಆಯ್ಕೆ ಮಾಡಲಾಗಿದೆ.

2013ರಿಂದ ಈ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ. ಈ ಬಾರಿ ವಿವಿಧ ಕ್ಷೇತ್ರಗಳ ಮೂವರು ಸಾಧಕರನ್ನು ಆಯ್ಕೆ ಮಾಡಲಾಗಿದೆ. ಸೆ.20ರಂದು ಬೆಳಿಗ್ಗೆ 11.30ಕ್ಕೆ ಕೋಲಾರ ತಾಲ್ಲೂಕಿನ ಮಂಗಸಂದ್ರ ಸ್ನಾತಕೋತ್ತರ ಕೇಂದ್ರದಲ್ಲಿ ನಡೆಯಲಿರುವ ದಿನಾಚರಣೆಯಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪ್ರಶಸ್ತಿಯು ₹10 ಸಾವಿರ ನಗದು, ಫಲಕ ಹಾಗೂ ಪ್ರಮಾಣಪತ್ರ ಒಳಗೊಂಡಿರಲಿದೆ.



ರಾಮಯ್ಯ



ಅಕ್ಕೈ ಪದ್ಮಶಾಲಿ



ರತ್ನಮ್ಮ

ಬೆಂಗಳೂರಿನ ನಿಮ್ಹಾನ್ಸ್‌ನ ಕುಲಸಚಿವ ಡಾ.ಬಿ. ಎಸ್.ಶಂಕರನಾರಾಣ ರಾವ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಉತ್ತರ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ನಿರಂಜನ ವಾನಳ್ಳಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಉತ್ತರ ವಿಶ್ವವಿದ್ಯಾಲಯದ ಪ್ರಕಟಣೆ ತಿಳಿಸಿದೆ.

'ಆರೋಪ ಸಾಬೀತುಪಡಿಸಿದರೆ ಸಿದ್ದರಾಮಯ್ಯ ರಾಜೀನಾಮೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ಇಲ್ಲಿನ ವಿಜಯನಗರ ಎರಡನೇ ಹಂತದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ 1997-99ರಲ್ಲಿ ನಿರ್ಮಿಸಿ ಮಾರಾಟ ಮಾಡಿದ್ದ ಮನೆಯ ಎಲ್ಲ ದಾಖಲೆಗಳೂ ಸಕ್ರಮವಾಗಿವೆ. ಅಕ್ರಮ ಆಗಿದೆ ಎಂದು ಆರೋಪಿಸಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಅದನ್ನು ಸಾಬೀತುಪಡಿಸಿದರೆ ನಾವೇ ಸಿದ್ದರಾಮಯ್ಯ ಅವರಿಂದ ರಾಜೀನಾಮೆ ಕೊಡಿಸುತ್ತೇವೆ' ಎಂದು ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ್ ಹೇಳಿದರು.



ಸಿದ್ದರಾಮಯ್ಯ ನಿರ್ಮಿಸಿದ್ದ ಮನೆ

'ಹಿನಕಲ್ ಗ್ರಾಮದ ಸರ್ವೆ ಸಂಖ್ಯೆ 70/ 4ಎ ರಲ್ಲಿ 80x 120 ಅಡಿ ನಿವೇಶನವನ್ನು ಮಾಲೀಕರಾದ ಸಾಕಮ್ಮ ಹಾಗೂ ಪಾಪಣ್ಣ ಕುಟುಂಬದವರಿಂದ ಸಿದ್ದರಾಮಯ್ಯ ಖರೀದಿಸಿದ್ದರು. ಅದು ದಲಿತರಿಗೆ ಸೇರಿದ್ದಲ್ಲ. ಮುಡಾ ನೋಟಿಫೈ ಮಾಡಿಲ್ಲ. ಸುಪ್ರೀಂ ಕೋರ್ಟ್ ಸಹ ಸಿದ್ದರಾಮಯ್ಯ ಪರ ತೀರ್ಪು ನೀಡಿದೆ. ಕುಮಾರಸ್ವಾಮಿಯವರು ಆರೋಪ ಸಾಬೀತುಪಡಿಸದಿದ್ದರೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು' ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

'1986ರಲ್ಲಿ ವಿಜಯನಗರ ಎರಡನೇ ಹಂತಕ್ಕಾಗಿ ಭೂಸ್ವಾಧೀನ ಪ್ರಕಟಣೆ ಹೊರಡಿಸುವಾಗ ಆ ಜಮೀನನ್ನು (70/4ಎ) ಸ್ವಾಧೀನದಿಂದ ಹೊರಗಿಡಲಾಗಿತ್ತು. ಅದನ್ನು ಮುಡಾ ಅಧಿಕಾರಿಗಳೇ ಒಪ್ಪಿಕೊಂಡಿದ್ದಾರೆ. ಈ ಕುರಿತು ಆರ್‌ಟಿಐ ಕಾರ್ಯಕರ್ತ ಗಂಗರಾಜು ಎಂಬುವರು ದಾಖಲಿಸಿದ್ದ ಪ್ರಕರಣವನ್ನು 2019ರಲ್ಲಿ ಹೈಕೋರ್ಟ್ ಹಾಗೂ 2021ರಲ್ಲಿ ಸುಪ್ರೀಂ ಕೋರ್ಟ್ ವಜಾ ಮಾಡಿದೆ' ಎಂದು ಮಾಹಿತಿ ನೀಡಿದರು.

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣ

ದರ್ಶನ್ ನ್ಯಾಯಾಂಗ ಬಂಧನದ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಗಳಾದ ನಟ ದರ್ಶನ್, ಅವರ ಆಪ್ತೆ ಪವಿತ್ರಾಗೌಡ ಸೇರಿದಂತೆ 17 ಮಂದಿಯ ನ್ಯಾಯಾಂಗ ಬಂಧನದ ಅವಧಿಯನ್ನು ಸೆಪ್ಟೆಂಬರ್ 30ರವರೆಗೆ ವಿಸ್ತರಿಸಿ 24ನೇ ಎಸಿಎಂಎಂ ನ್ಯಾಯಾಲಯ ಮಂಗಳವಾರ ಆದೇಶಿಸಿತು.

ನ್ಯಾಯಾಂಗ ಬಂಧನದ ಅವಧಿ ಮುಕ್ತಾಯ ಆಗಿದ್ದರಿಂದ ಆರೋಪಿಗಳನ್ನು ಕಾರಾಗೃಹದಿಂದಲೇ ವಿಡಿಯೊ ಕಾನ್ಫರೆನ್ಸ್ ಮೂಲಕ ನ್ಯಾಯಾಧೀಶರ ಎದುರು ಹಾಜರುಪಡಿಸಲಾಯಿತು.

ಇದೇ ವೇಳೆ ತನಿಖಾಧಿಕಾರಿಗಳು, ತಾಂತ್ರಿಕ ಸಾಕ್ಷ್ಯಾಧಾರ ಹಾಗೂ ಕೇಂದ್ರ ವಿಧಿ ವಿಜ್ಞಾನ ಪ್ರಯೋಗಾಲಯದ (ಸಿಎಫ್‌ಎಸ್‌ಎಲ್) ಉಳಿದ ವರದಿಗಳನ್ನು ನ್ಯಾಯಾಲಯಕ್ಕೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದರು. ಹೆಚ್ಚಿನ ತನಿಖೆಗಾಗಿ ಆರೋಪಿ ವಿನಯ್ ಅವರ ಮೊಬೈಲ್ ಅನ್ನು ಸಿಎಫ್‌ಎಸ್‌ಎಲ್‌ಗೆ ಕಳುಹಿಸಲು ಅನುಮತಿ ನೀಡುವಂತೆಯೂ ತನಿಖಾಧಿಕಾರಿಗಳ ಪರ ವಕೀಲರು ಮನವಿ ಮಾಡಿದರು. ಇದಕ್ಕೆ ನ್ಯಾಯಾಧೀಶರು ಸಮ್ಮತಿಸಿದರು.

'ಬಳ್ಳಾರಿ ಜೈಲಿನಲ್ಲಿರುವ ದರ್ಶನ್ ಅವರಿಗೆ ಕನಿಷ್ಠ ಸೌಲಭ್ಯವನ್ನೂ ಕಲ್ಪಿಸುತ್ತಿಲ್ಲ. ಅವರಿರುವ ಬ್ಯಾರಕ್‌ನಲ್ಲಿ ಕುರ್ಚಿ ಸಹ ಇಲ್ಲ. ದರ್ಶನ್ ಭೇಟಿಗೆ ಅವರ ಪತ್ನಿ, ಸಹೋದರ ಹೊರತುಪಡಿಸಿ ಬೇರೆ ಯಾರಿಗೂ ಅವಕಾಶ ನೀಡುತ್ತಿಲ್ಲ. ಮೂಲಸೌಕರ್ಯ ಕಲ್ಪಿಸಲು ಜೈಲಾಧಿಕಾರಿಗಳಿಗೆ ಸೂಚಿಸಬೇಕು' ಎಂದು ದರ್ಶನ್ ಪರ ವಕೀಲರು ನ್ಯಾಯಾಧೀಶರಲ್ಲಿ ಮನವಿ ಮಾಡಿದರು.

ಆಗ ಜೈಲಾಧಿಕಾರಿಗಳನ್ನು ಪ್ರಶ್ನಿಸಿದ ನ್ಯಾಯಾಧೀಶರು, ಆರೋಪಿಗಳ ಕುಟುಂಬದ ಸ್ನೇಹಿತರಿಗೆ ಭೇಟಿಗೆ ಅವಕಾಶ ನೀಡಬೇಕು. ಅಲ್ಲದೇ ಆರೋಪಿಗಳಿಗೆ ಮೂಲಸೌಕರ್ಯ ಕಲ್ಪಿಸಬೇಕು ಎಂದು ಆದೇಶಿಸಿ, ನ್ಯಾಯಾಂಗ ಬಂಧನದ ಅವಧಿ ವಿಸ್ತರಿಸಿದರು.

ಪತ್ನಿ ವಿಜಯಲಕ್ಷ್ಮಿ, ನಟ ಧನ್ವೀರ್ ಭೇಟಿ

ಬಳ್ಳಾರಿ: ಕೊಲೆ ಪ್ರಕರಣದ ಆರೋಪಿ ದರ್ಶನ್ ಅವರನ್ನು ಪತ್ನಿ ವಿಜಯಲಕ್ಷ್ಮಿ, ನಟ ಧನ್ವೀರ್, ಸಂಬಂಧಿಕರಾದ ಹೇಮಂತ್ ಮತ್ತು ಸುಶಾಂತ್ ನಾಯ್ಡು ಮಂಗಳವಾರ ಸಂಜೆ 4.30 ರಿಂದ 5ರವರೆಗೆ ಬಳ್ಳಾರಿ ಕಾರಾಗೃಹದಲ್ಲಿ ಭೇಟಿಯಾದರು. ಸುದ್ದಿಗಾರರ ಜೊತೆ ಮಾತನಾಡಲು ನಿರಾಕರಿಸಿದರು.

ವಿಜಯಲಕ್ಷ್ಮಿ ಅವರು ಬಟ್ಟೆ ಮತ್ತು ತಿಂಡಿ ತಿನಿಸುಗಳು ಇದ್ದ ಎರಡು ಚೀಲಗಳನ್ನು ತಂದಿದ್ದರು. ಸಂದರ್ಶಕರ ಕೊಠಡಿಗೆ ಬರುವಾಗ ಮತ್ತು ಮರಳುವಾಗ, ದರ್ಶನ್ ಕೈಯಲ್ಲಿ ಎರಡು ಚೀಲಗಳಿದ್ದವು.



ದರ್ಶನ್ ಅವರನ್ನು ಬಳ್ಳಾರಿ ಕಾರಾಗೃಹದಲ್ಲಿ ಮಂಗಳವಾರ ಭೇಟಿಯಾಗಿ ಮರಳಿದ ಪತ್ನಿ, ನಟ ಧನ್ವೀರ್ ಮತ್ತು ಸಂಬಂಧಿಕರು

'ಬಳ್ಳಾರಿ ಕಾರಾಗೃಹದಲ್ಲಿ ರಕ್ತಸಂಬಂಧಿಕರು ಹೊರತುಪಡಿಸಿ ಬೇರೆಯವರನ್ನು ಭೇಟಿಯಾಗಲು ದರ್ಶನ್‌ಗೆ ಅವಕಾಶವಿಲ್ಲ' ಎಂದು ಕಾರಾಗೃಹ ಉತ್ತರ ವಲಯದ ಡಿಐಜಿ ಟಿ.ಪಿ.ಶೇಷ ಹೇಳಿದ್ದರು. ಆದರೆ, ಜೈಲು ಮಾರ್ಗಸೂಚಿಯಂತೆ ಸ್ನೇಹಿತರು, ಹಿತೈಷಿಗಳ ಭೇಟಿಗೆ ಅವಕಾಶ ನೀಡಲು ನ್ಯಾಯಾಲಯ ಮಂಗಳವಾರ ತಿಳಿಸಿದ ಕಾರಣ ಧನ್ವೀರ್ ಮತ್ತು ಹೇಮಂತ್ ಅವರಿಗೆ ಭೇಟಿಯಾಗಲು ಸಾಧ್ಯವಾಯಿತು.

ನ್ಯಾಯಾಂಗ ಬಂಧನ ಅವಧಿ ಸೆಪ್ಟೆಂಬರ್ 30ರವರೆಗೆ ವಿಸ್ತರಣೆ, ಜಾಮೀನು ಅರ್ಜಿ ಸಲ್ಲಿಕೆ ಸೇರಿ ಕಾನೂನು ಹೋರಾಟದ ಬಗ್ಗೆ ಪತ್ನಿ ಜತೆಗೆ ದರ್ಶನ್ ಚರ್ಚಿಸಿದರು. ಭೇಟಿಗೆ ತಾಯಿ ಬಾರದಿರುವ ಬಗ್ಗೆ ದರ್ಶನ್ ಬೇಸರ ವ್ಯಕ್ತಪಡಿಸಿದರು ಎಂಬುದು ಗೊತ್ತಾಗಿದೆ. ಆದರೆ, ಇದನ್ನು ಕಾರಾಗೃಹದ ಅಧಿಕಾರಿಗಳು ಖಚಿತಪಡಿಸಲಿಲ್ಲ.

'ಬೆಂಗಳೂರು ಕಾರಾಗೃಹದಿಂದ ಬರುವಾಗ ದರ್ಶನ್ ವಿಟಮಿನ್ ಮಾತ್ರೆಗಳನ್ನು ತಂದಿದ್ದರು. ಭೇಟಿ ವೇಳೆ ಕುಟುಂಬಸ್ಥರೂ ತಂದಿದ್ದರು. ಆದರೆ, ಅದ್ಯಾವುದನ್ನೂ ದರ್ಶನ್‌ಗೆ ನೀಡಿಲ್ಲ' ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

‘ಕಲ್ಯಾಣ ಕರ್ನಾಟಕ ಉತ್ಸವ’ದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ

ಕಲಬುರಗಿ ಅಭಿವೃದ್ಧಿಗೆ ₹1,685 ಕೋಟಿ

ಪ್ರಜಾವಾಣಿ ವಾರ್ತೆ

ಕಲಬುರಗಿ: ರಾಜ್ಯ ಸರ್ಕಾರದಿಂದಲೇ ₹1,685 ಕೋಟಿ ವೆಚ್ಚದಲ್ಲಿ ಕಲಬುರಗಿ ನಗರವನ್ನು ‘ಸ್ಮಾರ್ಟ್ ಸಿಟಿ’ಯನ್ನಾಗಿ ರೂಪಿಸುವ ಇಂಗಿತವನ್ನು ವ್ಯಕ್ತ ಪಡಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕಲ್ಯಾಣ ಕರ್ನಾಟಕದ ಜಿಲ್ಲೆಗಳನ್ನು ಆದ್ಯತೆ ಮೇರೆಗೆ ಅಭಿವೃದ್ಧಿಪಡಿಸುವುದಾಗಿ ಭರವಸೆ ನೀಡಿದರು.

ನಗರದಲ್ಲಿ ಮಂಗಳವಾರ ‘ಕಲ್ಯಾಣ ಕರ್ನಾಟಕ ಉತ್ಸವ’ದಲ್ಲಿ ಧ್ವಜಾರೋಹಣ ನೆರವೇರಿಸಿದ ಅವರು, ‘ಕಲ್ಯಾಣ ಕರ್ನಾಟಕ ಭಾಗ ಅಭಿವೃದ್ಧಿಯಾಗದ ಹೊರತು ರಾಜ್ಯದ ಅಭಿವೃದ್ಧಿ ಅಸಾಧ್ಯ. ಈ ಭಾಗದ ಜನರ ತಲಾ ಆದಾಯ ವೃದ್ಧಿಯ ಜೊತೆಗೆ ಶಿಕ್ಷಣ, ಆರೋಗ್ಯ, ಸಾರಿಗೆ, ಮೂಲಸೌಕರ್ಯ ಸುಧಾರಣೆ ಸೇರಿ ಸರ್ವಾಂಗೀಣ ಅಭಿವೃದ್ಧಿಯೇ ನಮ್ಮ ಗುರಿಯಾಗಿದೆ’ ಎಂದು ಪ್ರತಿಪಾದಿಸಿದರು.

‘ರಾಜ್ಯ ಸರ್ಕಾರದಿಂದ ಕಲಬುರಗಿಯನ್ನು ಸ್ಮಾರ್ಟ್ ಸಿಟಿಯನ್ನಾಗಿ ಅಭಿವೃದ್ಧಿ ಪಡಿಸುವುದರಿಂದ ಹಿಂದುಳಿದ ಜಿಲ್ಲೆಗಳಲ್ಲಿ ಹೂಡಿಕೆಯನ್ನು ಆಕರ್ಷಿಸಿ ದಂತಾಗಲಿದೆ. ಜೊತೆಗೆ ನಗರದ ನಿವಾಸಿಗಳ ಜೀವನಮಟ್ಟ ಹೆಚ್ಚಿಸುವ ಹಾಗೂ ಸುಸ್ಥಿರ ಅಭಿವೃದ್ಧಿಯನ್ನು ಉತ್ತೇಜಿಸಲು ಇದು ಸಹಕಾರಿಯಾಗಲಿದೆ’ ಎಂದು ಅಭಿಪ್ರಾಯಪಟ್ಟರು.

‘ಹಿಂದುಳಿದ ಕಲ್ಯಾಣ ಕರ್ನಾಟಕ ಭಾಗಕ್ಕೆ ವಿಶೇಷ ಸ್ಥಾನಮಾನ ನೀಡಲು ಸಂವಿಧಾನಕ್ಕೆ ತಿದ್ದುಪಡಿ ತಂದು ‘371 ಜೆ’ ಅನ್ನು ಕಾಯ್ದೆ ರೂಪದಲ್ಲಿ ಜಾರಿಗೊಳಿಸಿ 10 ವರ್ಷಗಳಾಯಿತು. ಈ ಅವಧಿಯಲ್ಲಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಸರ್ಕಾರವು ₹19,778 ಕೋಟಿ ಅನುದಾನ ಹಂಚಿಕೆ ಮಾಡಿದ್ದು, ₹13,299 ಕೋಟಿ ಬಿಡುಗಡೆ ಮಾಡಿದೆ. ಇದುವರೆಗೆ ₹11,174 ಕೋಟಿ ಖರ್ಚು ಮಾಡಲಾಗಿದೆ. ಒಟ್ಟು 35,885 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, 27,264 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಈ ಅಂಕಿ–ಸಂಖ್ಯೆಗಳೇ ಕಲ್ಯಾಣದ ಅಭಿವೃದ್ಧಿಯನ್ನು ಸಾರಿ ಹೇಳುತ್ತಿವೆ’ ಎಂದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಡಾ. ಜಿ.ಪರಮೇಶ್ವರ, ಪ್ರಿಯಾಂಕ್ ಖರ್ಗೆ, ಡಾ. ಶರಣಪ್ರಕಾಶ್ ಪಾಟೀಲ, ರಾಮಲಿಂಗಾರೆಡ್ಡಿ, ಡಾ.ಎಚ್.ಸಿ. ಮಹದೇವಪ್ಪ, ಕೆಕೆಆರ್‌ಡಿಬಿ ಅಧ್ಯಕ್ಷ ಡಾ. ಅಜಯ್ ಸಿಂಗ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು.



ಕಲಬುರಗಿಯಲ್ಲಿ ಮಂಗಳವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸರ್ದಾರ್ ವಲ್ಲಭಭಾಯಿ ಪಟೇಲ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಜನರತ್ತ ಕೈ ಬೀಸಿದರು. ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯ್ ಸಿಂಗ್, ವಿಧಾನ ಪರಿಷತ್ ಸದಸ್ಯ ಶಶೀಲ್ ಜಿ. ನಮೋಶಿ, ಶಾಸಕ ಅಲ್ಲಮಪ್ರಭು ಪಾಟೀಲ ಪಾಲ್ಗೊಂಡಿದ್ದರು

ಪ್ರಜಾವಾಣಿ ಚಿತ್ರ

‘ಅಧಃಪತನಕ್ಕೆ ಒಯ್ದಿದ್ದ ಬಿಜೆಪಿ ಸರ್ಕಾರ’

‘ಈ ಹಿಂದೆ ಆಡಳಿತ ನಡೆಸಿದ್ದ ಸರ್ಕಾರ ಅಶಿಸ್ತು, ಭ್ರಷ್ಟಾಚಾರದಿಂದ ರಾಜ್ಯವನ್ನು ಅಧಃಪತನದತ್ತ ಕೊಂಡೊಯ್ದಿತ್ತು. ಬಜೆಟ್‌ನಲ್ಲಿ ಅನುದಾನ ಘೋಷಿಸದೇ ಸಾವಿರಾರು ಕೋಟಿ ರೂಪಾಯಿ ಕಾಮಗಾರಿಗಳನ್ನು ಕೈಗೆತ್ತಿಕೊಂಡಿತ್ತು. ಜೊತೆಗೆ ಕೇಂದ್ರ ಸರ್ಕಾರವೂ ನಮಗೆ ನ್ಯಾಯಯುತವಾಗಿ ಕೊಡಬೇಕಾಗಿದ್ದ ಅನುದಾನ ಕೊಡದೆ ವಂಚಿಸಿದೆ’ ಎಂದು ಸಿದ್ದರಾಮಯ್ಯ ಅವರು ಹೆಸರು ಉಲ್ಲೇಖಿಸದೇ ಬಿಜೆಪಿಯನ್ನು ಟೀಕಿಸಿದರು.

‘ಇದರ ನಡುವೆಯೂ ನಮ್ಮ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಿದೆ. ಕಲ್ಯಾಣ ಕರ್ನಾಟಕಕ್ಕೆ ಪ್ರತಿ ವರ್ಷ ₹ 5,000 ಕೋಟಿ ಅನುದಾನ ನೀಡುತ್ತಿದೆ’ ಎಂದು ಹೇಳಿದರು.

ಸಭೆಯಿಂದ ‘ಕಲ್ಯಾಣ’ ಸಾಧ್ಯವೇ?



ಆರ್. ಅಶೋಕ

ಬೆಂಗಳೂರು: ಕಲ್ಯಾಣ ಕರ್ನಾಟಕ ದಲ್ಲಿ ಸಂಪುಟ ಸಭೆ ನಡೆಸಿದ ಮಾತ್ರಕ್ಕೆ ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಆಗಿ ಬಿಡುತ್ತದೆಯೇ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಂಪುಟ ಸಭೆ ನಡೆಸುವ ಮೂಲಕ ಬಿಟ್ಟಿ ಪ್ರಚಾರ ಗಿಟ್ಟಿಸಿ ಕೊಳ್ಳಲು ಕಾಂಗ್ರೆಸ್ ಸರ್ಕಾರ ಹೊರಟಿದೆ. ಜನರ ಕಣ್ಣಿಗೆ ಮಣ್ಣೆರಚುವ ಕೆಲಸ ಮಾಡುತ್ತಿದೆ ಎಂದು ದೂರಿದರು. ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಪ್ರತಿವರ್ಷ ₹5,000 ಕೋಟಿ ನೀಡುವುದಾಗಿ ಪಕ್ಷದ ಪ್ರಣಾಳಿಕೆಯಲ್ಲಿ ನೀಡಿದ ಭರವಸೆ ಈಡೇರಿಲ್ಲ.ಬಳ್ಳಾರಿಯಲ್ಲಿ ‘ಜವಳಿ ಪಾರ್ಕ್’ ಸ್ಥಾಪಿಸಲು ಕ್ರಮ ಕೈಗೊಂಡಿಲ್ಲ, ಕಲ್ಯಾಣ ಕರ್ನಾಟಕ ಭಾಗದಲ್ಲಿ 41 ವಿಧಾನಸಭಾ ಕ್ಷೇತ್ರಗಳಲ್ಲಿ ಕನಿಷ್ಠ 100 ಪಿಯು ಕಾಲೇಜು, ಒಂದು ಮಹಿಳಾ ಪದವಿ ಕಾಲೇಜು ಸ್ಥಾಪಿಸುವ ಭರವಸೆ ಹಾಗೆ ಉಳಿದಿದೆ ಎಂದು ಹೇಳಿದರು.

ವಿಚಾರಣೆಗೆ ಮೊದಲೇ ‘ಕ್ಲೀನ್‌ಚಿಟ್’: ನಾಗಮಂಗಲ ಪ್ರಕರಣದಲ್ಲಿ ವಿಚಾರಣೆ ನಡೆಸುವ ಮೊದಲೇ ತಪ್ಪಿತಸ್ಥರಿಗೆ ಕ್ಲೀನ್‌ಚಿಟ್ ನೀಡಲಾಗುತ್ತಿದೆ. ಮೊದಲು ತನಿಖೆ ನಡೆಸಿ, ನಂತರ ತಪ್ಪಿತಸ್ಥರು ಯಾರೆಂದು ತೀರ್ಮಾನಿಸಬೇಕು ಎಂದು ಆಗ್ರಹಿಸಿದರು.



ದೊಡ್ಡಾಟ

ಕಲಬುರಗಿಯಲ್ಲಿ ಮಂಗಳವಾರ ನಡೆದ ಕಲ್ಯಾಣ ಕರ್ನಾಟಕ ಉತ್ಸವದಲ್ಲಿ ದೊಡ್ಡಾಟದ ಕಲಾವಿದರು ಪ್ರದರ್ಶಿಸಿದ ನೃತ್ಯ ಗಮನ ಸೆಳೆಯಿತು ಪ್ರಜಾವಾಣಿ ಚಿತ್ರ

‘ಕರ್ನಾಟಕವನ್ನು ಬಿಜೆಪಿಯ ದಕ್ಷಿಣದ ಹೆಬ್ಬಾಗಿಲಾಗಿಸುವೆ’

ಪ್ರಜಾವಾಣಿ ವಾರ್ತೆ



ಬೆಂಗಳೂರು: ಪಕ್ಷವನ್ನು ಸದೃಢವಾಗಿ ಕಟ್ಟುವ ಮೂಲಕ ಕರ್ನಾಟಕವನ್ನು ಬಿಜೆಪಿಯ ದಕ್ಷಿಣ ಭಾರತದ ಹೆಬ್ಬಾಗಿಲಾಗಿಸಲು ಶ್ರಮಿಸುವೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಅವರ ಜನುಮ ದಿನದ ಅಂಗವಾಗಿ ಮಂಗಳವಾರ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ನರೇಂದ್ರ ಮೋದಿ ನೇತೃತ್ವದಲ್ಲಿ ದೇಶ ಸರ್ವತೋಮುಖ ಅಭಿವೃದ್ಧಿಯತ್ತ ದಾಪುಗಾಲು ಇಡುತ್ತಿದೆ. ರಾಜ್ಯದಲ್ಲೂ ಮತ್ತೆ ಬಿಜೆಪಿ ಅಧಿಕಾರ ಹಿಡಿಯಲಿದೆ. ಭ್ರಷ್ಟಾಚಾರದಲ್ಲಿ ಮುಳುಗಿರುವ ರಾಜ್ಯ ಕಾಂಗ್ರೆಸ್ ಪತನದ ಹಾದಿ ಸನ್ನಿಹಿತವಾಗಿದೆ ಎಂದರು.

ಕೇಂದ್ರದಲ್ಲಿ ಯುಪಿಎ ಅಧಿಕಾರದಲ್ಲಿ ಇದ್ದಾಗ ಭ್ರಷ್ಟಾಚಾರಕ್ಕೆ ಹೆಸರಾಗಿತ್ತು. ಮೋದಿ ಪ್ರಧಾನಿಯಾದ ಒಂದು ದಶಕದಲ್ಲಿ ದೇಶದ ಚಿತ್ರಣವೇ ಬದಲಾಗಿದೆ. ಕಿಸಾನ್ ಸಮ್ಮಾನ್ ನಿಧಿ, ರಸ್ತೆ ಸಂಪರ್ಕ ಜಾಲದ ಅಭಿವೃದ್ಧಿ, ಬೆಂಗಳೂರು ಮೆಟ್ರೊ ಸಂಪರ್ಕ, ರೈಲು ಮಾರ್ಗಗಳ ಅಭಿವೃದ್ಧಿ ಸೇರಿ ವಿವಿಧ ಯೋಜನೆಗಳಿಗೆ ಗರಿಷ್ಠ ಹಣವನ್ನು ರಾಜ್ಯಕ್ಕೆ ನೀಡಿದ್ದಾರೆ. ಆದರೆ, ಕಾಂಗ್ರೆಸ್ ಸರ್ಕಾರ ಸದ್ಬಳಕೆ ಮಾಡಿಕೊಳ್ಳುತ್ತಿಲ್ಲ ಎಂದು ದೂರಿದರು.

ಅ.2ವರೆಗೂ ಸೇವಾ ಪಾಕ್ಷಿಕ ಹಮ್ಮಿಕೊಳ್ಳಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಜನುಮ ದಿನದ ಅಂಗವಾಗಿ ಮೊದಲ ದಿನ ರಾಜ್ಯದ ಹಲವೆಡೆ 20 ಸಾವಿರಕ್ಕೂ ಹೆಚ್ಚು ಬಿಜೆಪಿ ಕಾರ್ಯಕರ್ತರು ರಕ್ತದಾನ ಮಾಡಿದರು. ದೇವಾಲಯಗಳಲ್ಲಿ ವಿಶೇಷ ಪೂಜಾ ಕಾರ್ಯಕ್ರಮಗಳು ನಡೆದವು.

ಕರ್ನಾಟಕ ಅಪರಾಧಿಗಳ ತಾಣ: ಶೋಭಾ



ಶೋಭಾ ಕರಂದ್ಲಾಜೆ

ಬೆಂಗಳೂರು: ಕರ್ನಾಟಕ ಅಪರಾಧಿಗಳ ತಾಣವಾಗುತ್ತಿದೆ. ದೇಶದ್ರೋಹಿಗಳೇ ಮೇಲುಗೈ ಸಾಧಿಸುತ್ತಿದ್ದಾರೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ದೂರಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ‘ಅಪರಾಧ ಚಟುವಟಿಕೆಗಳು ವಿಜೃಂಭಿಸಲು ರಾಜ್ಯ ಸರ್ಕಾರದ ಓಲೈಕೆ ರಾಜಕೀಯ. ದೇಶದ್ರೋಹ ಮಾಡಿದರೂ ಅಡ್ಡಿ ಇಲ್ಲ, ವೋಟ್ ಬ್ಯಾಂಕ್ ಬೇಕು ಎಂಬ ಮಾನಸಿಕ ನಡೆ ಇದಕ್ಕೆಲ್ಲ ಕಾರಣ’ ಎಂದು ಹೇಳಿದರು.



‘ಜೆನ್ನಿ ಮಿಲ್ಕ್’ ಕಂಪನಿಯ ಕಚೇರಿಯಲ್ಲಿ ಜಿಲ್ಲಾ ಯೋಜನಾ ಕೋಶದ ಮನೋಹರ್ ಪರಿಶೀಲನೆ ನಡೆಸಿದರು —ಪ್ರಜಾವಾಣಿ ಚಿತ್ರ

‘ಜೆನ್ನಿಮಿಲ್ಕ್’ ಕಚೇರಿಗೆ ಬೀಗ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ರೈತರಿಗೆ ಕತ್ತೆ ನೀಡಿ, ಹಾಲು ಖರೀದಿಸುವ ವ್ಯವಹಾರದಲ್ಲಿ ತೊಡಗಿದ್ದ ‘ಜೆನ್ನಿ ಮಿಲ್ಕ್’ ಸ್ಟಾರ್ಟ್‌ಅಪ್ ಕಂಪನಿಯ ಇಲ್ಲಿನ ಕಚೇರಿಯನ್ನು ಮಂಗಳವಾರ ನಗರಸಭೆ ಅಧಿಕಾರಿಗಳು ಮುಚ್ಚಿಸಿದ್ದಾರೆ.

ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮನೋಹರ್, ನಗರಸಭೆ ಪೌರಾಯುಕ್ತ ಚಂದ್ರಪ್ಪ ಅವರು ಎಲ್ಲವನ್ನೂ ಪರಿಶೀಲಿಸಿ, ‘ವ್ಯಾಪಾರ ಪರವಾನಗಿ ಪಡೆಯುವವರೆಗೆ ಕಚೇರಿ ತೆರೆಯುವಂತಿಲ್ಲ’ ಎಂದರು.

‘ಕತ್ತೆ ಹಾಲನ್ನು ಸಾಮಾಜಿಕವಾಗಿ ಪರಿಗಣಿಸಲಾಗುವುದಿಲ್ಲ. ಸಂಬಂಧಪಟ್ಟ ಇಲಾಖೆಗಳಿಂದ ಅಗತ್ಯ ದಾಖಲೆ, ಮಾಹಿತಿ ಪಡೆದ ಬಳಿಕ ನಗರಸಭೆಯಿಂದ ವ್ಯಾಪಾರ ಪರವಾನಗಿ ನೀಡಲು ಪರಿಶೀಲಿಸಲಾಗುವುದು’ ಎಂದು ಚಂದ್ರಪ್ಪ ತಿಳಿಸಿದರು. ‘ಕತ್ತೆ ಹಾಲು ಪೌಷ್ಟಿಕ ಮತ್ತು ಶಕ್ತಿದಾಯಕ ಎಂದರಷ್ಟೇ ಸಾಲದು, ಸೂಕ್ತ ಆಧಾರ, ದಾಖಲೆ ಬೇಕು. ಅಂತಹ ದಾಖಲೆಗಳು ಜೆನ್ನಿ ಕಂಪನಿ ಬಳಿಯಿಲ್ಲ. ಜನ ಮೋಸ ಹೋಗುವ ಸಾಧ್ಯತೆಗಳ ಬಗ್ಗೆ ದೂರು ಬಂದಿದೆ’ ಎಂದರು.

‘ಐಎಸ್‌ಒ ಪ್ರಮಾಣಪತ್ರ, ರಫ್ತು ಪ್ರಮಾಣಪತ್ರ ಸಹಿತ ಮೂರು ದಾಖಲೆಗಳನ್ನು ಕಂಪನಿ ನೀಡಿದೆ. ಸತ್ಯಾಂಶ ಪತ್ತೆ ಮಾಡಬೇಕಿದೆ. ಸದ್ಯ ಕಂಪನಿ ಮುಚ್ಚಿಸಿರುವುದು ವ್ಯಾಪಾರ ಪರವಾನಗಿ ಪಡೆದಿಲ್ಲ ಎಂಬ ಕಾರಣಕ್ಕೆ’ ಎಂದು ಮನೋಹರ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕೆಟ್ಟ ಪದ ಬಳಕೆ ಸಂಸ್ಕಾರ ಅಲ್ಲ’

ಪ್ರಜಾವಾಣಿ ವಾರ್ತೆ

ಧಾರವಾಡ: ‘ಕೆಟ್ಟದಾಗಿ ಮಾತನಾಡುವುದು ಸಂಸ್ಕಾರ ಅಲ್ಲ. ಲಕ್ಷಗಟ್ಟಲೇ ಜನರನ್ನು ಪ್ರತಿನಿಧಿಸುವವರೇ (ಶಾಸಕರು) ಕೆಟ್ಟದಾಗಿ ಮಾತನಾಡಿದರೆ ಸಮಾಜಕ್ಕೆ ಯಾವ ಸಂದೇಶ ರವಾನೆ ಆಗುತ್ತದೆ?’ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಪ್ರಶ್ನಿಸಿದರು.

ಶಾಸಕ ಮುನಿರತ್ನ ಅಸಭ್ಯವಾಗಿ ಮಾತನಾಡಿದ್ದಾರೆ ಎನ್ನಲಾದ ಆಡಿಯೊ ಪ್ರಕರಣಕ್ಕೆ ಸಂಬಂಧಿಸಿದಂತೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ಅದು ತಮ್ಮ ಧ್ವನಿಯಲ್ಲ ಎಂದು ಅವರು ಸಮರ್ಥಿಸಿಕೊಳ್ಳಲು ಮುಂದಾಗಿದ್ದಾರೆ’ ಎಂದರು. ‘ಹಣ ನೀಡಿ ಮತ ಹಾಕಿಸಿಕೊಳ್ಳುವವರು ಮತ್ತು ಹಣ ಪಡೆದು ಮತ ಹಾಕುವವರು ಇರುವವರೆಗೆ ಪ್ರಜಾಪ್ರಭುತ್ವದ ಆಶಯ ಸಾಕಾರವಾಗಲ್ಲ. ಈಗಿನ ರಾಜಕಾರಣದಲ್ಲಿ ನೈತಿಕತೆ ಇಲ್ಲ’ ಎಂದು ಅವರು ಬೇಸರ ವ್ಯಕ್ತಪಡಿಸಿದರು.

‘ಸಮಾಜ ಘಾತುಕರನ್ನು ಮಟ್ಟ ಹಾಕಬೇಕು. ಉತ್ತರ ಪ್ರದೇಶದಲ್ಲಿ ಮಾಡಿದಂತೆ ಬಿಗಿ ಮಾಡಬೇಕು’ ಎಂದರು.

‘ಕಲ್ಯಾಣ’ಕ್ಕೆ ರಾಜ್ಯ ಸರ್ಕಾರ ಕಂಕಣ

ಒಂದನೇ ಪುಟದಿಂದ

ಬೀದರ್ ಹಾಗೂ ಕಲಬುರಗಿ ಜಿಲ್ಲೆಗಳ ಹಳ್ಳಿಗಳಿಗೆ ಶುದ್ಧ ಕುಡಿಯುವ ನೀರು ಪೂರೈಸಲು ₹7,200 ಕೋಟಿ ಯೋಜನೆಗೆ ಒಪ್ಪಿಗೆ ನೀಡಿದ್ದೇವೆ’ ಎಂದೂ ಅವರು ಹೇಳಿದರು.

ಖಾಲಿ ಹುದ್ದೆ ಭರ್ತಿ: ಕಲ್ಯಾಣ ಕರ್ನಾಟಕದಲ್ಲಿ ಖಾಲಿ ಇರುವ 17,439 ಹುದ್ದೆಗಳನ್ನು ಹಂತ–ಹಂತವಾಗಿ ಭರ್ತಿ ಮಾಡಲು ಸಂಪುಟ ಒಪ್ಪಿಗೆ ಕೊಟ್ಟಿದೆ.

‘ಹುದ್ದೆ ಭರ್ತಿಗೆ ಕಾಲಮಿತಿ ಇದೆಯೇ’ ಎಂಬ ಪ್ರಶ್ನೆಗೆ ಸ್ಪಷ್ಟವಾಗಿ ಉತ್ತರ ನೀಡದ ಮುಖ್ಯಮಂತ್ರಿ, ‘ಎಲ್ಲವನ್ನೂ ಒಂದೇ ಬಾರಿಗೆ ಭರ್ತಿ ಮಾಡಲು ಆಗುವುದಿಲ್ಲ. ಹಂತ–ಹಂತವಾಗಿ ಭರ್ತಿ ಮಾಡುತ್ತೇವೆ’ ಎಂದಷ್ಟೇ ಹೇಳಿದರು. ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಬ್ಯಾಂಕ್ ಖಾತೆಗಳಲ್ಲಿ ಲಭ್ಯವಿರುವ ಬಡ್ಡಿ ಮೊತ್ತದಲ್ಲಿ 15 ಮಹಿಳಾ ಪದವಿ ಪೂರ್ವ ಕಾಲೇಜು ಕಟ್ಟಡ ನಿರ್ಮಾಣ ಕಾಮಗಾರಿಯನ್ನು ₹447.76 ಕೋಟಿ ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲು ಸಂಪುಟ ಒಪ್ಪಿಗೆ ಸೂಚಿಸಿದೆ.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಎಚ್.ಕೆ. ಪಾಟೀಲ, ಎಚ್.ಸಿ. ಮಹಾದೇವಪ್ಪ, ಪ್ರಿಯಾಂಕ್ ಖರ್ಗೆ, ಶರಣಪ್ರಕಾಶ್ ಪಾಟೀಲ, ಈಶ್ವರ ಖಂಡ್ರೆ, ರಹೀಂಖಾನ್, ಕೆಕೆಆರ್‌ಡಿಬಿ ಅಧ್ಯಕ್ಷ ಅಜಯ್‌ಸಿಂಗ್, ಸಂಸದ ರಾಧಾಕೃಷ್ಣ ದೊಡ್ಡಮನಿ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಹರಿದಾಡಿದ ನರೇಂದ್ರಸ್ವಾಮಿ ವಿಡಿಯೊ

ಪ್ರಜಾವಾಣಿ ವಾರ್ತೆ

ಹಲಗೂರು (ಮಂಡ್ಯ ಜಿಲ್ಲೆ): ‘ಮಹಿಳೆಯರು ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘದಿಂದ ಹೊರಬಂದು ಸರ್ಕಾರದಿಂದ ರಚನೆಯಾಗಿರುವ ಸಂಜೀವಿನಿ ಒಕ್ಕೂಟ ಸೇರುವ ಮೂಲಕ ಸ್ವಗ್ರಾಮದಲ್ಲಿ ಆರ್ಥಿಕ ಚಟುವಟಿಕೆ ಆರಂಭಿಸಿ, ಸ್ವಾವಲಂಬಿಗಳಾಗಿ ಬದುಕು ಕಟ್ಟಿಕೊಳ್ಳಬೇಕು’ ಎಂದು ಶಾಸಕ ಪಿ.ಎಂ.ನರೇಂದ್ರಸ್ವಾಮಿ ಅವರು ಸೋಮವಾರ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ್ದ ವಿಡಿಯೊ ಮಂಗಳವಾರ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು.

ಸಮೀಪದ ಹಾಡ್ಲಿ ಗ್ರಾಮದಲ್ಲಿ ₹10 ಲಕ್ಷ ವೆಚ್ಚದಲ್ಲಿ ನೂತನ ಗ್ರಾಮ ಪಂಚಾಯತಿ ಕಚೇರಿ ನಿರ್ಮಾಣ ಕಾಮಗಾರಿಗೆ ಸೋಮವಾರ ಭೂಮಿಪೂಜೆ ಮಾಡಿದ್ದ ಅವರು, ‘ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘವು ಮಹಿಳಾ ಸಂಘಗಳಿಗೆ ತ್ವರಿತ ಗತಿಯಲ್ಲಿ ಸಾಲ ನೀಡಿ, ಅತಿ ಹೆಚ್ಚು ಬಡ್ಡಿ ವಸೂಲಿ ಮಾಡುವ ಮೂಲಕ ಬಡಜನರನ್ನು ಶೋಷಣೆ ಮಾಡಲು ಹೊರಟಿದೆ. ಧರ್ಮದ ಕಾರ್ಯ ಮಾಡುತ್ತಿಲ್ಲ’ ಎಂದಿದ್ದರು.

‘ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಬಡವರು ಮತ್ತು ಮಹಿಳೆಯರ ಪರವಾಗಿದ್ದು, ಗೃಹಲಕ್ಷ್ಮಿ ಯೋಜನೆಯ ಮೂಲಕ ಎಲ್ಲಾ ಬಗೆಯ ಜನರ ಶ್ರೇಯೋಭಿವೃದ್ಧಿಗಾಗಿ ನಿರಂತರವಾಗಿ ಕೆಲಸ ಮಾಡುತ್ತಿದೆ’ ಎಂದು ಪ್ರತಿಪಾದಿಸಿದ್ದರು.

ಡಿಕೆಶಿಗೆ ನೋಟಿಸ್

ಒಂದನೇ ಪುಟದಿಂದ...



ಡಿ.ಕೆ. ಶಿವಕುಮಾರ್

ಶಿವಕುಮಾರ್ ಪರ ವಾದ ಮಂಡಿಸಿದ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ, ‘ಇದು ರಾಜ್ಯ ಹಾಗೂ ಸಿಬಿಐ ನಡುವಿನ ಪ್ರಕರಣ. ಇದರಲ್ಲಿ ಪ್ರತಿವಾದಿಯಾಗಿರುವುದು ಸಿಬಿಐ. ಹೈಕೋರ್ಟ್ ಆದೇಶ ಸರಿಯಾಗಿದೆ’ ಎಂದರು.

‘ನೀವು ಹೇಳಿದ್ದು ಸರಿ ಇರಬಹುದು. ಸಿಬಿಐ ಮಾತ್ರ ಪ್ರತಿವಾದಿಯೆಂದು ಹೈಕೋರ್ಟ್ ಹೇಳಬಹುದಿತ್ತು’ ಎಂದು ಪೀಠ ಹೇಳಿತು. ಯತ್ನಾಳ ಪರ ಹಿರಿಯ ವಕೀಲ ಸಿದ್ಧಾರ್ಥ ದವೆ ವಾದ ಮಂಡಿಸಿದರು.

ಯತ್ನಾಳ ಹಾಗೂ ಸಿಬಿಐ ಸಲ್ಲಿಸಿದ್ದ ಅರ್ಜಿಗಳನ್ನು ಹೈಕೋರ್ಟ್ ಇತ್ತೀಚೆಗೆ ವಜಾಗೊಳಿಸಿತ್ತು. ‘ಕೇಂದ್ರ ಸರ್ಕಾರವು ಎಲ್ಲಿಯವರೆಗೆ ರಾಜ್ಯವೊಂದರಲ್ಲಿ ಸಿಬಿಐ ಅನ್ನು ಕಾರ್ಯ ನಿರ್ವಹಣೆಗೆ ಹಚ್ಚಬಹುದು ಎಂಬುದು ಕಾನೂನಿನ ವಿಚಾರಕ್ಕೆ ಒಳಪಟ್ಟಿದೆ. ಈ ಪ್ರಕರಣದಲ್ಲಿನ ಕಾನೂನಿನ ವಿಚಾರಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವ್ಯಾಪ್ತಿಗೆ ಸಂಬಂಧಿಸಿವೆ. ಈ ಪ್ರಕರಣದಲ್ಲಿ ರಾಜ್ಯ ಸರ್ಕಾರ ಮತ್ತು ಸಿಬಿಐ ನಡುವೆ ಸಂಘರ್ಷ ಇದ್ದು ಪ್ರಕರಣವನ್ನು ಸಂವಿಧಾನದ 131ನೇ ವಿಧಿಯಡಿ ಸುಪ್ರೀಂ ಕೋರ್ಟ್ ನಿರ್ಧರಿಸುವುದೇ ಸೂಕ್ತ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿತ್ತು.

ಆದಾಯ ಮೀರಿ ಆಸ್ತಿ ಗಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ಈ ಹಿಂದಿನ ಬಿಜೆಪಿ ಸರ್ಕಾರವು ಡಿ.ಕೆ.ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ 2019ರ ಸೆಪ್ಟೆಂಬರ್ 25ರಂದು ಅನುಮತಿ ನೀಡಿತ್ತು. ಈ ಅನುಮತಿಯನ್ನು ಈಗಿನ ಕಾಂಗ್ರೆಸ್ ಸರ್ಕಾರ 2023ರ ನವೆಂಬರ್ 23ರಂದು ಹಿಂಪಡೆದಿತ್ತು. ನಂತರ 2023ರ ಡಿಸೆಂಬರ್ 28ರಂದು ಲೋಕಾಯುಕ್ತ ತನಿಖೆಗೆ ವಹಿಸಿತ್ತು.

ಪರಪ್ಪನ ಅಗ್ರಹಾರ ಜೈಲಿಗೆ ಮುನಿರತ್ನ

ಒಂದನೇ ಪುಟದಿಂದ...

ಬಳಿಕ ಅವರನ್ನು ಪೊಲೀಸರು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರ ಎದುರು ಹಾಜರುಪಡಿಸಿದರು.

ಮುನಿರತ್ನ ಪರ ಹಾಜರಾಗಿದ್ದ ವಕೀಲ ಅಶೋಕ ಹಾರನಹಳ್ಳಿ ಅವರು, ‘ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಪೊಲೀಸರು 41ಎ ನೋಟಿಸ್ ನೀಡದೇ ಅರ್ಜಿದಾರರನ್ನು ಬಂಧಿಸಿದ್ದಾರೆ. ಇದು ರಾಜಕೀಯ ಪ್ರೇರಿತ. ಅರ್ಜಿದಾರರು ತಿರುಪತಿಗೆ ತೆರಳುತ್ತಿದ್ದ ಸಂದರ್ಭದಲ್ಲಿ ಇವರೇನೊ ಮಹಾ ಅಪರಾಧ ಮಾಡಿದ್ದಾರೆ ಎನ್ನುವ ರೀತಿಯಲ್ಲಿ ಪೊಲೀಸರು ಬಂಧಿಸಿದ್ದಾರೆ’ ಎಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಏತನ್ಮಧ್ಯೆ ಮುನಿರತ್ನ ಅವರಿಗೆ ಜಾಮೀನು ಕೋರಿದ ಅರ್ಜಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಯಿತು. ಇದಕ್ಕೆ ಪ್ರಾಸಿಕ್ಯೂಷನ್ ಪರ ಹಾಜರಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಸಿ.ಎಸ್. ಪ್ರದೀಪ್, ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡುವಂತೆ ನ್ಯಾಯಾಧೀಶರಿಗೆ ಮನವಿ ಮಾಡಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಾಧೀಶರು, ವಿಚಾರಣೆಯನ್ನು ಬುಧವಾರಕ್ಕೆ (ಸೆ.18) ಮುಂದೂಡಿದರು. ಅಂತೆಯೇ, ಮುನಿರತ್ನ ಅವರನ್ನು ಇದೇ 30ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶಿಸಿದರು.

ಮಾಹಿತಿ ಸಂಗ್ರಹ: ‘ಆರೋಪಿಯನ್ನು ಎರಡು ದಿನ ತೀವ್ರ ವಿಚಾರಣೆಗೆ ಒಳಪಡಿಸಲಾಯಿತು. ಆರೋಪಕ್ಕೆ ಸಂಬಂಧಿಸಿದಂತೆ ಮುನಿರತ್ನ ಅವರಿಂದ ಮಾಹಿತಿ ಕಲೆ ಹಾಕಲಾಗಿದೆ. ಬಿಬಿಎಂಪಿ ಗುತ್ತಿಗೆದಾರ ಚೆಲುವರಾಜು ಮೊದಲು ಹೇಗೆ ಪರಿಚಯ ಆದರು? ನಿಮ್ಮ ಮಧ್ಯೆ ಸಂಬಂಧ ಹೇಗಿತ್ತು? ಆಡಿಯೊದಲ್ಲಿ ಇರುವುದು ನಿಮ್ಮದೇ ಧ್ವನಿಯೇ ಎಂಬ ಪ್ರಶ್ನೆಗಳನ್ನು ಕೇಳಿ, ಹೇಳಿಕೆ ದಾಖಲಿಸಿಕೊಳ್ಳಲಾಗಿದೆ. ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿದ ಆಡಿಯೊ ತುಣುಕನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಕಳುಹಿಸಲಾಗಿದೆ. ವರದಿ ಬಂದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

ಬಿಬಿಎಂಪಿ ಕ್ರಮ ಪ್ರಶ್ನಿಸಿ ಸಚಿವ ಅರ್ಜಿ

ಪ್ರಜಾವಾಣಿ ವಾರ್ತೆ



ದಿನೇಶ್ ಗುಂಡೂರಾವ್

ಬೆಂಗಳೂರು: ಸಚಿವ ದಿನೇಶ್ ಗುಂಡೂರಾವ್ ಒಡೆತನದ ಸ್ಥಿರಾಸ್ತಿಯಲ್ಲಿ ವಾಣಿಜ್ಯ ಕಟ್ಟಡ ನಿರ್ಮಾಣಕ್ಕೆ ನಕ್ಷೆ ಮಂಜೂರು ಮಾಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ₹41 ಲಕ್ಷಕ್ಕೂ ಹೆಚ್ಚು ಮೊತ್ತದ ತೆರಿಗೆ ಮತ್ತು ಶುಲ್ಕ ಪಾವತಿಸುವಂತೆ ಜಾರಿಗೊಳಿಸಿರುವ ಡಿಮ್ಯಾಂಡ್ ನೋಟಿಸ್ ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಸಚಿವ ದಿನೇಶ್ ಗುಂಡೂರಾವ್ ಹಾಗೂ ಅವರ ಪತ್ನಿ ತಬಸ್ಸುಮ್ ದಿನೇಶ್ ರಾವ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಅಶೋಕ್ ಎಸ್.ಕಿಣಗಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಪ್ರಕರಣದ ಪ್ರತಿವಾದಿಗಳಾದ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ, ಸಂಸದೀಯ ವ್ಯವಹಾರ ಹಾಗೂ ಶಾಸನ ರಚನಾ ಇಲಾಖೆ ಕಾರ್ಯದರ್ಶಿ, ಬಿಬಿಎಂಪಿ ಆಯುಕ್ತ, ಬಿಬಿಎಂಪಿ ಪೂರ್ವ ವಿಭಾಗದ ನಗರ ಯೋಜನಾ ಸಹಾಯಕ ನಿರ್ದೇಶಕರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ, ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ವಿಚಾರಣೆ ಮುಂದೂಡಿದೆ.

ಅರ್ಜಿಯಲ್ಲಿ ಏನಿದೆ?: ‘ಆರ್.ಟಿ. ನಗರದ ಮಠದಹಳ್ಳಿಯಲ್ಲಿ ನಮ್ಮ ಒಡೆತನದಲ್ಲಿ 608.21 ಚದರ ಅಡಿ ಆಸ್ತಿ ಇದೆ. ಇದಕ್ಕೆ ಬಿಬಿಎಂಪಿ ಖಾತೆಯನ್ನೂ ನೀಡಿದೆ. ಈ ಆಸ್ತಿಗೆ ಚಾಲ್ತಿ ತೆರಿಗೆ ಕಟ್ಟಲಾಗಿದೆ. ಈ ಜಾಗದಲ್ಲಿ ವಾಣಿಜ್ಯ ಕಟ್ಟಡ ನಿರ್ಮಾಣಕ್ಕೆ ನಕ್ಷೆ ಮಂಜೂರಾತಿ ಕೋರಿ ಮನವಿ ಸಲ್ಲಿಸಿದ್ದೆವು. ಆದರೆ, ನಕ್ಷೆ ಮಂಜೂರಾತಿ ನೀಡಲು ನೆಲ ಬಾಡಿಗೆ ಶುಲ್ಕ, ಅದರ ಮೇಲೆ ಶೇ 18ರಷ್ಟು ಜಿಎಸ್‌ಟಿ, ಭದ್ರತಾ ಠೇವಣಿ, ಕಟ್ಟಡ ಹಾಗೂ ನಿವೇಶನ ಅಭಿವೃದ್ಧಿ ಶುಲ್ಕ, ಕೆರೆ ಜೀರ್ಣೋದ್ಧಾರ ಶುಲ್ಕ, ವರ್ತುಲ ರಸ್ತೆ ಶುಲ್ಕ, ಕೊಳೆಗೇರಿ ಅಭಿವೃದ್ಧಿ ಸೆಸ್ ಸೇರಿದಂತೆ ವಿವಿಧ ಬಗೆಯ ₹41.55 ಲಕ್ಷ ಮೊತ್ತದ ಶುಲ್ಕ, ತೆರಿಗೆ, ಸೆಸ್‌ಗಳು ಹಾಗೂ ₹3.46 ಲಕ್ಷ ಕಾರ್ಮಿಕರ ಸೆಸ್ ಪಾವತಿಸುವಂತೆ ಬಿಬಿಎಂಪಿ 2024ರ ಆಗಸ್ಟ್ 29ರಂದು ಡಿಮ್ಯಾಂಡ್ ನೋಟಿಸ್ ಜಾರಿಗೊಳಿಸಿದೆ. ಇದು ಕಾನೂನು ಬಾಹಿರ’ ಎಂದು ಅರ್ಜಿದಾರರು ದೂರಿದ್ದಾರೆ.

ಮನವಿ: ‘ಕರ್ನಾಟಕ ಪೌರ ನಿಗಮಗಳು ಹಾಗೂ ಇತರೆ ಕೆಲವು ಕಾನೂನುಗಳ (ತಿದ್ದುಪಡಿ) ಕಾಯ್ದೆ-2021 ಅನ್ನು ಅಸಾಂವಿಧಾನಿಕ ಎಂದು ಘೋಷಿಸಬೇಕು. ಕರ್ನಾಟಕ ಪಟ್ಟಣ ಹಾಗೂ ನಗರ ಯೋಜನಾ ಕಾಯ್ದೆ–2004ರ ಕಲಂ 18-ಎ ರದ್ದುಪಡಿಸಬೇಕು. ಬಿಬಿಎಂಪಿ ಜಾರಿಗೊಳಿಸಿರುವ ಡಿಮ್ಯಾಂಡ್ ನೋಟಿಸ್ ರದ್ದುಪಡಿಸಬೇಕು. ನಮ್ಮ ಒಡೆತನದ ಆಸ್ತಿಯಲ್ಲಿ ವಾಣಿಜ್ಯ ಕಟ್ಟಡ ನಿರ್ಮಿಸಲು ಯಾವುದೇ ಷರತ್ತು ಹಾಗೂ ತೆರಿಗೆ, ಶುಲ್ಕಗಳನ್ನು ವಿಧಿಸದೆ ನಕ್ಷೆ ಮಂಜೂರು ಮಾಡಲು ಬಿಬಿಎಂಪಿಗೆ ನಿರ್ದೇಶಿಸಬೇಕು’ ಎಂದು ಅರ್ಜಿದಾರರು ಮನವಿ ಮಾಡಿದ್ದಾರೆ.

ನಿಧನ ವಾರ್ತೆ

ಜೆ. ಶ್ರೀನಿವಾಸನ್



ಬೆಂಗಳೂರು: ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯ, ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟದ ಸಂಸ್ಥಾಪಕ ಅಧ್ಯಕ್ಷರಾಗಿದ್ದ ಜೆ. ಶ್ರೀನಿವಾಸನ್ (84) ಮಂಗಳವಾರ ಮಧ್ಯಾಹ್ನ ನಿಧನರಾದರು.


ಮೃತರಿಗೆ ಮಗ ಮತ್ತು ಮಗಳು ಇದ್ದಾರೆ. ಕುಮಾರ ಪಾರ್ಕ್‌ನ ಬಿಡಿಎ ಕಚೇರಿ ಬಳಿ ಇರುವ ಅವರ ನಿವಾಸದಲ್ಲಿ ಬುಧವಾರ ಬೆಳಿಗ್ಗೆ 10.15ರವರೆಗೂ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಆ ಬಳಿಕ ಆರ್.ಟಿ.ನಗರದ ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಅವರ ಕುಟುಂಬದ ಮೂಲಗಳು ತಿಳಿಸಿವೆ.

ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲದವರಾದ ಶ್ರೀನಿವಾಸನ್, ಕಂದಾಯ ಇಲಾಖೆಯ ಅಧಿಕಾರಿಯಾಗಿದ್ದರು. ಬೆಂಗಳೂರು ನಗರ ಭೂಮಿತಿ ಕಾಯ್ದೆ ಅನುಷ್ಠಾನದ ವಿಶೇಷ ಜಿಲ್ಲಾಧಿಕಾರಿಯಾಗಿ ನಿವೃತ್ತರಾಗಿದ್ದರು. ಆಗ ಮುಖ್ಯಮಂತ್ರಿಯಾಗಿದ್ದ ಡಿ. ದೇವರಾಜ ಅರಸು ಅವರೊಂದಿಗೆ ನಿಕಟ ಒಡನಾಟ ಇರಿಸಿಕೊಂಡಿದ್ದರು. ಅರಸು ಅವರ ಚಿಂತನೆಗಳಿಂದ ಪ್ರಭಾವಿತರಾಗಿ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಚಳವಳಿ ಕಟ್ಟುವ ಪ್ರಯತ್ನ ಆರಂಭಿಸಿದ್ದರು.

1994–95ರಲ್ಲಿ ನಿವೃತ್ತ ನ್ಯಾಯಮೂರ್ತಿ ಕುದೂರು ನಾರಾಯಣ ರೈ ಅಧ್ಯಕ್ಷತೆಯ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಸದಸ್ಯರಾಗಿದ್ದರು. ಆ ಬಳಿಕ ರಾಜ್ಯದಲ್ಲಿ ಹಿಂದುಳಿದ ಜಾತಿಗಳ ಒಕ್ಕೂಟವನ್ನು ಅಸ್ತಿತ್ವಕ್ಕೆ ತಂದಿದ್ದರು.

ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಎಲ್ಲ ಜಾತಿಗಳ ಕುರಿತು ನಿಖರವಾದ ಅಂಕಿಅಂಶ ಮತ್ತು ದಾಖಲೆಗಳೊಂದಿಗೆ ಮಾತನಾಡುವ ಸಾಮರ್ಥ್ಯ ಶ್ರೀನಿವಾಸನ್ ಅವರಿಗಿತ್ತು. ಹಲವು ಸಮುದಾಯಗಳ ಬೇಡಿಕೆಗಳನ್ನು ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಮತ್ತು ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗಗಳ ಮುಂದೆ ಪ್ರಬಲ ವಾದ ಮಂಡಿಸಿ ನ್ಯಾಯ ದೊರಕಿಸಿಕೊಟ್ಟಿದ್ದರು.

ಮಾಜಿ ಶಾಸಕ ವೆಂಕಟರೆಡ್ಡಿ ಮುದ್ನಾಳ



ಯಾದಗಿರಿ: ಇಲ್ಲಿನ ಬಿಜೆಪಿ ಮುಖಂಡ, ಮಾಜಿ ಶಾಸಕ ವೆಂಕಟರೆಡ್ಡಿ ಮುದ್ನಾಳ (70) ಮಂಗಳವಾರ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಕಳೆದ ಮೂರ್ನಾಲ್ಕು ತಿಂಗಳಿಂದ ಕ್ಯಾನ್ಸರ್‌ಗಾಗಿ ಚಿಕಿತ್ಸೆ ಪಡೆಯುತ್ತಿದ್ದರು. ಮೃತರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ.

2018-2023ರವರೆಗೆ ಯಾದಗಿರಿ ಕ್ಷೇತ್ರದ ಶಾಸಕರಾಗಿದ್ದರು. 2023ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ಸೋತಿದ್ದರು. 2023ರಲ್ಲಿ ಟಿಕೆಟ್‌ಗಾಗಿ ಕ್ಷೇತ್ರದಲ್ಲಿ ನಾಟಕೀಯ ಬೆಳವಣಿಗೆಗಳು ನಡೆದಿದ್ದವು. ಆದರೂ ಮುದ್ನಾಳ ಟಿಕೆಟ್ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದರು.

ನಗರದ ಡಾನ್ ಬಾಸ್ಕೋ ಹತ್ತಿರದ ತೋಟದಲ್ಲಿ ಬುಧವಾರ (ಸೆ.18) ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಾಗಮಂಗಲ–ನಿಷ್ಪಕ್ಷಪಾತ ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ನಾಗಮಂಗಲ: ‘ಪಟ್ಟಣದಲ್ಲಿ ನಡೆದಿದ್ದ ಗಲಭೆಯ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಬೇಕು’ ಎಂದು ಮಂಡ್ಯದ ಮುಸ್ಲಿಂ ಮುಖಂಡರು ಪಟ್ಟಣದ ಪೊಲೀಸ್ ಠಾಣೆಗೆ ಮಂಗಳವಾರ ಭೇಟಿ ನೀಡಿ ಸಿಪಿಐ ನಿರಂಜನ್ ಅವರಿಗೆ ಮನವಿ ಮಾಡಿದರು.

‘ಹಾನಿಗೊಳಗಾದ ಅಂಗಡಿಗಳಿಗೆ ಭೇಟಿ ನೀಡಿ ಮಾಲೀಕರ ಅಳಲನ್ನು ಕೇಳಿ ಬಂದಿದ್ದೇವೆ. ಗಲಭೆಯಿಂದ ಅಪಾರ ಹಾನಿಯಾಗಿದೆ. ಹೀಗಾಗಿ ನ್ಯಾಯಪರವಾಗಿ ತನಿಖೆ ನಡೆಸಬೇಕು’ ಎಂದು ಮುಖಂಡರಾದ ಮಕಸೂದ್, ಮುಫ್ತಿ ಇಫ್ತಿಹಾರ್, ಮೌಲಾನಾ ಕೋರಿದರು.

ಅದಕ್ಕೂ ಮುನ್ನ, ಪಟ್ಟಣದ ಮಂಡ್ಯ ರಸ್ತೆ, ಮೈಸೂರು ರಸ್ತೆಯಲ್ಲಿ ಹಾನಿಗೊಳಗಾಗಿದ್ದ ಬಟ್ಟೆ, ಹಣ್ಣು ಹಾಗೂ ಪಾತ್ರೆ ಅಂಗಡಿ ಸೇರಿದಂತೆ ಹಿಂದೂ ಮತ್ತು ಮುಸ್ಲಿಮರ ಪ್ರತಿ ಅಂಗಡಿಗೂ ಭೇಟಿ ನೀಡಿ ಸಾಂತ್ವನ ಹೇಳಿದರು.

‘ನಷ್ಟದ ಕುರಿತು ಸರ್ಕಾರದ ಗಮನಕ್ಕೆ ತರಲಾಗುವುದು, ಅಧಿಕಾರಿಗಳ ಮಟ್ಟದಲ್ಲಿ ಸಿಗಬಹುದಾದ ಪರಿಹಾರವನ್ನು ಕೊಡಿಸುವ ಪ್ರಯತ್ನವನ್ನೂ ಮಾಡಲಾಗುವುದು’ ಎಂದು ಅಂಗಡಿಗಳ ಮಾಲೀಕರಿಗೆ ಭರವಸೆ ನೀಡಿದರು.

ಪಟ್ಟಣದ ಹನೀಫ್ ಮಸೀದಿ ಸೇರಿದಂತೆ ವಿವಿಧ ಸ್ಥಳಗಳಿಗೂ ಭೇಟಿ ನೀಡಿದರು. ನಂತರ, ಸಮುದಾಯದ ಸ್ಥಳೀಯ ಮುಖಂಡರೊಂದಿಗೂ ಸಭೆ ನಡೆಸಿದರು. ಮುಖಂಡರಾದ ಇಮ್ರಾನ್, ಮಸೂದ್, ಮುಫ್ತಿ ರಿಜ್ವಾನ್, ಖಾಸಿಂ, ಮೌಲಾನಾ ಆಸೀಫ್, ಅತೀಕ್ ಪಾಷ, ಇಲಿಯಾಸ್ ಪಾಷ ಇದ್ದರು.

ಗಲಭೆಯಲ್ಲಿ ಪಾಲ್ಗೊಂಡ ಆರೋಪದಡಿ ಬಂಧನಕ್ಕೊಳಗಾಗಿರುವವರ 13 ಮಂದಿಯ ಕುಟುಂಬಸ್ಥರು ಮಂಗಳವಾರ ಜಿಲ್ಲಾ ಕಾರಾಗೃಹಕ್ಕೆ ಭೇಟಿ ನೀಡಿದ್ದರು. ಅವರಿಗಾಗಿ ಮಾಜಿ ಶಾಸಕ ಸುರೇಶ್‌ಗೌಡ ಬಸ್ ವ್ಯವಸ್ಥೆ ಮಾಡಿದ್ದರು ಎನ್ನಲಾಗಿದೆ.



ನಾಗಮಂಗಲದಲ್ಲಿ ಗಲಭೆಯಿಂದ ಹಾನಿಯಾಗಿದ್ದ ಸ್ಥಳಗಳಿಗೆ ಮಂಡ್ಯದ ಮುಸ್ಲಿಂ ಮುಖಂಡರು ಮಂಗಳವಾರ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದರು

ಆಸ್ತಿ ಕಲಹ: ತನಿಖಾ ದಾಖಲೆಗಳನ್ನು ಸಲ್ಲಿಸುವಂತೆ ಹೈಕೋರ್ಟ್ ನಿರ್ದೇಶನ

ತಂಗಿ ಮೇಲೆ ನಾಯಿ ಛೂ ಬಿಟ್ಟ ಅಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿ ಕಲಹಕ್ಕೆ ಸಂಬಂಧಿಸಿದ ತಕರಾರು ಪ್ರಕರಣವೊಂದರಲ್ಲಿ ತಂಗಿಯ ಮೇಲೆ ಅಣ್ಣನೊಬ್ಬ ನಾಯಿ ಛೂ ಬಿಟ್ಟು ಜೀವ ಬೆದರಿಕೆ ಹಾಕಿದ ಆರೋಪದ ತನಿಖಾ ದಾಖಲೆಗಳನ್ನು ಸಲ್ಲಿಸುವಂತೆ ಹೈಕೋರ್ಟ್ ಹಲಸೂರು ಪೊಲೀಸರಿಗೆ ನಿರ್ದೇಶಿಸಿದೆ.

‘ಜೀವ ಬೆದರಿಕೆ ಆರೋಪಕ್ಕೆ ಸಂಬಂಧಿಸಿದಂತೆ ನಮ್ಮ ವಿರುದ್ಧ ಎಸಿಎಂಎಂ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣ ರದ್ದುಪಡಿಸಬೇಕು’ ಎಂದು ಕೋರಿ ಪುರುಷೋತ್ತಮ್ ಮತ್ತು ಅವರ ಪತ್ನಿ ಭಾಗ್ಯ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲೆಯನ್ನು ಪ್ರಶ್ನಿಸಿದ ನ್ಯಾಯಮೂರ್ತಿಗಳು, ‘ಏನ್ರೀ ಮನೆಗೆ ಬಂದರೆ ನಾಯಿ ಛೂ ಬಿಡುತ್ತಾರಾ ನಿಮ್ಮ ಅರ್ಜಿದಾರರು’ ಎಂದು ಪ್ರಶ್ನಿಸಿದರು.

ಇದಕ್ಕೆ ವಕೀಲೆ, ‘ಅದು ಸಾಕಿದ ನಾಯಿ, ಅಷ್ಟಕ್ಕೂ ಅವರ ಸಹೋದರಿ ಬಂದಾಗ ಕಟ್ಟಿ ಹಾಕಲಾಗಿತ್ತು. ಅರ್ಜಿದಾರರ ಮೇಲಿನ ಆರೋಪಗಳು ಸುಳ್ಳು’ ಎಂದು ತಿಳಿಸಿದರು.


ಆದರೆ, ಇದಕ್ಕೆ ತೃಪ್ತರಾಗದ ನ್ಯಾಯಮೂರ್ತಿಗಳು, ‘ಸಾಕು ನಾಯಿನಾ? ಸಾಕಿದ ನಾಯಿ ಎಂದರೆ ಕಚ್ಚುವುದಿಲ್ಲವೇ? ಕಟ್ಟಿ ಹಾಕಿದ ನಾಯಿಯನ್ನು ದೂರುದಾರರ ಮೇಲೆ ಏಕೆ ಛೂ ಬಿಟ್ಟರು? ಆಸ್ತಿ ವಿವಾದವಿದ್ದರೆ ಆ ಸಮಸ್ಯೆ ಬಗೆಹರಿಸಲು ನಾಯಿಗೆ ಏಕೆ ಹೇಳಿದಿರಿ ಎಂದು ಕುಟುಕಿದರು.

‘ಪ್ರಕರಣದ ಕುರಿತಂತೆ ತನಿಖೆಯ ದಾಖಲೆಗಳನ್ನು ಕೋರ್ಟ್‌ಗೆ ಸಲ್ಲಿಸಿ’ ಎಂದು ಪ್ರಾಸಿಕ್ಯೂಷನ್ ಪರ ವಕೀಲರಿಗೆ ಸೂಚಿಸಿ ಇದೇ 19ಕ್ಕೆ ವಿಚಾರಣೆ ಮುಂದೂಡಿದರು.

ದಿನದಲ್ಲಿ 503 ಅರ್ಜಿ ವಿಚಾರಣೆ

ಬೆಂಗಳೂರು: ಕ್ಷಿಪ್ರಗತಿಯಲ್ಲಿ ಅರ್ಜಿಗಳ ವಿಲೇವಾರಿಗೆ ಹೆಸರಾಗಿರುವ ಹೈಕೋರ್ಟ್ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಮಂಗಳವಾರ ದಿನದ ಕಲಾಪದಲ್ಲಿ 503 ಅರ್ಜಿಗಳನ್ನು ವಿಚಾರಣೆ ನಡೆಸಿದರು.

ಬೆಂಗಳೂರು ಪ್ರಧಾನ ಪೀಠದಲ್ಲಿನ 17ನೇ ಕೋರ್ಟ್ ಹಾಲ್‌ನಲ್ಲಿ ಕಾರ್ಯ ನಿರ್ವಹಿಸುತ್ತಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಮಂಗಳವಾರದ (ಸೆ.17) ಕಲಾಪದಲ್ಲಿ ಪಟ್ಟಿ ಮಾಡಲಾಗಿದ್ದ ಒಟ್ಟು 503 ಕ್ರಿಮಿನಲ್ ಹಾಗೂ ರಿಟ್ ಅರ್ಜಿಗಳ ವಿಚಾರಣೆಯನ್ನು ದಿನದ ಕಲಾಪದ ಅವಧಿ ಪೂರ್ಣಗೊಳ್ಳುವುದಕ್ಕೂ 45 ನಿಮಿಷಗಳ ಮುಂಚಿತವಾಗಿ ಮುಕ್ತಾಯಗೊಳಿಸಿದರು. ಇವುಗಳಲ್ಲಿ 187 ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದ್ದು, 125 ಪ್ರಕರಣಗಳಲ್ಲಿ ಮಧ್ಯಂತರ ಆದೇಶ ನೀಡಲಾಗಿದೆ. ಹೈಕೋರ್ಟ್‌ನ ಮತ್ತೊಬ್ಬ ಹಿರಿಯ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ (ಸದ್ಯ ಧಾರವಾಡ ಪೀಠಾಸೀನ ನ್ಯಾಯಮೂರ್ತಿ) ಹಾಗೂ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಇವರಿಬ್ಬರೂ ನಿಯಮಿತವಾಗಿ ತಮ್ಮಗಳ ಸರದಿಗೆ ಒಪ್ಪಿಸಲಾಗುವ ಯಾವುದೇ ವರ್ಗಗಳ ಅರ್ಜಿಗಳ ಕ್ಷಿಪ್ರ ವಿಲೇವಾರಿಯಲ್ಲಿ ಮುಂಚೂಣಿಯಲ್ಲಿದ್ದಾರೆ. ಈ ಹಿಂದೆ ನ್ಯಾ.ನಾಗಪ್ರಸನ್ನ ಅವರು ಒಂದು ದಿನದ ಕಲಾಪದಲ್ಲಿ 600ಕ್ಕೂ ಹೆಚ್ಚು ಅರ್ಜಿಗಳ ವಿಲೇವಾರಿ ಮಾಡಿರುವ ಹೆಗ್ಗಳಿಕೆ ಹೊಂದಿದ್ದಾರೆ.



ಧ್ವಜಾರೋಹಣಕ್ಕೆ ತೆರಳುತ್ತಿದ್ದ ಪಿಡಿಒ ಅಪಘಾತದಲ್ಲಿ ಸಾವು

ಪ್ರಜಾವಾಣಿ ವಾರ್ತೆ




ಅಡಿವೆಪ್ಪ ಯಡಿಯಾಪುರ

ಕುಕನೂರು (ಕೊಪ್ಪಳ ಜಿಲ್ಲೆ): ಕಲ್ಯಾಣ ಕರ್ನಾಟಕ ಉತ್ಸವದ ಧ್ವಜಾರೋಹಣಕ್ಕೆ ತೆರಳುತ್ತಿದ್ದ ಕುಕನೂರು ತಾಲ್ಲೂಕಿನ ಯರೇಹಂಚಿನಾಳ ಗ್ರಾಮದ ಪಿಡಿಒ ಅಡಿವೆಪ್ಪ ಯಡಿಯಾ ಪುರ(32) ಎಂಬುವರು ಮಂಗಳವಾರ ಇಲ್ಲಿಗೆ ಸಮೀಪದ ಇಟಗಿ ಗ್ರಾಮದ ಬಳಿ ನಡೆದ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಾರೆ.

ಧ್ವಜಾರೋಹಣದ ನಿಮಿತ್ತ ಬೆಳಗಿನ ಜಾವವೇ ಅವರು ಬೈಕ್ ಮೇಲೆ ಕಚೇರಿಗೆ ಹೊರಟಿದ್ದಾಗ ಎದುರಿನಿಂದ ಬಂದ ಹಾಲಿನ ವಾಹನ ಡಿಕ್ಕಿ ಹೊಡೆದಿದೆ. ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ಕುಕನೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ, ಪ್ರಥಮ ಚಿಕಿತ್ಸೆ ನೀಡಿ ಬಳಿಕ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಮೃತಪಟ್ಟಿದ್ದಾರೆ.


ಷೇರುಪೇಟೆ ವಹಿವಾಟು ▲ 91



ಎನ್‌ಎಸ್‌ಇ ನಿಫ್ಟಿ


ಹಿಂದಿನ ಅಂತ್ಯ	25,383
ಇಂದಿನ ಅಂತ್ಯ	25,418
▲	35
ದಿನದ ಗರಿಷ್ಠ	25,441

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)



ಆರ್‌ಎಸ್‌ಎಸ್-4	₹225.50
ಆರ್‌ಎಸ್‌ಎಸ್-5	₹220.50
ಗುಡ್ ಲಾಟ್	₹205.50

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹550
12 ಕ್ಕೆ	₹75
ಮೈಸೂರು	
100ಕ್ಕೆ	₹555

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹427-566
ದ್ವಿತಳಿ (ಬಿ.ವಿ)	₹427-760

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)



ಶೇಂಗಾ (ರಿಫೈನ್ಡ್)	₹1515 (1515)
ಸೋಯಾ (ರಿಫೈನ್ಡ್)	₹1140 (1145)
ಸೂರ್ಯಕಾಂತಿ (ರಿಫೈನ್ಡ್)	₹1135 (1140)
ಪಾಮೋಲಿನ್	₹1135 (1140)

ಮುದ್ರೆಮನೆ ಕಾಫಿ (50 ಕೆಜಿಗೆ)



ಎಪಿ	₹17850
ಎಸಿ	₹11070
ಆರ್‌ಪಿ	₹20000
ಆರ್‌ಸಿ	₹10300

ವಿನಿಮಯ ದರ

$ ಡಾಲರ್	83.75
£ ಪೌಂಡ್	110.58
€ ಯುರೊ	93.27
¥ ಯೆನ್ (100ಕ್ಕೆ)	59

ಸಗಟು ಹಣದುಬ್ಬರ 4 ತಿಂಗಳ ಕನಿಷ್ಠ

ನವದೆಹಲಿ (ಪಿಟಿಐ): ಸಗಟು ಬೆಲೆ ಸೂಚ್ಯಂಕ (ಡಬ್ಲ್ಯುಪಿಐ) ಆಧಾರಿತ ಹಣದುಬ್ಬರವು ಆಗಸ್ಟ್ ತಿಂಗಳಲ್ಲಿ ನಾಲ್ಕು ತಿಂಗಳ ಕನಿಷ್ಠ ಮಟ್ಟವಾದ ಶೇ 1.31ಕ್ಕೆ ದಾಖಲಾಗಿದೆ.

ಜುಲೈನಲ್ಲಿ ಶೇ 2.04ರಷ್ಟು ಇಳಿಕೆಯಾಗಿತ್ತು. 2023ರ ಆಗಸ್ಟ್‌ನಲ್ಲಿ (–) ಶೇ 0.46 ದಾಖಲಾಗಿತ್ತು.

ತರಕಾರಿ ಮತ್ತು ಇಂಧನ ಬೆಲೆಯಲ್ಲಿನ ಇಳಿಕೆಯಿಂದಾಗಿ ಸಗಟು ಹಣದುಬ್ಬರ ದರವು ಕುಸಿದಿದೆ. ಆದರೆ, ಈರುಳ್ಳಿ ಮತ್ತು ಆಲೂಗೆಡ್ಡೆ ದರದಲ್ಲಿ ಏರಿಕೆಯಾಗಿದೆ ಎಂದು ಕೇಂದ್ರ ಸರ್ಕಾರ, ಮಂಗಳವಾರ ಬಿಡುಗಡೆ ಮಾಡಿದ ವರದಿ ತಿಳಿಸಿವೆ.

ಆಹಾರ ಪದಾರ್ಥಗಳು, ಸಂಸ್ಕರಿಸಿದ ಆಹಾರ ಉತ್ಪನ್ನಗಳು, ಜವಳಿ ಉತ್ಪನ್ನಗಳ ತಯಾರಿಕೆ ವೆಚ್ಚ, ಯಂತ್ರಗಳು ಹಾಗೂ ಉಪಕರಣಗಳ ಬೆಲೆಯಲ್ಲಿ ಏರಿಕೆಯಾಗಿದೆ.

ಆಹಾರ ಹಣದುಬ್ಬರವು ಜುಲೈನಲ್ಲಿ ಶೇ 3.45ರಷ್ಟಿತ್ತು. ಆಗಸ್ಟ್‌ನಲ್ಲಿ ಶೇ 3.11ಕ್ಕೆ ಇಳಿದಿದೆ. ಆಲೂಗೆಡ್ಡೆ ಮತ್ತು ಈರುಳ್ಳಿ ದರವು ಕ್ರಮವಾಗಿ ಶೇ 77.96 ಮತ್ತು ಶೇ 65.75ರಷ್ಟು ಏರಿಕೆಯಾಗಿದೆ.

ಚಿನ್ನದ ಆಮದು ದುಪ್ಪಟ್ಟು

ನವದೆಹಲಿ (ಪಿಟಿಐ): ಚಿನ್ನದ ಮೇಲಿನ ಕಸ್ಟಮ್ಸ್ ಸುಂಕ ಕಡಿತ, ಹಬ್ಬದ ಋತುವಿನಲ್ಲಿ ಬೇಡಿಕೆ ಹೆಚ್ಚಳದಿಂದಾಗಿ ಆಗಸ್ಟ್‌ನಲ್ಲಿ ₹84,279 ಕೋಟಿ ಮೌಲ್ಯದ ಚಿನ್ನವನ್ನು ಭಾರತವು ಆಮದು ಮಾಡಿಕೊಂಡಿದೆ.

ಕಳೆದ ವರ್ಷದ ಆಗಸ್ಟ್‌ನಲ್ಲಿ ₹41,303 ಕೋಟಿ ಮೌಲ್ಯದ ಚಿನ್ನ ಆಮದಾಗಿತ್ತು. ಇದಕ್ಕೆ ಹೋಲಿಸಿದರೆ ಆಮದು ಪ್ರಮಾಣದಲ್ಲಿ ಎರಡು ಪಟ್ಟು ಹೆಚ್ಚಳವಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಮಂಗಳವಾರ ತಿಳಿಸಿದೆ. 'ಆಭರಣ ತಯಾರಕರು ಹಬ್ಬದ ಬೇಡಿಕೆ ಅಂಗವಾಗಿ ಚಿನ್ನವನ್ನು ದಾಸ್ತಾನು ಮಾಡಿಕೊಳ್ಳು-ತ್ತಿದ್ದಾರೆ' ಎಂದು ಕೇಂದ್ರ ವಾಣಿಜ್ಯ ಸಚಿವಾಲಯದ ಕಾರ್ಯದರ್ಶಿ ಸುನಿಲ್ ಬರ್ತ್ವಾಲ್ ತಿಳಿಸಿದ್ದಾರೆ.

30 ಲಕ್ಷ ಟನ್ ದಾಸ್ತಾನು ಲಭ್ಯ: ಕಂಪನಿಗಳಿಗೆ ಕೇಂದ್ರ ಸರ್ಕಾರ ಸೂಚನೆ

'ಖಾದ್ಯ ತೈಲ ದರ ಏರಿಕೆ ಬೇಡ'



ನವದೆಹಲಿ (ಪಿಟಿಐ): ಕಡಿಮೆ ಕಸ್ಟಮ್ಸ್ ಸುಂಕ ಜಾರಿಯಲ್ಲಿದ್ದ ವೇಳೆ ಆಮದು ಮಾಡಿಕೊಂಡಿರುವ 30 ಲಕ್ಷ ಟನ್‌ನಷ್ಟು ಖಾದ್ಯ ತೈಲ ದಾಸ್ತಾನಿದೆ. ಹಾಗಾಗಿ, ಖಾದ್ಯ ತೈಲ ಕಂಪನಿಗಳು ಚಿಲ್ಲರೆ ಮಾರಾಟ ದರವನ್ನು ಏರಿಕೆ ಮಾಡಬಾರದು ಎಂದು ಕೇಂದ್ರ ಸರ್ಕಾರ ಸೂಚಿಸಿದೆ.

ದೇಶೀಯ ರೈತರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಕಳೆದ ವಾರ ಸರ್ಕಾರವು ಕಚ್ಚಾ ಹಾಗೂ ಸಂಸ್ಕರಿಸಿದ ತಾಳೆ, ಸೂರ್ಯಕಾಂತಿ ಹಾಗೂ ಸೋಯಾಬಿನ್ ಎಣ್ಣೆ ಮೇಲಿನ ಮೂಲ ಕಸ್ಟಮ್ಸ್ ಸುಂಕವನ್ನು ಹೆಚ್ಚಿಸಿತ್ತು. ಹಾಗಾಗಿ, ಕಂಪನಿಗಳು ಚಿಲ್ಲರೆ ದರ ಏರಿಕೆ ಮಾಡುವ ಸಾಧ್ಯತೆ ಇರುವುದರಿಂದ ಈ ನಿರ್ದೇಶನ ನೀಡಿದೆ.

ಸದ್ಯ ದಾಸ್ತಾನು ಇರುವ ಎಣ್ಣೆಯು 40ರಿಂದ 45 ದಿನದವರೆಗೆ ದೇಶೀಯ ಬೇಡಿಕೆಗೆ ಸಾಕಾಗಲಿದೆ ಎಂದು ಹೇಳಿದೆ.

ಮಂಗಳವಾರ ಕೇಂದ್ರ ಆಹಾರ ಸಚಿವ ಸಂಜೀವ್ ಚೋಪ್ರಾ ಅವರು, ಭಾರತೀಯ ಎಣ್ಣೆ ಗಿರಣಿ ಮಾಲೀಕರ ಸಂಘ (ಎಸ್‌ಇಎ), ಭಾರತೀಯ ಸಸ್ಯಜನ್ಯ ತೈಲ ಉತ್ಪಾದಕರ ಸಂಘ ಹಾಗೂ ಸೋಯಾಬಿನ್ ಎಣ್ಣೆ ಉತ್ಪಾದಕರ ಸಂಘದ ಪ್ರತಿನಿಧಿಗಳ ಜೊತೆಗೆ ಈ ಕುರಿತು ಸಭೆ ಕೂಡ ನಡೆಸಿದ್ದಾರೆ.

ದಾಸ್ತಾನಿರುವ ಎಣ್ಣೆಯು ಮುಗಿಯುವವರೆಗೂ ಹಾಲಿ ದರದಲ್ಲಿಯೇ ಮಾರಾಟ ಮಾಡಲಾಗುವುದು. ಬಳಿಕ ಸಂಘದ ಸದಸ್ಯರ ಬಳಿ ಚರ್ಚಿಸಿ ಅಂತಿಮ ನಿರ್ಧಾರ ಕೈಗೊಳ್ಳುವ ಬಗ್ಗೆ ಕಂಪನಿಗಳು ಭರವಸೆ ನೀಡಿವೆ ಎಂದು ಸಚಿವಾಲಯ ತಿಳಿಸಿದೆ.

ದೇಶೀಯ ಬೇಡಿಕೆಗೆ ಅನುಗುಣವಾಗಿ ಭಾರತವು ಖಾದ್ಯ ತೈಲವನ್ನು ಆಮದು ಮಾಡಿಕೊಳ್ಳುತ್ತದೆ. ದೇಶೀಯ ಎಣ್ಣೆಕಾಳು ಬೆಳೆಗಾರರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಕಸ್ಟಮ್ಸ್ ಸುಂಕದಲ್ಲಿ ಏರಿಕೆ ಮಾಡಿದೆ. ಅಕ್ಟೋಬರ್‌ಗೆ ಸೋಯಾಬಿನ್ ಮತ್ತು ಶೇಂಗಾ ಬೆಳೆಯು ಕಟಾವಿಗೆ ಬರುತ್ತದೆ ಎಂದು ತಿಳಿಸಿದೆ.

ಭಾರತವು ಮಲೇಷ್ಯಾ ಮತ್ತು ಇಂಡೊನೇಷ್ಯಾದಿಂದ ತಾಳೆ ಎಣ್ಣೆ, ಬ್ರೆಜಿಲ್ ಮತ್ತು ಅರ್ಜೆಂಟೀನಾದಿಂದ ಸೋಯಾಬಿನ್, ರಷ್ಯಾ ಮತ್ತು ಉಕ್ರೇನ್‌ನಿಂದ ಸೂರ್ಯಕಾಂತಿ ಎಣ್ಣೆಯನ್ನು ಆಮದು ಮಾಡಿಕೊಳ್ಳುತ್ತದೆ.

ವ್ಯಾಪಾರ ಕೊರತೆ ಅಂತರ ಏರಿಕೆ

ನವದೆಹಲಿ (ಪಿಟಿಐ): ಆಗಸ್ಟ್ ತಿಂಗಳಿನಲ್ಲಿ ರಫ್ತಿಗಿಂತಲೂ ಆಮದು ಪ್ರಮಾಣ ಹೆಚ್ಚಾಗಿದ್ದು, ವಿದೇಶಿ ವ್ಯಾಪಾರದ ಕೊರತೆ ಅಂತರವು 10 ತಿಂಗಳ ಗರಿಷ್ಠ ಮಟ್ಟಕ್ಕೆ ದಾಖಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ವ್ಯಾಪಾರ ಕೊರತೆ ಅಂತರವು ₹2.48 ಲಕ್ಷ ಕೋಟಿ ಆಗಿದೆ. ಆರ್ಥಿಕ ಹಿಂಜರಿಕೆಯಿಂದಾಗಿ ಯುರೋಪ್‌ನ ಹಲವು ದೇಶಗಳಿಂದ ಬೇಡಿಕೆ ಕುಸಿದಿರುವ ಪರಿಣಾಮ ರಫ್ತು ಪ್ರಮಾಣದಲ್ಲಿ ಇಳಿಕೆಯಾಗಿದೆ ಎಂದು ಹೇಳಿದೆ.

ಆಮದು ಮತ್ತು ರಫ್ತು ವಹಿವಾಟಿನ ನಡುವಣ ವ್ಯತ್ಯಾಸವನ್ನು ವ್ಯಾಪಾರ ಕೊರತೆ ಎಂದು ಕರೆಯಲಾಗುತ್ತದೆ. ಆಗಸ್ಟ್‌ನಲ್ಲಿ ₹2.90 ಲಕ್ಷ ಕೋಟಿ ಮೌಲ್ಯದ ಸರಕುಗಳನ್ನು ರಫ್ತು ಮಾಡಲಾಗಿದೆ. ಆದರೆ, ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ರಫ್ತಿನಲ್ಲಿ ಶೇ 9.32ರಷ್ಟು ಇಳಿಕೆಯಾಗಿದೆ. ಆಮದು ಪ್ರಮಾಣವು ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 3.3ರಷ್ಟು ಹೆಚ್ಚಳವಾಗಿದೆ. ಒಟ್ಟು ₹5.39 ಲಕ್ಷ ಕೋಟಿ ಮೌಲ್ಯದ ಸರಕುಗಳನ್ನು ಆಮದು ಮಾಡಿಕೊಳ್ಳಲಾಗಿದೆ.

'ಪೆಟ್ರೋಲಿಯಂ, ಹರಳು ಮತ್ತು ಚಿನ್ನಾಭರಣ ಸಾಗಣೆ ಮೌಲ್ಯದಲ್ಲಿ ಇಳಿಕೆಯಾಗಿದೆ. ಇದೇ ರಫ್ತು ಪ್ರಮಾಣದಲ್ಲಿ ಇಳಿಕೆಗೆ ಕಾರಣವಾಗಿದೆ' ಎಂದು ಕೇಂದ್ರ ವಾಣಿಜ್ಯ ಸಚಿವಾಲಯದ ಕಾರ್ಯದರ್ಶಿ ಸುನಿಲ್ ಬರ್ತ್ವಾಲ್ ತಿಳಿಸಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಮಾರುಕಟ್ಟೆ	ತಳಿ	ದರ
ಬಂಟ್ವಾಳ	ಕೋಕ	18000-28500
	ಹೊಸತು	28500-40500
	ಹಳತು	40500-48000
ಚಿತ್ರದುರ್ಗ	ಅಪಿ	47919-48329
	ಬೆಟ್ಟೆ	33239-33699
	ಕೆಂಪುಗೋಟು	27809-28210
	ರಾಶಿ	47449-47889
ಕಾರ್ಕಳ	ಹೊಸತು	25000-40500
	ಹಳತು	30000-48000
ಕುಮಟ	ಚಿಪ್ಪು	22396-25469
	ಕೋಕ	9111-20000
	ಫ್ಯಾಕ್ಟರಿ	5699-16899
	ಹಳೆಚಾಲಿ	38169-38939
	ಹೊಸಚಾಲಿ	30799-34501
ಪುತ್ತೂರು	ಹೊಸತು	26000-40500
ಸಾಗರ	ಬಿಳಿಗೋಟು	22222-23299
	ಚಾಲಿ	25690-32220
	ಕೋಕ	13200-23199
	ಕೆಂಪುಗೋಟು	28199-28899
	ರಾಶಿ	40299-46599
	ಸಿಪ್ಪೆಗೋಟು	14369-15875
ಶಿವಮೊಗ್ಗ	ಬೆಟ್ಟೆ	43900-54309
	ಗೊರಬಲು	16000-35899
	ರಾಶಿ	25509-48949
	ಸರಕು	44109-81396
ಸಿದ್ದಾಪುರ	ಚಾಲಿ	32899-35450
	ಕೋಕ	13189-24889
	ಕೆಂಪುಗೋಟು	22689-28899
	ರಾಶಿ	42139-45899
	ತಟ್ಟಿಬೆಟ್ಟೆ	28019-35888
ಶಿರಸಿ	ಬೆಟ್ಟೆ	28109-42789
	ಬಿಳಿಗೋಟು	22199-29799
	ಚಾಲಿ	32612-36001
	ಕೆಂಪುಗೋಟು	13809-21699
	ರಾಶಿ	41569-45989
ಯಲ್ಲಾಪುರ	ಬಿಳಿಗೋಟು	15009-28612
	ಚಾಲಿ	30400-35690
	ಕೋಕ	4112-19699
	ಕೆಂಪುಗೋಟು	16806-22525
	ರಾಶಿ	38239-50799
	ತಟ್ಟಿಬೆಟ್ಟೆ	25000-34759

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ವಿಷ್ಣು, ಬೆತ್ತಗೇರಿ.

- **ಪ್ರಶ್ನೆ: ನಾನು ಸುಮಾರು 35 ವರ್ಷ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಸೇವೆ ಸಲ್ಲಿಸಿ 2002ರ ಡಿಸೆಂಬರ್‌ನಲ್ಲಿ ಸ್ವಯಂ ನಿವೃತ್ತಿ ಪಡೆದಿದ್ದೇನೆ. ನನಗೆ 77 ವರ್ಷ. ಆ ಸಂದರ್ಭದಲ್ಲಿ ನನಗೆ ಒಟ್ಟು ₹ 7 ಲಕ್ಷ ನೀಡಲಾಗಿತ್ತು. ಶೇ 20ರಷ್ಟು ಅಂಚೆಯಲ್ಲಿ, ಶೇ 20ರಷ್ಟು ಕಂಪನಿ ಷೇರುಗಳಲ್ಲಿ (ಈಕ್ವಿಟಿ) ಮತ್ತು ಶೇ 20ರಷ್ಟು ಅಟಲ್ ಪ್ರಧಾನ ಮಂತ್ರಿ ಯೋಜನೆಯಲ್ಲಿ ತೊಡಗಿಸಿದ್ದೆ. ಕಾಲಕ್ರಮೇಣ ಅಂಚೆಯಲ್ಲಿರುವ ಹೂಡಿಕೆಯನ್ನು ಎಲ್‌ಐಸಿಯಲ್ಲಿ (ಈಗಿನ ಪ್ರಧಾನಮಂತ್ರಿ ವಯೋವಂದನ) ತೊಡಗಿಸಿ ಪ್ರತಿ ತಿಂಗಳು ₹5,184 ಪಡೆಯುತ್ತಿದ್ದೇನೆ. ಷೇರುಗಳಲ್ಲಿ ಹೂಡಿಕೆ ಮಾಡಿದ ಹಣವು ಗಣನೀಯವಾಗಿ ಏರಿಕೆಯಾಗಿದೆ. ಆದ್ದರಿಂದ ಅದರಲ್ಲಿರುವ ಶೇ 20ರಷ್ಟು (ಅಂದರೆ ₹6 ಲಕ್ಷ) ಹಣವನ್ನು ಅಂಚೆ ಇಲಾಖೆಯ ಹಿರಿಯ ನಾಗರಿಕರ ಉಳಿತಾಯ ಯೋಜನೆಯಡಿ (ಶೇ 8.2 ಬಡ್ಡಿ) ತೊಡಗಿಸಬೇಕೆಂದು ಆಲೋಚಿಸಿದ್ದೇನೆ. ಅದರಿಂದ ತಿಂಗಳಿಗೆ ₹4,100 ಹೆಚ್ಚುವರಿಯಾಗಿ ಆದಾಯ ಬರುತ್ತದೆ.**
  ನನ್ನ ಪ್ರಶ್ನೆ ಏನೆಂದರೆ ಷೇರುಗಳಿಂದ ಅಂಚೆ ಇಲಾಖೆಯ ಉಳಿತಾಯ ಖಾತೆಯಲ್ಲಿ ಹಣ ತೊಡಗಿಸಿದಾಗ ₹6 ಲಕ್ಷಕ್ಕೆ ತೆರಿಗೆ ಅನ್ವಯಿಸುತ್ತದೆಯೇ? ಪ್ರಸ್ತುತ ನನ್ನ ಆದಾಯ ₹6,223. ಸಿಗುವ ಹೆಚ್ಚುವರಿ ಬಡ್ಡಿ ಸೇರಿಸಿದರೆ ನನ್ನ ಆದಾಯ ₹10,323 ಆಗಿರಲಿದೆ. ನಾನು ಮೇಲಿನ ಯೋಜನೆಯಂತೆ ಮುಂದುವರಿಯ ಬಹುದೇ? ಈ ವಿಚಾರದಲ್ಲಿ ಅನ್ವಯವಾಗುವ ತೆರಿಗೆ ಬಗ್ಗೆ ಮಾಹಿತಿ ನೀಡಿ.

ಉತ್ತರ: ಷೇರುಗಳಲ್ಲಿನ ನಿಮ್ಮ ಹೂಡಿಕೆ ದೀರ್ಘಾವಧಿ (12 ತಿಂಗಳಿಗೂ ಮೇಲ್ಪಟ್ಟು) ಹೂಡಿಕೆ. ಹೀಗಾಗಿ ಪ್ರಸ್ತುತ ಬಜೆಟ್ ಬದಲಾವಣೆಯ ನಂತರ ನೀವು ವಾರ್ಷಿಕವಾಗಿ ₹1.25 ಲಕ್ಷಕ್ಕಿಂತ ಅಧಿಕ ಲಾಭ ಗಳಿಸಿದಾಗ ಹೆಚ್ಚುವರಿ ಲಾಭದ ಮೊತ್ತಕ್ಕೆ ಶೇ 12.5ರಷ್ಟು ತೆರಿಗೆ ಅನ್ವಯವಾಗುತ್ತದೆ. ನಿಮ್ಮ ಅಸಲು ಮೊತ್ತವು ಪ್ರಶ್ನೆಯಲ್ಲಿ ತಿಳಿಸಿದಂತೆ ₹7 ಲಕ್ಷದ ಶೇ 20ರಷ್ಟಿದೆ. ಅಂದರೆ ₹1.40 ಲಕ್ಷ.

ಈ ಮೊತ್ತ ಪ್ರಸ್ತುತ ₹6 ಲಕ್ಷ ಆಗಿದ್ದರೆ ಖಂಡಿತ ಲಾಭದ ಮೇಲೆ ವಿನಾಯಿತಿ ಕಳೆದು ಉಳಿದ ಮೊತ್ತಕ್ಕೆ ದೀರ್ಘಾವಧಿ ಲಾಭದ ತೆರಿಗೆ ಇದೆ. ಆದರೆ ಈಗಿನ ಆದಾಯ, ನಿಮ್ಮ ವಯಸ್ಸು ಹಾಗೂ ಗರಿಷ್ಠ ತೆರಿಗೆ ವಿನಾಯಿತಿ ಮಿತಿ ಇತ್ಯಾದಿ ಪರಿಗಣಿಸಿ ಒಟ್ಟಾರೆ ತೆರಿಗೆ ಬರದಿರುವ ಸಾಧ್ಯತೆಯೇ ಅಧಿಕ. ನಿಮ್ಮ ನಿಖರ ಮಾಹಿತಿಯನ್ನು ಯಾವುದೇ ಸಮೀಪದ ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ ಲೆಕ್ಕ ಹಾಕಿಸಿಕೊಳ್ಳಿ.

ನೀವು ಮುಖ್ಯ ಪ್ರಶ್ನೆಯಲ್ಲಿ ಕೇಳಿರುವಂತೆ ವಿವಿಧ ಹೂಡಿಕೆಗಳಲ್ಲಿ ನಿಮ್ಮ ಹಣ ಈಗಾಗಲೇ ಇದ್ದು ಹೊಸ ಹೂಡಿಕೆಗೆ ವರ್ಗಾಯಿಸುವ ಉದ್ದೇಶ ಹೊಂದಿದ್ದೀರಿ. ಇದು ನಿಮ್ಮ ಅಗತ್ಯಕ್ಕೆ ಸಂಬಂಧಿಸಿ ನಿರ್ಧಾರವಾಗುತ್ತದೆ. ನಿಮ್ಮ ಉದ್ದೇಶ ಯಾವುದೇ ಆರ್ಥಿಕ ಅಪಾಯಗಳಿಗೆ ಈಡಾಗದೆ ಕೇವಲ ತಿಂಗಳ ಬಡ್ಡಿ ಮಾತ್ರ ಪಡೆಯುವುದಾಗಿದ್ದರೆ, ಸಂಪೂರ್ಣ ಮೊತ್ತವನ್ನು ನೀವು ಅಂದುಕೊಂಡಂತೆ ಅಂಚೆ ಯೋಜನೆಗಳಲ್ಲಿ ಹೂಡಿಕೆ ಮಾಡುವುದು ಹೆಚ್ಚು ಸಮಂಜಸ.

ಅದರ ಬದಲು ಅಷ್ಟೇ ಅವಧಿಯಲ್ಲಿ ಮಾರುಕಟ್ಟೆ ಅಪಾಯಗಳನ್ನು ಗ್ರಹಿಸಿ, ಉತ್ತಮ ಲಾಭ ಗಳಿಸುವು-ದಾಗಿದ್ದರೆ ನೀವು ಕೇವಲ ನಿಶ್ಚಿತ ಬಡ್ಡಿ ಬರುವ ಅಂಚೆ ಇಲಾಖೆಯ ಹಿರಿಯ ನಾಗರಿಕರ ಠೇವಣಿಗಳಲ್ಲಿ ಮಾತ್ರವಲ್ಲದೆ ಪರ್ಯಾಯವಾಗಿ ಅದೇ ಮೊತ್ತವನ್ನು ಮ್ಯೂಚುವಲ್ ಫಂಡ್‌ಗಳಲ್ಲೂ ಪ್ರತಿ ತಿಂಗಳು ಹೂಡಿಕೆ ಮಾಡಬಹುದು. ಒಂದು ಹಂತದ ಹೂಡಿಕೆ ಮಾಡಿದ ತರುವಾಯ ಆ ಸಂಚಿತ ಹೂಡಿಕೆಯನ್ನು ಲಾಭ ಸಹಿತ ಪ್ರತಿ ತಿಂಗಳ ನಿಗದಿತ ದಿನಾಂಕದಂದು ಕಂತಿನಲ್ಲಿ ಹಿಂಪಡೆಯಬಹುದು.

ಉದಾಹರಣೆಗೆ ಸತತ ತಿಂಗಳಿಗೆ ₹10 ಸಾವಿರದಂತೆ ಮುಂದಿನ 3 ವರ್ಷ ಹೂಡಿಕೆ ಮಾಡಿ ತದನಂತರ ಅಸಲು ಲಾಭ ಸೇರಿ ವೃದ್ಧಿಯಾದ ಮೊತ್ತ ಶೂನ್ಯ ಆಗುವ ತನಕ ನಗದೀಕರಿಸುವ ಅವಕಾಶ ಇದೆ. ಈ ಮೊತ್ತವನ್ನು ಉತ್ತಮವಾದ ಐದು ಪ್ರತ್ಯೇಕ ಈಕ್ವಿಟಿ ಫಂಡ್‌ಗಳಲ್ಲಿ ಹೂಡಿಕೆ ಮಾಡಿ. ಹೂಡಬಹುದಾದ ಮೊತ್ತವನ್ನು ನೀವೇ ನಿಮ್ಮ ಅನುಕೂಲಕ್ಕೆ ಸರಿಹೊಂದುವಂತೆ ನಿರ್ಧರಿಸಿ ದೀರ್ಘಾವಧಿ-ಯಲ್ಲಿ ನಿರಂತರ ಲಾಭಗಳಿಸಬಹುದು.

ಎಂ. ದೊಡ್ಡಸಿದ್ದಯ್ಯ, ಮೈಸೂರು.

- **ಪ್ರಶ್ನೆ: ನಾನು ನಿವೃತ್ತಿ ಹೊಂದಿದ್ದು, ನನಗೆ 79 ವರ್ಷ. ಆರ್ಥಿಕ ವರ್ಷ 2023-24ರ ಸಾಲಿಗೆ ಸಂಬಂಧಿಸಿ ನನ್ನ ಆದಾಯ ಈ ರೀತಿ ಇದೆ. ನಿವೃತ್ತಿ ವೇತನ ₹5.24 ಲಕ್ಷ, ಬ್ಯಾಂಕ್ ಠೇವಣಿ ಮೇಲಿನ ಬಡ್ಡಿ ₹3.70 ಲಕ್ಷ, ಎನ್‌ಎಸ್‌ಸಿ ಬಡ್ಡಿ ₹1.30 ಲಕ್ಷ, ವ್ಯವಸಾಯದಿಂದ ಖರ್ಚು ಕಳೆದು ಬಂದ ಆದಾಯ ₹3.22 ಲಕ್ಷ, ಷೇರು ಡಿವಿಡೆಂಡ್ ಇತ್ಯಾದಿಗಳಿಂದ ₹680. ಹೀಗೆ ಒಟ್ಟಾರೆ ₹13.46 ಲಕ್ಷ ಆದಾಯವಿದೆ. ಹೂಡಿಕೆಯಾಗಿ ₹1.50 ಲಕ್ಷ ಎನ್‌ಎಸ್‌ಸಿಯಲ್ಲಿ ಠೇವಣಿ ಮಾಡಿರುತ್ತೇನೆ. ಈ ಮೊತ್ತಕ್ಕೆ ಟಿಡಿಎಸ್ ಆಗಿರುವುದಿಲ್ಲ. ಮೇಲ್ಕಂಡ ಆದಾಯಕ್ಕೆ ತೆರಿಗೆ ಹೇಗೆ ಅನ್ವಯವಾಗುತ್ತದೆ ಎಂಬುದನ್ನು ತಿಳಿಯಬೇಕಿತ್ತು. ವ್ಯವಸಾಯದಿಂದ ಬಂದ ಆದಾಯಕ್ಕೆ ತೆರಿಗೆ ಇಲ್ಲ ಎಂಬುದನ್ನು ನಾನು ಕೇಳಿರುತ್ತೇನೆ. ಈ ಮೊತ್ತಕ್ಕೆ ಏನಾದರೂ ಮಿತಿ ಇದೆಯೇ ಹಾಗೂ ಇದಕ್ಕೆ ತೆರಿಗೆ ಕಟ್ಟಬೇಕಾಗುತ್ತದೆಯೇ? ನಾನು ಯಾವ ತೆರಿಗೆ ಪದ್ಧತಿ ಆಯ್ಕೆ ಮಾಡಿಕೊಳ್ಳಬೇಕು?**

ಉತ್ತರ: ಆದಾಯ ತೆರಿಗೆ ನಿಯಮದಡಿ ಕೃಷಿಯಿಂದ ಬಂದ ಆದಾಯಕ್ಕೆ ತೆರಿಗೆ ಇಲ್ಲ ಎಂಬುದನ್ನು ಆದಾಯ ತೆರಿಗೆಯ ಸೆಕ್ಷನ್ 10(1) ಅಡಿ ಉಲ್ಲೇಖಿಸಲಾಗಿದೆ. ಆದರೆ, ಈ ಆದಾಯ ಇರುವವರು ಇತರೆ ಆದಾಯವನ್ನೂ ಹೊಂದಿದ್ದಾಗ, ಪಾವತಿಸಬೇಕಾದ ತೆರಿಗೆ ಲೆಕ್ಕ ಹಾಕಲು ಕೃಷಿಯೇತರ ಆದಾಯಗಳೊಡನೆ ಕೃಷಿ ಆದಾಯ ಸಹಿತವಾಗಿ ಹಾಗೂ ಕೇವಲ ಕೃಷಿ ಆದಾಯದೊಡನೆ ಗರಿಷ್ಠ ಆದಾಯ ವಿನಾಯಿತಿ ಮೊತ್ತ ಸೇರಿಸಿ ಪ್ರತ್ಯೇಕವಾಗಿ ತೆರಿಗೆ ಲೆಕ್ಕ ಹಾಕಬೇಕಾಗಿರುತ್ತದೆ. ಇವುಗಳ ನಡುವಣ ವ್ಯತ್ಯಾಸವನ್ನಷ್ಟೇ ತೆರಿಗೆಗೊಳಪಡಿಸಲಾಗುತ್ತದೆ.

ವರ್ಷದಲ್ಲಿ ₹5,000ಕ್ಕಿಂತ ಅಧಿಕ ಕೃಷಿ ಆದಾಯ ಇದ್ದಾಗ ಈ ವಿಧಾನ ಅನುಸರಿಸಬೇಕಾಗುತ್ತದೆ. ಈ ಮೊತ್ತಕ್ಕಿಂತ ಅಧಿಕ ಕೃಷಿ ಆದಾಯ ಇದ್ದಾಗ ತೆರಿಗೆ ನಿಯಮಗಳ ಅನ್ವಯ ಅದನ್ನು ರಿಟರ್ನ್ಸ್‌ಗಳಲ್ಲಿ ಉಲ್ಲೇಖಿಸಬೇಕಿದೆ.

ನೀವು ನೀಡಿರುವ ಮಾಹಿತಿಯಂತೆ ಈಗಾಗಲೇ ಆರ್ಥಿಕ ವರ್ಷ 2023-24ರ ಆದಾಯಕ್ಕೆ ಸಂಬಂಧಿಸಿ ಐಟಿಆರ್ ಸಲ್ಲಿಸುವ ಉದ್ದೇಶ ಹೊಂದಿ ಈ ವಿಚಾರವಾಗಿ ಪ್ರಶ್ನೆ ಕೇಳಿರುತ್ತೀರಿ ಎಂದು ಊಹಿಸಲಾಗಿದೆ. ಒಂದು ವೇಳೆ ನೀವು ಐಟಿಆರ್ ಸಲ್ಲಿಸದೆ ಇದ್ದರೆ ಈ ಕೂಡಲೇ ಸಲ್ಲಿಸಿ. ತೆರಿಗೆ ಅಲ್ಲದೆ ಹೆಚ್ಚುವರಿ ಶುಲ್ಕ ₹5 ಸಾವಿರ ಪಾವತಿಸಿ ತಡವಾಗಿಯಾದರೂ ರಿಟರ್ನ್ಸ್ ಸಲ್ಲಿಸಲು ಡಿಸೆಂಬರ್ 31ರ ತನಕ ಅವಕಾಶವಿದೆ. ತೆರಿಗೆ ಈ ಹಿಂದೆ ಕಡಿತ ಆಗದಿದ್ದರೆ ಎಲ್ಲಾ ಮೊತ್ತವನ್ನು ರಿಟರ್ನ್ಸ್ ಸಲ್ಲಿಸುವಾಗ ಪಾವತಿ ಮಾಡಬೇಕಾಗುತ್ತದೆ. ನಿಮ್ಮ ರಿಟರ್ನ್ಸ್ ಸಲ್ಲಿಸಲು ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ. ❖

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ದೇಶದ ಜಿಡಿಪಿಗೆ ಶೇ 30ರಷ್ಟು ಪಾಲು ನೀಡಿಕೆ

ದಕ್ಷಿಣ ರಾಜ್ಯಗಳ ಕೊಡುಗೆ ಅಧಿಕ

ನವದೆಹಲಿ (ಪಿಟಿಐ): ತೊಂಬತ್ತರ ದಶಕದ ಆರ್ಥಿಕ ಉದಾರೀಕರಣದ ಬಳಿಕ ದೇಶದ ಜಿಡಿಪಿಗೆ ದಕ್ಷಿಣ ಭಾರತದ ರಾಜ್ಯಗಳು ನೀಡುತ್ತಿರುವ ಕೊಡುಗೆಯ ಪಾಲು ಹೆಚ್ಚಿದೆ ಎಂದು ಪ್ರಧಾನ ಮಂತ್ರಿಯ ಆರ್ಥಿಕ ಸಲಹಾ ಮಂಡಳಿ (ಇಎಸಿ-ಪಿಎಂ) ಪ್ರಕಟಿಸಿರುವ ಲೇಖನದಲ್ಲಿ ಪ್ರಸ್ತಾಪಿಸಲಾಗಿದೆ.

ಸಮಿತಿಯ ಸದಸ್ಯ ಸಂಜೀವ್ ಸನ್ಯಾಲ್ ಅವರು, 'ಭಾರತೀಯ ರಾಜ್ಯಗಳ ಸಾಪೇಕ್ಷ ಆರ್ಥಿಕ ಸಾಧನೆ: 1960–61ರಿಂದ 2023–24' ಎಂಬ ಶೀರ್ಷಿಕೆಯಡಿ ಈ ಲೇಖನ ಬರೆದಿದ್ದಾರೆ.

ಇದರಲ್ಲಿ ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ಕೇರಳ ಮತ್ತು ತಮಿಳುನಾಡಿನ ಸಾಧನೆ ಬಗ್ಗೆ ಪ್ರಸ್ತಾಪಿಸಲಾಗಿದೆ. 2023–24ನೇ ಆರ್ಥಿಕ ವರ್ಷದಲ್ಲಿ ಈ ರಾಜ್ಯಗಳು ದೇಶದ ಜಿಡಿಪಿಯಲ್ಲಿ ಶೇ 30ರಷ್ಟು ಪಾಲು ಹೊಂದಿವೆ ಎಂದು ಉಲ್ಲೇಖಿಸಲಾಗಿದೆ.

1991ಕ್ಕೂ ಮೊದಲ ಈ ರಾಜ್ಯಗಳ ಕೊಡುಗೆ ತೀರಾ ಕಡಿಮೆ ಇತ್ತು. ಆರ್ಥಿಕ ಉದಾರೀಕರಣದ ಬಳಿಕ ಉತ್ತಮ ಸಾಮರ್ಥ್ಯ ತೋರುವಲ್ಲಿ ಮುಂಚೂಣಿಯಲ್ಲಿವೆ. ಇವುಗಳ ತಲಾ ಆದಾಯ ಕೂಡ ದೇಶದ ಸರಾಸರಿಗಿಂತ ಹೆಚ್ಚಿದೆ ಎಂದು ವಿವರಿಸಲಾಗಿದೆ.

ದೆಹಲಿ ಮತ್ತು ಹರಿಯಾಣ ಕೂಡ ಅತಿಹೆಚ್ಚು ತಲಾ ಆದಾಯ ಹೊಂದಿವೆ. ದೆಹಲಿಯು ಇಡೀ ದೇಶದಲ್ಲಿ ಅತಿಹೆಚ್ಚು ತಲಾ ಆದಾಯ ಹೊಂದಿರುವ ಕೀರ್ತಿಗೆ ಭಾಜನವಾಗಿದೆ ಎಂದು ತಿಳಿಸಲಾಗಿದೆ.

ಪಶ್ಚಿಮ ಬಂಗಾಳ ಸಾಧನೆ ನೀರಸ

ಕಳೆದ ದಶಕಗಳಿಗೆ ಹೋಲಿಸಿದರೆ ಪಶ್ಚಿಮ ಬಂಗಾಳದ ಆರ್ಥಿಕ ಪ್ರಗತಿಯ ಸಾಧನೆ ನೀರಸವಾಗಿದೆ. ಪಶ್ಚಿಮ ಬಂಗಾಳ ಹೊರತು ಪಡಿಸಿದರೆ ಸಮುದ್ರ ತೀರ ಪ್ರದೇಶ ಹೊಂದಿರುವ ಇತರೆ ರಾಜ್ಯಗಳು ಆರ್ಥಿಕವಾಗಿ ಮೇಲುಗೈ ಸಾಧಿಸಿವೆ ಎಂದು ಲೇಖನದಲ್ಲಿ ವಿವರಿಸಲಾಗಿದೆ.

1960–61ರಲ್ಲಿ ದೇಶದ ಜಿಡಿಪಿಗೆ ಪಶ್ಚಿಮ ಬಂಗಾಳದ ಕೊಡುಗೆ ಶೇ 10.5ರಷ್ಟಿತ್ತು. 2023–24ನೇ ಆರ್ಥಿಕ ವರ್ಷದಲ್ಲಿ ಶೇ 5.6ರಷ್ಟು ಕೊಡುಗೆ ನೀಡಿದೆ ಎಂದು ತಿಳಿಸಿದೆ.

1960–61ರಲ್ಲಿ ಪಶ್ಚಿಮ ಬಂಗಾಳದ ತಲಾ ಆದಾಯವು ರಾಷ್ಟ್ರೀಯ ಸರಾಸರಿಗಿಂತ ಶೇ 127.5ರಷ್ಟು ಹೆಚ್ಚಿತ್ತು. ಇದೇ ಬೆಳವಣಿಗೆ ಕಾಯ್ದುಕೊಳ್ಳಲು ವಿಫಲವಾಗಿದೆ. 2023–24ರಲ್ಲಿ ತಲಾ ಆದಾಯವು ಶೇ 83.7ರಷ್ಟು ಕುಸಿದಿದೆ. ರಾಜಸ್ಥಾನ, ಒಡಿಶಾಕ್ಕಿಂತಲೂ ಕಡಿಮೆಯಿದೆ ಎಂದು ವಿವರಿಸಲಾಗಿದೆ.

226 ಮಂದಿ ಸಾವು: 77 ಮಂದಿ ನಾಪತ್ತೆ; ಸಂಕಷ್ಟದಲ್ಲಿ 6.31 ಲಕ್ಷ ಜನ

'ಯಾಗಿ' ಚಂಡಮಾರುತಕ್ಕೆ ಮ್ಯಾನ್ಮಾರ್ ತತ್ತರ

ಬ್ಯಾಂಕಾಕ್ (ಎಪಿ): ಕಳೆದ ವಾರ ಬೀಸಿದ 'ಯಾಗಿ' ಚಂಡಮಾರುತದಿಂದಾಗಿ ಮ್ಯಾನ್ಮಾರ್‌ನಲ್ಲಿ ಸಂಭವಿಸಿದ ಭೂಕುಸಿತ, ಪ್ರವಾಹ ಮತ್ತು ಮಳೆಯಿಂದಾಗಿ ಸುಮಾರು 226 ಮಂದಿ ಮೃತಪಟ್ಟು, 77 ಮಂದಿ ನಾಪತ್ತೆಯಾಗಿದ್ದಾರೆ.

ಇದರಿಂದಾಗಿ ಆಗ್ನೇಯ ಏಷ್ಯಾದಲ್ಲಿ ಈ ಚಂಡಮಾರುತಕ್ಕೆ ಬಲಿಯಾದವರ ಸಂಖ್ಯೆ 500ಕ್ಕೆ ತಲುಪಿದೆ ಎಂದು ಅಂದಾಜಿಸಲಾಗಿದೆ.

ಚಂಡಮಾರುತದಿಂದ ತತ್ತರಿಸಿದ್ದ ಕೆಲವು ಪ್ರದೇಶಗಳಲ್ಲಿ ಸಂಪರ್ಕ ವ್ಯವಸ್ಥೆ ಸ್ಥಗಿತಗೊಂಡಿದೆ. ಸಂವಹನ ಸಾಧ್ಯವಾಗಿಲ್ಲದ ಕಾರಣ ಸಾವಿಗೀಡಾದವರ ಸಂಖ್ಯೆ ಬಗ್ಗೆ ಖಚಿತ ಮಾಹಿತಿ ದೊರೆತಿಲ್ಲ. ದೇಶದ ಹಲವೆಡೆ ಈಗಲೂ ಪ್ರವಾಹ ಪರಿಸ್ಥಿತಿ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮ್ಯಾನ್ಮಾರ್‌ನಲ್ಲಿ 1.60 ಲಕ್ಷಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದೆ. 438 ಆಶ್ರಯ ಕೇಂದ್ರಗಳನ್ನು ತೆರೆಯಲಾಗಿದೆ ಎಂದು ಸ್ಥಳೀಯ ಮಾಧ್ಯಮ ವರದಿ ಮಾಡಿದೆ.

'ಯಾಗಿ' ಚಂಡಮಾರುತವು ಮೊದಲಿಗೆ ವಿಯೆಟ್ನಾಂ, ಉತ್ತರ ಥಾಯ್ಲೆಂಡ್ ಮತ್ತು ಲಾವೋಸ್ ಮೇಲೆ ಬೀಸಿತು. ವಿಯೆಟ್ನಾಂನಲ್ಲಿ 300 ಜನರು, ಥಾಯ್ಲೆಂಡ್‌ನಲ್ಲಿ 42 ಮತ್ತು ಲಾವೋಸ್‌ನಲ್ಲಿ ನಾಲ್ವರು ಮೃತಪಟ್ಟಿದ್ದಾರೆ ಎಂದು ಆಗ್ನೇಯ ಏಷ್ಯಾ ರಾಷ್ಟ್ರಗಳ ಒಕ್ಕೂಟದ (ಎಎಸ್‌ಇಎಎನ್) ಮಾನವೀಯ ನೆರವುಗಳ ಸಹಯೋಗ ಕೇಂದ್ರ ಮಾಹಿತಿ ನೀಡಿದೆ. ಇದೇ ವೇಳೆ, ಫಿಲಿಪ್ಪೀನ್ಸ್‌ನಲ್ಲಿ 21 ಜನರು ಮೃತಪಟ್ಟು, ಇನ್ನೂ 26 ಜನರು ಕಾಣೆಯಾಗಿದ್ದಾರೆ ಎಂದೂ ಹೇಳಿದೆ.



ಮ್ಯಾನ್ಮಾರ್‌ನ ಕರೆನ್ನಿ ರಾಜ್ಯದಲ್ಲಿನ ಫಾಯಾರ್‌ಫ್ಯು ಗ್ರಾಮದಲ್ಲಿ ಗದ್ದೆಗಳು ಸಂಪೂರ್ಣ ಜಲಾವೃತಗೊಂಡಿದ್ದು, ರೈತರು ಭತ್ತವನ್ನು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಿದರು – ಎಎಫ್‌ಪಿ ಚಿತ್ರ

ಮ್ಯಾನ್ಮಾರ್‌ನಲ್ಲಿ 6.31 ಲಕ್ಷ ಜನರ ಜೀವನದ ಮೇಲೆ ಚಂಡಮಾರುತ ದುಷ್ಪರಿಣಾಮ ಉಂಟುಮಾಡಿದೆ. ಮ್ಯಾನ್ಮಾರ್‌ನಲ್ಲಿ ನಡೆಯುತ್ತಿರುವ ಮಿಲಿಟರಿ ಸಂಘರ್ಷ ಮತ್ತು ಇತರ ಕಾರಣಗಳಿಂದಾಗಿ ಸೆಪ್ಟೆಂಬರ್ ಆರಂಭದಲ್ಲಿ 34 ಲಕ್ಷ ಜನರನ್ನು ಸ್ಥಳಾಂತರಿಸಲಾಗಿದೆ ಎಂದು ವಿಶ್ವಸಂಸ್ಥೆ ತಿಳಿಸಿದೆ.

ಯಾನ್ಮಾರ್‌ನಲ್ಲಿ 1.30 ಲಕ್ಷ ಪ್ರಾಣಿಗಳು ಸಾವಿಗೀಡಾಗಿದ್ದು, 2.59 ಸಾವಿರ ಹೆಕ್ಟೇರ್ ಪ್ರದೇಶದಲ್ಲಿನ ಬೆಳೆಗೆ ಹಾನಿಯಾಗಿದೆ. ಪ್ರವಾಹ ಸಂತ್ರಸ್ತರಿಗೆ ಆಹಾರ, ಕುಡಿಯುವ ನೀರು, ಔಷಧ, ಬಟ್ಟೆ ಅಗತ್ಯವಿದೆ ಎಂದು ತಿಳಿಸಿದೆ.

ಭಾರತದ ನೆರವು

ಚಂಡಮಾರುತದ ಅಡ್ಡಪರಿಣಾಮ-ಗಳಿಂದ ತತ್ತರಿಸಿರುವ ಮ್ಯಾನ್ಮಾರ್‌ಗೆ ಭಾರತವು 32 ಟನ್ ನೆರವು ಸಾಮಗ್ರಿಗಳನ್ನು ಸೇನಾ ಸರಕು ಸಾಗಣೆ ವಿಮಾನದ ಮೂಲಕ ಮಂಗಳವಾರ ಕಳಿಸಿದೆ. ಭಾನುವಾರವಷ್ಟೇ 10 ಟನ್ ನೆರವು ಸಾಮಗ್ರಿಯನ್ನು ಭಾರತ ರವಾನಿಸಿತ್ತು.

ಚಂಡಮಾರುತದಿಂದ ಸಂಕಷ್ಟಕ್ಕೀಡಾಗಿರುವ ಆಗ್ನೇಯ ಏಷ್ಯಾಕ್ಕೆ ನೆರವು ನೀಡುವ ನಿಟ್ಟಿನಲ್ಲಿ ಎರಡು ದಿನಗಳ ಹಿಂದಷ್ಟೇ ಕೇಂದ್ರ ಸರ್ಕಾರವು 'ಆಪರೇಷನ್ ಸದ್ಭಾವ್' ಎಂಬ ಹೆಸರಿನ ಕಾರ್ಯಾಚರಣೆಗೆ ಚಾಲನೆ ನೀಡಿತ್ತು. ಆ ಕಾರ್ಯಾಚರಣೆ ಅಡಿ ನೆರವು ಸಾಮಗ್ರಿ ರವಾನೆ ಮಾಡಿದೆ. ಚಂಡಮಾರುತದಿಂದ ತತ್ತರಿಸಿರುವ ಇನ್ನೆರಡು ದೇಶಗಳಾದ ವಿಯೆಟ್ನಾಂ ಮತ್ತು ಲಾವೋಸ್‌ಗೆ ಈಗಾಗಲೇ ಭಾರತವು ನೆರವು ಸಾಮಗ್ರಿ ರವಾನಿಸಿದೆ.

ರಷ್ಯಾ ಸರ್ಕಾರದ ಮಾಧ್ಯಮ ಸಂಸ್ಥೆಗಳನ್ನು ನಿಷೇಧಿಸಿದ ಮೆಟಾ

ಲಂಡನ್(ಎಪಿ): ರಷ್ಯಾ ಸರ್ಕಾರ ಒಡೆತನದ ರಾಸಿಯಾ ಸೀಗಾದ್ನಾ, ಆರ್‌ಟಿ ಹಾಗೂ ಸಂಬಂಧಪಟ್ಟ ಇತರೆ ಮಾಧ್ಯಮ ಸಂಸ್ಥೆಗಳನ್ನು ಮೆಟಾ ನಿಷೇಧಿಸಿದೆ.

ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ವಾಟ್ಸ್‌ಆ್ಯಪ್ ಮತ್ತು ಇನ್‌ಸ್ಟಾಗ್ರಾಮ್ ಮಾತೃಸಂಸ್ಥೆಯಾದ ಮೆಟಾ, ಪ್ರಕಟಣೆಯಲ್ಲಿ ಈ ಮಾಹಿತಿ ನೀಡಿದೆ. 'ವಿದೇಶಿ ಹಸ್ತಕ್ಷೇಪದಂತಹ ಚಟುವಟಿಕೆ ಕಂಡುಬಂದ ಕಾರಣ, ರಷ್ಯಾ ಸರ್ಕಾರ ಒಡೆತನದ ಈ ಎಲ್ಲ ಮಾಧ್ಯಮ ಸಂಸ್ಥೆಗಳನ್ನು ಜಾಗತಿಕವಾಗಿ ಸಂಸ್ಥೆಯ ಎಲ್ಲಾ ಆ್ಯಪ್‌ಗಳಿಂದ ನಿಷೇಧಿಸಲಾಗಿದೆ' ಎಂದು ಮೆಟಾ ತಿಳಿಸಿದೆ.

ಮೆಟಾ ನಡೆಗೆ ರಷ್ಯಾ ಸರ್ಕಾರ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. 'ರಷ್ಯಾ ಮಾಧ್ಯಮಗಳನ್ನಷ್ಟೆ ಗುರಿಯಾಗಿಸಿ ಕೈಗೊಂಡ ಇಂತಹ ಕ್ರಮವನ್ನು ಒಪ್ಪಲು ಸಾಧ್ಯವಿಲ್ಲ. ಇಂತಹ ಕ್ರಮಗಳಿಂದ ಮೆಟಾ ತನ್ನ ಹೆಸರಿಗೆ ತಾನೇ ಕಳಂಕ ತಂದು ಕೊಳ್ಳುತ್ತಿದೆ' ಎಂದು ಸರ್ಕಾರದ ವಕ್ತಾರ ಡಿಮಿಟ್ರಿ ಪೆಸ್ಕೋವ್ ಟೀಕಿಸಿದ್ದಾರೆ.

ಇತ್ತೀಚೆಗೆ, ಆರ್‌ಟಿ ವಿರುದ್ಧ ಅಮೆರಿಕ ಸರ್ಕಾರ ಹೊಸದಾಗಿ ನಿರ್ಬಂಧ ಹೇರಿದ ಬೆನ್ನಲ್ಲೇ, ಮೆಟಾ ಸಂಸ್ಥೆಯೂ ಈ ಕ್ರಮ ಕೈಗೊಂಡಿದೆ.

ಜಮ್ಮು ಮತ್ತು ಕಾಶ್ಮೀರ: ವಿಧಾನಸಭಾ ಚುನಾವಣೆಯ ಮೊದಲ ಹಂತದ ಪ್ರಚಾರಕ್ಕೆ ತೆರೆ

ಭಾರಿ ಪ್ರಮಾಣದ ಮತದಾನದ ನಿರೀಕ್ಷೆ

• ಜುಲ್ಫಿಕರ್ ಮಜೀದ್

ಶ್ರೀನಗರ: ಜಮ್ಮು ಮತ್ತು ಕಾಶ್ಮೀರ ವಿಧಾನಸಭಾ ಚುನಾವಣೆಯ ಮೊದಲ ಹಂತದ ಪ್ರಚಾರಕ್ಕೆ ತೆರೆಬಿದ್ದಿದೆ. ಮೊದಲ ಹಂತದಲ್ಲಿ 24 ಕ್ಷೇತ್ರಗಳಲ್ಲಿ ಬುಧವಾರ ಮತದಾನ ನಡೆಯಲಿದೆ. ಅರ್ಹ ಮತದಾರರು ಭಾರಿ ಸಂಖ್ಯೆಯಲ್ಲಿ ತಮ್ಮ ಹಕ್ಕು ಚಲಾಯಿಸುವ ನಿರೀಕ್ಷೆ ಇದೆ.

ಒಂದು ದಶಕದ ಅವಧಿಯಲ್ಲಿ ಇಲ್ಲಿ ವಿಧಾನಸಭಾ ಚುನಾವಣೆ ನಡೆಯುತ್ತಿರುವುದು ಇದೇ ಮೊದಲು. ಕಣಿವೆ ರಾಜ್ಯಕ್ಕೆ ಸಂವಿಧಾನದ 370ನೆಯ ವಿಧಿಯ ಅಡಿಯಲ್ಲಿ ನೀಡಿದ್ದ ವಿಶೇಷ ಸ್ಥಾನಮಾನವನ್ನು ಕೇಂದ್ರ ಸರ್ಕಾರವು 2019ರ ಆಗಸ್ಟ್‌ನಲ್ಲಿ ಹಿಂಪಡೆದು, ರಾಜ್ಯವನ್ನು ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜಿಸಿದ ನಂತರದಲ್ಲಿ ನಡೆಯುತ್ತಿರುವ ಮೊದಲ ಚುನಾವಣೆ ಇದು.

ಚುನಾವಣೆಯು ಇಲ್ಲಿನ ಜನರಿಗೆ ತಮ್ಮದೇ ಆದ ವಿಧಾನಸಭೆ ಹಾಗೂ ಸರ್ಕಾರವನ್ನು ಹೊಂದಲು ಅನುವು ಮಾಡಿಕೊಡಲಿದೆ. ಹಲವು ವಾರಗಳಿಂದ ಇಲ್ಲಿ ದೊಡ್ಡ ಸಂಖ್ಯೆಯಲ್ಲಿ ರಾಜಕೀಯ ರ‍್ಯಾಲಿಗಳು ನಡೆದಿವೆ, ರಾಜಕೀಯ ಪಕ್ಷಗಳು ಹಲವು ಭರವಸೆಗಳನ್ನು ನೀಡಿವೆ.

ಪ್ರತಿ ಅಭ್ಯರ್ಥಿಯೂ ಮತದಾರರ ಗಮನ ಸೆಳೆಯಲು ಯತ್ನ ನಡೆಸಿದ್ದು, ಇಲ್ಲಿನ ಬೀದಿಗಳು ಚುನಾವಣೆಗೆ ಸಂಬಂಧಿಸಿದ ಬ್ಯಾನರ್, ಧ್ವಜಗಳು, ಪೋಸ್ಟರ್‌ಗಳಿಂದ ಅಲಂಕೃತಗೊಂಡಿವೆ. ಮತದಾನದ ದಿನ ಹತ್ತಿರವಾಗುತ್ತಿದ್ದಂತೆಲ್ಲ ಪ್ರಚಾರ ಅಭಿಯಾನದ ತೀವ್ರತೆಯೂ ಹೆಚ್ಚಾಯಿತು. ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ತಮ್ಮ ಪಕ್ಷದ ಅಭ್ಯರ್ಥಿಗಳ ಪರವಾಗಿ ಮತ ಯಾಚಿಸಿದರು.



ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯ ಮೊದಲ ಹಂತದ ಮತದಾನದ ಹಿಂದಿನ ದಿನವಾದ ಮಂಗಳವಾರ ಮತಗಟ್ಟೆ ಅಧಿಕಾರಿಗಳು ತಮಗೆ ವಹಿಸಲಾಗಿರುವ ಮತಗಟ್ಟೆಗಳಿಗೆ ತೆರಳಿದರು. –ಪಿಟಿಐ ಚಿತ್ರ

ಮುಖ್ಯಾಂಶಗಳು

- ಚುನಾವಣಾ ಕಣದಲ್ಲಿರುವ ಪ್ರತ್ಯೇಕತಾವಾದಿ ನಾಯಕರು
- ಸ್ಥಾನ ಹೆಚ್ಚಿಸಿಕೊಳ್ಳಲು ಬಿಜೆಪಿ ಹವಣಿಕೆ

ಪ್ರಜಾ ಮತ
ಜನತಂತ್ರದ ಹಬ್ಬ

ಚುನಾವಣೆಗಳಿಗೆ ಮಾನ್ಯತೆಯೇ ಇಲ್ಲ ಎಂದು ಈ ಹಿಂದೆ ಭಾವಿಸಿದ್ದ ಕೆಲವು ಪ್ರತ್ಯೇಕತಾವಾದಿ ನಾಯಕರು ಕೂಡ ಪಕ್ಷೇತರ ಅಭ್ಯರ್ಥಿಗಳಾಗಿ ಕಣದಲ್ಲಿ ಇದ್ದಾರೆ. ಸ್ಥಳೀಯರ ಪೈಕಿ ಹಲವರು ಈ ಚುನಾವಣೆಯನ್ನು ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಲು ಇರುವ ಅವಕಾಶ ಎಂದಷ್ಟೇ ಭಾವಿಸಿಲ್ಲ. ಬದಲಿಗೆ, 2019ರಲ್ಲಿ ತರಲಾದ ಬದಲಾವಣೆಗಳಿಗೆ ಪ್ರತಿರೋಧ ದಾಖಲಿಸುವ ಒಂದು ಅವಕಾಶ ಎಂದೂ ಅವರು ಭಾವಿಸಿದ್ದಾರೆ.

'ಅಧಿಕಾರಶಾಹಿಯ ಆಡಳಿತದಿಂದ ನಮಗೆ ಬಿಡುಗಡೆ ಬೇಕಾಗಿದೆ' ಎಂದು ಅಂಗಡಿಯೊಂದರ ಮಾಲೀಕ ಆರಿಫ್ ಅಹಮದ್ ಹೇಳುತ್ತಾರೆ. 'ಬಿಜೆಪಿ ನೇತೃತ್ವದ ಸರ್ಕಾರದ ಪ್ರಜಾತಂತ್ರ ವಿರೋಧಿ ಕ್ರಮವನ್ನು ನಾವು ಮತದಾನದ ಮೂಲಕ ವಿರೋಧಿಸಲು ಬಯಸುತ್ತೇವೆ' ಎಂದು ಅವರು ಹೇಳಿದರು.

ಇದೇ ಬಗೆಯ ಅಭಿಪ್ರಾಯವನ್ನು ಗೃಹಿಣಿ ಶಬೀನಾ ವ್ಯಕ್ತಪಡಿಸಿದರು. 'ಕಳೆದ 30 ವರ್ಷಗಳಲ್ಲಿ ನಮ್ಮ ಕುಟುಂಬದಲ್ಲಿ ಯಾರೂ ಮತ ಚಲಾಯಿಸಿಲ್ಲ. ಆದರೆ ಈ ಬಾರಿ, ಕಾಶ್ಮೀರಿಗಳ ಸಾಂವಿಧಾನಿಕ ಹಕ್ಕನ್ನು ಕಿತ್ತುಕೊಂಡ ಕೇಂದ್ರದ ವಿರುದ್ಧ ಪ್ರತಿಭಟಿಸಲು ನಾವೆಲ್ಲ ಮತ ಚಲಾಯಿಸಲಿದ್ದೇವೆ' ಎಂದರು.

ಜಮ್ಮು ಮತ್ತು ಕಾಶ್ಮೀರಕ್ಕೆ ಮತ್ತೆ ರಾಜ್ಯದ ಸ್ಥಾನಮಾನ ಕೊಡಿಸುವುದಾಗಿ ಭರವಸೆ ನೀಡಿರುವ ಕಾಂಗ್ರೆಸ್ ಪಕ್ಷವು ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಜೊತೆ ಮೈತ್ರಿ ಮಾಡಿಕೊಂಡಿದ್ದು, ಮುಂದೆ ಇಲ್ಲಿ ಸರ್ಕಾರ ರಚಿಸಲು ಈ ಮೈತ್ರಿಕೂಟವು ಪ್ರಬಲ ಪೈಪೋಟಿ ನೀಡುತ್ತಿದೆ.

ಜಮ್ಮು ಪ್ರದೇಶದಲ್ಲಿ ತನ್ನ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳಲು ಬಿಜೆಪಿ ಉದ್ದೇಶಿಸಿದೆ. 2014ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯು ಈ ಭಾಗದ 37 ಸ್ಥಾನಗಳ ಪೈಕಿ 25 ಸ್ಥಾನಗಳಲ್ಲಿ ಗೆದ್ದಿತ್ತು. ಬಹುಮತ ಪಡೆಯಲು ಬಿಜೆಪಿಯು ಸಣ್ಣ ಪಕ್ಷಗಳಾದ ಪೀಪಲ್ಸ್ ಕಾನ್ಫರೆನ್ಸ್, ಅಪ್ನಿ ಪಾರ್ಟಿಯನ್ನು ನೆಚ್ಚಿಕೊಳ್ಳಬೇಕಾಗಬಹುದು.

ಎರಡನೆಯ ಹಾಗೂ ಮೂರನೆಯ ಹಂತದ ಮತದಾನವು ಸೆಪ್ಟೆಂಬರ್ 25 ಮತ್ತು ಅಕ್ಟೋಬರ್ 1ರಂದು ನಡೆಯಲಿದೆ. ಮತ ಎಣಿಕೆಯು ಅಕ್ಟೋಬರ್ 8ಕ್ಕೆ ನಿಗದಿಯಾಗಿದೆ.

ನವರಾತ್ರಿಗೆ ಮುನ್ನ ಸೀಟು ಹಂಚಿಕೆ ಸೂತ್ರ?

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರ ವಿಧಾನಸಭೆ ಚುನಾವಣೆಗೆ 'ಮಹಾಯುತಿ' ಮೈತ್ರಿಕೂಟದ ಪಕ್ಷಗಳ ನಡುವಿನ ಸೀಟು ಹಂಚಿಕೆ ಚರ್ಚೆ ಅಂತಿಮ ಹಂತವನ್ನು ತಲುಪಿದೆ. ಶೀಘ್ರ ತೀರ್ಮಾನ ಹೊರಬೀಳಲಿದೆ ಎಂದು ಮೈತ್ರಿಕೂಟದ ಮುಖಂಡರು ತಿಳಿಸಿದ್ದಾರೆ.

ರಾಜ್ಯ ವಿಧಾನಸಭೆಯ ಸದಸ್ಯ ಬಲ 288. ಸೀಟು ಹಂಚಿಕೆ ಕುರಿತು ಮೈತ್ರಿಕೂಟದ ಪಕ್ಷಗಳಾದ ಬಿಜೆಪಿ, ಶಿವಸೇನೆ (ಶಿಂದೆ ಬಣ), ಎನ್‌ಸಿಪಿ (ಅಜಿತ್ ಬಣ) ಮಧ್ಯೆ ಮಾತುಕತೆ ನಡೆದಿವೆ.

ಗಣೇಶೋತ್ಸವ ಆಚರಣೆಗಳು ಮುಗಿದ ಬಳಿಕ ಮುಖ್ಯಮಂತ್ರಿ ಏಕನಾಥ ಶಿಂದೆ, ಉಪ ಮುಖ್ಯಮಂತ್ರಿಗಳಾದ ದೇವೇಂದ್ರ ಫಡಣವೀಸ್ ಮತ್ತು ಅಜಿತ್ ಪವಾರ್ ಚರ್ಚಿಸಲಿದ್ದು, ಸರ್ವಸಮ್ಮತ ಸೂತ್ರವನ್ನು ಅಂತಿಮಪಡಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

'ಈಚೆಗೆ ಲೋಕಸಭೆ ಚುನಾವಣೆಯಲ್ಲಿ ಮೈತ್ರಿಕೂಟಕ್ಕೆ ರಾಜ್ಯದಲ್ಲಿ ಹಿನ್ನಡೆ ಆಗಿತ್ತು. ಮತ್ತೆ ಅಂತಹ ಸಂದರ್ಭ ಎದುರಿಸಲಾಗದು. ಮಹಾರಾಷ್ಟ್ರವು ಬಿಜೆಪಿಗೆ ಮುಖ್ಯವಾಗಿದ್ದು, ಇಲ್ಲಿನ ಗೆಲುವು ಎನ್‌ಡಿಎ ಉತ್ಸಾಹವನ್ನು ಇಮ್ಮಡಿಗೊಳಿಸಲಿದೆ' ಎಂದು ಅಭಿಪ್ರಾಯಪಟ್ಟರು.

ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ, ಮುಖಂಡ ಅಮಿತ್ ಶಾ ಅವರು ಕಳೆದ ವಾರ ರಾಜ್ಯಕ್ಕೆ ಭೇಟಿ ನೀಡಿದ್ದಾಗ ಚರ್ಚೆ ವೇಗ ಪಡೆದಿತ್ತು. ರಾಜ್ಯ ಬಿಜೆಪಿಯು ಕನಿಷ್ಠ 170 ಕ್ಷೇತ್ರಗಳಿಗೆ ಪಟ್ಟು ಹಿಡಿದಿದೆ. ಕನಿಷ್ಠ 150 ಆದರೂ ಸಿಗಬಹುದು ಎನ್ನುವುದು ಪಕ್ಷದ ನಿರೀಕ್ಷೆ.

ಇನ್ನೊಂದೆಡೆ, ಶಿವಸೇನಾವು 100ರಿಂದ 110 ಕ್ಷೇತ್ರ ಹಾಗೂ ಎನ್‌ಸಿಪಿ (ಅಜಿತ್ ಬಣ) 70 ರಿಂದ 80 ಕ್ಷೇತ್ರಗಳಿಗೆ ಬೇಡಿಕೆ ಇಟ್ಟಿವೆ. 'ಮೆರಿಟ್ ಮತ್ತು ಗೆಲ್ಲುವ ಸಾಧ್ಯತೆ ಆಧರಿಸಿ ಹಂಚಿಕೆ ಸೂತ್ರ ಅಂತಿಮವಾಗಲಿದೆ. ಸದ್ಯ, ಶಿವಸೇನಾ ಮತ್ತು ಎನ್‌ಸಿಪಿ ಕೇಳಿರುವಷ್ಟು ಸೀಟುಗಳನ್ನು ಬಿಟ್ಟುಕೊಡುವ ಸ್ಥಿತಿಯಲ್ಲಿ ಬಿಜೆಪಿ ಇಲ್ಲ' ಎಂದು ಮುಖಂಡರೊಬ್ಬರು ಸ್ಪಷ್ಟಪಡಿಸಿದರು.

> **ವಿಧಾನಸಭೆಯ ಒಟ್ಟು ಕ್ಷೇತ್ರಗಳ ಪೈಕಿ ಶೇ 70–80ರಷ್ಟು ಕ್ಷೇತ್ರಗಳಿಗೆ ಸಂಬಂಧಿಸಿ ಮೈತ್ರಿ ಪಕ್ಷಗಳ ನಡುವೆ ಸಹಮತ ಮೂಡಿಲ್ಲ. ಒಟ್ಟಾಗಿ ನಾವು ಗೆಲ್ಲುವ ಅಭ್ಯರ್ಥಿಗಳನ್ನೇ ಕಣಕ್ಕಿಳಿಸಲಿದ್ದೇವೆ**
> **ಚಂದ್ರಶೇಖರ ಬವಂಕುಲೆ,** ರಾಜ್ಯ ಬಿಜೆಪಿ ಅಧ್ಯಕ್ಷ

ವಿಧಾನಸಭೆಯಲ್ಲಿ ಸರಳ ಬಹುಮತಕ್ಕಾಗಿ 145 ಸ್ಥಾನಗಳು ಅಗತ್ಯ. 2019ರಲ್ಲಿ ಆದಂತೆ ಕೊನೆ ಗಳಿಗೆಯಲ್ಲಿ ಎದುರಾಗುವ ಸಮಸ್ಯೆ ತಪ್ಪಿಸಲು ಆದಷ್ಟೂ 145ಕ್ಕೆ ಹತ್ತಿರವಾಗುವಷ್ಟು ಕ್ಷೇತ್ರಗಳಲ್ಲಿ ಗೆಲ್ಲುವುದು ಬಿಜೆಪಿಯ ಗುರಿ ಎಂದು ಮುಖಂಡರೊಬ್ಬರು ಪ್ರತಿಪಾದಿಸಿದರು.

ಸೀಟು ಹಂಚಿಕೆ ಪ್ರಕ್ರಿಯೆ 8–10 ದಿನದಲ್ಲಿ ಪೂರ್ಣಗೊಳ್ಳಲಿದೆ ಎಂದು ಮುಖ್ಯಮಂತ್ರಿ ಶಿಂದೆ ಈಚೆಗೆ ಮಾಧ್ಯಮ ಪ್ರತಿನಿಧಿಗಳ ಜೊತೆಗಿನ ಅನೌಪಚಾರಿಕ ಚರ್ಚೆಯ ಸಂದರ್ಭ ಹೇಳಿದ್ದರು.

ಬಿಜೆಪಿ ನೇತೃತ್ವದ 'ಮಹಾಯುತಿ'ಯಲ್ಲಿ ಮೂರು ಪ್ರಮುಖ ಪಕ್ಷಗಳಲ್ಲದೆ ರಿಪಬ್ಲಿಕ್ ಪಾರ್ಟಿ ಆಫ್ ಇಂಡಿಯಾ, ಬಹುಜನ ವಿಕಾಸ ಅಘಾಡಿ, ಪ್ರಹಾರ್ ಜನಶಕ್ತಿ ಪಾರ್ಟಿ, ಪೀಪಲ್ಸ್ ರಿಪಬ್ಲಿಕನ್ ಪಾರ್ಟಿ, ರಾಷ್ಟ್ರೀಯ ಸಮಾಜ್ ಪಾರ್ಟಿ ಕೂಡಾ ಇವೆ.

'ಈ ಎಲ್ಲ ಪಕ್ಷಗಳಿಗೂ ನಾವು ಅವಕಾಶ ಕೊಡಬೇಕಾಗುತ್ತದೆ. ಬಹುತೇಕ ಈ ಪಕ್ಷಗಳು ಬಿಜೆಪಿ ಕೋಟಾದಲ್ಲಿಯೇ ಪಾಲು ಪಡೆಯಲಿವೆ' ಎನ್ನುತ್ತವೆ ಮಹಾಯುತಿ ಮೂಲಗಳು.

'ವಿಶೇಷ ಸ್ಥಾನ ರದ್ದತಿ ಸಂಸತ್ತಿನ ನಿರ್ಣಯ, ದೇವರದ್ದಲ್ಲ'



ಒಮರ್ ಅಬ್ದುಲ್ಲಾ

ಬಡಗಾಮ್ (ಜಮ್ಮು–ಕಾಶ್ಮೀರ) (ಪಿಟಿಐ): ಸಂವಿಧಾನದ 370ನೇ ವಿಧಿಯಡಿ ನೀಡಲಾಗಿದ್ದ ವಿಶೇಷ ಸ್ಥಾನಮಾನ ರದ್ದತಿಯು ಸಂಸತ್ತಿನ ನಿರ್ಣಯವೇ ಹೊರತು ದೇವರ ನಿರ್ಣಯ ಅಲ್ಲ. ಅದನ್ನು ಬದಲಾಯಿಸಬಹುದು; ಯಾವುದೂ ಅಸಾಧ್ಯವಲ್ಲ ಎಂದು ನ್ಯಾಷನಲ್ ಕಾನ್ಫರೆನ್ಸ್ ಉಪಾಧ್ಯಕ್ಷ ಒಮರ್ ಅಬ್ದುಲ್ಲಾ ಅವರು ಮಂಗಳವಾರ ಹೇಳಿದರು.

ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳನ್ನು ಒಳಗೊಂಡ ನ್ಯಾಯಪೀಠವು ರದ್ದತಿ ಪರವಾಗಿ ತೀರ್ಪು ನೀಡಿದರೆ, 7 ನ್ಯಾಯಮೂರ್ತಿಗಳನ್ನು ಒಳಗೊಂಡ ನ್ಯಾಯಪೀಠವು ನಾಳೆ ಮತ್ತೊಮ್ಮೆ ವಿಷಯದ ಪರವಾಗಿ ತೀರ್ಪು ನೀಡಲು ಸಾಧ್ಯವಿಲ್ಲ ಎಂದಿದೆ.

'370ನೇ ವಿಧಿ ಎಂಬುದು ಇತಿಹಾಸ. ಅದು ಎಂದಿಗೂ ಭಾರತ ಸಂವಿಧಾನದ ಭಾಗವಾಗುವುದಿಲ್ಲ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಹೇಳಿಕೆಗೆ ತಿರುಗೇಟು ನೀಡಿದರು.

ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದಕ ಕೃತ್ಯಗಳು ಹೆಚ್ಚುತ್ತಿರುವುದಕ್ಕೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವೇ ಹೊಣೆ ಎಂದು ಆರೋಪಿಸಿದರು.

'6 ವರ್ಷಗಳಿಂದ ಜಮ್ಮು ಮತ್ತು ಕಾಶ್ಮೀರವು ಕೇಂದ್ರದ ನಿಯಂತ್ರಣದಲ್ಲಿದೆ. ಇಲ್ಲಿ ಮತ್ತೆ ಭಯೋತ್ಪಾದಕ ಕೃತ್ಯಗಳು ನಡೆಯುತ್ತಿವೆ, ಯಾತ್ರಾರ್ಥಿಗಳು ಮತ್ತು ಸೈನಿಕರ ಮೇಲೆ ದಾಳಿಗಳು ನಡೆಯುತ್ತಿವೆ, ಅಧಿಕಾರಿಗಳು ಸೈನಿಕರ ಹತ್ಯೆಗಳಾಗುತ್ತಿವೆ ಎಂದರೆ ಅದಕ್ಕೆ ಯಾರು ಹೊಣೆ' ಎಂದು ಪ್ರಶ್ನಿಸಿದರು. ಜನರು ಎನ್‌ಸಿ–ಕಾಂಗ್ರೆಸ್ ಮೈತ್ರಿಗೆ ಸ್ಪಷ್ಟ ಬಹುಮತ ನೀಡಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಅಬ್ದುಲ್ಲಾ ಬಡಗಾಮ್ ಮತ್ತು ಗಾಂದರಬಲ್ ಕ್ಷೇತ್ರದಿಂದ ಸ್ಪರ್ಧಿಸಿದ್ದಾರೆ.

ಚೀತಾ ಯೋಜನೆಗೆ 2 ವರ್ಷ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ 'ಚೀತಾ ಯೋಜನೆ'ಗೆ ಮಂಗಳವಾರಕ್ಕೆ ಎರಡು ವರ್ಷಗಳು ಪೂರ್ಣಗೊಂಡಿವೆ. ಈ ಅವಧಿಯಲ್ಲಿ ಚೀತಾ ಮರಿಗಳ ಜನನವಾಗಿದೆ, ಕೆಲವು ಮೃತಪಟ್ಟಿವೆ, ಯೋಜನೆ ಬಗ್ಗೆ ಟೀಕೆ–ಪ್ರಶಂಸೆಯೂ ವ್ಯಕ್ತವಾಗಿವೆ.

ಈ ಮಧ್ಯೆ ಆಫ್ರಿಕಾದಿಂದ ಮಧ್ಯಪ್ರದೇಶದ ಗಾಂಧಿಸಾಗರ ವನ್ಯಜೀವಿ ಅಭಯಾರಣ್ಯಕ್ಕೆ ಮತ್ತೊಂದು ಬ್ಯಾಚ್ ಚೀತಾಗಳನ್ನು ತಂದು ಬಿಡಲು ಅಧಿಕಾರಿಗಳು ಸಿದ್ಧತೆ ನಡೆಸಿದ್ದಾರೆ. ಗುಜರಾತ್‌ನ ಬನ್ನಿ ಹುಲ್ಲುಗಾವಲಿನಲ್ಲಿ ತಳಿ ಸಂವರ್ಧಕ ಕೇಂದ್ರ ಸ್ಥಾಪಿಸುವ ಯೋಜನೆಯನ್ನೂ ಚುರುಕುಗೊಳಿಸಿದ್ದಾರೆ. ಚೀತಾ ಆವಾಸಸ್ಥಾನವನ್ನು ವಿಸ್ತರಿಸುವ ಯೋಜನೆಯನ್ನೂ ಹಾಕಿಕೊಂಡಿದ್ದಾರೆ.

ಎರಡು ವರ್ಷದಲ್ಲಿ ಚೀತಾಗಳು 13 ಮರಿಗಳಿಗೆ ಭಾರತದ ನೆಲದಲ್ಲಿ ಜನ್ಮ ನೀಡಿವೆ. ಮರಿಗಳ ಜನನವು ಅಧಿಕಾರಿಗಳ ಉತ್ಸಾಹವನ್ನು ಹೆಚ್ಚಿಸಿದೆ.

ನಮೀಬಿಯಾದಿಂದ ತಂದಿದ್ದ 'ಆಶಾ' ಹೆಸರಿನ ಚೀತಾವು ಜನವರಿಯಲ್ಲಿ ಮೂರು ಮರಿಗಳಿಗೆ ಜನ್ಮ ನೀಡಿದೆ. 'ಜ್ವಾಲಾ' ಕಳೆದ ವರ್ಷ ನಾಲ್ಕು ಮತ್ತು ಈ ವರ್ಷ ಮೂರು ಮರಿಗಳಿಗೆ ಜನ್ಮ ನೀಡಿದೆ. ಈ ಪೈಕಿ ಮೂರು ಮೃತಪಟ್ಟಿವೆ. ದಕ್ಷಿಣ ಆಫ್ರಿಕಾದಿಂದ ತಂದಿದ್ದ 'ಗಾಮಿನಿ' ಎಂಬ ಚೀತಾ ಮಾರ್ಚ್‌ನಲ್ಲಿ ಆರು ಮರಿಗಳಿಗೆ ಜನ್ಮ ನೀಡಿದೆ. ನಮೀಬಿಯಾದಿಂದ ತಂದಿದ್ದ 'ಶೌರ್ಯ' ಮತ್ತು 'ಪವನ್' ಹೆಸರಿನ ಗಂಡು ಚೀತಾಗಳು ಮೃತಪಟ್ಟಿವೆ.

ಸಿ.ಎಂ ಪಟ್ಟಕ್ಕೆ ಆತಿಶಿ ಹೆಜ್ಜೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಾಮಾಜಿಕ ಹೋರಾಟಗಾರ ಅಣ್ಣಾ ಹಜಾರೆ ನೇತೃತ್ವದ ಭ್ರಷ್ಟಾಚಾರ ವಿರೋಧಿ ಹೋರಾಟದ ಬಗ್ಗೆ ಆತಿಶಿ ಸಂದೇಹ ಹೊಂದಿದ್ದರು. ಏಕೈಕ ಕಾರ್ಯಸೂಚಿ ಹೊಂದಿರುವ ಈ ಹೋರಾಟ ಬಹುಕಾಲ ಬಾಳುವುದಿಲ್ಲ ಎಂದು ಭಾವಿಸಿದ್ದರು. ಈ ಚಳವಳಿಯ ಕೂಸು ಅರವಿಂದ ಕೇಜ್ರಿವಾಲ್. ಅವರ ರಾಜಕೀಯ ಪ್ರವೇಶಕ್ಕೆ ರಹದಾರಿಯಾಗಿದ್ದು ಈ ಚಳವಳಿಯೇ. ಭ್ರಷ್ಟಾಚಾರದ ವಿರುದ್ಧ ಹೋರಾಟದಿಂದ ಮೈತಳೆದ ಪಕ್ಷದ ಮೂಲಕ ಆತಿಶಿ ಅವರು ಉನ್ನತ ಹುದ್ದೆಗೆ ಏರಿದ್ದಾರೆ.

ಕೇಜ್ರಿವಾಲ್ ಸಂಪುಟದಲ್ಲಿದ್ದ ಏಕೈಕ ಮಹಿಳೆ ಆತಿಶಿ. ಉಪಮುಖ್ಯಮಂತ್ರಿಯಾಗಿದ್ದ ಮನೀಷ್ ಸಿಸೋಡಿಯಾ ಅಬಕಾರಿ ನೀತಿ ಹಗರಣದಲ್ಲಿ ಜೈಲುಪಾಲು ಆದಾಗ 2023ರ ಮಾರ್ಚ್‌ನಲ್ಲಿ ಅತಿಶಿ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲಾಗಿತ್ತು. ಹಣಕಾಸು, ಶಿಕ್ಷಣ, ಲೋಕೋಪಯೋಗಿ, ನೀರಾವರಿ, ಇಂಧನ ಸೇರಿದಂತೆ 14 ಖಾತೆಗಳ ಹೊಣೆಯನ್ನು ಅವರಿಗೆ ವಹಿಸಲಾಗಿತ್ತು. ಸಚಿವರಾದ ಕೆಲವೇ ತಿಂಗಳಲ್ಲಿ ಅವರು ತಮ್ಮ ಛಾಪು ಮೂಡಿಸಿದ್ದರು.

ಈ ವರ್ಷದ ಮಾರ್ಚ್ 21ರಂದು ಕೇಜ್ರಿವಾಲ್ ಅವರನ್ನು ಇ.ಡಿ ಬಂಧಿಸಿತ್ತು. ಪಕ್ಷದ ಪ್ರಮುಖ ನಾಯಕರ ಬಂಧನದಿಂದ ಸರ್ಕಾರ ಹಾಗೂ ಪಕ್ಷದಲ್ಲಿ ನಿರ್ವಾತ ಸೃಷ್ಟಿಯಾಗಿತ್ತು. ಆಗ ಸಮರ್ಥವಾಗಿ ಹೊಣೆ ನಿಭಾಯಿಸಿದ್ದವರು ಅತಿಶಿ ಹಾಗೂ ಆರೋಗ್ಯ ಸಚಿವ ಸೌರಭ್ ಭಾರದ್ವಾಜ್. 'ಸಾರಥಿ' ಇಲ್ಲದ ಸಮಯದಲ್ಲಿ ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಲೋಪ ಉಂಟಾಗದಂತೆ ಎಚ್ಚರ ವಹಿಸಿದ್ದರು. ಜೂನ್ ತಿಂಗಳಲ್ಲಿ ರಾಜಧಾನಿಯಲ್ಲಿ ಜಲ ಬಿಕ್ಕಟ್ಟು ಉಂಟಾದ ಸಂದರ್ಭದಲ್ಲಿ ನೀರು ಬಿಡುಗಡೆಗೆ ಹರಿಯಾಣ ಸರ್ಕಾರ ತಕರಾರು ಎತ್ತಿತ್ತು. ಆಗ ಹರಿಯಾಣ ಸರ್ಕಾರದ ವಿರುದ್ಧ ಆತಿಶಿ ಉಪವಾಸ ಸತ್ಯಾಗ್ರಹ ನಡೆಸಿದ್ದರು. ಕೇಂದ್ರ ಸರ್ಕಾರ ಹಾಗೂ ಲೆಫ್ಟಿನೆಂಟ್ ಗವರ್ನರ್ ಜತೆಗೆ ಸಂಘರ್ಷಕ್ಕೆ ಇಳಿದಿದ್ದರು.

ಕೇಜ್ರಿವಾಲ್ ಬಂಧನದ ಬಳಿಕ ಆತಿಶಿ ಮುಖ್ಯಮಂತ್ರಿಯಾಗಲಿದ್ದಾರೆ ಎಂಬ ಸುದ್ದಿ ಹಬ್ಬಿತ್ತು. ಈಗ, ತಮಗೆ ನಿಷ್ಠರಾಗಿರುವ ಅತಿಶಿ ಅವರನ್ನೇ ಐದು ತಿಂಗಳ ಅವಧಿಗೆ 'ಉತ್ತರಾಧಿಕಾರಿ'ಯಾಗಿ ನಿಯೋಜಿಸಿದ್ದಾರೆ.

ಆತಿಶಿ ಅವರು ಎಡಪಂಥೀಯ ಶಿಕ್ಷಣತಜ್ಞ ದಂಪತಿ ವಿಜಯ್ ಸಿಂಗ್ ಮತ್ತು ತ್ರಿಪ್ತಾ ವಾಹಿ ಅವರ ಪುತ್ರಿ. ದೆಹಲಿ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದ ಅವರು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಉನ್ನತ ವ್ಯಾಸಂಗ ಮಾಡಿದ್ದಾರೆ.

ಹಳ್ಳಿ ವಾಸದಿಂದ ಜೀವನಾನುಭವ: ಗ್ರಾಮೀಣ ಜನರ ಬದುಕಿನ ಸಂಕಷ್ಟಗಳನ್ನು ಅರಿಯುವ ಉದ್ದೇಶದಿಂದ ಆತಿಶಿ ಅವರು ಮಧ್ಯಪ್ರದೇಶದ ಒಂದು ಸಣ್ಣ ಹಳ್ಳಿಯಲ್ಲಿ ಏಳು ವರ್ಷ ಕಳೆದರು. 20ರ ಹರೆಯದ ಅವರು ಅಲ್ಲಿ ಸಾವಯವ ಕೃಷಿ ಮತ್ತು ಪ್ರಗತಿಶೀಲ ಶಿಕ್ಷಣ ವ್ಯವಸ್ಥೆಗಳಲ್ಲಿ ತೊಡಗಿಸಿಕೊಂಡರು. ಹಿಂದುಳಿದವರ ಶ್ರೇಯೋಭಿವೃದ್ಧಿಗೆ ಕೈಗೊಳ್ಳಬೇಕಾದ ಉಪಕ್ರಮಗಳ ಬಗ್ಗೆಅವರಿಗೆ ತಳ ಮಟ್ಟದ ಅರಿವು ಮೂಡಿದ್ದು ಅಲ್ಲೇ. 30ರ ಹರೆಯದಲ್ಲಿ ಅವರು ತಮ್ಮ ಚಟುವಟಿಕೆಯನ್ನು ರಾಜಕೀಯ ಹಾಗೂ ನೀತಿಗೆ ವಿಸ್ತರಿಸಿದರು. ಅವರು ಇಲ್ಲಿಯವರೆಗೆ ಕಲಿತಿದ್ದನ್ನು ಪ್ರಯೋಗಿಸಲು ಆರಂಭಿಸಿದರು. 42ನೇ ವಯಸ್ಸಿನಲ್ಲಿ ಸರ್ಕಾರದ ಭಾಗವಾದರು. 16 ತಿಂಗಳಲ್ಲೇ ದೊಡ್ಡ ಹುದ್ದೆಗೆ ಬಡ್ತಿ ಪಡೆದರು. ಆತಿಶಿ ಅವರನ್ನು ಎಎಪಿಗೆ ಕರೆತಂದಿದ್ದು ಹಿರಿಯ ವಕೀಲ ಪ್ರಶಾಂತ್ ಭೂಷಣ್ ಹಾಗೂ ಎಎಪಿಯ ಹಿರಿಯ ನಾಯಕರ ಜತೆಗಿನ ಒಡನಾಟ ಹಾಗೂ ಸಂವಾದ. ಅಣ್ಣಾ ಹಜಾರೆ ಅವರ ಚಳವಳಿಯ ಕುರಿತು ಅವರ ಮನದಲ್ಲಿದ್ದ ಅನುಮಾನವನ್ನು ದೂರ ಮಾಡಿದವರು ಈ ಹಿರಿಯ ನಾಯಕರು.

ಆತಿಶಿ ಅವರ ಉಪನಾಮ 'ಮರ್ಲೆನಾ'. ಮಾರ್ಕ್ ಹಾಗೂ ಲೆನಿನ್ ಹೆಸರಿನ ಸಂಯೋಜನೆಯ ಈ ಉಪನಾಮವನ್ನು ಪೋಷಕರು ಆಯ್ಕೆ ಮಾಡಿದ್ದರು. ಅತಿಶಿ ವಿದೇಶಿ ಹಾಗೂ ಕ್ರೈಸ್ತರು ಎಂದು ಬಿಜೆಪಿ 'ಪಿಸು ಮಾತಿನ ಅಭಿಯಾನ' ನಡೆಸಿತ್ತು. ತನ್ನ ಕೆಲಸವೇ ಈ ಆರೋಪಗಳಿಗೆ ಉತ್ತರ ಕೊಡುತ್ತದೆ ಎಂಬ ಕಾರಣಕ್ಕೆ ಉಪನಾಮ ಬಳಸುವುದನ್ನು ಅವರು ಕೈಬಿಟ್ಟರು.

ಕೇಂದ್ರ ಸರ್ಕಾರಕ್ಕೆ 100 ದಿನ ತುಂಬಿದ ಸಂದರ್ಭದಲ್ಲಿ ಸಚಿವ ಅಮಿತ್ ಶಾ ಹೇಳಿಕೆ

'ಈ ಅವಧಿಯಲ್ಲೇ ಒಂದು ರಾಷ್ಟ್ರ, ಒಂದು ಚುನಾವಣೆ'


ನವದೆಹಲಿ (ಪಿಟಿಐ): ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು 'ಒಂದು ರಾಷ್ಟ್ರ, ಒಂದು ಚುನಾವಣೆ' ವ್ಯವಸ್ಥೆಯನ್ನು ತನ್ನ ಈಗಿನ ಅವಧಿಯಲ್ಲೇ ಜಾರಿಗೆ ತರಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

ನರೇಂದ್ರ ಮೋದಿ ನೇತೃತ್ವದಲ್ಲಿ ಸತತ ಮೂರನೆಯ ಅವಧಿಗೆ ರಚನೆಯಾಗಿರುವ ಸರ್ಕಾರವು 100 ದಿನಗಳನ್ನು ಪೂರೈಸಿರುವ ಸಂದರ್ಭದಲ್ಲಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಶಾ ಅವರು ಈ ಮಾತು ಹೇಳಿದರು. ಶಾ ಅವರ ಜೊತೆ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಅವರೂ ಪತ್ರಿಕಾಗೋಷ್ಠಿಯಲ್ಲಿ ಇದ್ದರು.

ಆಗಸ್ಟ್ 15ರಂದು ಮಾಡಿದ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಪ್ರಧಾನಿ ಮೋದಿ ಅವರೂ 'ಒಂದು ರಾಷ್ಟ್ರ, ಒಂದು ಚುನಾವಣೆ' ಬಗ್ಗೆ ಪ್ರಸ್ತಾಪಿಸಿದ್ದರು. ದೇಶದಲ್ಲಿ ಪದೇ ಪದೇ ಚುನಾವಣೆಗಳು ಎದುರಾಗುವುದರಿಂದ ಅಭಿವೃದ್ಧಿಗೆ ಅಡ್ಡಿ ಉಂಟಾಗುತ್ತದೆ ಎಂದು ಅವರು ಹೇಳಿದ್ದರು.

ಲೋಕಸಭಾ ಚುನಾವಣೆಗೆ ಬಿಜೆಪಿ ಸಿದ್ಧಪಡಿಸಿದ ಪ್ರಣಾಳಿಕೆಯಲ್ಲಿ, 'ಒಂದು ದೇಶ, ಒಂದು ಚುನಾವಣೆ' ವ್ಯವಸ್ಥೆಯನ್ನು ಜಾರಿಗೆ ತರುವ ಭರವಸೆ ಇದೆ.

ವಕ್ಫ್ ಮಸೂದೆ: ವಕ್ಫ್ (ತಿದ್ದುಪಡಿ) ಮಸೂದೆಯು ವಕ್ಫ್ ಆಸ್ತಿಗಳನ್ನು ರಕ್ಷಿಸುವ ಉದ್ದೇಶ ಹೊಂದಿದೆ,



ಕೇಂದ್ರ ಸಚಿವರಾದ ಅಶ್ವಿನಿ ವೈಷ್ಣವ್ ಮತ್ತು ಅಮಿತ್ ಶಾ –ಪಿಟಿಐ ಚಿತ್ರ

ಈ ಮಸೂದೆಯು ಮುಂಬರುವ ದಿನಗಳಲ್ಲಿ ಸಂಸತ್ತಿನ ಅಂಗೀಕಾರ ಪಡೆಯಬಹುದು ಎಂದು ಶಾ ಭರವಸೆ ವ್ಯಕ್ತಪಡಿಸಿದರು.

ಈ ಮಸೂದೆಯು ವಕ್ಫ್ ಆಸ್ತಿಗಳ ದುರ್ಬಳಕೆಯನ್ನು ತಡೆಯುವ ಉದ್ದೇಶವನ್ನು ಕೂಡ ಹೊಂದಿದೆ ಎಂದರು. ವಕ್ಫ್ (ತಿದ್ದುಪಡಿ) ಮಸೂದೆಯನ್ನು ಈಗ ಸಂಸತ್ತಿನ ಜಂಟಿ ಸಮಿತಿಗೆ (ಜೆಪಿಸಿ) ಪರಿಶೀಲನೆಗಾಗಿ ಒಪ್ಪಿಸಲಾಗಿದೆ.

ಕುಕಿ, ಮೈತೇಯಿ ಪ್ರತಿನಿಧಿಗಳ ಜೊತೆ ಮಾತುಕತೆ

ಮಣಿಪುರದಲ್ಲಿ ಶಾಂತಿ ನೆಲಸುವಂತೆ ಮಾಡಲು ಮೈತೇಯಿ ಹಾಗೂ ಕುಕಿ ಸಮುದಾಯಗಳ ಪ್ರತಿನಿಧಿಗಳ ಜೊತೆ ಕೇಂದ್ರ ಸರ್ಕಾರ ಮಾತುಕತೆ ನಡೆಸುತ್ತಿದೆ. ಮ್ಯಾನ್ಮಾರ್ ಕಡೆಯಿಂದ ನುಸುಳುಕೋರರು ಭಾರತ ಪ್ರವೇಶಿಸುವುದನ್ನು ತಡೆಯಲು ಬೇಲಿ ನಿರ್ಮಾಣ ಕಾರ್ಯ ಶುರುವಾಗಿದೆ ಎಂದು ಅಮಿತ್ ಶಾ ತಿಳಿಸಿದರು.

ಕಳೆದ ವಾರ ಮೂರು ದಿನ ಹಿಂಸಾಚಾರ ಸಂಭವಿಸಿದ್ದನ್ನು ಹೊರತುಪಡಿಸಿದರೆ ಮೂರು ತಿಂಗಳಲ್ಲಿ ಅಲ್ಲಿ ದೊಡ್ಡ ಘಟನೆಗಳೇನೂ ವರದಿಯಾಗಿಲ್ಲ ಎಂದರು.

ಸಿಬ್ಬಂದಿ ನಿಯೋಜನೆಯನ್ನು ಕೇಂದ್ರ ಸರ್ಕಾರ ಪೂರ್ಣಗೊಳಿಸಿದೆ ಎಂದು ತಿಳಿಸಿದರು. '30 ಕಿ.ಮೀ. ಉದ್ದಕ್ಕೆ ಬೇಲಿ ನಿರ್ಮಾಣ ಪೂರ್ಣಗೊಂಡಿದೆ. ಒಟ್ಟು 1,500 ಕಿ.ಮೀ. ಉದ್ದಕ್ಕೆ ಬೇಲಿ ನಿರ್ಮಿಸಲು ಕೇಂದ್ರವು ಹಣಕಾಸಿನ ಅನುಮೋದನೆ ನೀಡಿದೆ' ಎಂದು ಹೇಳಿದರು.

'ಗಣತಿ ಕುರಿತ ಘೋಷಣೆ ಶೀಘ್ರ'

ದೇಶದಲ್ಲಿ ಜನಗಣತಿ ನಡೆಸುವ ಸಂಬಂಧ ಶೀಘ್ರದಲ್ಲಿಯೇ ಘೋಷಣೆ ಮಾಡಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಮಂಗಳವಾರ ತಿಳಿಸಿದರು.

ಕೋವಿಡ್–19 ಸಾಂಕ್ರಾಮಿಕದ ಕಾರಣದಿಂದಾಗಿ 2020ರಲ್ಲಿ ಜನಗಣತಿ ನಡೆದಿರಲಿಲ್ಲ. ಪ್ರತಿ ಹತ್ತು ವರ್ಷಳಿಗೊಮ್ಮೆ ಗಣತಿ ನಡೆಯಬೇಕು.

ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಸತತ ಮೂರನೆಯ ಅವಧಿಗೆ ಅಧಿಕಾರಕ್ಕೆ ಬಂದು 100 ದಿನಗಳು ತುಂಬಿದ ಹಿನ್ನೆಲೆಯಲ್ಲಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಶಾ ಅವರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ಈ ವಿಷಯ ತಿಳಿಸಿದರು.

ಜಾತಿ ಗಣತಿ ಕುರಿತ ಪ್ರಶ್ನೆಗೆ ಉತ್ತರವಾಗಿ ಶಾ ಅವರು 'ಗಣತಿಯ ಘೋಷಣೆ ಮಾಡುವಾಗ ನಾವು ಎಲ್ಲ ಸಂಗತಿಗಳನ್ನೂ ಸಾರ್ವಜನಿಕರಿಗೆ ತಿಳಿಸುತ್ತೇವೆ' ಎಂದರು.

'ರೈಲು ಅಪಘಾತ ತಡೆಗೆ ಕ್ರಮ'

ರೈಲು ಅಪಘಾತ ಸಂಭವಿಸುವಂತೆ ಮಾಡುವ ಯಾವುದೇ ಪಿತೂರಿ ಹೆಚ್ಚು ದಿನ ನಡೆಯುವುದಿಲ್ಲ ಎಂದು ಅಮಿತ್ ಶಾ ಎಚ್ಚರಿಸಿದರು. ದೇಶದ 1.10 ಲಕ್ಷ ಕಿ.ಮೀ. ರೈಲು ಜಾಲದ ರಕ್ಷಣೆಗೆ ಉಪಕ್ರಮವೊಂದನ್ನು ಕೇಂದ್ರವು ಶೀಘ್ರದಲ್ಲಿಯೇ ಅನಾವರಣಗೊಳಿಸಲಿದೆ ಎಂದರು.

ರೈಲು ಹಳಿಗಳ ಮೇಲೆ ಭಾರಿ ವಸ್ತುಗಳನ್ನು ಇರಿಸಿ, ವಿಧ್ವಂಸಕ ಕೃತ್ಯ ಎಸಗಲು ನಡೆಸಿದ ಯತ್ನಗಳು ಬೆಳಕಿಗೆ ಬಂದಿರುವ ಹಿನ್ನೆಲೆಯಲ್ಲಿ ಹಾಗೂ ಹಲವು ರೈಲು ಅಪಘಾತಗಳು ಸಂಭವಿಸಿರುವ ಹಿನ್ನೆಲೆಯಲ್ಲಿ ಶಾ ಅವರು ಈ ಮಾತು ಹೇಳಿದ್ದಾರೆ.

'ರೈಲು ಅಪಘಾತಗಳಿಗೆ ಕಾರಣ ಏನು ಎಂಬ ಬಗ್ಗೆ ನಾವು ತನಿಖೆ ನಡೆಸುತ್ತೇವೆ. ಅಪಘಾತಗಳ ಹಿಂದೆ ಪಿತೂರಿ ಇತ್ತು ಎಂದಾದರೆ, ಅಂತಹ ಕೃತ್ಯಗಳು ಹೆಚ್ಚು ದಿನ ನಡೆಯುವುದಿಲ್ಲ. ಲೋಪಗಳು ಇದ್ದರೆ ಅವುಗಳನ್ನು ಸರಿಪಡಿಸಲಾಗುವುದು' ಎಂದು ಭರವಸೆ ನೀಡಿದರು.

ಕೇಜ್ರಿವಾಲ್ ಮತ್ತೆ ಸಿ.ಎಂ; ಆತಿಶಿ 'ಸಂಕಲ್ಪ'

'ಮುಖ್ಯಮಂತ್ರಿ ಸ್ಥಾನಕ್ಕೆ ಕೇಜ್ರಿವಾಲ್ ರಾಜೀನಾಮೆ ನೀಡಿರುವುದಕ್ಕೆ ಬೇಸರವಾಗಿದೆ ಹಾಗೂ ಅವರನ್ನು ಮತ್ತೆ ಮುಖ್ಯಮಂತ್ರಿ ಗಾದಿಗೆ ಏರಿಸಲು ಕೆಲಸ ಮಾಡುತ್ತೇನೆ' ಎಂದು ನಿಯೋಜಿತ ಮುಖ್ಯಮಂತ್ರಿ ಆತಿಶಿ ಹೇಳಿದರು.

ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಕೇಜ್ರಿವಾಲ್ ಮಾರ್ಗದರ್ಶನದಲ್ಲಿ ಕೆಲಸ ಮಾಡಿ ದೆಹಲಿ ಜನರ ಹಿತ ರಕ್ಷಿಸುತ್ತೇನೆ' ಎಂದು ಹೇಳಿದರು.

'ಇದು ದುಃಖದ ಸಂದರ್ಭವಾಗಿದ್ದು, ಪಕ್ಷದ ಶಾಸಕರು ನನ್ನನ್ನು ಅಭಿನಂದಿಸಬಾರದು' ಎಂದು ಅವರು ಮನವಿ ಮಾಡಿದರು.

'ಇಂತಹ ಅವಕಾಶ ಸಿಗುವುದು ಆಮ್ ಆದ್ಮಿ ಪಕ್ಷದಲ್ಲಿ ಮಾತ್ರ. ಬೇರೆ ಯಾವುದಾದರೂ ಪಕ್ಷದಲ್ಲಿದ್ದರೆ, ಚುನಾವಣೆಗೆ ಸ್ಪರ್ಧಿಸಲು ಟಿಕೆಟ್ ಸಹ ಸಿಗುತ್ತಿರಲಿಲ್ಲ' ಎಂದರು.

'ಕಳೆದ ಎರಡು ವರ್ಷಗಳಿಂದ ಕೇಜ್ರಿವಾಲ್ ವಿರುದ್ಧ ಷಡ್ಯಂತ್ರ ನಡೆಸುತ್ತಿರುವ ಬಿಜೆಪಿಯ ಕುತಂತ್ರದಿಂದ ದೆಹಲಿಗರನ್ನು ರಕ್ಷಿಸುವ ಏಕೈಕ ಉದ್ದೇಶದಿಂದ ನಾನು ಮುಖ್ಯಮಂತ್ರಿ ಆಗುತ್ತೇನೆ. ಉಚಿತ ವಿದ್ಯುತ್ ಯೋಜನೆ, ಮೊಹಲ್ಲಾ ಕ್ಲಿನಿಕ್ ಸೇರಿದಂತೆ ಕಲ್ಯಾಣ ಯೋಜನೆಗಳನ್ನು ನಿಲ್ಲಿಸಲು ಲೆಫ್ಟಿನೆಂಟ್ ಗವರ್ನರ್ ಜತೆಗೂಡಿ ಬಿಜೆಪಿ ಪಿತೂರಿ ನಡೆಸಿದೆ' ಎಂದು ಅವರು ಆರೋಪಿಸಿದರು.

ದೆಹಲಿಗೆ ಆತಿಶಿ ಸಾರಥಿ

ಒಂದನೇ ಪುಟದಿಂದ...

ಈ ವರ್ಷದ ಮಾರ್ಚ್‌ನಲ್ಲಿ ಕೇಜ್ರಿವಾಲ್ ಅವರನ್ನು ಜಾರಿ ನಿರ್ದೇಶನಾಲಯದವರು ಬಂಧಿಸಿದ ನಂತರ, ಆತಿಶಿ ಅವರು ಸರ್ಕಾರದ ಮತ್ತು ಪಕ್ಷದ ಮುಖವಾಗಿ ಹೊರಹೊಮ್ಮಿದ್ದರು.

ಆಕ್ಸ್‌ಫರ್ಡ್ ಹಳೆ ವಿದ್ಯಾರ್ಥಿನಿಯಾದ 43 ವರ್ಷದ ಆತಿಶಿ ಅವರು ಕೇಜ್ರಿವಾಲ್ ಸಚಿವ ಸಂಪುಟದಲ್ಲಿ 14 ಖಾತೆಗಳನ್ನು ಹೊಂದಿದ್ದರು. ಸ್ವಾತಂತ್ರ್ಯ ದಿನಾಚರಣೆಯಂದು ತ್ರಿವರ್ಣ ಧ್ವಜ ಹಾರಿಸಲು ಆತಿಶಿ ಅವರನ್ನು ಜೈಲಿನಲ್ಲಿದ್ದ ಕೇಜ್ರಿವಾಲ್ ಆಯ್ಕೆ ಮಾಡಿದ್ದರು. ಆದರೆ, ಲೆಫ್ಟಿನೆಂಟ್ ಗವರ್ನರ್ ಅವರು ಸಚಿವ ಕೈಲಾಶ್ ಗೆಹಲೋತ್ ಅವರಿಗೆ ಈ ಹೊಣೆ ವಹಿಸಿದ್ದರು.

ರಾಷ್ಟ್ರ ರಾಜಧಾನಿಯಲ್ಲಿ ಪಂಜಾಬಿ ಹಿಂದೂಗಳು ಗಣನೀಯ ಸಂಖ್ಯೆಯಲ್ಲಿದ್ದಾರೆ. ಆತಿಶಿ ಅವರು ರಜಪೂತ ಸಮುದಾಯದವರು. ಅವರ ಮತಗಳನ್ನು ಸೆಳೆಯುವ ಉದ್ದೇಶವು ಈ ಆಯ್ಕೆ ಹಿಂದಿದೆ. ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಮಹಿಳಾ ನಾಯಕಿಯೊಬ್ಬರ ಹೆಸರನ್ನು ಘೋಷಿಸಲು ಬಿಜೆಪಿ ಸಜ್ಜಾಗಿದೆ ಎಂಬ ವದಂತಿಗಳ ನಡುವೆಯೇ ಎಎಪಿ ಈ ನಡೆ ಇಟ್ಟಿದೆ. ಆದರೆ, ಆತಿಶಿ ಅವರು 2018ರಿಂದ ತಮ್ಮ 'ಉಪನಾಮ' ಬಳಸುತ್ತಿಲ್ಲ.

ಉತ್ತರಾಧಿಕಾರಿಯನ್ನಾಗಿ ತಮ್ಮನ್ನು ಆಯ್ಕೆ ಮಾಡಿದ್ದಕ್ಕೆ ಕೇಜ್ರಿವಾಲ್ ಅವರಿಗೆ ಧನ್ಯವಾದ ಅರ್ಪಿಸಿದರು. 'ಅವರು ನನ್ನ ಹಿರಿಯ ಸಹೋದರ, ನನ್ನ ಗುರು' ಎಂದು ಹೇಳಿಕೊಂಡರು.

ಶಾಸಕಾಂಗ ಪಕ್ಷದ ನಿರ್ಧಾರವನ್ನು ಪ್ರಕಟಿಸಿದ ಹಿರಿಯ ಸಚಿವ ಮತ್ತು ದೆಹಲಿ ಎಎಪಿ ಸಂಚಾಲಕ ಗೋಪಾಲ್ ರಾಯ್, 'ಮುಂದಿನ ವಿಧಾನಸಭೆ ಚುನಾವಣೆಯವರೆಗೆ ಆತಿಶಿ ಅವರನ್ನು ಮುಂದಿನ ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಲಾಗಿದೆ. ಬಿಜೆಪಿಯ ಅಡೆತಡೆಗಳ ನಡುವೆಯೂ ಯಾವುದೇ ಕೆಲಸ ಸ್ಥಗಿತಗೊಳ್ಳದಂತೆ ನೋಡಿಕೊಳ್ಳುವುದು ಮತ್ತು ಬಿಜೆಪಿ ವಿರುದ್ಧ ಹೋರಾಟವನ್ನು ಮುನ್ನಡೆಸುವ ಹೊಣೆಯನ್ನು ಆತಿಶಿ ಅವರಿಗೆ ವಹಿಸಲಾಗಿದೆ' ಎಂದರು.

ಹೊಸ ಸಚಿವ ಸಂಪುಟದ ಬಗ್ಗೆ ಪಕ್ಷವು ಶೀಘ್ರ ನಿರ್ಧಾರ ತೆಗೆದುಕೊಳ್ಳಲಿದೆ ಎಂದು ಹೇಳಿದರು.

ಮೂರನೇ ಮಹಿಳಾ ಮುಖ್ಯಮಂತ್ರಿ

ಆತಿಶಿ ಅವರು ದೆಹಲಿಯ ಮೂರನೇ ಮಹಿಳಾ ಮುಖ್ಯಮಂತ್ರಿಯಾಗಲಿದ್ದಾರೆ.

ಕಾಂಗ್ರೆಸ್‌ನ ಶೀಲಾ ದೀಕ್ಷಿತ್ ಅವರು 1998ರಿಂದ 2013ರ ವರೆಗೆ 15 ವರ್ಷ ಮುಖ್ಯಮಂತ್ರಿಯಾಗಿದ್ದರು. ಬಿಜೆಪಿಯ ಸುಷ್ಮಾ ಸ್ವರಾಜ್ ಅವರು ಕಿರು ಅವಧಿಗೆ (1998ರಲ್ಲಿ 52 ದಿನಗಳ ಕಾಲ) ದೆಹಲಿಯನ್ನು ಆಳಿದ್ದರು.



ಅರವಿಂದ ಕೇಜ್ರಿವಾಲ್ ಅವರ ಜೊತೆ ದೆಹಲಿಯ ನಿಯೋಜಿತ ಮುಖ್ಯಮಂತ್ರಿ ಆತಿಶಿ –ಪಿಟಿಐ ಚಿತ್ರ

ಆತಿಶಿ ನೆಪಮಾತ್ರಕ್ಕೆ ಸಿ.ಎಂ: ಸ್ವಾತಿ

ನವದೆಹಲಿ (ಪಿಟಿಐ): ದೆಹಲಿಯ ಮುಖ್ಯಮಂತ್ರಿ ಆಗಿ ಆಯ್ಕೆ ಆಗಿರುವ ಆತಿಶಿ ಡಮ್ಮಿ (ನೆಪ ಮಾತ್ರದ) ಮುಖ್ಯಮಂತ್ರಿ ಆಗಲಿದ್ದಾರೆ ಎಂದು ಎಎಪಿ ರಾಜ್ಯಸಭೆ ಸಂಸದೆ ಸ್ವಾತಿ ಮಾಲಿವಾಲ್ ವ್ಯಂಗ್ಯವಾಡಿದ್ದಾರೆ. 'ದೆಹಲಿ ಜನರಿಗೆ ಇದು ದುರದೃಷ್ಟದ ದಿವಸ. ಭಯೋತ್ಪಾದಕ ಅಫ್ಜಲ್ ಗುರು ಪರವಾಗಿ ಹೋರಾಡಿದ ಕುಟುಂಬದ ಸದಸ್ಯೆಯೊಬ್ಬರು ಇಂದು ಸಿ.ಎಂ ಆಗಿದ್ದಾರೆ' ಎಂದಿದ್ದಾರೆ.

ಬುಲ್ಡೋಜರ್‌ಗೆ 'ಸುಪ್ರೀಂ' ತಡೆ

ಒಂದನೇ ಪುಟದಿಂದ...

'ಸೆ.2ರ ಆದೇಶದ ಬಳಿಕವೂ ಬುಲ್ಡೋಜರ್ ಕಾರ್ಯಾಚರಣೆ ಮುಂದುವರಿದಿದೆ ಎಂಬ ಹೇಳಿಕೆಗಳು ಇವೆ. ಸ್ಟೀರಿಂಗ್ ಯಾರ ಬಳಿ ಇರುತ್ತದೆ ಎಂಬುದನ್ನು ಅದು ಅವಲಂಬಿಸಿದೆ. ಈ ಕುರಿತು ಮತ್ತೇನೂ ಹೇಳ ಬಯಸುವುದಿಲ್ಲ' ಎಂದು ಪೀಠ ಅಭಿಪ್ರಾಯಪಟ್ಟಿತು.

'ಈ ವೈಭವೀಕೃತ ಮತ್ತು ಗಮನ ಸೆಳೆಯುವ ಉದ್ದೇಶದ ಕಾರ್ಯಾಚರಣೆಯನ್ನು ಹೇಗೆ ತಡೆಯಬೇಕು ಎಂಬ ಬಗ್ಗೆ ಮಾರ್ಗದರ್ಶಿಸೂತ್ರಗಳನ್ನುರಚಿಸಿದ ಬಳಿಕ ನಿಮ್ಮ ಸಲಹೆ ಪಡೆಯುತ್ತೇವೆ. ಚುನಾವಣಾ ಆಯೋಗದ ಸಲಹೆಯನ್ನೂ ಕೇಳಬಹುದು' ಎಂದು ಸಾಲಿಸಿಟರ್ ಜನರಲ್ ಅವರನ್ನು ಉದ್ದೇಶಿಸಿ ಪೀಠ ಹೇಳಿತು.

ಇದಕ್ಕೂ ಮುನ್ನ ಅರ್ಜಿದಾರರನ್ನು ಪ್ರತಿನಿಧಿಸಿದ್ದ ವಕೀಲರು, ಸೆಪ್ಟೆಂಬರ್ 2ರ ನಿರ್ದೇಶನದ ನಂತರವೂ ಬುಲ್ಡೋಜರ್ ಕಾರ್ಯಾಚರಣೆ ನಡೆದಿದೆ ಎಂಬುದನ್ನು ಪೀಠದ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, 'ಆಸ್ತಿಗಳ ನೆಲಸಮ ಕಾರ್ಯಾಚರಣೆಗೆ ಸಂಬಂಧಿಸಿದಂತೆ 'ಸಂಕಥನ'ವೊಂದನ್ನು ಸೃಷ್ಟಿಸಲಾಗಿದೆ' ಎಂದು ಹೇಳಿದರು.

'ನಿರ್ದಿಷ್ಟ ಧರ್ಮದವರು ಎಂಬ ಕಾರಣದಿಂದಲೇ ಕೆಲವರ ಆಸ್ತಿಗಳನ್ನು ನೆಲಸಮ ಮಾಡಲಾಗಿದೆ' ಎಂದು ಪ್ರಶ್ನಿಸಿದ್ದ ಅರ್ಜಿಯೂ ನಿಮ್ಮ ಮುಂದಿದೆ. ನಿಯಮ ಪಾಲಿಸದೆ ನಿರ್ಮಾಣವಾದ ಕಟ್ಟಡಗಳನ್ನಷ್ಟೇ ನೆಲಸಮ ಮಾಡಲಾಗುತ್ತಿದೆ ಎಂಬುದನ್ನು ಪೀಠದ ಗಮನಕ್ಕೆ ತರುತ್ತೇನೆ' ಎಂದರು.

ಸಂಕಥನ ಸೃಷ್ಟಿಸಲಾಗಿದೆ ಎಂದು ಮೆಹ್ತಾ ಉಲ್ಲೇಖಿಸಿದಾಗ ಪೀಠವು, 'ಹೊರಗಿನ ಅಬ್ಬರವು ಪೀಠದ ಮೇಲೆ ಯಾವುದೇ ಪ್ರಭಾವ ಬೀರುವುದಿಲ್ಲ ಎಂದಷ್ಟೇ ತಿಳಿಸಲು ಬಯಸುತ್ತೇವೆ' ಎಂದು ಹೇಳಿತು.

'ಗಣೇಶ ಪೂಜೆ: ಕಾಂಗ್ರೆಸ್‌ಗೆ ಅಸಮಾಧಾನ'

ಭುವನೇಶ್ವರ (ಪಿಟಿಐ): ಗಣೇಶ ಪೂಜೆಯಲ್ಲಿ ನಾನು ಪಾಲ್ಗೊಂಡಿದ್ದಕ್ಕೆ ಕಾಂಗ್ರೆಸ್ ಮತ್ತು ಅದರ ಸುತ್ತ ಇರುವವರು ಅಸಮಾಧಾನಗೊಂಡಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಹೇಳಿದರು.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರ ನಿವಾಸದಲ್ಲಿ ಏರ್ಪಡಿಸಿದ್ದ ಗಣೇಶ ಪೂಜೆಯಲ್ಲಿ ಪಾಲ್ಗೊಂಡಿದ್ದಕ್ಕೆ ಟೀಕಿಸಿದ ವಿರೋಧ ಪಕ್ಷಗಳನ್ನು ಪರೋಕ್ಷವಾಗಿ ಉಲ್ಲೇಖಿಸಿ ಈ ಹೇಳಿಕೆ ನೀಡಿದರು.

ಭುವನೇಶ್ವರದಲ್ಲಿ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ಕರ್ನಾಟಕದಲ್ಲಿ ಇವರು ಗಣೇಶನನ್ನೂ ಕಂಬಿಗಳ ಹಿಂದೆ ಇಟ್ಟಿದ್ದಾರೆ' ಎಂದು ವಾಗ್ದಾಳಿ ನಡೆಸಿದರು.

'ಗಣೇಶ ಉತ್ಸವವು ನಮ್ಮ ದೇಶದ ಹಬ್ಬ ಮಾತ್ರ ಅಲ್ಲ, ಇದು ನಮ್ಮ ಸ್ವಾತಂತ್ರ್ಯ ಚಳವಳಿಯಲ್ಲಿಯೂ ಬಹುಮುಖ್ಯ ಪಾತ್ರ ವಹಿಸಿತ್ತು' ಎಂದು ಹೇಳಿದರು.

'ಒಡೆದು ಆಳುವ ನೀತಿ'ಯಡಿ ಭಾರತವನ್ನು ಆಳ್ವಿಕೆ ಮಾಡುತ್ತಿದ್ದ ಬ್ರಿಟಿಷರು ಗಣೇಶ ಉತ್ಸವವನ್ನು ದ್ವೇಷಿಸುತ್ತಿದ್ದರು. ಆದರೆ ಇಂದು ಅಧಿಕಾರದ ಲಾಲಸೆ ಇರುವ, ಸಮಾಜವನ್ನು ಒಡೆಯುವಲ್ಲಿ ನಿರತರಾಗಿರುವ ಜನರಿಗೂ ಗಣೇಶ ಪೂಜೆ ಸಮಸ್ಯೆಯಾಗಿದೆ. ಕಾಂಗ್ರೆಸ್ ಮತ್ತು ಅದರ ಸುತ್ತ ಇರುವವರು ಜನರು ಗಣೇಶ ಪೂಜೆಯಲ್ಲಿ ನಾನು ಪಾಲ್ಗೊಂಡಿದ್ದಕ್ಕೆ ಕೋಪಗೊಂಡಿದ್ದಾರೆ ಎಂದು ಹೇಳಿದರು.

ಸಂಧಾನಕ್ಕೆ ಬದ್ಧ: ಅಧಿಕಾರಿಗಳ ವರ್ಗ

ಒಂದನೇ ಪುಟದಿಂದ...

ಆರ್‌.ಜಿ.ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ವೈದ್ಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಮತ್ತು ಆಕೆಯ ಕೊಲೆ ವಿಚಾರವಾಗಿ ನ್ಯಾಯ ಒದಗಿಸುವಂತೆ ಒತ್ತಾಯಿಸಿ ಪ್ರತಿಭಟಿಸುತ್ತಿರುವ ವೈದ್ಯರೊಂದಿಗೆ ಸಭೆ ನಡೆಸಿದ ನಂತರ, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸೋಮವಾರ ತಡರಾತ್ರಿ ಈ ಕುರಿತು ಪ್ರಕಟಿಸಿದ್ದರು.

ಗೋಯಲ್ ಅವರನ್ನು ಪಶ್ಚಿಮ ಬಂಗಾಳ ವಿಶೇಷ ಕಾರ್ಯಪಡೆ ಎಡಿಜಿ ಮತ್ತು ಐಜಿಪಿಯಾಗಿ ವರ್ಗ ಮಾಡಲಾಗಿದೆ. ಕಾನೂನು ಮತ್ತು ಸುವ್ಯವಸ್ಥೆ ಎಡಿಜಿ ಮತ್ತು ಐಜಿಪಿಯಾಗಿ 1995ರ ಬ್ಯಾಚ್‌ನ ಐಪಿಎಸ್ ಅಧಿಕಾರಿ ಜಾವೇದ್ ಶಮೀಮ್ ಅವರನ್ನು ವರ್ಗಾವಣೆ ಮಾಡಲಾಗಿದೆ.

ಮುಂದಿನ ನಡೆ– ವೈದ್ಯರ ಸಭೆ: ಹೋರಾಟದ ಮುಂದಿನ ನಡೆ ಬಗ್ಗೆ ಚರ್ಚಿಸಲು ಪ್ರತಿಭಟನೆ ನಿರತ ವೈದ್ಯರು ಮಂಗಳವಾರ ಸಭೆ ನಡೆಸಿದರು. 'ನಮ್ಮ ಬೇಡಿಕೆಗಳ ಪೈಕಿ ಕೆಲವನ್ನು ರಾಜ್ಯ ಸರ್ಕಾರ ಈಡೇರಿಸಿದೆ. ಹೀಗಾಗಿ ಹೋರಾಟದ ಮುಂದಿನ ನಡೆ ಕುರಿತು ಸಭೆಯಲ್ಲಿ ಚರ್ಚಿಸಲಾಗುತ್ತದೆ' ಎಂದು ಪ್ರತಿಭಟನೆ ನಿರತ ವೈದ್ಯರೊಬ್ಬರು ಹೇಳಿದ್ದಾರೆ.

'ಸಂತ್ರಸ್ತೆ ಚಿತ್ರ, ಹೆಸರು ತೆಗೆಯಿರಿ'

ನವದೆಹಲಿ (ಪಿಟಿಐ): ಅತ್ಯಾಚಾರ ಮತ್ತು ಹತ್ಯೆಗೆ ಒಳಗಾದ ವೈದ್ಯ ವಿದ್ಯಾರ್ಥಿನಿಯ ಚಿತ್ರ ಮತ್ತು ಹೆಸರನ್ನು ತೆಗೆದು ಹಾಕುವಂತೆ ವಿಕಿಪೀಡಿಯಾಕ್ಕೆ ಸುಪ್ರೀಂ ಕೋರ್ಟ್ ಮಂಗಳವಾರ ನಿರ್ದೇಶನ ನೀಡಿದೆ.

'ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಸಂತ್ರಸ್ತೆಯ ಗುರುತನ್ನು ಬಹಿರಂಗಪಡಿಸುವಂತಿಲ್ಲ. ಈ ಕುರಿತ ಕಾನೂನುಗಳಲ್ಲಿ ಇದನ್ನು ಸ್ಪಷ್ಟವಾಗಿ ಹೇಳಲಾಗಿದೆ' ಎಂದು ನ್ಯಾಯಪೀಠ ಹೇಳಿದೆ.

'ಮನ ಕಲಕುವ ಅಂಶಗಳಿವೆ'

ಅತ್ಯಾಚಾರ ಮತ್ತು ಕೊಲೆಗೆ ಸಂಬಂಧಿಸಿ ಸಿಬಿಐ ಸಲ್ಲಿಸಿರುವ ತನಿಖೆಯ ಸ್ಥಿತಿಗತಿ ವರದಿಯಲ್ಲಿನ ಅಂಶಗಳು ಮನ ಕಲಕುವಂತಿವೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ವರದಿಯ ಅಂಶಗಳನ್ನು ಬಹಿರಂಗಪಡಿಸಿದರೆ ತನಿಖೆಗೆ ತೊಂದರೆಯಾಗಬಹುದು ಎಂದ ಕೋರ್ಟ್, ವಿವರಗಳನ್ನು ಬಹಿರಂಗಪಡಿಸಲು ನಿರಾಕರಿಸಿದೆ.

ರಾತ್ರಿ ಪಾಳಿ ರದ್ದು: ಆಕ್ಷೇಪ

ಒಂದನೇ ಪುಟದಿಂದ...

ವೈದ್ಯರು ಸೇರಿದಂತೆ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಯ ಭದ್ರತೆಗಾಗಿ ಗುತ್ತಿಗೆ ಆಧಾರದಲ್ಲಿ ನೌಕರರನ್ನು ನೇಮಕ ಮಾಡಿ ಕೊಳ್ಳುವ ಪಶ್ಚಿಮ ಬಂಗಾಳ ಸರ್ಕಾರದ ನಿರ್ಧಾರವನ್ನೂ ಪೀಠ ಪ್ರಶ್ನಿಸಿತು.

'ವೈದ್ಯರಿಗೆ ಸೂಕ್ತ ಭದ್ರತೆ ಇಲ್ಲದಂತಹ ಸ್ಥಿತಿಯಲ್ಲಿ ನಾವಿದ್ದೇವೆ. ಸರ್ಕಾರಿ ಆಸ್ಪತ್ರೆಗಳಲ್ಲಿ ರಾಜ್ಯ ಸರ್ಕಾರ ಕನಿಷ್ಠ ಪಕ್ಷ ಪೊಲೀಸರನ್ನಾದರೂ ನಿಯೋಜಿಸಬೇಕಿತ್ತು. ಇದು, ಕೆಲಸಕ್ಕಾಗಿ ಕೋಲ್ಕತ್ತಕ್ಕೆ ಬರುವ ವೈದ್ಯ ವಿದ್ಯಾರ್ಥಿಗಳ ಸುರಕ್ಷತೆಯ ಪ್ರಶ್ನೆ' ಎಂದೂ ಪೀಠ ಹೇಳಿತು.

'ಕ್ರಮ ಇಲ್ಲ': ಪ್ರತಿಭಟನೆ ನಡೆಸುತ್ತಿರುವ ವೈದ್ಯರ ವಿರುದ್ಧ ಯಾವುದೇ ದಂಡನಾತ್ಮಕ ಕ್ರಮ ತೆಗೆದುಕೊಳ್ಳುವುದಿಲ್ಲ ಎಂದು ಪಶ್ಚಿಮ ಬಂಗಾಳ ಸರ್ಕಾರ, ನ್ಯಾಯಪೀಠಕ್ಕೆ ತಿಳಿಸಿತು. ಈ ಕುರಿತು ಕಿರಿಯ ವೈದ್ಯರ ಪರ ಹಾಜರಿದ್ದ ಹಿರಿಯ ವಕೀಲ ಇಂದಿರಾ ಜೈಸಿಂಗ್ ಪ್ರಸ್ತಾಪಿಸಿದ್ದರು.

ಫೈನಲ್‌ನಲ್ಲಿ ಚೀನಾ ವಿರುದ್ಧ ಜಯ • ನಿರ್ಣಾಯಕವಾದ ಜುಗರಾಜ್ ಗೋಲು • ಪಾಕಿಸ್ತಾನಕ್ಕೆ ಮೂರನೇ ಸ್ಥಾನ

ಭಾರತದ ಮುಡಿಗೆ 'ಚಾಂಪಿಯನ್' ಕಿರೀಟ

ಹುಲುನ್‌ಬುಯಿರ್ (ಚೀನಾ), (ಪಿಟಿಐ): ಆತಿಥೇಯ ಚೀನಾ ವಿರುದ್ಧ ಹೋರಾಡಿ 1–0 ಯಿಂದ ಗೆದ್ದ ಭಾರತ ತಂಡ, ಹೀರೊ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಮಂಗಳವಾರ ಚಾಂಪಿಯನ್ ಕಿರೀಟ ಧರಿಸಿತು. ಭಾರತ ಐದನೇ ಸಲ ಈ ಪ್ರಶಸ್ತಿ ಗೆದ್ದುಕೊಂಡಿದೆ.

ಈ ಟೂರ್ನಿಯಲ್ಲಿ ಪ್ರಾಬಲ್ಯ ಸಾಧಿಸಿ ಆಡಿದ ಎಲ್ಲಾ ಏಳೂ ಪಂದ್ಯಗಳಲ್ಲಿ ಹರ್ಮನ್‌ಪ್ರೀತ್ ಪಡೆ ಜಯಶಾಲಿಯಾಯಿತು. ಡಿಫೆಂಡರ್ ಜುಗರಾಜ್ ಸಿಂಗ್ ಅಪರೂಪ ಎಂಬಂತೆ ಈ ಪಂದ್ಯದಲ್ಲಿ ಫೀಲ್ಡ್ ಗೋಲು ಗಳಿಸಿದರು. ನಾಲ್ಕನೇ ಕ್ವಾರ್ಟರ್‌ನಲ್ಲಿ (51ನೇ ನಿಮಿಷ) ಗಳಿಸಿದ ಈ ಗೋಲು ಅಂತಿಮವಾಗಿ ನಿರ್ಣಾಯಕವಾಯಿತು.

ಭಾರತಕ್ಕೆ ಗೆಲುವು ಸುಲಭವಾಗಿ ಒಲಿಯಲಿಲ್ಲ. ಮೊದಲು ಮೂರು ಕ್ವಾರ್ಟರ್ (ತಲಾ 15 ನಿಮಿಷ) ಭಾರತ, ಚೀನಾ 'ಗೋಡೆ'ಯನ್ನು ಭೇದಿಸಲು ಆಗಿರಲಿಲ್ಲ.

ಇದು ಚೀನಾಕ್ಕೆ ಅಂತರರಾಷ್ಟ್ರೀಯ ಹಾಕಿಯಲ್ಲಿ ಕೇವಲ ಎರಡನೇ ಫೈನಲ್ ಆಗಿತ್ತು ಎಂಬುದು ಗಮನಾರ್ಹ. 2006ರ ಏಷ್ಯನ್ ಗೇಮ್ಸ್ ಫೈನಲ್‌ನಲ್ಲಿ ಚೀನಾ, ಕೊರಿಯಾ ಎದುರು 1–3 ರಿಂದ ಸೋತಿತ್ತು.

ಇದಕ್ಕೆ ಮೊದಲು ಪಾಕಿಸ್ತಾನ ತಂಡ 5–2 (ವಿರಾಮದ ವೇಳೆ 0–1) ಗೋಲುಗಳಿಂದ ಕೊರಿಯಾ ತಂಡವನ್ನು ಸೋಲಿಸಿ ಆರು ತಂಡಗಳ ಟೂರ್ನಿಯಲ್ಲಿ ಮೂರನೇ ಸ್ಥಾನ ಪಡೆಯಿತು.

ನೆಚ್ಚಿನ ತಂಡ: ಕಳೆದ ತಿಂಗಳ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿದ್ದ ಭಾರತ ಫೈನಲ್‌ನಲ್ಲಿ ಗೆಲ್ಲುವ ನೆಚ್ಚಿನ ತಂಡವಾಗಿತ್ತು. ಲೀಗ್‌ನಲ್ಲಿ ಚೀನಾ ವಿರುದ್ಧ 3–0 ಗೆಲುವೂ ಸಾಧಿಸಿತ್ತು. ಆದರೆ ಅಂತಿಮವಾಗಿ ಪಂದ್ಯ ನಿಕಟ ಪೈಪೋಟಿಯಿಂದ ಕೂಡಿತು. ಭಾರತಕ್ಕೆ ಹೆಚ್ಚು ಅವಕಾಶಗಳು ದಕ್ಕಿದರೂ, ಚೀನಾ ರಕ್ಷಣೆ ನಿರೀಕ್ಷೆಗಿಂತ ಬಲಿಷ್ಠವಾಗಿತ್ತು. ಪ್ರತಿದಾಳಿಗಳನ್ನೂ ನಡೆಸಿ, ಪ್ರಬಲ ಭಾರತಕ್ಕೆ ಸವಾಲೊಡ್ಡಿತು.

ಅಮೋಘ ಸ್ಟಿಕ್‌ವರ್ಕ್ ಪ್ರದರ್ಶಿಸಿದ ರಾಜಕುಮಾರ್ ಪಾಲ್, ಭಾರತಕ್ಕೆ 10ನೇ ನಿಮಿಷ ಮೊದಲ ಪೆನಾಲ್ಟಿ ಕಾರ್ನರ್ ಗಳಿಸಿಕೊಟ್ಟರು. ಆದರೆ ನಾಯಕ ಹರ್ಮನ್‌ಪ್ರೀತ್ ಅವರ ಪ್ರಯತ್ನ ಈ ಬಾರಿ ಕರಾರುವಾಕ್ ಆಗಿರಲಿಲ್ಲ.

ಎರಡು ನಿಮಿಷಗಳ ನಂತರ ನೀಲಕಂಠ ಶರ್ಮಾ ಅವರ ಪ್ರಯತ್ನಕ್ಕೆ ಗೋಲ್ ಕೀಪರ್ ವಾಂಗ್ ತಡೆಯಾದರು.

ಮತ್ತೊಂದು ಅವಕಾಶದಲ್ಲಿ ಜುಗರಾಜ್ ಅವರಿಂದ ದೊರೆತ ಪರಿಪೂರ್ಣ ಪಾಸ್‌ನಲ್ಲಿ ಸುಖಜೀತ್ ಅವರು ಬಾಕ್ಸ್‌ನತ್ತ ಬೀಸಿದ ಚೆಂಡನ್ನು ವಾಂಗ್ ಅಷ್ಟೇ ಚುರುಕಾಗಿ ತಡೆದರು. ಮೊದಲ ಕ್ವಾರ್ಟರ್‌ನ ಕೊನೆಯ ಕ್ಷಣದಲ್ಲಿ ಚೀನಾಕ್ಕೆ ಪೆನಾಲ್ಟಿ ಕಾರ್ನರ್ ದೊರೆತರೂ, ಗೋಲಿನೆದುರು ಕಾಯುತ್ತಿದ್ದ ಕೃಷನ್ ಬಹದ್ದೂರ್ ಪಾಠಕ್ ಅವರು ಆತಂಕಕ್ಕೆ ಅವಕಾಶ ನೀಡಿಲ್ಲ.

ಎರಡನೇ ಕ್ವಾರ್ಟರ್‌ನಲ್ಲೂ ಪರಿಸ್ಥಿತಿ ಹೆಚ್ಚುಕಮ್ಮಿ ಇದೇ ರೀತಿ ಇತ್ತು. ಚೆಂಡು ಬಹುತೇಕ ಅವಧಿಯಲ್ಲಿ ಭಾರತದ ಆಟಗಾರರ ಹಿಡಿತದಲ್ಲಿತ್ತು. ಆದರೆ ಭಾರತದ ಗೋಲು ಪ್ರಯತ್ನಗಳು ಚೀನಾದ ಪ್ರಬಲ ರಕ್ಷಣೆಯಿಂದ ಫಲಪ್ರದವಾಗಲಿಲ್ಲ. ಭಾರತದ ಒತ್ತಡಕ್ಕೆ ಚೀನಾ ಅಳುಕಲಿಲ್ಲ. ಅಂಜಲೂ ಇಲ್ಲ. ಸಂಯಮದಿಂದ ಆಡಿತು. ಹೀಗಾಗಿ ವಿರಾಮದವರೆಗಿನ ಅವಧಿ ಗೋಲಿಲ್ಲದೇ ಕಳೆಯಿತು.

ಬದಿಗಳು ಬದಲಾಗುತ್ತಿದ್ದಂತೆ, ಚೀನಾ ಮೊದಲಿಗಿಂತ ಉತ್ಸಾಹದಿಂದ ಭಾರತದ ಗೋಲಿನತ್ತ ಸರಣಿ ದಾಳಿಗಳನ್ನು ನಡೆಸಿತು. 38ನೇ ನಿಮಿಷ ಎರಡನೇ ಪೆನಾಲ್ಟಿ ಕಾರ್ನರ್ ಕೂಡ ಗಿಟ್ಟಿಸಿತ್ತು. 40ನೇ ನಿಮಿಷ ಮತ್ತೊಂದು ಕಾರ್ನರ್ ಪಡೆದರೂ, ಗೋಲುಗಂಬದಡಿ ಪಾಠಕ್ ಜಾಗೃತರಾಗಿದ್ದರು.

ಈ ಹಂತದಲ್ಲಿ ನಾಯಕನ ಕೈಚಳಕ ಮತ್ತೊಮ್ಮೆ ಭಾರತದ ನೆರವಿಗೆ ಬಂತು. ಒಳ್ಳೆಯ ಲಯದಲ್ಲಿರುವ ಹರ್ಮನ್‌ಪ್ರೀತ್, ಕೌಶಲದ ನಡೆಯೊಡನೆ ಚೆಂಡನ್ನು ಚೀನಾದ ಗೋಲು ಆವರಣದ ಬಳಿ ಮುನ್ನಡೆಸಿ, ಅಲ್ಲಿ ಕಾಯುತ್ತಿದ್ದ ಜುಗರಾಜ್ ಕಡೆಗೆ ಪಾಸ್ ಮಾಡಿ ದರು. ಅವರು ಚೀನಾ ಗೋಲಿಯನ್ನು ವಂಚಿಸಿ ಚೆಂಡನ್ನು ಗುರಿ ತಲುಪಿಸಿದರು.

ಪ್ರೇಕ್ಷಕರ ಬೆಂಬಲದ ನಡುವೆ ಚೀನಾ, ಮುಕ್ತಾಯಕ್ಕೆ ನಾಲ್ಕು ನಿಮಿಷಗಳಿರುವಾಗ ಗೋಲ್ ಕೀಪರ್‌ನನ್ನು ಹೆಚ್ಚುವರಿ ಆಟಗಾರನಾಗಿ ಬಳಸಿ, ಭಾರತದ ಮೇಲೆ ಒತ್ತಡ ಹೇರುವ ತಂತ್ರಕ್ಕೆ ಮುಂದಾಯಿತು. ಆದರೆ ಭಾರತದ ರಕ್ಷಣೆ ಆಟಗಾರರೂ ಮೊದಲೇ ಅರಿತವರಂತೆ, ಅಪಾಯಕ್ಕೆ ಅವಕಾಶ ನೀಡಲಿಲ್ಲ.

ಭಾರತದ ಗೆಲುವಿನ ಹಾದಿ

ಫೈನಲ್‌ನಲ್ಲಿ **1-0** ಗೋಲುಗಳಿಂದ ಚೀನಾ ವಿರುದ್ಧ ಜಯಭೇರಿ

ಸೆಮಿಫೈನಲ್‌ನಲ್ಲಿ **4-1** ರಿಂದ ದಕ್ಷಿಣ ಕೊರಿಯಾ ವಿರುದ್ಧ ಗೆಲುವು

ಲೀಗ್ ಹಂತದಲ್ಲಿ

- **2-1** ರಿಂದ ಪಾಕಿಸ್ತಾನ ವಿರುದ್ಧ ಗೆಲುವು
- **3-1** ರಿಂದ ದಕ್ಷಿಣ ಕೊರಿಯಾ ಎದುರು ಜಯ
- **8-1** ರಿಂದ ಮಲೇಷ್ಯಾ ವಿರುದ್ಧ ಜಯಭೇರಿ
- **5-1** ರಿಂದ ಜಪಾನ್ ಎದುರು ಗೆಲುವು
- **3-0** ಯಿಂದ ಚೀನಾ ವಿರುದ್ಧ ಜಯ


ಜುಗ್‌ರಾಜ್ ಸಿಂಗ್


ಟ್ರೋಫಿಯೊಂದಿಗೆ ಹರ್ಮನ್‌ಪ್ರೀತ್ ಸಿಂಗ್ –ಹಾಕಿ ಇಂಡಿಯಾ ಎಕ್ಸ್ ಚಿತ್ರ

26 ಟೂರ್ನಿಯಲ್ಲಿ ಭಾರತ ತಂಡ ಗಳಿಸಿದ ಒಟ್ಟು ಗೋಲುಗಳು

7 ಭಾರತ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ದಾಖಲಿಸಿದ ಒಟ್ಟು ಗೋಲುಗಳು

ಕ್ರಿಕೆಟ್ ವಿಶ್ವಕಪ್: ಪುರುಷರಷ್ಟೇ ಮಹಿಳೆಯರಿಗೂ ನಗದು ಪುರಸ್ಕಾರ

ದುಬೈ (ಪಿಟಿಐ): ಪುರುಷರು ಮತ್ತು ಮಹಿಳೆಯರ ವಿಶ್ವಕಪ್ ಕ್ರಿಕೆಟ್ ಟೂರ್ನಿಗಳಲ್ಲಿ ಸಮಾನ ನಗದು ಪುರಸ್ಕಾರ ನೀಡಲು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ನಿರ್ಧರಿಸಿದೆ.

ಮಂಗಳವಾರ ಐಸಿಸಿಯು ಈ ನಿರ್ಣಯ ಪ್ರಕಟಿಸಿದೆ. ಹೀಗಾಗಿ ಮುಂಬರುವ ಮಹಿಳೆಯರ ಟಿ20 ವಿಶ್ವಕಪ್ ಟೂರ್ನಿಯ ಬಹುಮಾನ ಮೊತ್ತವು ಈ ಹಿಂದಿನ ಟೂರ್ನಿಗಿಂತ ಶೇ 134ರಷ್ಟು ಏರಿಕೆಯಾಗಲಿದೆ. ಈ ಬಾರಿ ವಿಜೇತ ತಂಡವು ₹19.60 ಕೋಟಿ ಪಡೆಯಲಿದೆ. ರನ್ನರ್ಸ್ ಅಪ್ ತಂಡಕ್ಕೆ ಇದರ ಅರ್ಧಭಾಗದಷ್ಟು ಮೊತ್ತ ಲಭಿಸಲಿದೆ.

2023ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನಡೆದಿದ್ದ ಮಹಿಳಾ ವಿಶ್ವಕಪ್ ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದ ಆಸ್ಟ್ರೇಲಿಯಾ ₹8.40 ಕೋಟಿ ಪಡೆದಿತ್ತು. ಭಾರತದಲ್ಲಿ ನಡೆದಿದ್ದ ಪುರುಷರ ವಿಭಾಗದ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಜಯಿಸಿದ್ದ ತಂಡವು ₹ 30 ಕೋಟಿಯನ್ನು ಗಳಿಸಿತ್ತು.

'ಸಮಾನ ನಗದು ಬಹುಮಾನ ಯೋಜನೆಯ ಜಾರಿಯು ಟಿ20 ಮಹಿಳಾ ಕ್ರಿಕೆಟ್ ವಿಶ್ವಕಪ್ ಟೂರ್ನಿಯಿಂದ ಆರಂಭವಾಗಲಿದೆ. ಪುರುಷರ ತಂಡಗಳಿಗೆ ಸಿಗುವಷ್ಟೇ ಮೊತ್ತವು ಮಹಿಳಾ ತಂಡಗಳಿಗೂ ಲಭಿಸಲಿದೆ. ಇತಿಹಾಸದಲ್ಲಿಯೇ ಇದೊಂದು ಮಹತ್ವದ ಮೈಲಿಗಲ್ಲು' ಎಂದು ಐಸಿಸಿ ಪ್ರಕಟಣೆಯಲ್ಲಿ ಉಲ್ಲೇಖಿಸಲಾಗಿದೆ.

ಸೆಮಿಫೈನಲ್ ತಲುಪುವ ತಂಡಗಳಿಗೂ ಉತ್ತಮವಾದ ನಗದು ಪುರಸ್ಕಾರ ಲಭಿಸುವುದು. ಟೂರ್ನಿಯ ಪ್ರತಿಯೊಂದು ಹಂತದಲ್ಲಿಯೂ ಸೋತು ಹೊರಬೀಳುವ ತಂಡಕ್ಕೆ ನಗದು ಬಹುಮಾನ ನೀಡಲಾಗುತ್ತಿದೆ. ಇದರಿಂದಾಗಿ ಸೆಮಿಫೈನಲ್ ಪ್ರವೇಶಿಸದ ಆರು ತಂಡಗಳಿಗೂ ಇದರ ಲಾಭ ದೊರೆಯಲಿದೆ. ಒಟ್ಟಾರೆ ನಗದು ಪುರಸ್ಕಾರಕ್ಕಾಗಿಯೇ ₹ 65 ಕೋಟಿ ಹಣವನ್ನು ಮೀಸಲಿಡಲಾಗಿದೆ. ಕಳೆದ ಮಹಿಳಾ ವಿಶ್ವಕಪ್ ಟೂರ್ನಿಗಿಂತಲೂ ಈ ಬಾರಿ ಶೇ 134ರಷ್ಟು ಹೆಚ್ಚಳವಾಗಿದೆ.

'ಮಹಿಳಾ ವಿಭಾಗದ ಕ್ರಿಕೆಟ್‌ಗೆ ಉತ್ತೇಜನ ನೀಡುವುದು ಐಸಿಸಿಯ ಉದ್ದೇಶವಾಗಿದೆ. 2032ರೊಳಗೆ ಮಹಿಳಾ ಕ್ರಿಕೆಟ್ ಉತ್ತುಂಗ ಸಾಧನೆ ಮಾಡಬೇಕು. ಅದಕ್ಕಾಗಿ ಎಲ್ಲ ರೀತಿಯ ಪ್ರೋತ್ಸಾಹ ನೀಡಲಾಗುವುದು' ಎಂದು ಐಸಿಸಿ ತಿಳಿಸಿದೆ.

ಪ್ರಶಸ್ತಿ ರೇಸ್‌ನಲ್ಲಿ ಹರ್ಮನ್, ಶ್ರೀಜೇಶ್


ಪಿ.ಆರ್. ಶ್ರೀಜೇಶ್

ಲುಸಾನ್, ಸ್ವಿಟ್ಜರ್ಲೆಂಡ್ (ಪಿಟಿಐ): ಭಾರತ ಹಾಕಿ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಎಫ್‌ಐಎಚ್ 'ವರ್ಷದ ಆಟಗಾರ' ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದ್ದಾರೆ. ಅಂತರರಾಷ್ಟ್ರೀಯ ಹಾಕಿಗೆ ನಿವೃತ್ತಿ ಘೋಷಿಸಿರುವ ಪಿ.ಆರ್. ಶ್ರೀಜೇಶ್ ಅವರು 'ವರ್ಷದ ಗೋಲ್‌ಕೀಪರ್' ಪ್ರಶಸ್ತಿಯ ರೇಸ್‌ನಲ್ಲಿದ್ದಾರೆ.

ಪ್ರಶಸ್ತಿಗೆ ನಾಮನಿರ್ದೇಶನಗೊಂಡ ಅಭ್ಯರ್ಥಿಗಳ ಹೆಸರನ್ನು ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ (ಎಫ್‌ಐಎಚ್) ಮಂಗಳವಾರ ಪ್ರಕಟಿಸಿದೆ. ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತ ತಂಡವು ಕಂಚು ಜಯಿಸುವಲ್ಲಿ ಹರ್ಮನ್ ಮತ್ತು ಶ್ರೀಜೇಶ್ ಪ್ರಮುಖ ಪಾತ್ರ ವಹಿಸಿದ್ದರು.

ಒಲಿಂಪಿಕ್ಸ್‌ನ ಟೂರ್ನಿಯಲ್ಲಿಯೇ ಅತ್ಯಧಿಕ ಗೋಲನ್ನು (10) ಹರ್ಮನ್ ಗಳಿಸಿದ್ದರು. ನೆದರ್ಲೆಂಡ್ಸ್‌ನ ಥಿಯೆರಿ ಬ್ರಿಂಕ್‌ಮನ್, ಜೋಪ್ ಡಿ ಮೋಲ್, ಜರ್ಮನಿಯ ಹ್ಯಾನ್ಸ್ ಮುಲ್ಲರ್, ಇಂಗ್ಲೆಂಡ್‌ನ ಝಾಕ್ ವ್ಯಾಲೇಸ್ 'ವರ್ಷದ ಆಟಗಾರ' ಪ್ರಶಸ್ತಿಯ ರೇಸ್‌ನಲ್ಲಿರುವ ಇತರ ಆಟಗಾರರಾಗಿದ್ದಾರೆ.

ಒಲಿಂಪಿಕ್ಸ್‌ನಲ್ಲಿ ಶ್ರೀಜೇಶ್ ಅದ್ಭುತ ಪ್ರದರ್ಶನ ನೀಡಿ ಗಮನ ಸೆಳೆದಿದ್ದರು. ವಿಶೇಷವಾಗಿ ಇಂಗ್ಲೆಂಡ್ ವಿರುದ್ಧ ಕ್ವಾರ್ಟರ್ ಫೈನಲ್‌ನಲ್ಲಿ ಕೇವಲ 10 ಸದಸ್ಯರು ಇದ್ದಾಗಲೂ ಭಾರತ ಗೆಲುವು ಸಾಧಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು.


ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಮಂಗಳವಾರ ಮುಕ್ತಾಯಗೊಂಡ ಅಂತರ ಜಿಲ್ಲಾ ಜೂನಿಯರ್ ಮತ್ತು 23 ವರ್ಷದ ಒಳಗಿನವರ ಅಥ್ಲೆಟಿಕ್ಸ್‌ನಲ್ಲಿ ಸಮಗ್ರ ಪ್ರಶಸ್ತಿ ಗೆದ್ದ ದಕ್ಷಿಣ ಕನ್ನಡ ಜಿಲ್ಲಾ ತಂಡ. – ಪ್ರಜಾವಾಣಿ ಚಿತ್ರ: ಅನೂಪ್ ರಾಘ ಟಿ.

ದಕ್ಷಿಣ ಕನ್ನಡ ತಂಡಕ್ಕೆ ಸಮಗ್ರ ಪ್ರಶಸ್ತಿ

ಅಂತರ ಜಿಲ್ಲಾ ಜೂನಿಯರ್ ಮತ್ತು 23 ವರ್ಷದೊಳಗಿನವರ ಅಥ್ಲೆಟಿಕ್ಸ್‌ಗೆ ತೆರೆ

• ಆರ್. ಜಿತೇಂದ್ರ

ಮೈಸೂರು: ಪುರುಷ ಹಾಗೂ ಮಹಿಳೆಯರ ವಿಭಾಗಳೆರಡರಲ್ಲೂ ಪಾರಮ್ಯ ಮೆರೆದ ದಕ್ಷಿಣ ಕನ್ನಡ ಜಿಲ್ಲೆಯ ಅಥ್ಲೀಟ್‌ಗಳು ಮಂಗಳವಾರ ಇಲ್ಲಿನ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಮುಕ್ತಾಯಗೊಂಡ ಕರ್ನಾಟಕ ರಾಜ್ಯ ಅಂತರ ಜಿಲ್ಲಾ ಜೂನಿಯರ್ ಮತ್ತು 23 ವರ್ಷದ ಒಳಗಿನವರ ಅಥ್ಲೆಟಿಕ್ಸ್‌ನಲ್ಲಿ ಸಮಗ್ರ ಚಾಂಪಿಯನ್ಸ್ ಟ್ರೋಫಿ ಎತ್ತಿ ಹಿಡಿದರು.

ದಕ್ಷಿಣ ಕನ್ನಡ ತಂಡವು ಪುರುಷರ ವಿಭಾಗದಲ್ಲಿ 186 ಹಾಗೂ ಮಹಿಳೆಯರ ವಿಭಾಗದಲ್ಲಿ 216 ಅಂಕಗಳೊಂದಿಗೆ ಒಟ್ಟಾರೆ 402 ಅಂಕ ಕಲೆಹಾಕಿತು. ಜಿಲ್ಲೆಯ ಅಥ್ಲೀಟ್‌ಗಳು ಒಟ್ಟು 30 ಚಿನ್ನ, 20 ಬೆಳ್ಳಿ ಹಾಗೂ 23 ಕಂಚಿನ ಪದಕಗಳ ಬೇಟೆಯಾಡಿದರು.

ಬೆಂಗಳೂರು ನಗರ ಜಿಲ್ಲೆಯ ಅಥ್ಲೀಟ್‌ಗಳು ಒಟ್ಟು 11 ಚಿನ್ನ, 17 ಬೆಳ್ಳಿ ಹಾಗೂ 20 ಕಂಚಿನೊಂದಿಗೆ 242 ಅಂಕ ಸಂಪಾದಿಸಿ ಮೊದಲ ರನ್ನರ್ ಅಪ್ ಆದರು. ಬೆಳಗಾವಿ ತಂಡವು 16 ಚಿನ್ನ, 9 ಬೆಳ್ಳಿ ಹಾಗೂ 8 ಕಂಚು ಸೇರಿ ಒಟ್ಟು 189 ಅಂಕಗಳೊಂದಿಗೆ ಎರಡನೇ ರನ್ನರ್ ಅಪ್ ಆಯಿತು.

ಶ್ರೇಷ್ಠ ಅಥ್ಲೀಟ್‌ಗಳು: 23 ವರ್ಷದ ಒಳಗಿನ ಪುರುಷರ ವಿಭಾಗದಲ್ಲಿ ಮೈಸೂರಿನ ಗಗನ್ ಗೌಡ ಹಾಗೂ ಮಹಿಳೆಯರ ವಿಭಾಗದಲ್ಲಿ ಉಡುಪಿಯ ಎಸ್.ಕೀರ್ತನಾ ಉತ್ತಮ ಅಥ್ಲೀಟ್ ಪ್ರಶಸ್ತಿ ತಮ್ಮದಾಗಿಸಿಕೊಂಡರು. 20 ವರ್ಷದ ಒಳಗಿನವರ ವಿಭಾಗದಲ್ಲಿ ದಕ್ಷಿಣ ಕನ್ನಡದ ಸುಹಾಸ್ ಸುವರ್ಣ ಹಾಗೂ ಚಿಕ್ಕಮಗಳೂರಿನ ದಿಶಾ ಅಳಿಗೆ ಈ ಗೌರವಕ್ಕೆ ಪಾತ್ರರಾದರು.

14 ವರ್ಷದ ಒಳಗಿನವರ ವಿಭಾಗದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಲೋಹಿತ್ ಗೌಡ ಹಾಗೂ ಕೆ.ಪಿ. ಅದ್ವಿಕಾ, 16 ವರ್ಷದ ಒಳಗಿನವರ ವಿಭಾಗದಲ್ಲಿ ದಕ್ಷಿಣ ಕನ್ನಡದ ಆಯುಷ್ ಪ್ರಾಂಜಲ್ ಹಾಗೂ ಎಸ್. ಸುಚಿತ್ರಾ, 18 ವರ್ಷದ ಒಳಗಿನವರ ವಿಭಾಗದಲ್ಲಿ ಧಾರವಾಡದ ಸೈಯದ್ ಸಬೀರ್ ಹಾಗೂ ಉಡುಪಿಯ ಸ್ತುತಿ ಶೆಟ್ಟಿ ಕ್ರಮವಾಗಿ ಬಾಲಕ ಹಾಗೂ ಬಾಲಕಿಯರ ವಿಭಾಗದಲ್ಲಿ ಉತ್ತಮ ಅಥ್ಲೀಟ್ ಪ್ರಶಸ್ತಿ ಪಡೆದರು.

ಕೂಟ ದಾಖಲೆ: ಪುರುಷರ 23 ವರ್ಷದ ಒಳಗಿನವರ 5,000 ಮೀ ಓಟದಲ್ಲಿ ಬೆಂಗಳೂರಿನ ಎ.ಆರ್. ರೋಹಿತ್, 20 ವರ್ಷದ ಒಳಗಿನವರ ಪೋಲ್‌ವಾಲ್ಟ್‌ನಲ್ಲಿ ಬೆಂಗಳೂರಿನ ವೈ.ಎಂ. ಆದಿತ್ಯ, 18 ವರ್ಷದ ಒಳಗಿನವರ 400 ಮೀ ಓಟದಲ್ಲಿ ಧಾರವಾಡದ ಸೈಯದ್ ಸಬೀರ್, ಮಹಿಳೆಯರ 23 ವರ್ಷ ಒಳಗಿನವರ 100 ಮೀ. ಓಟದಲ್ಲಿ ಉಡುಪಿಯ ಎಸ್. ಕೀರ್ತನಾ, 20 ವರ್ಷದ ಒಳಗಿನವರ 400 ಮೀಟರ್ಸ್ ಓಟದಲ್ಲಿ ಚಿಕ್ಕಮಗಳೂರಿನ ದಿಶಾ ಅಳಿಗೆ ಕೊನೆಯ ದಿನ ಕೂಟ ದಾಖಲೆ ನಿರ್ಮಿಸಿದರು.

ಟೆಸ್ಟ್ ಪಂದ್ಯಕ್ಕೆ ಭಾರತ– ಬಾಂಗ್ಲಾದೇಶ ತಂಡಗಳ ತಾಲೀಮು

ಕಪ್ಪುಮಣ್ಣಿನಲ್ಲಿ ಆಟಗಾರರ ಅಭ್ಯಾಸ

ಚೆನ್ನೈ (ಪಿಟಿಐ): ಎರಡು ದಿನಗಳ ಕಾಲ ಕೆಂಪು ಮಣ್ಣಿನ ಪಿಚ್‌ನಲ್ಲಿ ಅಭ್ಯಾಸ ನಡೆಸಿದ ನಂತರ ಭಾರತ ಮತ್ತು ಬಾಂಗ್ಲಾದೇಶ ಆಟಗಾರರು ಮಂಗಳವಾರ ಕಪ್ಪುಮಣ್ಣಿನ ಅಂಕಣದಲ್ಲಿ ಆಡಿದರು. ಗುರುವಾರ ಇಲ್ಲಿ ಆರಂಭವಾಗಲಿರುವ ಮೊದಲ ಟೆಸ್ಟ್ ಪಂದ್ಯದಲ್ಲಿ ಉಭಯ ತಂಡಗಳು ಮುಖಾಮುಖಿಯಾಗಲಿವೆ. ಈ ಪಂದ್ಯಕ್ಕೆ ಕೆಂಪು ಮಣ್ಣಿನ ಪಿಚ್ ಲಭ್ಯವಾಗುವ ಸಾಧ್ಯತೆ ಹೆಚ್ಚು. ಅದು ವೇಗದ ಬೌಲರ್‌ಗಳಿಗೆ ಹೆಚ್ಚು ಅನುಕೂಲವಾಗಬಹುದು. ಕಪ್ಪುಮಣ್ಣಿನ ಅಂಕಣ ಲಭಿಸಿದರೆ ಸ್ಪಿನ್ನರ್‌ಗಳಿಗೆ ಹೆಚ್ಚು ನೆರವಾಗಬಹುದು.

ಚೆನ್ನೈನಲ್ಲಿ ಹವಾಮಾನ ವಿಚಿತ್ರವಾಗಿದೆ. ಇದಕ್ಕೆ ಅನುಗುಣವಾಗಿ ಪಿಚ್ ಕೂಡ ಇರಲಿದೆ.

'ಇಲ್ಲಿ ಬಹಳ ಧಗೆಯ ವಾತಾವರಣ ಇದೆ. 30 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಹೆಚ್ಚು ತಾಪವಿದೆ. ಪಿಚ್‌ಗೆ ನೀರುಣಿಸುವ ಕಾರ್ಯ ಸಮರ್ಪಕವಾಗಿದೆ ಎಂದು ತಿಳಿದುಬಂದಿದೆ. ವಿಪರೀತ ತಾಪವು ಪಿಚ್ ಶುಷ್ಕತೆಯನ್ನು ಹೆಚ್ಚಿಸುವ ಸಾಧ್ಯತೆ ಇದೆ. ಇದು ಪರಿಣಾಮ ಬೀರುವುದು. ಪಂದ್ಯದ ಆರಂಭದಲ್ಲಿ ವೇಗದ ಬೌಲರ್‌ಗಳಿಗೆ ನೆರವಾಗಬಹುದು. ಪಂದ್ಯ ಸಾಗಿದಂತೆ ಸ್ಪಿನ್ನರ್‌ಗಳು ಮುಖ್ಯ ಪಾತ್ರ ವಹಿಸುವ ಸಾಧ್ಯತೆ ಹೆಚ್ಚು' ಎಂದು ಅನುಭವಿ ಕ್ಯುರೇಟರ್ ಒಬ್ಬರು ತಿಳಿಸಿದ್ದಾರೆ.

ಭಾರತ ತಂಡದ ಬ್ಯಾಟರ್‌ಗಳು ಈಚೆಗೆ ಶ್ರೀಲಂಕಾ ಎದುರು ಸ್ಪಿನ್ನರ್‌ಗಳ ಮುಂದೆ ಮಂಕಾಗಿದ್ದರು. ಆದ್ದರಿಂದ ಇಲ್ಲಿ ಬಾಂಗ್ಲಾ ಸ್ಪಿನ್ನರ್‌ಗಳನ್ನು ಅವರು ಯಾವ ರೀತಿ ಎದುರಿಸುವರು ಎಂಬ ಕುತೂಹಲ ಗರಿಗೆದರಿದೆ.

ಭಾರತ ತಂಡದಲ್ಲಿಯೂ ಉತ್ತಮ ಸ್ಪಿನ್ನರ್‌ಗಳು ಇರುವುದು ಸಮಾಧಾನಕರ ಸಂಗತಿ. ಕುಲದೀಪ್ ಯಾದವ್ ಹೆಚ್ಚು ಪರಿಣಾಮ ಬೀರಬಲ್ಲರು. ಆದರೆ ವೇಗದ ಬೌಲಿಂಗ್‌ಗೆ ನೆರವು ಸಿಗುವ ಪಿಚ್ ಲಭಿಸಿದರೆ ಭಾರತವು ಮೂರನೇ ವೇಗಿಯಾಗಿ ಆಕಾಶ್ ದೀಪ್ ಅಥವಾ ಯಶ್ ದಯಾಳ್ ಅವರಲ್ಲಿ ಒಬ್ಬರನ್ನು ಕಣಕ್ಕಿಳಿಸುವ ಸಾಧ್ಯತೆ ಇದೆ.

ಪಾಕ್ ಎದುರು ಸರಣಿ ಗೆದ್ದು ಬಂದಿರುವ ಬಾಂಗ್ಲಾ ಭರ್ತಿ ಆತ್ಮವಿಶ್ವಾಸದಲ್ಲಿದೆ. ತಮ್ಮ ಮಧ್ಯಮವೇಗದ ಬೌಲರ್‌ಗಳ ಮೇಲೆ ಹೆಚ್ಚು ನಿರೀಕ್ಷೆ ಇಟ್ಟುಕೊಂಡಿದೆ.


ಭಾರತ ಕ್ರಿಕೆಟ್ ತಂಡದ ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರಕರ್, ಬ್ಯಾಟರ್ ವಿರಾಟ್ ಕೊಹ್ಲಿ ಮತ್ತು ಮುಖ್ಯ ಕೋಚ್ ಗೌತಮ್ ಗಂಭೀರ್ ಮಾತುಕತೆ –ಎಎಫ್‌ಪಿ ಚಿತ್ರ

'ಗಂಭೀರ್ ಶೈಲಿ ವಿಭಿನ್ನ'


ರೋಹಿತ್

ಚೆನ್ನೈ (ಪಿಟಿಐ): ಗೌತಮ್ ಗಂಭೀರ್ ಅವರ ಕೋಚಿಂಗ್ ಶೈಲಿಯು ರಾಹುಲ್ ದ್ರಾವಿಡ್ ಅವರಿಗಿಂತ ಭಿನ್ನವಾಗಿದೆ. ಅವರೊಂದಿಗೆ ತಮ್ಮ ಬಳಗವು ಉತ್ತಮವಾಗಿ ಹೊಂದಿಕೊಂಡಿದೆ ಎಂದು ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಹೇಳಿದ್ದಾರೆ.

'ರಾಹುಲ್ ಭಾಯ್, ವಿಕ್ರಂ ರಾಥೋಡ್ ಮತ್ತು ಪಾರಸ್ ಮಾಂಬ್ರೆ ಅವರ ತಂಡದ ಕಾರ್ಯವೈಖರಿ ಭಿನ್ನವಾಗಿತ್ತು. ಇದೀಗ ನೂತನವಾಗಿ ನೇಮಕವಾಗಿರುವ ತರಬೇತಿ ಸಿಬ್ಬಂದಿಯು ಹೊಸದನ್ನು ತಂಡಕ್ಕೆ ಪರಿಚಯಿಸಲಿದ್ದಾರೆ. ಅದರಲ್ಲಿ ಯಾವುದೇ ತೊಂದರೆಯಿಲ್ಲ. ಅದನ್ನು ನಾವು ಒಪ್ಪಿಕೊಳ್ಳಬೇಕು' ಎಂದು ರೋಹಿತ್ ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ಕಳೆದ ಜುಲೈನಲ್ಲಿ ಗಂಭೀರ್ ಅವರು ಮುಖ್ಯ ಕೋಚ್ ಆಗಿ ನೇಮಕವಾದರು.

ಸೆಮಿಗೆ ಕಾರ್ಯದರ್ಶಿ ಇಲೆವನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಸಿಎ ಕಾರ್ಯದರ್ಶಿ ಇಲೆವನ್ ತಂಡವು ಕ್ಯಾಪ್ಟನ್ ಕೆ. ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಮುಂಬೈ ವಿರುದ್ಧ ಮಂಗಳವಾರ ಡ್ರಾ ಸಾಧಿಸಿ, ಸೆಮಿಫೈನಲ್‌ಗೆ ಅರ್ಹತೆ ಪಡೆಯಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಇಲೆವನ್ ತಂಡ 91 ರನ್‌ಗಳ ಮುನ್ನಡೆ ಪಡೆದಿತ್ತು. ಎರಡನೇ ಇನಿಂಗ್ಸ್‌ನಲ್ಲಿ ಮುಂಬೈ 42 ಓವರ್‌ಗಳಲ್ಲಿ 8 ವಿಕೆಟ್‌ಗೆ 290 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು.

ಗೆಲುವಿಗೆ 200 ರನ್‌ಗಳ ಗುರಿ ಪಡೆದ ಇಲೆವನ್ ತಂಡವು 35.3 ಓವರ್‌ಗಳಲ್ಲಿ 1 ವಿಕೆಟ್‌ಗೆ 100 ರನ್ ಗಳಿಸಿ ಡ್ರಾ ಸಾಧಿಸಿ, ಮೂರು ಅಂಕ ಪಡೆದು ನಾಲ್ಕರ ಘಟ್ಟಕ್ಕೆ ಮುನ್ನಡೆಯಿತು.

ಸಂಕ್ಷಿಪ್ತ ಸ್ಕೋರ್: ಚಿನ್ನಸ್ವಾಮಿ ಕ್ರೀಡಾಂಗಣ: ಮೊದಲ ಇನಿಂಗ್ಸ್: ಮುಂಬೈ 440; ಕೆಎಸ್‌ಸಿಎ ಕಾರ್ಯದರ್ಶಿ ಇಲೆವನ್: 531; ಎರಡನೇ ಇನಿಂಗ್ಸ್: ಮುಂಬೈ: 42 ಓವರುಗಳಲ್ಲಿ 8 ವಿಕೆಟ್‌ಗೆ 290 ಡಿಕ್ಲೇರ್ (ಜಯ್ ಬಿಸ್ತಾ 50, ಸೂರ್ಯಾಂಶ್ ಶೆಡ್ಗೆ 71, ಅಥರ್ವ ಅಂಕೋಲೇಕರ್ 31, ಶಶಾಂಕ್ ಅತ್ತರ್ಡೆ ಔಟಾಗದೇ 47; ಅಭಿಲಾಷ್ ಶೆಟ್ಟಿ 65ಕ್ಕೆ3); ಕೆಎಸ್‌ಸಿಎ ಕಾರ್ಯದರ್ಶಿ ಇಲೆವನ್: 35.3 ಓವರುಗಳಲ್ಲಿ 1 ವಿಕೆಟ್‌ಗೆ 100 (ವಿಶಾಲ್ ಓನತ್ ಔಟಾಗದೇ 51). **ಫಲಿತಾಂಶ:** ಪಂದ್ಯ ಡ್ರಾ. ಕಾರ್ಯದರ್ಶಿ ಇಲೆವನ್‌ಗೆ 3 ಅಂಕ. ಮುಂಬೈ 1 ಅಂಕ.

ಅಲೂರು (1): ಮೊದಲ ಇನಿಂಗ್ಸ್: ಮಧ್ಯಪ್ರದೇಶ: 360; ಛತ್ತೀಸಗಢ: 164; ಎರಡನೇ ಇನಿಂಗ್ಸ್: ಮಧ್ಯಪ್ರದೇಶ: 52.4 ಓವರುಗಳಲ್ಲಿ 169; ಛತ್ತೀಸಗಢ: 65.3 ಓವರುಗಳಲ್ಲಿ 136 (ಅಜಯ್ ಮಂಡಲ್ 41; ಕುಲವಂತ್ ಖೆಜ್ರೋಲಿಯಾ 13ಕ್ಕೆ2, ಕುಮಾರ ಕಾರ್ತಿಕೇಯ 41ಕ್ಕೆ3, ಸಾಗರ ಸೋಳಂಕಿ 41ಕ್ಕೆ3). **ಫಲಿತಾಂಶ:** ಮಧ್ಯಪ್ರದೇಶಕ್ಕೆ 229 ರನ್ ಜಯ. 6 ಅಂಕ.

ಮೊದಲ ಇನಿಂಗ್ಸ್: ಡಾ. ಡಿ.ವೈ. ಪಾಟೀಲ ಕ್ರಿಕೆಟ್ ಅಕಾಡೆಮಿ: 53.3 ಓವರ್‌ಗಳಲ್ಲಿ 262; ಒಡಿಶಾ ಕ್ರಿಕೆಟ್ ಸಂಸ್ಥೆ: 86.1 ಓವರ್‌ಗಳಲ್ಲಿ 283; ಎರಡನೇ ಇನಿಂಗ್ಸ್: ಪಾಟೀಲ ಅಕಾಡೆಮಿ: 87.2 ಓವರ್‌ಗಳಲ್ಲಿ 308; ಒಡಿಶಾ ಕ್ರಿಕೆಟ್ ಸಂಸ್ಥೆ: 88.1 ಓವರ್‌ಗಳಲ್ಲಿ 287 (ಕಾರ್ತಿಕ್ ಬಿಸ್ವಾಲ್ 90. ಕರ್ಷ್ ಕೊಠಾರಿ 82ಕ್ಕೆ 4, ಉಮರ್ ಖಾನ್ 86ಕ್ಕೆ 4) **ಫಲಿತಾಂಶ :** ಪಂದ್ಯ ಟೈ, ಇತ್ತಂಡಗಳಿಗೆ ತಲಾ ಮೂರು ಅಂಕ.

ಚೀನಾ ಓಪನ್: ರಾಜಾವತ್‌ಗೆ ನಿರಾಸೆ

ಚಾಂಗ್‌ಝೌ (ಪಿಟಿಐ): ಭಾರತದ ಪ್ರಿಯಾಂಶು ರಾಜಾವತ್ ಅವರು ಚೀನಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲೇ ಹೊರಬಿದ್ದರು.

ಮಂಗಳವಾರ ನಡೆದ ಪಂದ್ಯದಲ್ಲಿ 22 ವರ್ಷದ ರಾಜಾವತ್ 13-21, 16-21ರಲ್ಲಿ ನೇರ ಗೇಮ್‌ಗಳಿಂದ ಕೆನಡಾದ ಬ್ರಯಾನ್ ಯಾಂಗ್ ಅವರಿಗೆ ಶರಣಾದರು.

ವಿಶ್ವದ 40ನೇ ಕ್ರಮಾಂಕದ ಕಿರಣ್ ಜಾರ್ಜ್ ಅವರು ಪುರುಷರ ಸಿಂಗಲ್ಸ್ ಕಣದಲ್ಲಿ ಉಳಿದಿರುವ ಭಾರತದ ಏಕೈಕ ಭರವಸೆಯಾಗಿದ್ದಾರೆ. ಅವರು ಆರಂಭಿಕ ಸುತ್ತಿನಲ್ಲಿ ಜಪಾನ್‌ನ ಕೆಂಟಾ ನಿಶಿಮೊಟೊ ಅವರನ್ನು ಎದುರಿಸಲಿದ್ದಾರೆ. ಆಕರ್ಷಿ ಕಶ್ಯಪ್, ಮಾಳವಿಕಾ ಬನ್ಸೋಡ್ ಅವರು ಮಹಿಳಾ ಸಿಂಗಲ್ಸ್‌ನಲ್ಲಿ ಸ್ಪರ್ಧಿಸುತ್ತಿದ್ದಾರೆ.

ಚೆಸ್ ಒಲಿಂಪಿಯಾಡ್ 6ನೇ ಸುತ್ತು ಅಗ್ರಸ್ಥಾನಕ್ಕೇರಿದ ಭಾರತ ತಂಡಗಳು


ಗುಕೇಶ್ –ಪಿಟಿಐ ಚಿತ್ರ

ಬುಡಾಪೆಸ್ಟ್ (ಪಿಟಿಐ): ವಿಶ್ವದ ನಾಲ್ಕನೇ ನಂಬರ್ ಆಟಗಾರ ಅರ್ಜುನ್ ಇರಿಗೇಶಿ ಚೆಸ್ ಒಲಿಂಪಿಯಾಡ್‌ನಲ್ಲಿ ಸತತ ಆರನೇ ಗೆಲುವನ್ನು ಪಡೆದರು. 45ನೇ ಚೆಸ್ ಒಲಿಂಪಿಯಾಡ್‌ನ ಓಪನ್ ವಿಭಾಗದಲ್ಲಿ ಭಾರತ ಸೋಮವಾರ ಆರನೇ ಸುತ್ತಿನಲ್ಲಿ 3–1 ಅಂತರದಿಂದ ಹಂಗರಿ ತಂಡವನ್ನು ಸೋಲಿಸಿ ಅಗ್ರಸ್ಥಾನದಲ್ಲೇ ಮುಂದುವರಿದಿದೆ. ಮಹಿಳಾ ವಿಭಾಗದಲ್ಲಿ ಭಾರತ, ಅರ್ಮೇನಿಯಾ ತಂಡವನ್ನು ಮಣಿಸಿತು.

ಆದರೆ ಆರನೇ ಸುತ್ತಿನಲ್ಲಿ ಭಾರತದ ಆಟಗಾರರು ಗೆಲುವಿಗೆ ಹೆಚ್ಚು ಶ್ರಮ ಹಾಕಬೇಕಾಯಿತು. ರಷ್ಯಾದಿಂದ ಈ ವರ್ಷವಷ್ಟೇ ಹಂಗರಿಯಲ್ಲಿ ನೆಲಕಂಡಿರುವ ಸುಗಿರೋವ್ ಸನನ್ ಅವರನ್ನು ಅರ್ಜುನ್ ಆರನೇ ಸುತ್ತಿನಲ್ಲಿ ಸೋಲಿಸಿದರು.

ಕಪ್ಪು ಕಾಯಿಗಳಲ್ಲಿ ಆಡಿದ ಗುಕೇಶ್, ಮೊದಲ ಬೋರ್ಡ್‌ನಲ್ಲಿ ಹಂಗರಿಯ ಅಗ್ರ ಆಟಗಾರ ರಿಚರ್ಡ್ ರ್‍ಯಾಪೋರ್ಟ್ ಅವರ ಜೊತೆ ಸುಲಭವಾಗಿ ಡ್ರಾ ಮಾಡಿಕೊಂಡರು. ಪ್ರಜ್ಞಾನಂದ ಅವರೂ ಮಾಜಿ ದಿಗ್ಗಜ ಪೀಟರ್ ಲೆಕೊ ಜೊತೆ 'ಡ್ರಾ' ಕರಾರಿಗೆ ಸಹಿಹಾಕಿದರು. ಕೊನೆಯ ಬೋರ್ಡ್‌ನಲ್ಲಿ ವಿದಿತ್ ಗುಜರಾತಿ, ಬೆಂಜಮಿನ್ ಗ್ಲೆಡುರಾ ವಿರುದ್ಧ ಜಯಗಳಿಸಿದರು. ಸ್ಫೂರ್ತಿಯುತ ಪ್ರದರ್ಶನ ನೀಡಿದ ವಿಯೆಟ್ನಾಮ್ 2–2 ರಿಂದ ಚೀನಾ ತಂಡವನ್ನು 'ಡ್ರಾ'ಕ್ಕೆ ಒಳಪಡಿಸಿದ ಪರಿಣಾಮ, ಭಾರತ ಈಗ ಏಕಾಂಗಿಯಾಗಿ ಅಗ್ರಸ್ಥಾನಕ್ಕೇರಿದೆ.

ಮಂಗಳವಾರ ವಿರಾಮದ ದಿನ. ಭಾರತ ಬುಧವಾರ ನಡೆಯುವ ಎಂಟನೇ ಸುತ್ತಿನಲ್ಲಿ ಚೀನಾ ವಿರುದ್ಧ ಆಡಲಿದೆ.

ಮಹಿಳಾ ವಿಭಾಗದಲ್ಲಿ ದಿವ್ಯಾ ದೇಶಮುಖ್ ಅವರು, ಎಲೆನಾ ಡೆನೀಲಿಯನ್ ವಿರುದ್ಧ ಅನಿವಾರ್ಯವಾಗಿದ್ದ ಜಯ ಸಾಧಿಸಿದ್ದರಿಂದ ಭಾರತ ಆರನೇ ಸುತ್ತಿನಲ್ಲಿ ಅರ್ಮೇನಿಯಾ ತಂಡವನ್ನು 2.5–1.5 ರಿಂದ ಮಣಿಸಿತು. ಭಾರತ ತಂಡ ಈ ವಿಭಾಗದಲ್ಲಿ ಅಗ್ರ ಶ್ರೇಯಾಂಕ ಪಡೆದಿದೆ.

ಹಾರಿಕಾ ಮೊದಲ ಬೋರ್ಡ್‌ನಲ್ಲಿ ಲಿಲಿಟ್ ಕ್ರಟ್ಚಿಯಾನ್ ಜೊತೆ ಸುರಕ್ಷಿತವಾಗಿ 'ಡ್ರಾ' ಮಾಡಿಕೊಂಡರೆ, ವೈಶಾಲಿ ಅವರೂ ಮರಿಯಮ್ ಕ್ರಟ್ಚಿಯಾನ್ ಜೊತೆ 'ಡ್ರಾ' ಒಪ್ಪಿಕೊಂಡರು. ದಿವ್ಯಾ ತಮ್ಮ ಪಂದ್ಯ ಗೆದ್ದ ಕಾರಣ ಭಾರತ 2–1 ಮುನ್ನಡೆ ಪಡೆಯಿತು. ಹೀಗಾಗಿ ನಾಲ್ಕನೇ ಬೋರ್ಡ್‌ನಲ್ಲಿ ತಾನಿಯಾ ಸಚ್‌ದೇವ್, ಅನ್ನಾ ಸರ್ಗಾಸಿಯಾನ್ ಜೊತೆ 'ಡ್ರಾ'ಕ್ಕೆ ಸಹಿಮಾಡಿದರು. ಮಹಿಳಾ ತಂಡವೂ ಅಗ್ರಸ್ಥಾನದಲ್ಲಿದ್ದು, ಬುಧವಾರ ಏಳನೇ ಸುತ್ತಿನಲ್ಲಿ ಜಾರ್ಜಿಯಾ ತಂಡವನ್ನು ಎದುರಿಸಲಿದೆ.

ನಗಾಲ್ ವಿರುದ್ಧ ಅಸಮಾಧಾನ

ನವದೆಹಲಿ (ಪಿಟಿಐ): ಬೆನ್ನುನೋವು ಇರುವುದಾಗಿ ಹೇಳಿ ಕಳೆದ ವಾರ ಸ್ವೀಡನ್ ವಿರುದ್ಧ ಡೇವಿಸ್ ಕಪ್ ವಿಶ್ವ ಗುಂಪಿನ (1) ಪಂದ್ಯದಿಂದ ಹಿಂದೆಸರಿದಿದ್ದ ದೇಶದ ಅಗ್ರ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಈಗ ಚೀನಾದಲ್ಲಿ ಎಟಿಪಿ ಟೂರ್ನಿಯಲ್ಲಿ ಆಡಲು ಸಜ್ಜಾಗಿದ್ದಾರೆ. 'ಅವರು ಡೇವಿಸ್ ಕಪ್ ಪಂದ್ಯವನ್ನು ಉದ್ದೇಶಪೂರ್ವಕವಾಗಿ ತಪ್ಪಿಸಿಕೊಂಡಿರಬಹುದು' ಎಂದು ಅಖಿಲ ಭಾರತ ಟೆನಿಸ್ ಸಂಸ್ಥೆ ಮಂಗಳವಾರ ಹೇಳಿದೆ.

ಸ್ಟಾಕ್‌ಹೋಮ್‌ನಲ್ಲಿ ನಡೆದ ಆ ಪಂದ್ಯದಲ್ಲಿ ಭಾರತ 0–4 ರಿಂದ ಸ್ವೀಡನ್ ಕೈಲಿ ಮುಖಭಂಗ ಅನುಭವಿಸಿತ್ತು. ನಗಾಲ್, ಯುಕಿ ಭಾಂಬ್ರಿ ಅನುಪಸ್ಥಿತಿಯಲ್ಲಿ ಡಬಲ್ಸ್ ಆಟಗಾರನನ್ನು ಸಿಂಗಲ್ಸ್‌ಗೆ ಆಡಿಸಬೇಕಾದ ದುಃಸ್ಥಿತಿಯನ್ನು ಭಾರತ ಎದುರಿಸಿತ್ತು.

'ಸುಮಿತ್ ಮತ್ತು ಯುಕಿ ಆಡಿದ್ದಲ್ಲಿ ನಮಗೆ ಗೆಲ್ಲುವ ಅವಕಾಶಗಳು ಹೆಚ್ಚಿರುತ್ತಿತ್ತು. ಅವರು ಐಟಿಎ ಆಡಳಿತ, ನಾಯಕ ಮತ್ತು ತಂಡವನ್ನು ಪ್ರಶ್ನಿಸಿದ್ದಾರೆ. ಬೆನ್ನು ನೋವೆಂದು ಹೇಳಿದ್ದ ನಗಾಲ್ ಹೇಳಿದ್ದರು. ಈಗ ಆ ಸಮಸ್ಯೆ ಸರಿಯಾಗಿದೆಯೇ? ಅವರು ಚೀನಾದಲ್ಲಿ ಟೂರ್ನಿ ಆಡುತ್ತಿದ್ದಾರೆ. ಜನರಿಗೆ ಯಾವುದು ಸರಿ ಎಂದು ಯಾರಾದರೂ ಅರ್ಥ ಮಾಡಿಸಬೇಕು' ಎಂದು ಎಐಟಿಎ ಕಾರ್ಯದರ್ಶಿ ಅನಿಲ್ ಧುಪರ್ ವ್ಯಂಗ್ಯವಾಗಿ ಹೇಳಿದ್ದಾರೆ.

ಪ್ರಮುಖ ಆಟಗಾರ ಮುಕುಂದ್ ಶಶಿಕುಮಾರ್ ಈಗಾಗಲೇ ಎಐಟಿಎನಿಂದ ಅಮಾನತಿಗೆ ಒಳಗಾಗಿರುವ ಬಗ್ಗೆ ಕೇಳಿದಾಗ, 'ನಾಯಕ ರೋಹಿತ್ ರಾಜಪಾಲ್ ಅವರು, ಶಶಿಕುಮಾರ್ ಅವರನ್ನು ತಂಡಕ್ಕೆ ಸೇರ್ಪಡೆ ಮಾಡಲು ಯತ್ನಿಸಿದ್ದರು. ಸುಮಾರು 10 ಸಲ ಕರೆ ಮಾಡಿದ್ದರು. ಅಮಾನತು ವಾಪಸು ಪಡೆಯಲು ಯತ್ನಿಸುವುದಾಗಿಯೂ ಕರೆ ಮಾಡಿ ಹೇಳಿದ್ದರು. ಆದರೆ ಅವರು (ಆಟಗಾರ) ನಿರಾಕರಿಸಿದರು' ಎಂದು ಅವರು ಹೇಳಿದರು.

ಭಾರತ ಡೇವಿಸ್ ಕಪ್ ಪಂದ್ಯದಲ್ಲಿ ಹೀನಾಯವಾಗಿ ಸೋತ ನಂತರ ಸೋಮ ದೇವ್ ದೇವ್‌ವರ್ಮನ್ ಮತ್ತು ಪುರವ್ ರಾಜಾ ಅವರು ಎಐಟಿಎ ಕಾರ್ಯವೈಖರಿಯನ್ನು ತರಾಟೆಗೆ ತೆಗೆದುಕೊಂಡಿದ್ದರು.